ರಾಯಚೂರು ಪ್ರದೇಶದ ಹೈಹಯರ ಶಾಸನಗಳ ಸಮಾಜೋ ಧಾರ್ಮಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು

ಜೆ. ಸಿದ್ದರಾಮನಾಯಕ

ಮಾರ್ಗದರ್ಶಕರು

ಡಾ. ಕಲವೀರ ಮನ್ವಾಚಾರ್

ಸಹ ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೯-೧೦

ರಾಯಚೂರು ಪ್ರದೇಶದ ಹೈಹಯರ ಶಾಸನಗಳ ಸಮಾಜೋ ಧಾರ್ಮಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು

ಜಿ. ಸಿದ್ದರಾಮನಾಯಕ

ನೋಂದಣಿ ಸಂಖ್ಯೆ KUES/00442

ಮಾರ್ಗದರ್ಶಕರು

ಡಾ. ಕಲವೀರ್ ಮನ್ವಾಚಾರ್

ಸಹ ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೯-೧೦

ಸಂಶೋಧಕರ ಪ್ರಮಾಣ ಪತ್ರ

ರಾಯಚೂರು ಪ್ರದೇಶದ ಹೈಹಯರ ಶಾಸನಗಳ ಸಮಾಜೋ ಧಾರ್ಮಿಕ ಅಧ್ಯಯನ ಎಂಬ ಸಂಪ್ರಬಂಧವನ್ನು ಸಹ ಪ್ರಾಧ್ಯಾಪಕರಾದ ಡಾ. ಕಲವೀರ್ ಮನ್ವಾಚಾರ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Siddaramappa G.

ಸ್ಥಳ: ವಿದ್ಯಾರಣ್ಯ
ದಿನಾಂಕ: 15/09/10

ಜಿ. ಸಿದ್ದರಾಮನಾಯಕ
ಸಂಶೋಧಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

ಮಾರ್ಗದರ್ಶಕರ ಪ್ರಮಾಣ ಪತ್ರ


ರಾಯಚೂರು ಪ್ರದೇಶದ ಹೈಹಯರ ಶಾಸನಗಳ ಸಮಾಜೋ ಧಾರ್ಮಿಕ ಅಧ್ಯಯನ ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಜಿ. ಸಿದ್ದರಾಮನಾಯಕ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸಲಾಗಿದೆ.

ಸ್ಥಳ: ವಿದ್ಯಾರಣ್ಯ
ದಿನಾಂಕ: 15/9/10

ಡಾ. ಕಲವೀರ ಮನ್ವಾಚಾರ್
ಸಹ ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

ಪರಿವಿಡಿ

ರಾಯಚೂರು ಜಿಲ್ಲೆ



(ಮುದಗುಂದೂರು ೩೦೦)
ಚಂದನಕೇರಿ
ಹಿರೇರಾಯಕುಂಪಿ
ನಿಲವಂಜಿ
ಮಸರಕಲ್ಲು
(ಮೊಸಳೆಕಲ್ಲು ೩೦೦)
ಗಬ್ಬೂರು
(ಅಯ್ಯಣವಾಡಿ ೩೦೦)
ಕೂಡ್ಲೂರು
ಚಿಕ್ಕಸೂಗೂರು
(ಕರಡಿಕಲ್ಲು ೩೦೦)
ಕವಿತಾಳ
ಮಲ್ಲಟ
(ಮೊರಟ ೩೦೦)
ಆತನೂರು
ಕಲ್ಲೂರು
ರಾಯಚೂರು
(ಎಡೆದೊರೆ
೨೦೦೦)
ಕುರುಡಿ
ಬಲ್ಲಟಗಿ
ಬಾಗಲವಾಡ
ಮಾನ್ವಿ
ಹಿರೇಕೊಟ್ನಕಲ್ಲು
ಗೋರ್ಕಲ್ಲು
(ಗೋರಿಕಲ್ಲು ೧೨)
ನಿಟ್ಟರವೆ ೨೦

ಅಧ್ಯಾಯ ಒಂದು

ಅಧ್ಯಯನದ ಸ್ವರೂಪ, ವ್ಯಾಪ್ತಿ, ವಿಧಾನ ಮತ್ತು ಸ್ಥಳೀಯ ಚರಿತ್ರೆ ಅಧ್ಯಯನದ ಪ್ರಾಮುಖ್ಯತೆ

ಅಧ್ಯಾಯ ೧
ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಪ್ರಸ್ತಾವನೆ

ಕರ್ನಾಟಕವು ಪೌರಾಣಿಕ ಮತ್ತು ಐತಿಹಾಸಿಕ ಮಹತ್ವವನ್ನು ಪಡೆದ ಪ್ರಾಚೀನ ದೇಶವಾಗಿದೆ. ಕರ್ನಾಟಕದಲ್ಲಿರುವ ಅನೇಕ ಪ್ರದೇಶಗಳು ಹಲವಾರು ರಾಜಮನೆತನಗಳು ಆಳ್ವಿಕೆಗೊಳಪಟ್ಟ ಸರ್ವಧರ್ಮಗಳ ಸಮನ್ವಯ ಭೂಮಿಯಾಗಿದೆ. ಅಲ್ಲದೇ ಕರ್ನಾಟಕವು ತನ್ನ ಸುದೀರ್ಘವಾದ ಪರಂಪರೆಯನ್ನು ಕಾಲಗರ್ಭದಲ್ಲಿ ಅಡಗಿಸಿಕೊಂಡಿದೆ. ಪುರಾತನವಾದ ಸಂಸ್ಕೃತಿಯನ್ನು ಕರ್ನಾಟಕವು ಸಮನ್ವತೆಯಿಂದ ಪಾಲಿಸಿಕೊಂಡುಬಂದಿದೆ.

ರಾಯಚೂರು ಪ್ರದೇಶವು ಕರ್ನಾಟಕ ಉತ್ತರ ಭಾಗದಲ್ಲಿದ್ದು, ಈ ಪ್ರದೇಶವು ೧೬°–೧೨ ಉತ್ತರ ಅಕ್ಷಾಂಶ ಮತ್ತು ೭೭°–೨೧ ಪೂರ್ವ ರೇಖಾಂಶವನ್ನು ಹೊಂದಿದ್ದು ಆಂಧ್ರಪ್ರದೇಶಕ್ಕೆ ಹೊಂದಿಕೊಂಡಂತಿದೆ. ರಾಯಚೂರಿನ ಉತ್ತರಕ್ಕೆ ಕೃಷ್ಣ ಮತ್ತು ದಕ್ಷಿಣಕ್ಕೆ ತುಂಗಭದ್ರ ನದಿಗಳ ನಡುವೆ ಇರುವ ದೋಅಬ್ ಎಂಬ ನಾಮವನ್ನು ಹೊಂದಿದ್ದು, ಈ ಪ್ರದೇಶವು ಹಲವಾರು ಹೆಸರುಗಳಿಂದ ಖ್ಯಾತಿ ಹೊಂದಿದೆ. ರಾಜನೂರು, ರಾಚೂರು, ರಾಯರ ಊರು, ಪರ್ಮನರಾಚೂರು, ರಾಚನೂರು, ಎಂಬ ವಿವಿಧ ಹೆಸರುಗಳಿಂದ ಕರೆಯಲ್ಪಡುತ್ತಿದೆ. ರಾಯಚೂರು ಪ್ರದೇಶದ ಅಂದಿನ ಗತ ವೈಭವ ಮತ್ತು ಸಂಸ್ಕೃತಿಯನ್ನು ಸಾರಿ ಹೇಳುವಂತಹ ಅನೇಕ ಶಾಸನಗಳು ಮತ್ತು ಸ್ಮಾರಕಗಳಾದ, ದೇವಾಲಯಗಳು ಸುಂದರ ವಿಗ್ರಹಗಳು, ಬಸದಿಗಳು, ಶರಣರ ಗದ್ದುಗೆಗಳು, ಮಸೀದಿಗಳು, ಮಠಗಳು, ಕೋಟೆ ಕೊತ್ತಲಗಳು, ಭಾವಿಗಳು ಹಾಗೂ ಕಲೆ, ಸಾಹಿತ್ಯ, ನಾಟಕ, ಬಯಲಾಟ ಮುಂತಾದ ಕತೆಗಳನ್ನು ಸಹ ನಾವು ಈ ಪ್ರದೇಶದಲ್ಲಿ ಕಾಣುತ್ತೇವೆ. ರಾಯಚೂರು ಬಿಸಿಲಿನ ಬರ ಪ್ರದೇಶವೆಂದು ಕರಿಸಿಕೊಳ್ಳುವ ಈ ಪ್ರದೇಶದಲ್ಲಿ

ಸಾಹಿತ್ಯ ಕೃಷಿಗೆ ಬಡತನವಿಲ್ಲ., ಸಾಹಿತ್ಯವು ಜನ ಜೀವನವನ್ನು ಪ್ರತಿಬಿಂಬವಾದುದರಿಂದ ಆಯಾ ಕಾಲದ ಜನ ಜೀವನವನ್ನು ಪಡಿಮೂಡಿಸುತ್ತಿರುವ ಕಾವ್ಯ ಪುರಾಣಗಳ ಮಹತ್ವ ಇತಿಹಾಸ ರಚನೆಯಲ್ಲಿ ಮಹತ್ವದಾಗಿದೆ. ರಾಯಚೂರು ಪ್ರದೇಶದಲ್ಲಿ ಅನೇಕ ವಚನಕಾರರು, ತತ್ವಪದಕಾರರು, ದಾಸರು, ಕವಿಗಳು ಮುಂತಾದವರು ಕನ್ನಡ ಸಾಹಿತ್ಯಕ್ಕೆ ಮತ್ತು ಅಂದಿನ ಕಾಲದ ಧಾರ್ಮಿಕ ಮತ್ತು ಸಾಮಾಜಿಕ ಜೀವನದ ಮೇಲೆ ಬೆಳಕು ಚೆಲ್ಲಿದ್ದಾರೆ. ಜೊತೆಗೆ ಹೊಸಗನ್ನಡದಲ್ಲಿ ಸಹ ಪೈರು ಹುಲುಸಾಗಿದೆ.

ರಾಯಚೂರು ಪ್ರದೇಶವನ್ನು ಇತಿಹಾಸವು ಈ ಹಿಂದೆಯೇ ಹೇಳಿದಂತೆ ಹಲವು ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತು. ಮೌರ್ಯರಿಂದ ಆರಂಭವಾಗಿ ಶಾತವಾಹನರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಬಾದಾಮಿ ಚಾಲುಕ್ಯರು, ಸೇವುಣರು, ಕಾಕತೀಯರು, ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ವಿಜಯನಗರದ ಅರಸರು ಹಾಗೂ ಬಹುಮನಿ ಸುಲ್ತಾನರು, ಇವರಲ್ಲದೇ ಅನೇಕ ಸಾಮಂತ ಅರಸರು ಈ ಪ್ರದೇಶವನ್ನು ಆಳಿದ್ದಾರೆ. ಅವರಲ್ಲಿ ಪ್ರಮುಖರೆಂದರೆ, ಕರಡಿಕಲ್ಲು ಕದಂಬರು, ಸಿಂಧರು, ಹೈಹಯರು, ದೇವಗಿರಿಯ ಯಾದವರು, ಸುರುಪುರದ ಅರಸರು, ಹೈದ್ರಾಬಾದ್ ನಿಜಾಮರು, ಗುಡಗುಂಟಿ ಸಂಸ್ಥಾನ, ಗುಂಡಗೋಳ ಸಂಸ್ಥಾನ, ಮುಂತಾದ ಅನೇಕ ರಾಜಮನೆತನಗಳು ರಾಯಚೂರು ಪ್ರದೇಶವನ್ನು ಆಳಿದ್ದರಿಂದ ವಿಶಿಷ್ಟವಾದ ಸಂಪ್ರದಾಯಗಳು ಈ ಪ್ರದೇಶದಲ್ಲಿ ನೆಲೆಗೊಂಡಿವೆ. ಜೊತೆಗೆ ಗಬ್ಬೂರು, ವಟಗಲ್, ಮಾನ್ವಿ, ದೇವದುರ್ಗ, ಲಿಂಗಸೂಗೂರು ಮುಂತಾದ ಕಡೆಗಳಲ್ಲಿ ಪ್ರಾಗೈತಿಹಾಸಿಕ ನೆಲೆಗಳ ಹಾಗೂ ಕೊರೆದ ರೇಖಾ ಚಿತ್ರಗಳೂ ಈ ಪ್ರದೇಶದಲ್ಲಿ ದೊರೆತಿವೆ.

ಧಾರ್ಮಿಕವಾಗಿ, ಸಾಮಾಜಿಕವಾಗಿ ನೋಡುವುದಾದರೆ ರಾಯಚೂರು ಪ್ರದೇಶದಲ್ಲಿ ಹೆಚ್ಚಿನದಾಗಿ ಜಾತಿಪದ್ಧತಿ ಆಚರಣೆಯಲ್ಲಿತ್ತು. ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರರೆಂಬ ನಾಲ್ಕು ಪ್ರಧಾನ ಜಾತಿಗಳಲ್ಲದೆ, ಇತರ ಒಳಪಂಗಡಗಳು ಇದ್ದವು. ಕಲ್ಯಾಣ ಚಾಲುಕ್ಯರು, ರಾಷ್ಟ್ರಕೂಟರು, ವಿಜಯನಗರ ಅರಸರು, ಕಾಕತೀಯರು, ಹಾಗೂ ಹೈಹಯರ ಅರಸರ ಮನೆತನಗಳು ಜೈನ, ಶೈವ ಹಾಗೂ ವೈಷ್ಣವ ಧರ್ಮಗಳನ್ನು ಪೋಷಿಸಿಕೊಂಡು ಬಂದರು. ನಂತರ ಬಂದ ಬಹುಮನಿ ಸುಲ್ತಾನರಿಂದ ಇಸ್ಲಾಂ ಧರ್ಮ ರಾಯಚೂರು ಪ್ರದೇಶದಲ್ಲಿ ಹರಡಿತು.

ಬಹುಮನಿ ಸುಲ್ತಾನರು ಆಗಮನಕ್ಕಿಂತ ಪೂರ್ವದಲ್ಲಿ ಈ ಪ್ರದೇಶದಲ್ಲಿ ಜೈನ, ಶೈವ ಮತ್ತು ವೈಷ್ಣವ ಧರ್ಮಗಳು ಅಸ್ತಿತ್ವದಲ್ಲಿದ್ದವು ಎನ್ನುವುದಕ್ಕೆ ಇಲ್ಲಿ ದೊರೆತಿರುವ ಶಾಸನಗಳೇ ಸಾಕ್ಷಿಯಾಗಿವೆ. ಎಲ್ಲ ಕಾಲ, ಎಲ್ಲ ದೇಶ, ಎಲ್ಲ ಜನಾಂಗಗಳಿಗೆ ಅನ್ವಯಿಸುವ ಜೀವನ ಸತ್ಯಗಳು ಆದರ್ಶ; ಒಂದು ಕಾಲ, ಒಂದು ದೇಶ, ಒಂದು ಜನಾಂಗಕ್ಕೆ ಅನ್ವಯಿಸುವ ಮಾನವ

ಸಂಸ್ಕೃತಿಯ ವಿಕಾಸದಲ್ಲಿ ಶಾಸನಗಳು ವಹಿಸಿದ ಪಾತ್ರ ಮಹತ್ವದ್ದಾಗಿದೆ. ಮೊದಮೊದಲು ಬಿಸಿಲು ಮಳೆಯ ರಕ್ಷಣೆಗೆ ಬರುಬರುತ್ತ ಬದುಕಿನ ಮೌಲ್ಯ ಪ್ರಸಾರಕ್ಕೆ ಬಳಕೆಗೊಂಡ ವಸ್ತು ಶಿಲೆಯನ್ನು ಕೊರೆ ಕೊರೆದು ಕಲೆಯಾಗಿಸಿದ. ಬರೆಬರೆದು ಕೃತಿಯಾಗಿಸಿದ, ಈ ಮಾಧ್ಯಮವನ್ನು ಕ್ರಮವಾಗಿ ಶಿಲ್ಪ ಮತ್ತು ಶಾಸನವೆಂದು ವರ್ಗೀಕರಿಸಬಹುದು. ಇವುಗಳಲ್ಲಿ ಶಿಲ್ಪಗಳು ನಿರಕ್ಷರರಿಗೆ ಶಾಸನಗಳು ಸಾಕ್ಷರರಿಗೆ ಆಯಾ ಜನಾಂಗಗಳ ಮೌಲ್ಯವನ್ನು ಬೋಧಿಸುವ ಪ್ರಸಾರ ಫಲಕಗಳಾಗಿ ಅಲ್ಲಲ್ಲಿ ನೆಲೆ ನಿಂತಿವೆ. ಶಿಲ್ಪ ಮತ್ತು ಶಾಸನಗಳ ದೃಷ್ಟಿಯಿಂದ ಕರ್ನಾಟಕ ಪ್ರದೇಶವು ಶ್ರೀಮಂತವಾದುದು.

ಒಟ್ಟಾರೆಯಾಗಿ ಒಂದು ಗ್ರಾಮದಲ್ಲಿ ದೊರೆಯುವ ಶಾಸನಗಳು, ಕೋಟೆ ಕೊತ್ತಲ, ದೇವಾಲಯಗಳು, ಕೆರೆಗಳು ಮುಂತಾದ ಸ್ಮಾರಕಗಳಿಂದ ರಾಯಚೂರು ಪ್ರದೇಶದ ಪರಂಪರೆ ಮತ್ತು ಧಾರ್ಮಿಕ ಸಂಸ್ಕೃತಿಯನ್ನು ಪುನರ್‌ರಚಿಸಲು ಪ್ರಯತ್ನಿಸಲಾಗಿದೆ. ಐತಿಹಾಸಿಕ ಹಿನ್ನೆಲೆಯೊಂದಿಗೆ ನಡೆಸಲಾದ ಈ ಅಧ್ಯಯನದಲ್ಲಿ ದೊರಕಿರುವ ಎಲ್ಲಾ ಆಕರಗಳನ್ನು ಬಳಸಿಕೊಂಡು ಉತ್ತರ ಕರ್ನಾಟಕದ ಒಂದು ಸಾಂಸ್ಕೃತಿಕ ಪ್ರದೇಶಗಳಲ್ಲಿ ಒಂದಾದ ರಾಯಚೂರು ಪ್ರದೇಶವನ್ನು ವಿವಿಧ ದೃಷ್ಟಿಕೋನಗಳಿಂದ ಅಭ್ಯಸಿಸಲು ಪ್ರಯತ್ನಿಸಿರುವ ಒಂದು ನಿಬಂಧವಾಗಿದೆ.

ಹೈದರಾಬಾದ್ ಕರ್ನಾಟಕ ಭಾಗದ ಶಾಸನಗಳ ಸಂಗ್ರಹ ಕಾರ್ಯದಲ್ಲಿ ಪ್ರಥಮವಾಗಿ ತೊಡಗಿಸಿಕೊಂಡವರು ಕರ್ನಲ್ ಮೆಕೆಂಜಿಯವರು. ನಂತರ ಮದ್ರಾಸ್ ಸಿವಿಲ್ ಸರ್ವಿಸ್‌ನಲ್ಲಿ ಅಧಿಕಾರಿಯಾಗಿದ್ದ ಸರ್ ವಾಲ್ಟರ್ ಇಲಿಯಟ್‌ನಿಂದ ಶಾಸನಗಳ ಸಮಗ್ರ ಅಧ್ಯಯನ ಪ್ರಾರಂಭವಾಯಿತು. ಈತನು ೧೮೩೭ ರಿಂದ ೧೮೭೦ರ ಅವಧಿಯಲ್ಲಿ ಮುಂಬಯಿ ಕರ್ನಾಟಕ, ನಿಜಾಂ ಕರ್ನಾಟಕ ಮತ್ತು ಹಳೆಯ ಮೈಸೂರು ಪ್ರಾಂತ್ಯದ ಉತ್ತರ ಭಾಗಗಳಿಂದ ಸುಮಾರು ೧೩೦೦ ಶಾಸನಗಳನ್ನು ಸಂಗ್ರಹಿಸಿದನು. ಅಲ್ಲಿಂದ ಮುಂದೆ ಅವುಗಳಲ್ಲಿ ೫೯೫ ಶಾಸನಗಳನ್ನು ಆಯ್ದುಕೊಂಡು Karnataka desh Inscoription ಎಂಬ ಸಂಪುಟವನ್ನು ಹೊರತಂದನು. ಈ ಸಂಪುಟದಲ್ಲಿ ಹೈದರಾಬಾದ್ ಕರ್ನಾಟಕದ ಹಲವು ಶಾಸನಗಳು ಸಂಗ್ರಹವಾಗಿವೆ. ವಾಲ್ಟರ್‌ನಿಂದ ಶಾಸನಗಳ ಸಂಗ್ರಹ ಮತ್ತು ಸಮಗ್ರ ಅಧ್ಯಯನ ಪ್ರಾರಂಭವಾಯಿತೆನ್ನಬಹುದು. ಆಂಧ್ರಪ್ರದೇಶ ಆರ್ಕಿಯಾಲಾಜಿಕಲ್ ವಿಭಾಗವು ಆಂಧ್ರಪ್ರದೇಶದ ಆರ್ಕಿಯಾಲಾಜಿಕಲ್ ಸಿರೀಜ್‌ನಲ್ಲಿ ರಾಯಚೂರು ಪ್ರದೇಶಕ್ಕೆ ಸಂಬಂಧಿಸಿದ ಕೆಲವು ಶಾಸನಗಳನ್ನು ಪ್ರಕಟಿಸಿದೆ.

ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ಶಾಸನಾಧ್ಯಾಯನದ ಸಾಲಿನಲ್ಲಿ ಪ್ರಮುಖರಾದವರೆಂದರೆ ಪಿ.ಬಿ.ದೇಸಾಯಿಯವರು. ಇವರು Jainism in south India and some Jainen epigraph's ಎಂಬ ಪುಸ್ತಕದಲ್ಲಿ ಹೈದರಾಬಾದ್ ಕರ್ನಾಟಕದ ೫೩ ಶಾಸನಗಳನ್ನು ಪ್ರಕಟಿಸಿದ್ದಾರೆ. ಅದೇ ರೀತಿ ಡಾ. ವಿ.ಶಿವಾನಂದ್, ಬಿ.ಆರ್. ಗೋಪಾಲ್,

ಆರ್.ಎಂ.ಷಡಕ್ಷರಯ್ಯ, ವೈಜನಾಥ ಭಂಡೆ, ಮಿರಾಸಸೆ, ಸೀತಾರಾಮ್ ಜಾಗೀದಾರ್, ಹನುಮಾಕ್ಷಿ ಗೋಗಿ ಮತ್ತು ಚೆನ್ನಬಸವಯ್ಯ ಹಿರೇಮಠ ಮತ್ತಿತರರು ಶಾಸನಗಳ ಬಗ್ಗೆ ಅಧ್ಯಯನ ಮಾಡಿದ್ದಾರೆ.

ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ವಿಧಾನ:

ಪ್ರಾಚೀನ ಕಾಲದಿಂದಲೂ ಕನ್ನಡ ನಾಡು ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ವಿಶೇಷವಾದ ತನ್ನದೇ ಆದ ಒಂದು ಕೊಡುಗೆಯನ್ನು ನೀಡಿದೆ. ಅದೇ ರೀತಿಯಾಗಿ ರಾಯಚೂರು ಸಹ ಪ್ರಾಗೈತಿಹಾಸಿಕ ಕಾಲದಿಂದ ಹಿಡಿದು, ಇಂದಿನ ಆಧುನಿಕ ಕಾಲದವರೆಗೂ ಅನೇಕ ಕೊಡುಗೆಗಳನ್ನು ನೀಡಿದೆ. ಇಲ್ಲಿಯ ಅನೇಕ ಜನರ ಸಾಂಸ್ಕೃತಿಕ ಬದುಕು ವೈಶಿಷ್ಟ್ಯ ಪೂರ್ಣವಾಗಿದೆ. ರಾಯಚೂರು ಪ್ರದೇಶದಲ್ಲಿ ವಿವಿಧ ರೀತಿಯ ಧರ್ಮಗಳು ನೆಲೆನಿಂತು ಇನ್ನೊಬ್ಬರ ಅಳರಸರ ಆಶ್ರಯವನ್ನು ಪಡೆದುಕೊಂಡು, ಜನಮನದಲ್ಲಿ ಸ್ಥಿರಸ್ಥಾಯಿವಾಗಿವೆ.

ಪ್ರಸ್ತುತ ಶಾಸನಗಳ ಹಿನ್ನೆಲೆಯಲ್ಲಿ "ರಾಯಚೂರು ಪ್ರದೇಶದ ಹೈಹಯರ ಶಾಸನಗಳ ಸಮಾಜೋ-ಧಾರ್ಮಿಕ ಒಂದು ಅಧ್ಯಯನ" ನಡೆಸಲಾಗಿದೆ. ಇದುವರೆಗೂ ರಾಯಚೂರು ಪ್ರದೇಶಕ್ಕೆ ಸಂಬಂಧಿಸಿದಂತೆ ಡಾ. ಸಿ.ಎಸ್.ಪಾಟೀಲರ "Temples of Raichur and Bellary Districts" ಎಂಬ ಗ್ರಂಥದಲ್ಲಿ ಗಬ್ಬೂರಿನ ಕೆಲವು ಅಂಶಗಳನ್ನು ವಿವರಿಸಲಾಗಿದೆ. ಡಾ. ಶಿವಾನಂದರವರು ಹೈದ್ರಾಬಾದ್ ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು ಮತ್ತು ಭಾರತೀಯವರು ರಾಯಚೂರು ಜಿಲ್ಲಾ ಶಾಸನಗಳ ಸಮಗ್ರ ಅಧ್ಯಯನ ಮತ್ತು ಚೆನ್ನಬಸಪ್ಪ ಹಿರೇಮಠರು ರಾಯಚೂರು, ಕೊಪ್ಪಳ ಜಿಲ್ಲೆಯ ಶಾಸನಗಳು ಸಮಗ್ರ ಅಧ್ಯಯನ ಮಾಡಿದ್ದಾರೆ. ಮಹೇಶರವರ ದೇವದುರ್ಗ ತಾಲ್ಲೂಕಿನ ಶಾಸನಗಳು ಮತ್ತು ದೇವಾಲಯಗಳು ಎಂಬ ವಿಷಯದ ಕುರಿತು ಅಧ್ಯಯನ ನಡೆಸಿದ್ದಾರೆ. ಜಿ.ಗುಂಡಮ್ಮ ಅವರು ಮಾನ್ವಿ ತಾಲ್ಲೂಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ ನಡೆಸಿದ್ದಾರೆ. ಆದರೆ ರಾಯಚೂರು ಪ್ರದೇಶದ ಹೈಹಯರ ಅರಸರ ಶಾಸನಗಳಿಗೆ ಸಂಬಂಧಿಸಿದಂತೆ ಇದುವರೆಗೂ ಸಮಗ್ರವಾಗಿ ಯಾವುದೇ ರೀತಿಯಲ್ಲಿ ಕೆಲಸ ಕಾರ್ಯಗಳು ನಡೆದಿಲ್ಲ. ಆದ್ದರಿಂದ ಹೈಹಯರ ಅರಸರ ಬಗ್ಗೆ ವಿಸ್ತಾರವಾದ ಅಧ್ಯಯನ ಕೈಗೊಳ್ಳುವ ಉದ್ದೇಶದಿಂದ "ರಾಯಚೂರು ಪ್ರದೇಶದ ಹೈಹಯರ ಶಾಸನಗಳ ಸಮಾಜೋ ಧಾರ್ಮಿಕ ಅಧ್ಯಯನ" ಎಂಬ ವಿಷಯವನ್ನಿಟ್ಟುಕೊಂಡು ಪ್ರಥಮ ಬಾರಿಗೆ ಸಮಗ್ರ ಅಧ್ಯಯನ ನಡೆಸಲಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಕಟವಾಗಿರುವ ರಾಯಚೂರು ಪ್ರದೇಶದ ಹೈಹಯರ ಶಾಸನಗಳ ಸಮಾಜೋ ಧಾರ್ಮಿಕ ಅಧ್ಯಯನದಿಂದ ಈ ಪ್ರದೇಶದ ಇತಿಹಾಸ ಮತ್ತು ಸ್ಥಳೀಯ ಚರಿತ್ರೆಯೊಂದಿಗೆ ಅಂದಿನ ಧಾರ್ಮಿಕ ಪರಂಪರೆಯಿಂದ ಸಂಸ್ಕೃತಿಯನ್ನು ಚಿತ್ರಿಸುವ ಅವಕಾಶ ಉಂಟಾಗಿದೆ. ಈ ಮೂಲಕ ನಮ್ಮ ಪ್ರದೇಶವನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ,

ರಾಣಿಯರ, ಅರಸರ ಮಾಂಡಲೀಕರ, ನಾಯಕರ ಆಡಳಿತ ಅಂದಿನ ರಾಜಕೀಯ, ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿದ ಧರ್ಮ, ಕಲೆ, ಸಾಹಿತ್ಯ, ಸಂಸ್ಕೃತಿ ಅಂದಿನ ಜನ ಜೀವನದ ರೀತಿ–ನೀತಿ, ಆಚಾರ–ವಿಚಾರಗಳನ್ನು ಅರಿಯಬಹುದಾಗಿದೆ.

ರಾಯಚೂರು ಪ್ರದೇಶದ ಇತಿಹಾಸವನ್ನು ಅವಲೋಕಿಸಿದರೆ ಈ ಪ್ರದೇಶದಲ್ಲಿ ಪ್ರಮುಖ ರಾಜಮನೆತನಗಳು ಸ್ಥಾಪನೆಗೊಂಡಿವೆ. ಈ ಪ್ರದೇಶವನ್ನಾಳಿದ ರಾಜಮನೆತನದವರು ತಮ್ಮ ಆಡಳಿತದ ಅವಧಿಯಲ್ಲಿ ಅನೇಕ ಶಾಸನಗಳನ್ನು ಹಾಕಿಸಿ, ರಾಯಚೂರು ಪ್ರದೇಶದ ವಿವಿಧ ತಾಲ್ಲೂಕು, ಗ್ರಾಮಗಳಲ್ಲಿ ಒಟ್ಟು ೪೧೮ಕ್ಕೂ ಹೆಚ್ಚು ಶಾಸನಗಳು ದೊರೆತಿವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಹೈಹಯರ ಶಾಸನಗಳು ೧೭. ಈ ಶಾಸನಗಳನ್ನೆಲ್ಲಾ ಒಂದು ಕಡೆ ಸೇರಿಸಿ ಅದರ ಮೂಲಕ ಈ ಪ್ರದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಇತ್ಯಾದಿ ಸಂಸ್ಕೃತಿಗೆ ಸಂಬಂಧಿಸಿದ ವಿಚಾರಗಳನ್ನು ವಿವರವಾಗಿ ತಿಳಿದುಕೊಳ್ಳಲು ಪ್ರಯತ್ನಿಸಿದೆ.

ಅಧ್ಯಯನದ ವ್ಯಾಪ್ತಿ:

ಯಾವುದೇ ಒಂದು ಅಧ್ಯಯನದಲ್ಲಿ ಅದರ ಸ್ಥಳೀಯ ಚರಿತ್ರೆಯನ್ನು ಸ್ಪಷ್ಟವಾಗಿ ನಿರ್ಧರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಯಚೂರು ಪ್ರದೇಶದ ಸಾಂಸ್ಕೃತಿಕ ಪರಂಪರೆ ಆರಂಭಗೊಂಡಿರುವುದು ಕ್ರಿಪೂ. ೩೦೦೦ ವರ್ಷ ಹಿಂದಿನಿಂದ ಆ ಕಾಲದ ಸಂದರ್ಭದಲ್ಲಿ ರಾಯಚೂರು ಪ್ರದೇಶವು ಹಲವು ರಾಜಮನೆತನಗಳು ಮತ್ತು ಸಾಮಂತ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಅಂದಿನ ಸಾಮಂತರ ಅರಸರಾದ ಹೈಹಯರು ರಾಯಚೂರು ಪ್ರದೇಶಕ್ಕೆ ಕೊಟ್ಟ ಕೊಡುಗೆ ಬಹಳ ಮಹತ್ವದಾಗಿದೆ. ಏಕೆಂದರೆ ಸಣ್ಣ ಆಡಳಿತಗಾರರಾದ ಹೈಹಯರು ಚಾಲುಕ್ಯರ ಕಾಲದಲ್ಲಿ ವಲಸೆ ಬಂದವರು ಇವರು ಅಧೀನರಾಗಿ ಆಡಳಿತ ಪ್ರಾರಂಭಿಸಿ ಕರ್ನಾಟಕದ ಹಲವಾರು ಕಡೆ ಆಡಳಿತ ನಡೆಸಿದರು. ಅಂತೆಯೇ ಆಯಾಯಾ ಸ್ಥಳಗಳ ಹೆಸರನ್ನು ಬಳಿಸಿ ಅವರನ್ನು ಮೊರಟಾದ ಹೈಹಯರೆಂದು ಕರೆಯಲಾಗಿದೆ. ಅಧೀನವಾಗಿ ಆಡಳಿತ ನಡೆಸಿದರು ಸಹ ಇವರು ಕೊಡುಗೆ ಅಪಾರವಾದುದು. ಇಂತಹ ಸಣ್ಣ ಆಡಳಿತಗಾರರ ಅಧ್ಯಯನ ಅವಶ್ಯಕವಾಗಿದೆ. ಪ್ರಧಾನ ಆಡಳಿತಗಾರರ ಅಧ್ಯಯನವು ಮೊದಲಿಗೆ ಸೂಕ್ಷ್ಮ ಅಧ್ಯಯನವಾಗಿರುವುದಿಲ್ಲ. ನಂತರ ಇಂತಹ ಅಧ್ಯಯನಗಳು ಸೂಕ್ಷ್ಮ ಅಧ್ಯಯನವಾಗಿದ್ದು, ಸ್ಥಳೀಯ ಚರಿತ್ರೆಯನ್ನು ರೂಪಿಸಲು ಸಾಧ್ಯವಾಗುತ್ತದೆ. ಅಂತೆಯೇ ಜನಸಾಮಾನ್ಯರ ಅಧ್ಯಯನವು ಇದರಿಂದ ಸಾಧ್ಯವಾಗುತ್ತದೆ. ಹೈಹಯರ ಕಾಲದಲ್ಲಿ ಸ್ಥಳೀಯ ಜನಸಮುದಾಯಗಳ ಹುಟ್ಟು, ಬೆಳವಣಿಗೆ ಮತ್ತು ಸಣ್ಣ ಮನೆತನಗಳ ಕೊಡುಗೆ ಏನು? ಅವರ ಕೆಳಸಮುದಾಯ ಕಟ್ಟಲಿಕ್ಕೆ ಹೇಗೆ ಸಾಧ್ಯ, ಹಾಗೂ ಹೈಹಯರ ಕಾಲದಲ್ಲಿ ಜನಸಾಮಾನ್ಯರ ಜೀವನದ ಸ್ಥಿತಿ ಒಂದು ಸ್ಥಳದಿಂದ ಹಳ್ಳಿ, ಗ್ರಾಮ, ನಗರ ಪಟ್ಟಣಗಳಿಗಿಂತ ಅವರ ಧಾರ್ಮಿಕ ಬದುಕು ಪ್ರಾದೇಶಿಕವಾಗಿ

ಹೇಗೆ ಭಿನ್ನ ಎಂಬುದನ್ನು ಸ್ಥಳೀಯ ಚರಿತ್ರೆಯಿಂದ ತಿಳಿದುಕೊಳ್ಳಬಹುದು. ಒಟ್ಟಾರೆಯಾಗಿ ರಾಯಚೂರು ಪ್ರದೇಶದಲ್ಲಿ ಅನೇಕ ಪುರಾತತ್ವ ನೆಲೆಗಳನ್ನು ಗುರುತಿಸುವುದು ಗಮನಿಸುವುದಾಗಿದೆ. ನನ್ನ ಸಂಶೋಧನಾ ವಿಷಯದ ವ್ಯಾಪ್ತಿಯೂ ಕಾಲದ ದೃಷ್ಟಿಯಿಂದ ಮಸ್ಕಿಯಲ್ಲಿ ದೊರೆತ ಅಶೋಕನ ಶಾಸನದಿಂದ ಪ್ರಾರಂಭವಾಗಿ ೧೮ನೇ ಶತಮಾನದವರೆಗೆ ಲಭ್ಯವಾಗಿರುವ ಪೂರಕ ಶಾಸನ ಸಾಮಗ್ರಿಗಳ ಆಧಾರದಿಂದ ನಡೆದಿದೆ. ಪ್ರಸ್ತುತ ಅಧ್ಯಯನವು ಸಾಮಾಜಿಕ, ರಾಜಕೀಯ, ಭೌಗೋಳಿಕ, ಆರ್ಥಿಕ, ಧಾರ್ಮಿಕವಾಗಿ ರಾಯಚೂರು ಪ್ರದೇಶದ ವ್ಯಾಪ್ತಿಗೆ ಸೀಮಿತವಾಗಿದೆ.

ಅಧ್ಯಯನದ ವಿಧಾನ:

ಪ್ರಸ್ತುತ ಅಧ್ಯಯನವನ್ನು ಶಾಸನಗಳ ಸಂಪಾದನೆ ಮತ್ತು ಶಾಸನಗಳ ವಿಶ್ಲೇಷಣೆ ಎಂಬಂತಹ ಪ್ರಾಥಮಿಕ ಮತ್ತು ಅನುಷಂಗಿಕ ವಿಧಾನಗಳನ್ನು ಬಳಸಿಕೊಂಡು ಅಧ್ಯಾಯವನ್ನು ಮುಂದುವರಿಸಲಾಗಿದೆ. ರಾಯಚೂರು ಪ್ರದೇಶದಲ್ಲಿ ಹೈಹಯರ ೧೭ಕ್ಕೂ ಹೆಚ್ಚು ಶಾಸನಗಳನ್ನು ಅಂದಾಜಿಸಿ ಇವುಗಳನ್ನು ಪರಾಮರ್ಶನ ಗ್ರಂಥಗಳಲ್ಲಿ ಸೂಚಿಸಿದಂತೆ 'ಎಫಿಗ್ರಾಫಿಯಾ ಕರ್ನಾಟಕ' ಮತ್ತು ರಾಯಚೂರು ಜಿಲ್ಲೆ ಕ.ವಿ.ವಿ.ಶಾ.ಸಂ-೭ ಈ ಸಂಪುಟಗಳಿಂದ ಗುರುತಿಸಿ ಅವುಗಳ ಕಾಲದ ಉಲ್ಲೇಖ ರಾಜಮನೆತನ ಸ್ಥಳ. ಹೈಹಯರ ಮೂಲ, ವಂಶಾವಳಿ ಮೊದಲಾದವುಗಳನ್ನು ಒಂದೆಡೆ ಗುರುತಿಸಲಾಗಿದೆ. ನಂತರ ಅನುಷಂಗಿಕ ವಿಧಾನದಲ್ಲಿ ಆ ಶಾಸನಗಳ ಸಾಹಿತ್ಯ, ಸ್ವರೂಪ, ಜನಸಾಮಾನ್ಯರ ದೇವಾಲಯಗಳು, ಶಾಸನಗಳ ಧಾರ್ಮಿಕ ಸ್ವರೂಪ ಮುಂತಾದ ವಿಶೇಷತೆಗಳನ್ನು ಗುರುತುಪಡಿಸಿ ನನ್ನ ಅಧ್ಯಯನ ಸಂಪ್ರಬಂಧ ಬರೆಯಲಾಗಿದೆ. ಇಂತಹ ಮಾಹಿತಿಗಳನ್ನು ಗ್ರಂಥಾಲಯದಿಂದ ಸಂಗ್ರಹಿಸಲಾಗಿದೆ.

ಈ ನನ್ನ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಕೆಲವೊಂದು ವಿಧಾನಗಳನ್ನು ಅನುಸರಿಸಲಾಗಿದೆ.

೧. ರಾಯಚೂರು ಪ್ರದೇಶದ ಭವ್ಯ ಪರಂಪರೆಗೆ ಆಧಾರಸ್ತಂಭಗಳಂತಿರುವ ಹೈಹಯರ ಶಾಸನಗಳನ್ನು ಸಂಗ್ರಹಿಸಿ ಕೂಲಂಕುಷವಾಗಿ ಅಧ್ಯಯನ ನಡೆಸಲಾಗಿದೆ.

೨. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಶಾಸನಗಳ ಸಾಹಿತ್ಯವನ್ನು ಅನುಲಕ್ಷಿಸಿ ಅಧ್ಯಯನ ಮಾಡಲಾಗಿದೆ.

೩. ಮೇಲಿನ ವಿಧಾನಗಳಿಂದ ದೊರೆತ ಮಾಹಿತಿ ಕಡಿಮೆಯಾದಾಗ ಕ್ಷೇತ್ರಕಾರ್ಯ ಕೈಗೊಂಡು ಅವುಗಳ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

೪. ಸಂಗ್ರಹಿಸಿದ ಮಾಹಿತಿಯನ್ನು ತುಲನಾತ್ಮಕವಾಗಿ ಅಧ್ಯಯನ ನಡೆಸಿದ ನಂತರ ಸಂಪ್ರಬಂಧ ರಚನೆಯಲ್ಲಿ ಬಳಸಲಾಗಿದೆ.

ಅಧ್ಯಾಯ ಎರಡು

ರಾಯಚೂರು ಪ್ರದೇಶದ ರಾಜಕೀಯ ಇತಿಹಾಸ

ಅಧ್ಯಾಯ ೨

ರಾಯಚೂರು ಪ್ರದೇಶದ ರಾಜಕೀಯ ಇತಿಹಾಸ

ಪೀಠಿಕೆ

ಒಂದು ನಾಡಿನ ಇತಿಹಾಸ ತಿಳಿಯುವಾಗ ಅದಕ್ಕೆ ಪೂರಕವಾದ ರಾಜರ ಇತಿಹಾಸ ಎಂಬರ್ಥದಲ್ಲಿ ಕಾಣುವುದು ಒಂದು ಕಡೆಯಾದರೆ ಉಳಿದಂತೆ ಅದರ ಹಿತ ಮತ್ತು ಬೆಳವಣಿಗೆ ಜನ-ಸಮಾಜಗಳು ಬೆರೆತಿವೆ. ಇತಿಹಾಸವನ್ನು ಚಿತ್ರಿಸುವ ಗ್ರಂಥಗಳು ರಾಜಕೀಯ ಇತಿಹಾಸ ಪ್ರಧಾನವಾಗಿದೆ. ನಾಡಿನಲ್ಲಿರುವ ಸಮಾಜ, ಕಲೆ, ಧರ್ಮ, ವ್ಯಾಪಾರ, ಇತ್ಯಾದಿಗಳ ಕುರಿತಂತೆ ಅಧ್ಯಯನ ಒಳಗೊಂಡಿರುವುದು ವ್ಯವಸ್ಥಿತ ಇತಿಹಾಸವಾಗಿರುತ್ತದೆ. ಒಂದು ನಾಡಿನ ಇತಿಹಾಸವೆಂದರೆ ರಾಜ-ರಾಜ್ಯಾಡಳಿತವಲ್ಲ. ಅದರೊಂದಿಗೆ ಜನಸಮುದಾಯ ಕೂಡ ಇರುತ್ತದೆ. ಕರ್ನಾಟಕ ನಾಡಿನಲ್ಲಿ ಇತಿಹಾಸವನ್ನು ಚಿತ್ರಿಸಿದಾಗ ಮೊದಲಿಗೆ ಕದಂಬರ, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ವಂಶಗಳ ಆಡಳಿತದ ಹಿನ್ನೆಲೆಯಲ್ಲಿ ರಾಜಕೀಯವನ್ನು ಮೈಗೂಡಿಸಿಕೊಂಡು ತನ್ನದೇ ಆದ ಒಂದು ಪ್ರವೇಶದ ನೆಲಕ್ಕೆ ಕೊಡುಗೆಗಳನ್ನು ನೀಡುತ್ತಾ ಹೋಗಿದ್ದಾರೆ. ಈ ನಿಟ್ಟಿನಲ್ಲಿ ಅವರ ಆಳ್ವಿಕೆಯ ಸಮಯಲ್ಲಿ ಇಂದಿಗೂ ಅಳಿದುಳಿದ ಆಕಾರ ಆಧಾರಗಳ ರೂಪರೇಷೆಗಳಲ್ಲಿ ಇತಿಹಾಸ ಕಟ್ಟುವಲ್ಲಿ ಪ್ರಯತ್ನಗಳು ಇಂದಿಗೂ ಮುಂದುವರೆದಿವೆ. ಈ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಸೂಕ್ತವಾಗಿ ರಾಯಚೂರು ಪ್ರದೇಶಕ್ಕೆ ಸೀಮಿತವಾಗಿ ಆಡಳಿತ ವಂಶಗಳ ಕಾಲದಲ್ಲಿ ಸಂಗ್ರಹಿಸಿದ ಘಟನೆಗಳ ಆಧಾರದಿಂದ ಪ್ರಸ್ತುತ ಅಧ್ಯಯನ ಮಾಡಲಾಗಿದೆ.

ಅಧ್ಯಯನಕ್ಕೆ ಪೂರಕ ಅಂಶಗಳನ್ನು ಶಾಸನಗಳು ಮತ್ತು ದೇವಾಲಯಗಳ ಹಿನ್ನೆಲೆಯಲ್ಲಿ ರಚಿಸಿಕೊಳ್ಳಲಾಗಿದೆ. ರಾಯಚೂರು ಪ್ರದೇಶದಲ್ಲಿ ಕ್ರಿ.ಪೂ. ೨ನೇ ಶತಮಾನದಿಂದ ಹಿಡಿದು

ಇವತ್ತಿನವರೆಗೆ ಸೂಕ್ತವಾದ ಆಕರಗಳು ದೊರೆಯುವ ಭಂಡಾರವಾಗಿದ್ದು, ಈ ನೆಲೆಯಲ್ಲಿ ಹೆಚ್ಚಿನ ಕೊಡುಗೆಯನ್ನು ಕಲ್ಯಾಣ ಚಾಳುಕ್ಯರ ವಂಶಾವಳಿಗಳು ಬಿಟ್ಟು ಹೋಗಿವೆ.

ಮೌರ್ಯರು

ಐತಿಹಾಸಿಕ ಘನತೆಯಿಂದ ಪ್ರಸಿದ್ಧವಾದ ರಾಯಚೂರು ಪ್ರದೇಶವು ಕರ್ನಾಟಕ ಚರಿತ್ರೆಯಲ್ಲಿ ವಹಿಸಿದ ಪಾತ್ರವು ಚಿರಸ್ಮರಣೀಯವಾದದು. ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಈ ಪ್ರದೇಶಕ್ಕೆ ವಿಶಿಷ್ಟ ಸ್ಥಾನವಿದೆ. ಭಾರತದಲ್ಲಿ ಮೊದಲ ದೊರೆತ ಲಿಖಿತ ದಾಖಲೆಗಳೆಂದರೆ ಶಾಸನಗಳು ಇವು ೩ನೇ ಶತಮಾನದ ಅಶೋಕನ ಕಾಲದ ಮೌರ್ಯರು ಪಾಟಲಿಪುತ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆಯನ್ನು ಮಾಡಿದರೂ ದಕ್ಷಿಣ ಭಾರತದವರೆಗೂ ಅವರ ಆಳ್ವಿಕೆ ಮಾಡಿದ್ದಾರೆ. ರಾಯಚೂರು ಪ್ರದೇಶದವು ಕ್ರಿ.ಪೂ. ೩೦೦ರಲ್ಲಿ ಅಶೋಕನ ಆಳ್ವಿಕೆಗೆ ಒಳಪಟ್ಟಿತ್ತು ಎಂಬ ಉಲ್ಲೇಖ ಮಸ್ಕಿ ಶಾಸನದಲ್ಲಿ ಲಭ್ಯವಾಗುತ್ತದೆ. ಮೊಟ್ಟಮೊದಲ ಬಾರಿಗೆ ದೊರತ ಶಾಸನಗಳಲ್ಲಿ ಅಶೋಕನ ಹೆಸರು 'ದೇವಾನಾಂಪ್ರಿಯ ಪ್ರಿಯದರ್ಶಿ ಅಶೋಕಸ' ಎಂಬ ಉಲ್ಲೇಖವನ್ನು ನೀಡುತ್ತದೆ. ಈ ಶಾಸನ ಸಿಗುವುದಕ್ಕಿಂತ ಮೊದಲ 'ದೇವಾನಾಂಪ್ರಿಯ ಪ್ರಿಯದರ್ಶಿ ಅಶೋಕನಿರಬಹುದೆಂದು ಸಂಶೋಧಕರು ಊಹೆ ಮಾಡಿದ್ದರು. ಇಂತಹ ಇನ್ನೊಂದು ಶಾಸನ ಮಧ್ಯಪ್ರದೇಶದ ಗುಜರ್ರಾ ಎಂಬಲ್ಲಿ ದೊರೆತಿದೆ. ಕರ್ನಾಟಕದಲ್ಲಿ ಅಶೋಕನ ಶಾಸನಗಳು ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗ ರಾಮೇಶ್ವರ (ಚಿತ್ರದುರ್ಗ), ಕೊಪ್ಪಳ, ಉದಯಗೋಳಂ ನಿಟ್ಟೂರು (ಬಳ್ಳಾರಿ) ಸನ್ನತಿ(ಗುಲ್ಬರ್ಗ)ದಲ್ಲಿ ದೊರೆತ ಶಾಸನಗಳಿಂದ ಈ ಪ್ರದೇಶಗಳು ಮೌರ್ಯರ ಆಳ್ವಿಕೆಗೆ ಒಳಪಟ್ಟಿದ್ದವೆಂದು ತಿಳಿದುಬರುತ್ತದೆ. ಅಶೋಕನ ಶಾಸನಗಳಿಂದ ಕರ್ನಾಟಕದಲ್ಲಿ ರಾಯಚೂರು ಪ್ರದೇಶವು ಐತಿಹಾಸಿಕ ಸ್ಪಷ್ಟತೆಗೆ ಮೊಟ್ಟಮೊದಲ ಸಾಕ್ಷಿಗಳೆನ್ನಬಹುದು.

ಶಾತವಾಹನರು

ಮೌರ್ಯದ ನಂತರ ಡೆಕ್ಕನಲ್ಲಿ ತಮ್ಮ ಸಾಮ್ರಾಜ್ಯ ಸ್ಥಾಪಿಸಿ ಪೈಥಾನ ಅಥವಾ ಪೈಠಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಇವರು ಕ್ರಿ.ಪೂ. ೨೨೦ರಿಂದ ೨೩೦ರವರೆಗೆ ಆಳಿದರು. ಮುಂದೆ ಕದಂಬರು ಈ ಪ್ರದೇಶದಲ್ಲಿ ಆಡಳಿತ ನಡೆಸಿದರಾದರೂ ಅವರ ಶಾಸನಗಳು ಇಲ್ಲಿ ಲಭ್ಯವಾಗಿಲ್ಲ. ಕದಂಬರ ಮೂಲನೆಲೆ ಬನವಾಸಿಯಾಗಿದ್ದು, ಕರಡಿಕಲ್ಲು ಕದಂಬರು ಎಂಬುದು ಒಂದು ಶಾಖೆಯಾಗಿದೆ. ಇವರು ಸಾಮಂತರಾಗಿ ಆಳ್ವಿಕೆಯನ್ನು ನಡೆಸಿದ್ದಾರೆ. ರಾಯಚೂರು ಪ್ರದೇಶದ ಕೆಲವು ಗ್ರಾಮಗಳು ಇವರ ಆಳ್ವಿಕೆಗೆ ಒಳಪಟ್ಟಿದ್ದವು ಎಂಬ ವಿಷಯ ತಿಳಿದುಬರುತ್ತದೆ. ಆದರೆ ಶಾಸನಗಳು ದೊರೆಯುವುದಿಲ್ಲ. ಹಾಗೆಯೇ ಬಾದಾಮಿ ಚಾಲುಕ್ಯರೂ ಆಳ್ವಿಕೆ ನಡೆಸಿದರು. ಈ ಪ್ರದೇಶದಲ್ಲಿ ಇವರ ಶಾಸನಗಳು ಕಂಡುಬರುವುದಿಲ್ಲ. ಇವರ ನಂತರ ರಾಷ್ಟ್ರಕೂಟರು ರಾಯಚೂರು ಪ್ರದೇಶದಲ್ಲಿ ಆಳ್ವಿಕೆ ನಡೆಸುತ್ತಾರೆ.

ರಾಷ್ಟ್ರಕೂಟರು

ಕ್ರಿ.ಶ. ೭೫೩ರಲ್ಲಿ ಬಾದಾಮಿ ಚಾಲುಕ್ಯರನ್ನು ಬದಿಗೊತ್ತಿ ದಂತಿದುರ್ಗನು ರಾಷ್ಟ್ರಕೂಟ ರಾಜ್ಯವನ್ನು ಸ್ಥಾಪಿಸಿದನು. ರಾಷ್ಟ್ರಕೂಟರು ಸುಮಾರು ೨೦೦ ವರ್ಷಗಳ ಕಾಲ ಬಲಿಷ್ಠ ಹಾಗೂ ವಿಶಾಲವಾದ ರಾಜ್ಯವನ್ನು ಕಟ್ಟಿ ಆಳಿದರು. ಗುಲ್ಬರ್ಗಾ ಜಿಲ್ಲೆಯ ಮಾನ್ಯಖೇಟವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿದ್ದರಿಂದ ಇವರನ್ನು ಮಾನ್ಯಖೇಟದ ರಾಷ್ಟ್ರಕೂಟರು ಎಂದು ಕರೆಯಲಾಗಿದೆ. ಇವರು ಕಾಲದ ಶಾಸನಗಳು ರಾಯಚೂರು ಪ್ರದೇಶದಲ್ಲಿ ಲಿಂಗಸೂಗೂರು, ತಾಲೂಕಿನ ಯರಡೋಣಿ ಮಾನ್ವಿ ತಾಲ್ಲೂಕಿನ ಕುರುಡಿ. ಬಲ್ಲಟಿಗೆ, ಬೋಗಾವತಿ, ನುಗಡೋಣಿ ಮತ್ತು ರಾಯಚೂರು ತಾಲ್ಲೂಕಿನ ಕಲ್ಮಾಲ ಗ್ರಾಮದಲ್ಲಿ ದೊರೆತಿವೆ. ಆದ್ದರಿಂದ ರಾಯಚೂರು ಪ್ರದೇಶವು ರಾಷ್ಟ್ರಕೂಟರ ಆಳ್ವಿಕೆಗೆ ಸೇರಿತು. ಇದಕ್ಕೆ ಆಧಾರವೆಂಬಂತೆ ದೇವದುರ್ಗ ತಾಲ್ಲೂಕಿನ ನಾಗೋಲಿ ಗ್ರಾಮದಲ್ಲಿ ರಾಷ್ಟ್ರಕೂಟರ ಶಾಸನ ದೊರೆತಿದ್ದು. ಅದರ ಸಮೀಪದ ಬಸವಣ್ಣ ದೇವಾಲಯವು ರಾಷ್ಟ್ರಕೂಟರ ದೇವಾಲಯಗಳ ಲಕ್ಷಣಗಳನ್ನೊಳಗೊಂಡಿದೆ. ಈ ಪ್ರದೇಶದಲ್ಲಿ ದೊರೆತಿರುವ ಉದಾಹರಣೆ ಇದಾಗಿದೆ. ಅಲ್ಲದೆ ಚಂದನಕೆರೆಯಲ್ಲಿ ರಾಷ್ಟ್ರಕೂಟರ ಬಾಗಿಲವಾಡದ ಅವಶೇಷ, ನಾಗೋಲಿಯಲ್ಲಿ ಶಿಲ್ಪಗಳು ದೊರೆತಿವೆ. ಹೀಗಾಗಿ ರಾಯಚೂರು ಪ್ರದೇಶವು ರಾಷ್ಟ್ರಕೂಟರ ಆಳ್ವಿಕೆಗೆ ಸೇರಿತ್ತೆಂಬುದನ್ನು ನಿರ್ವಿವಾದವಾಗಿ ಹೇಳಬಹುದಾಗಿದೆ. ಶಾಸನದ ಬಹುಭಾಗ ಮಣ್ಣಿನಲ್ಲಿ ಸೇರಿರುವುದರಿಂದ ರಾಜನ ಉಲ್ಲೇಖ ದೊರೆಯುವುದಿಲ್ಲ. ಇಷ್ಟಾದರೂ ರಾಯಚೂರು ಪ್ರದೇಶದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇವರ ಕಾಲದ ಶಾಸನಗಳು ಲಭ್ಯವಾಗಿವೆ.

ಗಬ್ಬೂರಿನ ಹತ್ತು ಕಿ.ಮೀ. ದೂರದ ಕಲ್ಮಾಲ ಗ್ರಾಮದಲ್ಲಿ ಕ್ರಿ.ಶ. ೯೧೪ರ ಶಾಸನದಲ್ಲಿ ರಟ್ಟವಂಶದ ನಿತ್ಯವರ್ಷದೇವನ ಆಳ್ವಿಕೆಯಲ್ಲಿ ಒಬ್ಬ ಸಾಮಾಂತಾಧಿಪತಿಯ ಆಳ್ವಿಕೆ ಸೂಚಿಸುತ್ತದೆ. ಅದೇ ಗ್ರಾಮದ ಕ್ರಿ.ಶ. ೯೪೦ ರ ಶಾಸನದಲ್ಲಿ ರಾಷ್ಟ್ರಕೂಟರ ರಟ್ಟಕುಲ ವಂಶದ ಕನ್ನರದೇವನು ಅಳುತ್ತಿದ್ದಾಗ ಬುಟ್ಟರಸನಿದ್ದು ಮತ್ತು ಬುಟ್ಟರಸ ಪಿಟ್ಟಬ್ಬೆ, ಕನ್ನರ ದೇವ ಮೂವರು ಸೇರಿದ್ದಾಗ ಉತ್ತರ ಸಂಕ್ರಾತಿಯ ಕಾಲದಲ್ಲಿ ಮಲ್ಲಿಕಾರ್ಜುನ ದೇವರ ಪೂಜೆಗಾಗಿ ಕಲ್ಮಾಲದ ಆದಿತ್ಯಭಟ್ಟಾರನಿಗೆ ೩೪ ಮತ್ತರ ಭೂಮಿದಾನ ನೀಡಿದ ಉಲ್ಲೇಖವಿದೆ. (ಕವಿವಿಶಾಸಂ. ೭, ರಾ.೪೯). ಲಿಂಗಸೂರಿನ ಯರಡೋಣಿಯ ಕ್ರಿ.ಶ. ೯೨೮ರ ಶಾಸನದಲ್ಲಿ ರಾಷ್ಟ್ರಕೂಟರ ದೊರೆ ಹಿರಣ್ಯವರ್ಷನ ಆಳ್ವಿಕೆಯ ಕಾಲದಲ್ಲಿ ಕರಡಿಕಲ್ಲು ನಾಡಿನ ಮಾಗ ಊರಿನ ಕಿನಕಭಟ್ಟ ಎಂಬುವವನಿಗೆ ४೦ ಮತ್ತರ ಭೂಮಿಯನ್ನು ದಾನಕೊಟ್ಟ ಉಲ್ಲೇಖವಿದೆ (ಕವಿವಿಶಾಸಂ. ೭, ಮಾ.೧೭). ಬಲ್ಲಟಗಿಯ ಕ್ರಿ.ಶ. ೧೦ನೆಯ ಶತಮಾನದ ಶಾಸನದಲ್ಲಿ ರಾಷ್ಟ್ರಕೂಟರ ರಾಜ ನಿತ್ಯವರ್ಷನ ಹಾಗೂ ಬಳ್ಳನಿಟ್ಟಿಗೆ ಗ್ರಾಮದ ಉಲ್ಲೇಖವಿದೆ (ಕವಿವಿಶಾಸಂ. ೭, ಮಾ.೮೪).

ಭೋಗಾವತಿಯ ಗ್ರಾಮದ ಆ ಕಾಲವರ್ಷನ ತಮ್ಮನಾದ ಜಗತ್ತುಂಗನು ದಾನ ನೀಡಿದ ಉಲ್ಲೇಖವಿದೆ (ಕವಿವಿಶಾಸಂ. ೭, ಮಾ. ೧೮). ಹೀಗೆ ಕ್ರಿ.ಶ. ೧೦ನೇ ಶತಮಾನದಲ್ಲಿ ಕ್ರಮವಾಗಿ ಗೋಗೇಬಾಲ, ಪಡಪನದೊಡ್ಡಿ, ಸಿರಿವಾರ ಮತ್ತು ಮಾನ್ವಿಯ ೧೯ ಶಾಸನಗಳಲ್ಲಿ ರಾಷ್ಟ್ರಕೂಟರ ಆಳ್ವಿಕೆಯನ್ನು ಉಲ್ಲೇಖಿಸುವ ಶಾಸನಗಳು ಕಂಡು ಬಂದಿವೆಯಾದರೂ ಅವರ ಚಕ್ರವರ್ತಿಗಳ ಹೆಸರು ಉಲ್ಲೇಖಗೊಂಡಿಲ್ಲ. ಈ ರೀತಿಯಾ ಇವರ ಆಳ್ವಿಕೆಯನ್ನು ತಿಳಿಸುವ ಶಾಸನಗಳು ರಾಯಚೂರು ಪ್ರದೇಶದ ಸುತ್ತಮುತ್ತಲಿನ ಪರಿಸರದಲ್ಲಿ ಗುರುತಿಸಬಹುದಾದರು ಶಾಸನಗಳಲ್ಲಿ ಅಪೂರ್ಣವಾದ ವಿವರಗಳನ್ನು ಕಾಣಬಹುದಾಗಿದೆ.

ಕಲ್ಯಾಣದ ಚಾಲುಕ್ಯರು

ಕರ್ನಾಟಕವನ್ನಾಳಿದ ಪ್ರಮುಖ ರಾಜ ಮನೆತನಗಳಲ್ಲಿ ಕಲ್ಯಾಣಿ ಚಾಲುಕ್ಯರ ಮನೆತನವು ಒಂದಾಗಿದೆ. ರಾಷ್ಟ್ರಕೂಟರನ್ನು ಸೋಲಿಸಿ ಉತ್ತಾರಾಧಿಕಾರಿಗಳಾಗಿ ಬಂದ ಈ ಮನೆತನವು ಕ್ರಿ.ಶ. ೯೭೩ರಲ್ಲಿ ಸ್ಥಾಪಿತವಾಗಿ ಕ್ರಿ.ಶ. ೧೧೮೯ರಲ್ಲಿ ಕೊನೆಗೊಂಡಿತು. ಕಲ್ಯಾಣ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆಯನ್ನು ಮಾಡಿದ ಇವರನ್ನು ಕಲ್ಯಾಣದ ಚಾಲುಕ್ಯರೆಂದು ಇತಿಹಾಸಕಾರರು ಗುರುತಿಸಿದ್ದಾರೆ. ಕಲ್ಯಾಣ ಚಾಲುಕ್ಯರ ಮೊದನೆಯ ಅರಸನಾಗಿ ಇಮ್ಮಡಿ ತೈಲನು ಕ್ರಿ.ಶ. ೯೭೩ರಿಂದ ೯೯೭ರವರೆಗೆ ಆಳ್ವಿಕೆ ಮಾಡಿದನು. ಇವನ ನಂತರ ಸತ್ಯಾಶ್ರಯ ಕ್ರಿ.ಶ. ೯೯೭ರಿಂದ ೧೦೦೮ರವರೆಗೆ ಮತ್ತು ಐದನೇ ವಿಕ್ರಮಾದಿತ್ಯನು ಕ್ರಿ.ಶ.೧೦೦೮ರಿಂದ ೧೦೧೫ರವರೆಗೆ ಆಳ್ವಿಕೆಯನ್ನು ನಡೆಸಿದ್ದಾನೆ.

೫ನೇ ವಿಕ್ರಮಾದಿತ್ಯ, ಅಯ್ಯಣ, ರಾಯಚೂರ ಪ್ರದೇಶವನ್ನು ರಾಜಕೀಯವಾಗಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ತುಂಬ ಮಹತ್ವವನ್ನು ಪಡೆದುಕೊಂಡಿತ್ತು. ಈ ಪ್ರದೇಶದಲ್ಲಿ ಮಾನ್ವಿ ತಾಲ್ಲೂಕಿನಲ್ಲಿ ಇವರ ಕಾಲಕ್ಕೆ ಸಂಬಂಧಿಸಿದ ಶಾಸನಾಧಾರಗಳು ಹೆಚ್ಚು ಸಂಖ್ಯೆಯಲ್ಲಿ ದೊರಕುತ್ತವೆ.

ಮೊದಲನೆಯದಾಗಿ ಈ ವಂಶದ ಅಯ್ಯಣನ ನಂತರ ಇವನ ತಮ್ಮನಾದ ಜಗದೇಕಮಲ್ಲ ಎಂದು ಚಿರಪರಿಚಿತನಾಗಿರುವ ೨ನೇ ಜಯಸಿಂಹನು ಮಲ್ಲಿಕಾ ಮೋದ ಎಂಬ ಬಿರುದನ್ನು ಹೊಂದಿದ ಈತನ ರಾಣಿಯ ಕುರಿತು ತಿಳಿಸುವ ಕ್ರಿ.ಶ. ೧೦೨೨ರಲ್ಲಿ ಬಲ್ಲಟಗಿ ಶಾಸನವು ಚಕ್ರವರ್ತಿ ೨ನೇ ಜಯಸಿಂಹನ ರಾಣಿ ಮಹಾದೇವಿಯ ಪುವ್ವರವಳ್ಳಿಯ ಬೀಡಿನಲ್ಲಿದ್ದಾಗ ತಂತ್ರಪಾಳ ಮಲ್ಲಯ್ಯನು ಬಳ್ಳಿನಿಟ್ಟಗೆ(ಬಲ್ಲಟಗೆ)ಯಲ್ಲಿ ಪ್ರತಿಷ್ಠಾಸಿದ ತ್ರೈಪುರುಷ ದೇವಾಲಯಕ್ಕೆ ಅಯ್ಯಣವಾಡಿ (ಎಡೆದೊರೆ ೨೦೦೦ದ ಉಪವಿಭಾಗವಾಗಿತ್ತು) ೩೦೦ರ ಮನ್ನೆಯ ಲೋಕಾದಿತ್ಯನಿಂತ ಭೂಮಿಯನ್ನು ಪಡೆದು ದಾನ ನೀಡುತ್ತಾಳೆ ಎಂದು ಉಲ್ಲೇಖಿಸಲಾಗಿದೆ. (ಕವಿವಿಶಾಸಂ.೭, ಮಾ. ೯೦)

ಮಾನ್ವಿ ಪಟ್ಟಣದಲ್ಲಿ ದೊರೆತ ಶಾಸನದಲ್ಲಿ ಕಾಲದ ಉಲ್ಲೇಖ ಹಾಳಾಗಿದ್ದು ಚಾಲುಕ್ಯ ಜಗದೇಕಮಲ್ಲನ ಆಳ್ವಿಕೆಯನ್ನು ಉಲ್ಲೇಖಿಸುತ್ತಾ, ಅವನ ಮಹಾಸಾಮಂತನಾದ ಮಾಹಿಶ್ಮತೀಪುರದ ಗಣ್ಣರಾದಿ(ತ್ಯ)ನ ಉಲ್ಲೇಖವನ್ನು ತಿಳಿಸುತ್ತದೆ. ಕ್ರಿ.ಶ. ೧೦೩೩ರಲ್ಲಿ ಜಗದೇಕಮಲ್ಲನು ಏತಗಿರಿಯ (ಈಗಿನ ಯಾದಗಿರಿ) ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ರಾಣಿಯಾದ ಬಿಜ್ಜಲ ದೇವಿಯ ಅಗ್ರಹಾರ, ತಡಕಲ್ಲಿನಲ್ಲಿ ದೇವಾಲಯವೊಂದಕ್ಕೆ ಸೂರ್ಯಗ್ರಹಣದ ದಿವಸ ಭೂದಾನ ನೀಡಿದಂತೆ ತಿಳಿಸುತ್ತದೆ. ಇಂತಹದ ಇನ್ನೊಂದು ಶಾಸನ ಕ್ರಿ.ಶ. ೧೦೩೨ರ ಸುಂಕನೂರಿನ ಶಾಸನವು ಬಿಜ್ಜಲದೇವಿಯು ಪೊಟ್ಟಳಕೆರೆಯ ನೆಲೆವೀಡಿನಲ್ಲಿದ್ದುಕೊಂಡು ದುಗ್ಗಪಳ್ಳಿಯಲ್ಲಿ ನಾಗರಕಲ್ಲನ್ನು ಮಾಡಿಸಿರುವ ವಿಷಯ ತಿಳಿದುಬರುತ್ತದೆ. ಇವುಗಳಲ್ಲಿ ಕೆಲವು ಜಗದೇಕಮಲ್ಲ ಅಥವಾ ೨ನೇ ಜಯಸಿಂಹನ ಆಳ್ವಿಕೆಯ ಕಾಲದಲ್ಲಿ ಸ್ತ್ರೀಯರಿಗೂ ಸಾಮಾಜಿಕ ಕಾರ್ಯಗಳಲ್ಲಿ ಆಡಳಿತದಲ್ಲಿ ಭಾಗವಹಿಸಲು ಅವಕಾಶವನ್ನು ಒದಗಿಸಿದ್ದರು ಎಂಬ ಅಂಶ ತಿಳಿದುಬರುತ್ತದೆ. ಇದಲ್ಲದೆ ಸಮಾಜದಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿರುವ ವಿಷಯ ಸ್ಪಷ್ಟವಾಗುತ್ತದೆ. ಇದಲ್ಲದೆ ಅರಸನು ಕೆಲವು ಆಡಳಿತದ ಪ್ರದೇಶದಲ್ಲಿದ್ದುಕೊಂಡು ಆಳ್ವಿಕೆಯನ್ನು ನಡೆಸುವ ವಿಷಯ ತಿಳಿಯಬಹುದಾಗಿದೆ' (ಕವಿವಿಶಾಸಂ. ೭, ಮಾ.೪೨).

ಇಮ್ಮಡಿ ಜಯಸಿಂಹನ ನಂತರ ಅವನ ಮಗನಾದ ೧ನೇ ಸೋಮೇಶ್ವರನು ಕ್ರಿ.ಶ. ೧೦೪೪ರಲ್ಲಿ ಅಧಿಕಾರ ವಹಿಸಿಕೊಂಡು ಕ್ರಿ.ಶ. ೧೦೬೮ರವರೆಗೆ ೨೪ ವರ್ಷಗಳ ಕಾಲ ಆಳಿದನು. ಈತನಿಗೆ 'ತ್ರೈಲೋಕ್ಯಮಲ್ಲ' ಎಂಬ ಬಿರುದು ಇತ್ತು. ಈತನಿಗೆ ಹೊಯ್ಸಳ ವಿನಾಯದಿತ್ಯ ಗೋವೆಯ ಕದಂಬರ ವಂಶದ ಜಯದೇಕ ಸಾಮಂತರಾದ್ದರು. ಈತನ ಕೊನೆಯ ದಿನಗಳು ಸುಖಕರವಾಗಿ ರಲಿಲ್ಲವಾದ್ದರಿಂದ ಕುರುವತ್ತಿಯ ಬಳಿ ತುಂಗಾಭದ್ರೆಯ ನದಿಯಲ್ಲಿ ಮುಳಗಿ ಸಾವನ್ನಪ್ಪವನು. ಈತನಿಗೆ ಸಂಬಂಧಿಸಿದ ಕೆಲವು ಶಾಸನಗಳು ಮಾನ್ವಿ ತಾಲೂಕಿನ ಬೇರೆ ಬೇರೆ ಗ್ರಾಮಗಳಲ್ಲಿ ದೊರಕುತ್ತವೆ. ಇವುಗಳಲ್ಲಿ ಬಹುತೇಕ ಕಾಲದ ಉಲ್ಲೇಖ ತ್ರುಟಿತವಾಗಿವೆ. ಮಾನ್ವಿ ಪಟ್ಟಣ್ಣದ ಮಸೀದಿ ಹತ್ತಿರವಿರುವ ಶಾಸನದಲ್ಲಿ ಕಾರ್ತವೀರ್ಯಕುಲದ ಅರಸನೊಬ್ಬ (ಹೆಸರು ಹಾಳಾಗಿದೆ) ಎಡೆದೊರೆ ೨೦೦೦ವನ್ನು ಆಳುವ ವಿಷಯದ ಜೊತೆಗೆ ತಂತ್ರಪಾಳ ಗಂಗರ ಚಾವುಂಡಯ್ಯನ ಕುರಿತು ಉಲ್ಲೇಖಿಸುತ್ತದೆ. ಇದೇ ಪಟ್ಟಣದ ದಿಡ್ಡಕೆರೆಯ ಬಳಿ ಬಿದ್ದಿರುವ ಕ್ರಿ.ಶ. ೧೦೫೨ ಶಾಸನವು ತ್ರೈಲೋಕ್ಯಮಲ್ಲನು ಕಲ್ಯಾಣದಿಂದ ಆಳುತ್ತಿದ್ದಾಗ ಅವನ ಸಾಮಂತ ದೇವರಸನು ಎಡೆದೊರೆ ೨೦೦೦ವನ್ನು ಆಳುತ್ತಿದ್ದ. ವಿಷಯದ ಜೊತೆಗೆ ತಂತ್ರಪಾಳ ಚಾವುಂಡ ಮಯನಾಯಕನ ಉಲ್ಲೇಖ ತಿಳಿದು ಬರುತ್ತದೆ.

ಅದೇ ರೀತಿಯಾಗಿ ಆತನೂರು ಗ್ರಾಮದ ಈಶ್ವರ ದೇವಾಲಯದ ಮೆಟ್ಟಿಲಿಗೆ ಸೇರಿಸಿರುವ ಕಾಲದ ಉಲ್ಲೇಖವಿಲ್ಲದೆ. ಈತನು ಕಲ್ಯಾಣದಿಂದ ಆಳ್ವಿಕೆಯನ್ನು ಮಾಡುತ್ತಿರುವಾಗ ಮಹಾ

ಮಂಡಲೇಶ್ವರ ದೇವರಸನು ಎಡೆದೊರೆ ೨೦೦ವನ್ನು ಅಳುವ ವಿಷಯ ತಿಳಿದುಬರುತ್ತದೆ. **(ಕವಿವಿಶಾಸಂ. ೭, ಮಾ. ೭೨)**

ಬಲ್ಲಟಗಿಯ ಕ್ರಿ.ಶ.೧೦೫೮ರ ಶರಣಪ್ಪನ ಹೊಲದಲ್ಲಿರುವ ಈ ಶಾಸನದಲ್ಲಿ ತ್ರೈಲೋಕಮಲ್ಲನ ರಾಣಿ ಚಾಮಲದೇವಿಯು ಮಲೆಯ (ಮಾಳಾಪುರ) ನೆಲೆವೀಡಿನಲ್ಲಿದ್ದಾಗ ತುಂಗಭದ್ರ ಮತ್ತು ಕೃಷ್ಣಾ ನದಿಯಲ್ಲಿ ಪುಣ್ಯಸ್ನಾನ ಮಾಡಿ ಕೆಲವು ದಾನ ನೀಡಿದ ವಿಷಯ ಪ್ರಸ್ತಾಪಿಸುತ್ತದೆ.

ತ್ರೈಲೋಕ್ಯಮಲ್ಲನ ನಂತರ ಭುವನೈಕ್ಯಮಲ್ಲನನ್ನು ಕುರಿತು ತಿಳಿಸುವ ದದ್ದಲದ ಕ್ರಿ.ಶ. ೧೦೭೪ರ ಶಾಸನವು ಇವನ ಮಹಾಮಂಡೇಳೇಶ್ವರ ಜಟಾ ಜೋಳ ಭೀಮರಾಯ ಹಲವಾರು ಹೆಸರುಗಳಿಂದ ಗುರುತಿಸಲಾಗಿದೆ. ಇವನ ಸಾಮಂತ ಮಳೆಯಮರಸನು ಆಳುತ್ತಿದ್ದಾಗ ಪೊನ್ನಪಾಳಿನಲ್ಲಿ ಮಾಕಿಸೆಟ್ಟಿಯು 'ಗಿರಿ ಕೋಟಿಮಲ್ಲ' ಎಂಬ ಹೆಸರಿನ ಜಿನಾಲಯವನ್ನು ಕಟ್ಟಿಸಿರುವ ವಿಷಯ ಗೊತ್ತಾಗುತ್ತದೆ. ಕಪ್ಪಗಲ್ಲು ಕ್ರಿ.ಶ. ೧೦೭೪ರ ಶಾಸನವು ಭುವನೈಕಮಲ್ಲನ ಕರೆಯೂರು ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದ ಸಂದರ್ಭದಲ್ಲಿ ರಾಣಿ ಪಂಪಾದೇವಿಯನ್ನು ಬೇರೆ ಬೇರೆ ಹೆಸರುಗಳಿಂದ ಸೂಚಿಸಿರುವುದು ತಿಳಿದುಬರುತ್ತದೆ. **(ಕವಿವಿಶಾಸಂ. ೨, ಮಾ. ೫೫).**

ಹರವಿ ಗ್ರಾಮದ ಪೋಲೀಸ್ ಪಟೇಲ್ ಚಾವಡಿಯ ಗೋಡೆಯಲ್ಲಿರುವ ೧೦೭೬ರ ಈ ಶಾಸನವು ಈತನ ರಾಣಿಯು (ಹೆಸರು ದೊರೆತಿಲ್ಲ). ಎಡೆದೊರೆ - ೨೦೦೦ದ ಗ್ರಾಮವೊಂದರಲ್ಲಿ ಸ್ವಯಂ ಭೂ ಮೂಲಸ್ಥಾನ ದೇವಾಲಯಕ್ಕೆ ದಾನ ನೀಡುವ ವಿಷಯ ಕಂಡು ಬರುತ್ತದೆ. **(ಕವಿವಿಶಾಸಂ. ೭, ಮಾ. ೬೦).**

ಭೂಮಿಯ ಮೇಲೆ ಕಲ್ಯಾಣದಂಥ ಮತ್ತೊಂದು ನಗರ ಈ ಹಿಂದೆ ಇರಲಿಲ್ಲ. ಇಂದೂ ಇಲ್ಲ. ಮುಂದೆಯು ಹುಟ್ಟುವುದಿಲ್ಲ. ವಿಕ್ರಮಾದಿತ್ಯನಂತಹ ಚಕ್ರವರ್ತಿ ಪ್ರಪಂಚದಲ್ಲಿ ಬೇರೆ ಯಾರು ಇಲ್ಲ ಎಂದು 'ವಿಜ್ಞಾನೇಶ್ವರನು ಮಿತಕ್ಷಾರ' ಹೆಸರಿನ ತನ್ನ ಧರ್ಮಶಾಸ್ತ್ರ ಗ್ರಂಥದಲ್ಲಿ ಹೇಳಿದ್ದಾನೆ. ಆರನೇ ವಿಕ್ರಮಾದಿತ್ಯ ಶಾಸನಗಳ ಒಂದು ಅಧ್ಯಯನ (ಜಿ.ಎಂ.ನಾಗಯ್ಯ, ವೀರಶೈವ **ಅಧ್ಯಯನ ಅಕಾಡೆಮಿ, ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ).** ಹಾಗೆಯೇ ಕುಶಾಗ್ರಮತಿಯ ನಿಪುಣ ಆಡಳಿತಾಗಾರ ಪರಾಕ್ರಮಿಯೂ ಆದ ೬ನೇ ವಿಕ್ರಮಾದಿತ್ಯನು ಕರ್ನಾಟಕ ಅರಸರಲ್ಲಿ ರಾಷ್ಟ್ರಮಟ್ಟದ ಗೌರವ ಗಳಿಸಿದ ಚಕ್ರವರ್ತಿಗಳಲ್ಲಿ ಅಗ್ರಸ್ಥಾನ ಪಡೆಯುತ್ತಾನೆ. ಈತನ ಕಾಲದಲ್ಲಿ ಮಾನ್ವಿ ತಾಲ್ಲೂಕಿನ ಬೆರಳವಣಿಕೆಯಲ್ಲಿ ಗ್ರಾಮಗಳು ಆಡಳಿತಕ್ಕೆ ಒಳಪಟ್ಟಿದ್ದವು ಎಂಬ ಅಂಶ ಈ ಭಾಗದಲ್ಲಿ ದೊರೆತ ಶಾಸನ ಸ್ಮಾರಕಗಳಿಂದ ತಿಳಿದುಬರುತ್ತದೆ.

ಚಾಲುಕ್ಯರ ಅರಸ ೧ನೇ ಸೋಮೇಶ್ವರನು ಪಟ್ಟಕ್ಕೆ ಬಂದಾಗ ಪರಮಾರ ರಾಜ್ಯದ ರಾಜಕೀಯದಲ್ಲಿ ಪಾಲುಗೊಂಡಿದ್ದ ವಿಕ್ರಮಾದಿತ್ಯನು ಮುಂದೆ ಬನವಾಸಿ ಮಂಡಲದ ಅಧಿಪತಿಯಾಗಿ

ಅಲ್ಲಿಂದ ಚೋಳ ವೀರರಾಜೇಂದ್ರನ ಮೇಲೆ ದಂಡೆತ್ತಿ ಹೋಗಲು ಈತನು ಜೊತೆ ಸ್ನೇಹ ಸಂಬಂಧವನ್ನು ಬೆಳೆಸಿ ಮಗಳನ್ನು ಕೊಡುವುದರ ಮೂಲಕ ಬೆಳೆಸುವನು ಎಂದು 'ವಿಕ್ರಮಾಂಕದೇವಚರಿತಂ'ನಲ್ಲಿ ಉಲ್ಲೇಖಿಸಿ, ತಮ್ಮ ಮೇಲಿನ ಮಾತ್ಸರ್ಯದಿಂದಾಗಿ ಕ್ರಿ.ಶ. ೧೦೭೬ರಲ್ಲಿ ೨ನೇ ಸೋಮೇಶ್ವರನನ್ನು ಸೋಲಿಸಿ ನವಸಂವತ್ಸರದಲ್ಲಿ ಚಕ್ರವರ್ತಿಯಾಗಿ ಕ್ರಿ.ಶ. ೧೧೨೬ರವರೆಗೆ ಸುಮಾರು ೫೦ ವರ್ಷಗಳ ಕಾಲ ಆಳ್ವಿಕೆ ಮಾಡಿ 'ತ್ರಿಭುವನಮಲ್ಲ' ಎಂಬ ಬಿರುದು ಹೊಂದಿದನು. ಈತನು ವಿಕ್ರಮ ಶಕ ವರ್ಷವನ್ನು ಪ್ರಾರಂಭಿಸಿದನು.

ಮಾನ್ವಿಯ ಗ್ರಾಮದ ಸುಂಕೇಶ್ವರದ ಸುಡಗಾಡು ಗದ್ದೆ, ಹೊಲದಲ್ಲಿ ಕ್ರಿ.ಶ. ೧೧೯೭ರಲ್ಲಿ ಶಾಸನವು ಆಳ್ವಿಕೆ ಕಾಲದ್ದಾಗಿದ್ದು ನೊಳಂಬ, ಪಲ್ಲವ ಪೆರ್ಮಾನಡಿ ಉದಯಾದಿತ್ಯದೇವನು ಅಯ್ಯಣವಾಡಿಯನ್ನು ಅಣುಗ ಜೀವಿತವಾಗಿ ಆಳುತ್ತಿದ್ದ ಸಂದರ್ಭದಲ್ಲಿ ಬೋಕ್ಕೇಶ್ವ ದೇವರಿಗೆ ಲೋಕಾಭರಣ ಪಂಡಿತರ ಕೈಯಲ್ಲಿ ದಾನ ಕೊಟ್ಟಿರುವ ವಿಷಯ ತಿಳಿಸುತ್ತದೆ" (ಕವಿವಿಶಾಸಂ. ೭, ಮಾ.೨೯). ಕುರುಡಿ ಗ್ರಾಮದ ನೀಲಗುಹೇಯ ಗೋಡೆಗೆ ಒದಗಿಸಿರುವ ಕ್ರಿ.ಶ. ೧೧೯೨ರ ಶಾಸನವು ಈತನ ಆಳ್ವಿಕೆ ಕಾಲದ್ದಾಗಿದ್ದು ಅಗ್ರಹಾರ ರೂಢಿಯ ಮಹಾಜನಗಳ ವರ್ಣನೆಯಿದ್ದು ದೇವಾಲಯಕ್ಕೆ ದಾನ ಬಿಟ್ಟಂತಿದೆ.

೬ನೇ ವಿಕ್ರಮಾದಿತ್ಯನ ಕಾಲದಲ್ಲಿ ಕುರುಡಿ ಗ್ರಾಮದಲ್ಲಿ ಒಂದು ಅಗ್ರಹಾರವಾಗಿ ಮತ್ತು ಬ್ರಾಹ್ಮಣರು ಈ ಗ್ರಾಮದಲ್ಲಿದ್ದ ವಿಷಯ ತಿಳಿದು ಬರುತ್ತದೆ. ಇದೇ ಗ್ರಾಮದ ಚಾಗಿನೋಳಿ ದಿಡ್ಡಿಯ ಸಮೀಪವಿರುವ ಕ್ರಿ.ಶ.೧೧೧೯ರ ಈ ಶಾಸನವು ತ್ರಿಭುವನಮಲ್ಲನು ಜಯಂತಿಪುರದ ನೆಲೆವೀಡಿನಿಂದ ಆಳುತ್ತಿದ್ದಂತೆ. ಆರಂಭದಲ್ಲಿ ವಾಸುದೇವನ ಮಗ ಮಧುಸೂಧನನ್ನು ಹೊಗಳಲಾಗಿದೆ. ಈತನಿಗೆ ಮಾಚರಸ, ವಾಸುದೇವ, ಸಾವಿಯಕ್ಕ, ಪದ್ಮನಾಭ ಎಂಬ ಮಕ್ಕಳಿದ್ದ ವಿಷಯ ವಾಸುದೇವನು ನಿಟ್ಟರವೆ ೭೦ರಲ್ಲಿಯ ಮುಕ್ಕುಂದದಲ್ಲಿದಂತೆ ತಿಳಿಸಲಾಗಿದೆ. ಮಧುಸೂಧನನು ಕರಡಿಕಲ್ ೩೦೦ರ ಬನ್ನಿಗೋಳವನ್ನು ಆಳುತ್ತಿದ್ದ ಮಧುಸೂಧನನು ನನ್ನ ತಂದೆಯ ಹೆಸರಿನಲ್ಲಿ ವಾಸುದೇವ ದೇವಾಲಯವನ್ನು ಕಟ್ಟಿಸಿ ಭೂಮಿ ದಾನ ನೀಡುವ ವಿಷಯ ತಿಳಿದುಬರುತ್ತದೆ. (ಕವಿವಿಶಾಸಂ. ೭, ಮಾ.೫೧).

ಬೇವಿನೂರು ಗ್ರಾಮದ ಗುಡಿಯಲ್ಲಿರುವ ಸುಮಾರು ಕ್ರಿ.ಶ. ೧೧೨೩ರ ಶಾಸನದಲ್ಲಿ ಆರನೇ ವಿಕ್ರಮಾದಿತ್ಯನು ಜಯಂತಿಪುರದ ನೆಲೆವೀಡಿನಿಂದ ಆಳುತ್ತಿದ್ದಾಗ ಅವನ ಸೀಮಾಂತಕುಮಾರ ತೈಲಪನ ಮತ್ತು ಮಹಾಪ್ರಧಾನ ದಂಡನಾಯಕ ನಿಂಬಣ್ಣಯ ತಾನು ಹಿಂದೆ ಚಂದ್ರಶೇಖರ ಭಟ್ಟರಿಗೆ ನೀಡಿದ ಭೂಮಿಯನ್ನು ಮರಳಿ ಪಡೆದು ಅರ್ಧವನ್ನು ಕೊಮ್ಮಣಯ್ಯನಿಗೆ ಇನ್ನರ್ಧ ಭಾಗವನ್ನು ದೇವರಿಗೆ ಬಿಡುವನು ಎಂದು ಶಾಸನ ತಿಳಿಸುತ್ತದೆ. (ಕವಿವಿಶಾಸಂ. ೭, ಮಾ.೫೬).

ಕಲ್ಲೂರಿನ ಕ್ರಿ.ಶ. ೧೦೮೦ರ ಆರನೇ ವಿಕ್ರಮಾದಿತ್ಯನ ಶಾಸನವು ಈತನ ಮಾಂಡಳಿಕನಾದ ಬೂಚಿದೇವರಸ ಮಹಾಪ್ರಧಾನ ತಂತ್ರಪಾಳನಾದ ಕಣನು ಮತ್ತು ಹೆಗಡೆ ಚವುಡಣನು ಸೇರಿ ಬೂಚಿದೇವನ ಆದೇಶದಂತೆ ಕಲ್ಲೂರಿನ ಅಗ್ರಹಾರವಾದ ಸ್ವಯಂ ಭೂ ಮಾರಟೇಶ್ವರ ದೇವರಿಗೆ ದಾನ ಬಿಟ್ಟಂತೆ ಹೇಳಿದೆ. ಅದೇ ರೀತಿಯಾಗಿ ಕಲ್ಲೂರಿನ ಕ್ರಿ.ಶ. ೧೧೯೬ ಶಾಸನವು ೬ನೇ ವಿಕ್ರಮಾದಿತ್ಯನು ನರ್ಮದಾ ದೇವಿಯ ದಂಡಿನ ನೆಲೆವೀಡಿನಲ್ಲಿದ್ದಾಗ ತನ್ನ ವಿದ್ಯಾ ಗುರುಗಳಾದ ಸರ್ವಕ್ರತು ಸೋಮಾಯಾಜಿಗೆ ನರ್ಮದಾ ನದಿಯ ಬಳಿ ಈತ ಮಾಡಿದ ಪಂಚಲಾಂಗೂಲ ಕ್ರತುವಿಗಾಗಿ ಯಾಗಕ್ಕಾಗಿ ಕಲ್ಲೂರನ್ನೂ ದಾನವಾಗಿ ಕೊಟ್ಟಿರುವುದನ್ನು ಹೇಳಿದೆ. (ಕವಿವಿಶಾಸಂ. ೭, ಮಾ. ೬೩).

ಬಾಗಲವಾಡದ ಕ್ರಿ.ಶ. ೧೧೯೬ರ ಶಾಸನವು ೬ನೇ ವಿಕ್ರಮಾದಿತ್ಯನ ಕಾಲದ್ದಾಗಿದ್ದು. ಇವನ ಸಾಮಂತನಾಗಿದ್ದ. ಹೈಹಯ ವಂಶೋದ್ಭವನಾದ ಅಯ್ಯಣ ಎಂಬುವವನು ಬಮ್ಮಳ ಹಾಳ ಗ್ರಾಮದ ಪ್ರಭು ಗಾವುಂಡರಿಗೆ ಕೆಲವು ತೆರಿಗೆಗಳನ್ನು ಮತ್ತು ಭೂಮಿಯನ್ನು ದಾನವಾಗಿ ಬಿಟ್ಟಿರುವುದರ ಜೊತೆಗೆ ವಿಶೇಷವೆಂದರೆ ಈ ಶಾಸನದಲ್ಲಿ ತ್ರಿಭುವನಮಲ್ಲನ ರಾಣಿ ಮಲಯಮತಿಯನ್ನು (೬ನೇ ವಿಕ್ರಮಾದಿತ್ಯನ ಪಿರಿಯರಸಿ ಎಂಬುದನ್ನು ಉಲ್ಲೇಖಿಸಿದೆ. (ಕವಿವಿಶಾಸಂ. ೭, ಮಾ. ೧೦೪). ತುಪದೂರಿನ ಹುಡೆಯದ ಮೇಲೆ ನಿಲ್ಲಿಸಿರುವ ೧೧-೧೨ನೇ ಶತಮಾನದ ತ್ರುಟಿತವಾಗಿರುವ ವಿಕ್ರಮಾದಿತ್ಯನಕಾಲದ ಈ ಶಾಸನವು ಅಗ್ರಹಾರ ತೆನೆಯಲ್ಲಿದೇವರನ್ನು ಪ್ರತಿಷ್ಠಾಪಿಸಿದಂತೆ ತೋಟವನ್ನು ದಾನ ನೀಡಿದಂತೆ ಹೇಳಿದೆ. (ಕವಿವಿಶಾಸಂ. ೭, ಮಾ.೧೧೪).

ಮಲ್ಲಟದ ಊರ ಹೊರಗಿನ ಅಲ್ಲಮನು ದೇವಾಲಯದ ಹೊರಗೆ ನಿಲ್ಲಿಸಿರುವ ೧೧೯೬ರ ಶಾಸನವು ೬ನೇ ವಿಕ್ರಮಾದಿತ್ಯನ ಕಾಲದ ಈ ಶಾಸನವು ಈತನ ಮಹಾಮಂಡಳೇಶ್ವರನಾದ ಮೊರಟದ ಮಲ್ಲನ ಈತನ ಕುಟುಂಬದ ಸದಸ್ಯರ ವಿವರಗಳು ಸಂಕ್ರಾತಿಯ ಹಬ್ಬದ ನಿಮಿತ್ತ ಮೊರಾಟದ ಸಪ್ತನಾಥ ದೇವರ ಸೇವಕನಾದ ಅವುಜದ ಮೊಳೆಯನು ಸಕಳೇಶ್ವರ ದೇವರಿಗೆ ಪ್ರತಿಷ್ಠೆ ಮಾಡಿದಾಗ ಕೆಲವು ವ್ಯಕ್ತಿಗಳ ಹೆಸರಿಸಿದೆ. (ಕವಿವಿಶಾಸಂ. ೭, ಮಾ. ೧೦೨).

ಕ್ರಿ.ಶ. ೧೧೯೬ರಲ್ಲಿ ವಿಕ್ರಮಾದಿತ್ಯನು ಮಂಡಳೇಶ್ವರನಾಗಿ ಮೊರಟದಲ್ಲಿ (ಮಲ್ಲಟ) ಮಲ್ಲಿದೇವ ಆಳುತ್ತಿದ್ದ. ಇವನು ಹೈಹಯ ವಂಶದವನು. ಇವನು ಯುದ್ಧವೊಂದರಲ್ಲಿ ಹೋರಾಡಿ ೧೭೦೦ ತಲೆಗಳನ್ನು ರಾಸಿ ಮಾಡಿ ಜಯವನ್ನು ಪಡೆದಂತೆ ಹೇಳಿದೆ. ಇದೇ ಶಾಸನದಲ್ಲಿ ಸಕಳೇಶ್ವರ ದೇವರ ವಾದಿರಾಜ್ಯನು ಹೆಸರಿನಲ್ಲಿ ದೇವರ ಪ್ರತಿಷ್ಠೆ ಮಾಡಿದಂತೆ ಹೇಳಲಾಗಿದೆ.

ಬಿಲ್ಹಣ ವಿಜ್ಞಾನೇಶ್ವರರು ಇವನ ಆಸ್ಥಾನದಲ್ಲಿ ವಿದ್ವಾಂಸರು, ಈತನ ಸೋದರ ಕೀರ್ತಿವರ್ಮ 'ಗೋ ವೈದ್ಯ'ವನ್ನು ಕನ್ನಡದಲ್ಲಿ ಬರೆದ ವಿಕ್ರಮನ ಪ್ರಧಾನ ರಾಣಿ ಚಾಂದಲದೇವಿ ನೃತ್ಯ, ಸಂಗೀತಾದಿ ಕಲೆಗಳಲ್ಲಿ ಪರಿಣಿತಳಾಗಿ "ಅಭಿನವ ಸರಸ್ವತಿ" ಎನಿಸಿದ್ದಳು.

ಭೂಲೋಕಮಲ್ಲ, ಸರ್ವಜ್ಞ ಚಕ್ರವರ್ತಿ ಮುಂತಾದ ಬಿರುದುಳ ಮೂರನೇ ಸೋಮೇಶ್ವರ ತನ್ನ ತಂದೆಯಾದ ೬ನೇ ವಿಕ್ರಮಾದಿತ್ಯನ ಮರಣದ ತರುವಾಯ ೧೧೨೭ರಲ್ಲಿ ಪಟ್ಟವೇರಿದ ಈತನ ಆಳ್ವಿಕೆಯ ಕಾಲದ ಶಾಸನಗಳು ಈ ಭಾಗದಲ್ಲಿ ದೊರೆತಿರುವುದು ವಿರಳ ಎಂದೇ ಹೇಳಬಹುದಾಗಿದೆ.

ಕ್ರಿ.ಶ. ೧೧೩೪ರ ಕುರುಡಿ ಶಾಸನದ ಮೂಲಕ ಈತನ ಆಳ್ವಿಕೆಯ ಕಾಲದಲ್ಲಿ ಸೋಮಭಟ್ಟೋಪಾಧ್ಯಾಯರ ಮಕ್ಕಳಾದ ನಾರಾಯಣ ಭಟ್ಟೋಪಾಧ್ಯಾಯರು ಅಗ್ರಹಾರ ರೂಢಿಯ ಮಹಾಜನರಿಗೆ ತಿಂಗಳಿಗೆ ಇಂತಿಷ್ಟು ಎಂದು ಹೊನ್ನ ಗದ್ಯಾಣವನ್ನು ದಾನ ಮಾಡಿದ ವಿಷಯ ತಿಳಿಯುತ್ತದೆ. ಇದೇ ರೀತಿ ಇದೇ ಊರಿನ ಈಶ್ವರ ಗುಡಿಯಲ್ಲಿರುವ ಕ್ರಿ.ಶ. ೧೧೩೭ರ ಕುರಡಿಯ ಶಾಸನವು ಈತನ ಆಳ್ವಿಕೆಯನ್ನು ಉಲ್ಲೇಖಿಸುವುದರ ಜೊತೆಗೆ ಈತನ ಮಹಾಪ್ರಧಾನ ನಿಂಬಣಯ್ಯನ ಮಗಳು ದಾನ ಕೊಟ್ಟ ವಿವರ ಇದೆ. ಇಬ್ಬರ ಹೆಣ್ಣು ಮಕ್ಕಳಾದ ನಾಗಲದೇವಿ ಗಂಗಣಬ್ಬೆ ಇವರಿಬ್ಬರನ್ನು ಶಂಕರಾರ್ಯ್ಯನಿಗೆ ಹಾಗೂ ಅವನ ತಮ್ಮ ಮಹಾದೇವನಿಗೆ ಮದುವೆ ಮಾಡಲಾಗಿತ್ತು ಎಂಬ ವಿಷ ತಿಳಿದುಬರುತ್ತದೆ. ಇಲ್ಲಿ ನಾಗಲದೇವಿಯು ತನಗೆ ಬಳುವಳಿಯಾಗಿ ಕೊಟ್ಟ ತೈಲಪ ದೇವರ ಅಗ್ರಹಾರ ಶಂಕರೇಶ್ವರ ನಾಗೇಶ್ವರ ದೇವರಿಗೆ ದಾನ ಕೊಟ್ಟ ವಿಷಯ ತಿಳಿಯುತ್ತದೆ ಮತ್ತು ಕುಟುಂಬದ ವೈವಾಹಿಕ ಜೀವನದ ಮಾಹಿತಿಯನ್ನು ವೃತ್ತಿಯ ಬಗ್ಗೆ ಗೌರವ ಆದರಗಳನ್ನು ಇಲ್ಲಿ ಸ್ತ್ರೀಯರು ನಡೆಸಿಕೊಂಡಿರುವ ವ್ಯಕ್ತಿತ್ವದ ಬಗ್ಗೆ ತಿಳಿದುಕೊಳ್ಳಬಹುದಾಗಿದೆ. **(ಕವಿವಿಶಾಸಂ. ೭, ಮಾ. ೪೫).**

೩ನೇ ಸೋಮೇಶ್ವರನ ಕಾಲದ ಕಲ್ಲೂರಿನ ಕ್ರಿ.ಶ. ೧೧೩೪ರ ಶಾಸನವು ಮಾರುತೇಶ್ವರ ದೇವಾಲಯದ ಎಡಭಾಗದ ಗೋಡೆಯ ಮೇಲೆ ನಿಲ್ಲಿಸಿರುವ ಶಾಸನದಿಂದ ಈತನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಾಗ, ಅವನ ಮಾಂಡಳಿಕ ಬೂಚಿದೇವರಸನು ಮುದುಗೂಂದೂರು ೩೦೦ನ್ನು ರಾಜಧಾನಿಯಾಗಿ ಆಳುತ್ತಿದ್ದ ಎಂಬ ವಿಷಯ ತಿಳಿದುಬರುತ್ತದೆ. ಇದರಿಂದ ತಿಳಿಯುವ ವಿಷಯವೆಂದರೆ ಕೆಲವೊಬ್ಬ ದಂಡನಾಯಕರು, ಮಾಂಡಳಿಕರು ಸ್ವತಂತ್ರರಾಗಬಯಸಿದ್ದರು ಎಂಬ ವಿಷಯ ತಿಳಿದುಬರುತ್ತದೆ. ಈತನು ತಂದೆಯಂತೆ ಸಮರ್ಥನಾಗಿರಲಿಲ್ಲವಾದರೂ ಈತ ಗಣ್ಯ ವಿದ್ವಾಂಸನಾಗಿದ್ದ ಎಂಬುದಕ್ಕೆ 'ಮಾನಸೋಲ್ಲಾಸ' ಎಂಬ ವಿಶ್ವಕೋಶ 'ವಿಕ್ರಮಾಂಕಾಭ್ಯುದಯ' ಎಂಬ ಕಾವ್ಯಗಳನ್ನು ಈತನೇ ಬರೆದನೆಂದು ತಿಳಿದುಬರುತ್ತದೆ **(ಕವಿವಿಶಾಸಂ. ೭, ಮಾ. ೬೩).** ಈತನ ನಂತರ ಮಗ ಎರಡನೆಯ ಜಗದೇಕಮಲ್ಲ ಕ್ರಿ.ಶ. ೧೧೩೯-೧೧೪೯ರವರೆಗೆ ಆಳ್ವಿಕೆ ಮಾಡಿದನು. ಪಟ್ಟವೇರಿದಾಗ ಈತನಿಗೆ ಆಗಲೇ ವಯಸ್ಸಾಗಿತ್ತು. ಸುತ್ತಮುತ್ತ ಎಲ್ಲೆಲ್ಲೂ ಸಾಮಂತರು ವಶಪಡಿಸಿಕೊಂಡರೆ ಇನ್ನೂ ಕೆಲವರು ಸ್ವತಂತ್ರರಾಗಲು ಹವಣಿಸುತ್ತಿದ್ದರು ಎಂಬ ವಿಷಯ ತಿಳಿದುಬರುತ್ತದೆ.

ಗಬ್ಬೂರಿನ ಮೇಲಶಂಕರ ದೇವಾಲಯದ ಎಡಬದಿಗೆ ಒದಗಿಸಿರುವ ಕ್ರಿ.ಶ. ೧೧೫೪ರ ಶಾಸನದ ಆರಂಭದಲ್ಲಿ ಚಾಳುಕ್ಯರ ವಂಶಾವಳಿಯನ್ನು ನೀಡಲಾಗಿದೆ. ಇದು ತ್ರೈಲೋಕಮಲ್ಲನ ಕಾಲದ ಶಾಸನವಾಗಿದ್ದು, ಅಯ್ಯಣವಾಡಿ ಅದರಲ್ಲಿ ಹಿರಿಯ ಗಬ್ಬೂರಿನ ೨೦೦ ಮಹಾಜನರ ಬಗ್ಗೆ ವಿವರಗಳಿವೆ. ಗಬ್ಬೂರಿನಲ್ಲಿ ತ್ರಿಪುರಾಂತಕ ದೇವರ ಪ್ರತಿಷ್ಠೆ ಮಾಡಿ ಅದರ ಪೂಜೆ ಪುನಸ್ಕಾರಕ್ಕೆಂದು ಕೆಲವು ಸೆಟ್ಟಿರು ದಾನ ನೀಡುತ್ತಾರೆ. ತ್ರಿಪುರಾಂತಕ ಮುಂದೆ ಇದ್ದ ಕೇಶವ ದೇವರಿಗೆ ಇದರ ಜೊತೆಯಲ್ಲಿಯೇ ದಾನ ನೀಡುತ್ತಾರೆ. ಮಾಲೆಗಾರರು ಎರಡು ದೇವರ ಹೂ ದೋಟಕ್ಕೆ ದಾನ ನೀಡುತ್ತಾರೆ. ಅಗ್ರಹಾರ ಕಲ್ಲೂರಿನ ಉತ್ತರಕ್ಕಿದ್ದ ಗವರೇಶ್ವರ ದೇವರ ಬಳಿ ಸಭೆ ಸೇರಿದ ವ್ಯಾಪಾರಿ ಸಂಘಗಳು ಗಬ್ಬೂರಿನ ತ್ರಿಪುರಾಂತಕ ದೇವರ ಉತ್ತರಕ್ಕಿದ್ದ ಪ್ರಸನ್ನ ಕೇಶವ ದೇವರ ಪೂಜೆ ಇತ್ಯಾದಿಗಳಿಗೆ ಭಾಗ ಕೊಡಬೇಕೆಂದು ನಿರ್ಣಯಿಸಿದರು ಎಂದು ಉಲ್ಲೇಖವಿದೆ. (ಕವಿವಿಶಾಸಂ. ೭, ದೇ. ೭).

ತ್ರೈಲೋಕ್ಯಮಲ್ಲದೇವನ ಆಳ್ವಿಕೆಯ ಇನ್ನೊಂದು ಶಾಸನದಲ್ಲಿ ಶಾಲಿಸೆಟ್ಟಿ ಮಾಡಿಸಿದ ಹರಿಹರ ದೇವರ ನೈವೇದ್ಯಕ್ಕೆ ಮೂಲಿಗರು ಸೋಮೇಶ್ವರನು ಕ್ರಿ.ಶ. ೧೧೬೮-೧೧೯೮ರವರೆಗೆ ರಾಜ್ಯಭಾರ ಮಾಡಿದನು. ಇವನ ಅವಧಿಯಲ್ಲಿ ಅನೇಕ ಸಾಮಂತ ಅರಸರು ಸ್ವತಂತ್ರವಾಗಿ ಆಳ್ವಿಕೆ ಮಾಡಲು ಪ್ರಾರಂಭಿಸಿದರು. ಇವನ ನಂತರ ಚಾಲುಕ್ಯರ ಸಾಮ್ರಾಜ್ಯವು ಇತಿಹಾಸದಲ್ಲಿ ಕಣ್ಮರೆಯಾಗಿ ಹೋಯಿತು.

ಕಳಚೂರಿಗಳ : ಕ್ರಿ.ಶ. ೧೧೫೭ - ೧೧೮೩

ಕಲ್ಯಾಣ ಚಾಲುಕ್ಯರ ನಂತರ ಇವರ ಮುಖ್ಯ ಸಾಮಂತ ರಾಜರುಗಳಲ್ಲಿ ಕಲಚೂರಿಗಳು ಒಬ್ಬರಾಗಿದ್ದಾರೆ. ಇವರು ಕರ್ನಾಟಕ ಇತಿಹಾಸದಲ್ಲಿ ಬೆಳಕಿಗೆ ಬಂದಿದ್ದು, ೧೨ನೇ ಶತಮಾನದ ಮಧ್ಯಭಾಗದಲ್ಲಿ ಇವರ ಆಡಳಿತಾವಧಿ ಅಲ್ಪಕಾಲದ್ದಾಗಿತ್ತು. ಇವರಿಗೆ ಸಂಬಂಧಿಸಿದಂತೆ ದೊರಕುವ ಆಧಾರಗಳೆಂದರೆ ಶಾಸನಗಳು ಇವು ಕರ್ನಾಟಕದ ಚಿತ್ರದುರ್ಗ, ಶಿವಮೊಗ್ಗ, ಧಾರವಾಡ, ಬಿಜಾಪುರ, ಗುಲಬರ್ಗಾ, ರಾಯಚೂರು ಮತ್ತು ಬೀದರ ಜಿಲ್ಲೆಗಳಲ್ಲೂ ಮಹಾರಾಷ್ಟ್ರದ ರಾಜ್ಯದ ಸೊಲ್ಲಾಪುರ ಮತ್ತು ನಂದೇಡ್ ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಕಲಚೂರಿಗಳ ಇತಿಹಾಸವನ್ನು ಸೂಚಿಸುವ ಸಾಹಿತ್ಯದ ಮೂಲ ಕನ್ನಡ ಹಾಗೂ ಸಂಸ್ಕೃತಗಳಲ್ಲಿವೆ. ಉದಾ:- ಬಸವೇಶ್ವರನ ವಚನಗಳು, ವಿರುಪಾಕ್ಷ ಪಂಡಿತನ ಚನ್ನಬಸವ ಪುರಾಣ ಪಾಲ್ಕುರಿಕೆ ಸೋಮನಾಥನ ಬಸವ ಪುರಾಣ (ತೆಲುಗು) ಸಾಹಿತ್ಯದಲ್ಲಿದೆ.

ಕಲಚೂರಿಯರಿಗೆ ಸಂಬಂಧಿಸಿದಂತೆ ಗೂಗೇಬಾಳದಲ್ಲಿ ದೊರೆತ ಕ್ರಿ.ಶ. ೧೧೭೪ರ ಶಾಸನದಲ್ಲಿ ಈ ವಂಶದ ಚಕ್ರವರ್ತಿ ರಾಯಮುರಾರಿ ಸೋಮಿದೇವನು ಆಳುತ್ತಿದ್ದ. ಈತನು

ಊರ ದೇವರಿಗೆ ದಾನ ಬಿಟ್ಟ ವಿಷಯ ಈ ಶಾಸನದಲ್ಲಿ ಉಲ್ಲೇಖಿಸುತ್ತದೆ. (ಕವಿವಿಶಾಸಂ. ೭, ಮಾ. ೧೨೧).

ಇವರ ನಂತರ ಕಲ್ಯಾಣ ಚಾಲುಕ್ಯರ ನಾಲ್ಕನೆಯ ಸೋಮೇಶ್ವರನು ಪಟ್ಟಕ್ಕೆ ಬರುತ್ತಾನೆ. ಕ್ರಿ.ಶ. ೧೧೯೧ರ ಹಿರೇಕೊಟ್ನೆಕಲ್ ಶಾಸನದಲ್ಲಿ ಈ ಸೋಮೇಶ್ವರ ಉಕ್ತನಾಗಿದ್ದಾನೆ. ಹೈಹಯ ವಂಶದ ಮಲ್ಲಿದೇವನು ಇವನ ಮಾಂಡಳೇಶ್ವನಾಗಿ ರಾಜ್ಯಭಾರ ಮಾಡುತ್ತಿದ್ದ. ಮಾನುವೆಯಲ್ಲಿ ಮೈಲುಕಿದೇವನು ಆಳುತ್ತಿದ್ದ ವಿಷಯ ತಿಳಿದುಬರುತ್ತದೆ. ಹೀಗೆ ಕಲಚೂರಿಯರ ಕಾಲದ ಶಾಸನಗಳು ಬಹಳಷ್ಟು ಸಿಕ್ಕುವುದಿಲ್ಲವಾದರೂ ದೊರೆತಿರುವ ಎರಡು ಮೂರು ಶಾಸನಗಳಿಂದ ಇವರ ಆಳ್ವಿಕೆಯನ್ನು ಗುರುತಿಸಲು ಸಾಧ್ಯವಾಗಿದೆ.

ಇವರ ಆಂತರಿಕ ಕಚ್ಚಾಟ ಒಳಜಗಳಗಳಿಂದಾಗಿ ಇವರ ಪ್ರಾಬಲ್ಯ ಕಡಿಮೆಯಾಗಿ ಶಿವಶರಣರ ಆಂದೋಲನಗಳ ಪರಿಣಾಮವಾಗಿ ನಿರ್ನಾಮವಾಯಿತು ಎಂದು ತಿಳಿದು ಬರುತ್ತದೆ. ಚಾಲುಕ್ಯ ವಂಶದ ಕೊನೆಯ ಅರಸನೆಂದು ಬಿಂಬಿತನಾದ ನಾಲ್ಕನೇ ಸೋಮೇಶ್ವರನು ಮರಳಿ ಅಧಿಕಾರಕ್ಕೆ ಬಂದರೂ ಚಾಲುಕ್ಯ ಸಾಮ್ರಾಜ್ಯದ ಆಡಳಿತವನ್ನು ಹಿಡಿತದಲ್ಲಿಟ್ಟುಕೊಳ್ಳಲು ಸಾಧ್ಯವಾಗದೇ ವಿಫಲನಾದನು. ಇವನ ನಂತರ ೩ನೇ ತೈಲಪನು ಆಡಳಿತ ಚುಕ್ಕಾಣಿ ಹಿಡಿದರೂ ಸ್ಪರ್ಧಾತ್ಮಕವಾಗಿತ್ತು. ಕಾರಣ ಸೇವುಣರು ಮತ್ತು ಹೊಯ್ಸಳರು ಪ್ರತಿಸ್ಪರ್ಧಿಗಳಾಗಿದ್ದರು. ಈತನ ಕಾಲದಲ್ಲೆ ಚಾಲುಕ್ಯ ಸಾಮ್ರಾಜ್ಯ ಅವನತಿ ಹೊಂದಿತು.

ಚಾಲುಕ್ಯರ ನಂತರ ಕ್ರಿ.ಶ. ೧೨ನೇ ಶತಮಾನದಲ್ಲಿ ಉತ್ತಾರಾರ್ಧದಲ್ಲಿ ಬೆಳಕಿಗೆ ಬಂದರೂ ಎರಡು ಶತಮಾನಗಳ ಹಿಂದೆಯೇ ಅವರ ರಾಜಕೀಯ ಆಡಳಿತ ಪ್ರಾರಂಭವಾಗಿತ್ತು. ಅಂದರೆ ಸುಮಾರು ೧೦ನೇ ಶತಮಾನದಲ್ಲಿ ಈ ಭಾಗದಲ್ಲಿ ಅವರ ಆಳ್ವಿಕೆಗೆ ಸಂಬಂಧಿಸಿದ ಶಾಸನಗಳು ಸಿರಿವಾರ, ಕವುತಾಳಗಳಲ್ಲಿ ದೊರಕಿವೆ. ಸಿರಿವಾರ ಈಶ್ವರ ದೇವಾಲಯದ ಹೊರಗೆ ಇರುವ ಶಾಸನದ ಮೂಲಕ ಪ್ರತಾಪ ಚಕ್ರವರ್ತಿ ಸಿಂಹಣದೇವನ ಉಲ್ಲೇಖ ಬಂದಿದೆ. ದೇವಗಿರಿಯ ಯಾದವ ವಂಶದ ಸಿಂಹಣನಿರಬಹುದೆಂದು ಊಹಿಸಲಾಗಿದೆ. ಈತನು ಜೈತುಗಿಯ ಮಗ ಭಿಲ್ಲಮನ ಮೊಮ್ಮಗನಾಗಿದ್ದನೆಂದು ತಿಳಿದುಬರುತ್ತದೆ. (ಕವಿವಿಶಾಸಂ. ೭, ಮಾ. ೭೮).

ಕವುತಾಳ ಕ್ರಿ.ಶ. ೧೨೧೭ರ ಶಾಸನವು ಸೇವುಣ ಸಿಂಗಣನು ದೇವಗಿರಿಯ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತ ಹೈಹಯ ವಂಶದ ಮಲ್ಲದೇವರಸನಿದ್ದ. ಈತನನ್ನು ೪ ಭಾಷೆಯ ಗಂಡ ಮುಂತಾಗಿ ಕರೆದಿದೆ. ಈತನ ಅಧೀನದಲ್ಲಿ ಬೇಚಿಸೆಟ್ಟಿ ರೇಚಿಸೆಟ್ಟಿಯೆಂಬುವರು ಹಲ್ಲೇಶ್ವರ ದೇವರಿಗೆ ಭೂದಾನ ನೀಡುವ ವಿವರವಿದೆ (ಕವಿವಿಶಾಸಂ. ೭, ಮಾ. ೧೧೫).

ಕವುತಾಳ ಅದೇ ದೇವಾಲಯದ ಒಳಗಿರುವ ಶಾಸನದ ಮೂಲಕ ಇದು ಯಾದವ ಚಕ್ರವರ್ತಿ ಸಿಂಗಣದೇವನ ಕಾಲಕ್ಕೆ ಸೇರಿದ್ದು. ಈತನ ಸಾಮಂತ ಇಮ್ಮಡಿ ಮಲ್ಲಿದೇವನನ್ನು ಉಲ್ಲೇಖಿಸುತ್ತದೆ. ಪ್ರಾರಂಭದಲ್ಲಿ ಸಿಂಗಣದೇವನನ್ನು ಹೊಗಳುವ ಪದ್ಯಗಳಿವೆ. ಇವನು ದೇವಗಿರಿಯ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಂತೆ ಹೇಳಿದೆ. ಇವನು ಐಯಣ ಸಿವುರದಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ, ಇವನ ಕೈಕೆಳಗೆ ಬೆಚಿಸೆಟ್ಟಿ ಈತನನ್ನು ಚಾಲುಕ್ಯನ್ವಯನೆಂದೂ ಮೊರಟ ೩೦೦ರ ಸೆಟ್ಟಿಗುತ್ತನೆಂದು ಇವನ ತಮ ರೇಚಿಸೆಟ್ಟಿ ಇವರಿಬ್ಬರೂ ತಂದೆಯ ಹೆಸರಿನಲ್ಲಿ ಲಿಂಗ ಪ್ರತಿಷ್ಠೆ ಮಾಡಿ ತ್ರಯಂಬಕೇಶ್ವರ ದೇವರಿಗೆ ಭೂದಾನ ನೀಡುತ್ತಾರೆ. ಉಳಿದ ಸೆಟ್ಟಿಗುತ್ತರು ನಾನಾ ದೇಸಿಗಳು ಕವುತಾಳ ಸಮಸ್ತ ಪ್ರಜೆಗಳ ಬೇರೆ ಬೇರೆ ದಾನಗಳನ್ನು ನೀಡುತ್ತಾರೆ ಎನ್ನುವ ವಿಷಯ ಕವುತಾಳದ ಈ ಶಾಸನದಿಂದ ತಿಳಿದುಬರುತ್ತದೆ. (ಕವಿವಿಶಾಸಂ. ೭, ಮಾ. ೧೧೬).

ಹೀಗೆ ಸಾಮ್ರಾಜ್ಯದ ಉತ್ತರ ಭಾಗದಲ್ಲಿ ಸೇವುಣರು, ದಕ್ಷಿಣದಲ್ಲಿ ಹೊಯ್ಸಳರು ಪ್ರಬಲರಾದರು. ಕ್ರಿ.ಶ. ೧೧೮೯ರಲ್ಲಿ ಕಲ್ಯಾಣ ಚಾಲುಕ್ಯ ಸಾಮ್ರಾಜ್ಯವು ಅಳಿದು ಹೋಯಿತು. ಕೇವಲ ೨೮ ವರ್ಷಗಳ ಕಾಲ ಆಳ್ವಿಕೆ ಮಾಡಿದ ಕಳಚೂರ್ಯರು ಕನ್ನಡ ನಾಡಿನ ಇತಿಹಾಸದಲ್ಲಿ ಮುಖ್ಯ ಘಟನಾವಳಿಗಳಿಂದ ಕೂಡಿದ ಅರಸರಾಗಿದ್ದಾರೆ. ಇವರ ಕಾಲದಲ್ಲಿ ಬಸವಣ್ಣ ಮುಂತಾದವರ ನೇತೃತ್ವದಲ್ಲಿ ಧಾರ್ಮಿಕ ಚಳುವಳಿ ನಡೆದು ಇಂದಿನ ವೀರಶೈವ ಎಂಬ ವಂಶ ಉಗಮಕ್ಕೆ ಕಾರಣವಾಯಿತು. ನಂತರ ಬಂದ ಅರಸರು ಅಧ್ಯಕ್ಷರಾಗಿದ್ದರಿಂದ ಮಾಂಡಲೀಕರ ಪ್ರಭಾವ ಹೆಚ್ಚಿತು. ಮುಂದೆ ರಾಯಚೂರು ಪ್ರದೇಶವು ಸೇವುಣರ ಆಡಳಿತಕ್ಕೆ ಸೇರ್ಪಡೆಯಾಯಿತು.

ದೇವಗಿರಿ ಯಾದವರು (ಸೇವುಣರು)

ದೇವಗಿರಿಯ ಯಾದವರು ಕಲ್ಯಾಣ ಚಾಲುಕ್ಯರ ನಂತರ ಸುಮಾರು ೧೩ನೇ ಶತಮಾನದಲ್ಲಿ ಪ್ರಾಬಲ್ಯಕ್ಕೆ ಬಂದು ದಕ್ಷಿಣ ಭಾರತದ ರಾಜಕೀಯ ರಂಗದಲ್ಲಿ ಮಹತ್ವದ ಪಾತ್ರವಹಿಸಿದರು. ಯಾದವರು ಪೂರ್ವಜರು ಸುಮಾರು ೩೦೦ ವರ್ಷಗಳ ಕಾಲ ಮಾನ್ಯಖೇಟದ ರಾಷ್ಟ್ರಕೂಟರ ಮತ್ತು ಕಲ್ಯಾಣದ ಚಾಲುಕ್ಯರ ಸಾಮಂತರಾಗಿ ಖಾನ್ ದೇಶ, ನಾಸಿಕ್ ಮತ್ತು ಅಹ್ಮದ್‌ನಗರ ಜಿಲ್ಲೆಗಳನ್ನೊಳಗೊಂಡ ಪ್ರದೇಶಕ್ಕೆ ಒಡೆಯರಾಗಿದ್ದರು.

ಸೇವುಣರಿಗೆ ಯಾದವರೆಂಬ ಹೆಸರಿದ್ದು ಈಗಿನ ಮಹಾರಾಷ್ಟ್ರ ರಾಜ್ಯದಲ್ಲಿರುವ ದೇವಗಿರಿ ಅವರ ರಾಜಧಾನಿಯಾಗಿತ್ತು. ಆದ್ದರಿಂದ ರಾಜವಂಶಗಳ ಶಾಸನಗಳಲ್ಲಿ ದೇವಗಿರಿ ಅರಸ ವಂಶಜರನ್ನು ಸೇವುಣರೆಂದು ಕರೆಯಲಾಗಿದೆ. ಅಲ್ಲದೆ ಈ ದೇವಗಿರಿ ರಾಜ್ಯದ ಪ್ರಾಬಲ್ಯಕ್ಕೆ ಮೂಲ ಕಾರಣನಾದವನು ಸೇವುಣ ಚಂದ್ರನೆಂಬುವವನಾದ್ದರಿಂದ ಇವರನ್ನು ಸೇವುಣರೆಂದು ಕರೆಯಲಾಗಿದೆ.

ಸೇವುಣರು ಕನ್ನಡ ನಾಡು ಒಳಗೊಂಡಂತೆ ರಾಯಚೂರು ಪ್ರದೇಶದ ಬಹುಭಾಗವನ್ನು ಆಳಿದರು. ಈ ಅವಧಿಯಲ್ಲಿ ದ್ವಾರಸಮುದ್ರ ಹೊಯ್ಸಳರೊಡನೆ ತೀವ್ರ ಹೋರಾಟ ನಡೆಸಿ ಕರ್ನಾಟಕದ ಉತ್ತರ ಭಾಗದಲ್ಲಿ ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡರು.

ಸೇವುಣರ ಮೊದಲ ಅರಸ ಸೇವುಣ ಚಂದ್ರನಾಗಿದ್ದು. ಈತನು ೯೮೦-೯೦೦ರವರೆಗೆ ನಂತರ ದಡಿಯಪ್ಪ ಒಂದನೇ ಬಿಲ್ಲಮ. ಒಂದನೇ ಬಡ್ಡಿಗ, ರಾಜಗಿ ೨ನೇ ಬಿಲ್ಲಮ, ೩ನೇ ಬಿಲ್ಲಮ ವಾಡುಗಿ, ೪ನೇ ಬಿಲ್ಲಮ, ೨ನೇ ಸೇವುಣ ಚಂದ್ರ ಇವನ ಮಗ ಐರಮದೇವ, ೧ನೇ ಸಿಂಘಣ ೧೧೦೫-೧೧೨೦ ಅಮರ ಗಾಂಗೇಯ ಅಮರ ಮಲ್ಲಗಿ ಐದನೇ ಬಿಲ್ಲಮ ಮುಂತಾದವರ ಆಳ್ವಿಕೆ ನಡೆಸಿದ್ದಾರೆ. ಆದರೆ ಇವರ ಕಾಲದ ಶಾಸನಗಳು ಹಾಗೂ ಸ್ಮಾರಕಗಳು ಈ ಪ್ರದೇಶದಲ್ಲಿ ದೊರೆಯುವುದಿಲ್ಲ. ಇವರ ನಂತರ ಬಂದ ಜೈತುಗಿಯ ಮಗನಾದ ಎರಡನೇ ಸಿಂಘಣನ ಆಳ್ವಿಕೆಯು ಸೇವುಣ ಇತಿಹಾಸದಲ್ಲಿ ರಾಜ್ಯ ವಿಸ್ತರಣವಾಯಿತು. ಸಿಂಘಣನು ಕ್ರಿ.ಶ. ೧೨೧೦ರಲ್ಲಿ ಅಧಿಕಾರಕ್ಕೆ ಬಂದನೆಂದು ಹೇಳಲಾಗುತ್ತದೆ. ಇವನ ೧೨೧೦ ರಿಂದ ೧೨೪೭ರ ಅಧಿಕಾರಾವಧಿಯ ಶಾಸನಗಳು ರಾಯಚೂರು ಪ್ರದೇಶದಲ್ಲಿ ಲಭ್ಯವಾಗಿವೆ.

ಗಬ್ಬೂರಿನ ವೆಂಕಟೇಶ್ವರ ದೇವಾಲಯದ ಆವರಣದಲ್ಲಿನ ಕರಿಯ ಕಲ್ಲಿನ ಕಂಬದಲ್ಲಿನ ಕ್ರಿ.ಶ. ೧೨೧೩ರ ಶಾಸನವು ನಾಗರಿ ಲಿಪಿ, ಸಂಸ್ಕೃತ ಭಾಷೆಯಲ್ಲಿದ್ದು. ಯಾದವ ಸಿಂಹಣನು ಗೋಪುರದಲ್ಲಿ ಪ್ರಸನ್ನ ರಾಜೇಶ್ವರ ಮತ್ತು ಕೇಶವ ದೇವರನ್ನು ಪ್ರತಿಷ್ಠಾಪಿಸಿ, ಇದರೊಂದಿಗೆ ಕೇಶವಾದಿ ಚತುರ್ವಿಂಶತಿ ಮೂರ್ತಿಗಳನ್ನೂ ಸಕಲ ಪರಿವಾರ ದೇವತೆಗಳನ್ನು ಪ್ರತಿಷ್ಠಾಪಿಸಿದಂತೆ ಹೇಳಿದೆ. ಗೋಪುರವನ್ನು ಇವನ ದಂಡನಾಯಕ ಲಕ್ಷ್ಮೀದೇವನು ಆಳುತ್ತಿದ್ದು. ಅವನು ಅನೇಕರಿಗೆ ಮನೆಯ ವೃತ್ತಿಗಳನ್ನು ಹಂಚಿದ ನೇರುಡಿಗೆ ಗ್ರಾಮವನ್ನು ನೀಡಿದೆ. (ಕವಿವಿಶಾಸಂ. ೭, ದೇ.೯).

ವೀರಗೋಟ ಊರಿನ ಮೌನೇಶ್ವರರು ತಪಸ್ಸು ಮಾಡಿದ ಗುಡಿಯಲ್ಲಿರುವ ಕ್ರಿ.ಶ. ೧೨೨೩ರ ಶಾಸನದಲ್ಲಿ ಯಾದವ ಸಿಂಘಣನು ದೇವಗಿರಿಯ ನೆಲೆವೀಡಿನಲ್ಲಿದ್ದಾಗ, ಅವನ ಆಧೀನದಲ್ಲಿದ್ದ ಸರ್ವಾಧಿಕಾರ ಮಹಾಪ್ರಧಾನಿ ಬಾಹತ್ತರ ನಿಯೋಗಾಧಿಪತಿ, ಪುರುಷೋತ್ತಮ ನಾಯಕನ ತಮ್ಮನಾದ ನರೋತ್ತಮದೇವನು ಮತ್ತು ಮಹಾಮಂಡಳೇಶ್ವರನಾದ ಚಾವುಂಡರಸನ ಕಾಲದಲ್ಲಿ ವ್ಯಾಪಾರಿ ಸಂಘಗಳವರು ಯೆರಡ್ಡೈಯ್ಯಣವಾಡಿನಾಡ ರೇಚಿಸೆಟ್ಟಿ, ಪದ್ಮಿಸೆಟ್ಟಿ, ಮಾಚಿಸೆಟ್ಟಿ, ಕರಡಿಕಲ್ಲನಾಡು ಸೆಟ್ಟಿಗುತ್ತ, ಸೇಗಿಸೆಟ್ಟಿ, ಹಗರಗಟ್ಟಿಯ ಸೆಟ್ಟಿ ಮುಂತಾದವರೆಲ್ಲಾ ಸೇರಿ ಮಹಾನಾಡಾಗಿ ಹರಳ ಹನ್ನೆರಡರಲ್ಲಿ ಒಂದು ಗ್ರಾಮವನ್ನು ಸಂಕರ ದೇವರಿಗೆ ದಾನವಾಗಿ ನೀಡುತ್ತಾರೆ. (ಕವಿವಿಶಾಸಂ. ೭, ದೇ.೩೧).

ಇವನ ನಂತರ ಜೈತುಗಿಯ ಮೊಮ್ಮಗ ಕೃಷ್ಣ ಸೇವುಣ ರಾಜನಾದನು. ಇವನ ನಂತರ ಮಹಾದೇವ ಅಧಿಕಾರ ವಹಿಸಿಕೊಂಡನು. ಕೃಷ್ಣನ ತರುವಾಯ ಅವನ ಹಿರಿಯ ಮಗ

ರಾಮಚಂದ್ರನಿಗೆ ಅಧಿಕಾರ ಬರಬೇಕಾಗಿತ್ತು. ಆದರೆ ಅವನಿಗೆ ಅಧಿಕಾರ ಬರಲಿಲ್ಲ. ಆದ್ದರಿಂದ ರಾಮಚಂದ್ರನು ತನ್ನ ತಮ್ಮನ ಮಗ ಅಮಣನನ್ನು ಕೊಂದು ಅಧಿಕಾರಕ್ಕೆ ಬಂದನು. ಇವನು ೪೦ ವರ್ಷಗಳ ದೀರ್ಘ ಆಳ್ವಿಕೆಯ ಕಾಲದಲ್ಲಿ ಹೊಯ್ಸಳರು ಕಾಕತೀಯರೊಡನೆ ನಿರಂತರ ಯುದ್ಧದಲ್ಲಿ ತೊಡಗಿದ್ದರು. ಈ ವೇಳೆಗಾಗಲೇ ಉತ್ತರ ಭಾರತದಲ್ಲಿ ಮಹಮ್ಮದಿಯರ ದಾಳಿಗಳು ಯಶಸ್ವಿಯಾಗತೊಡಗಿದ್ದವು. ದಕ್ಷಿಣದ ರಾಜರು ಉತ್ತರದಲ್ಲಿ ಸ್ಥಾಪಿತವಾದ ಸುಲ್ತಾನರ ಬಲಿಷ್ಠ ಸಾಮ್ರಾಜ್ಯ ಹಾಗೂ ಆದ್ದರಿಂದ ಮುಂದೊದಗಬಹುದಾದ ಪರಿಣಾಮಗಳನ್ನು ಕುರಿತು ಯೋಚಿಸದೆ ಪರಸ್ಪರ ಅಂತ ಕಲಹದಲ್ಲೇ ತೊಡಗಿದ್ದರು. ದಕ್ಷಿಣ ಭಾರತದ ಮೇಲೆ ಪ್ರಥಮವಾಗಿ ಅಲ್ಲಾವುದ್ದೀನ್ ಖಿಲ್ಜಿಯ ದಾಳಿಯನ್ನು ಪ್ರಾರಂಭಿಸಿದನು. ಇವನು ಕ್ರಿ.ಶ. ೧೨೯೪ರಲ್ಲಿ ದೇವಗಿರಿಯನ್ನು ಮುತ್ತಿದ್ದನು. ದೇವಗಿರಿಯ ವಿನಾಶವನ್ನು ತಪ್ಪಿಸಲು ರಾಮಚಂದ್ರನು ಅಲ್ಲಾವುದ್ದೀನನೊಡನೆ ಶಾಂತಿ ಒಪ್ಪಂದವನ್ನು ಮಾಡಿಕೊಂಡನೆಂದು ತಿಳಿದುಬರುತ್ತದೆ.

ಅಲ್ಲಾವುದ್ದೀನ್ ಖಿಲ್ಜಿಯ ದೇವಗಿರಿಯನ್ನೊಳಗೊಂಡಂತೆ ಕ್ರಿ.ಶ. ೧೩೦೯ರಲ್ಲಿ ವಾರಂಗಲ್ಲನ್ನು ದ್ವಾರಸಮುದ್ರ (ಹಳೇಬೀಡು) ಮಧುರೆ ಹಾಗೂ ಇತರ ಮುಖ್ಯ ನಗರಗಳನ್ನು ಸೂರೆ ಹೊಡೆಯಲು ಮಲ್ಲಿಕಾಫರನನ್ನು ಕಳುಹಿಸಿದನು. ಪದೇ ಪದೇ ನಡೆದ ದಾಳಿಗಳಿಂದ ಜರ್ಝರಿತವಾದ ರಾಮಚಂದ್ರನು ಕ್ರಿ.ಶ. ೧೩೧೨ರಲ್ಲಿ ಮರಣ ಹೊಂದಿದನು. ಇವನ ನಂತರ ಸಿಂಘಣ, ಬಿಲ್ಲಣ, ಮಲ್ಲದೇವ ಎಂಬುವವರು ಸೇವುಣ ರಾಜ್ಯವನ್ನು ಪುನರ್ ಸ್ಥಾಪಿಸಲು ಪ್ರಯತ್ನಿಸಿ ವಿಫಲರಾದರು. ಕ್ರಿ.ಶ.೧೩೧೮ರಲ್ಲಿ ರಾಮಚಂದ್ರನ ಅಳಿಯ ರಾಜ್ಯ ಸ್ಥಾಪಿಸಲು ಪ್ರಯತ್ನಿಸಿ ವಿಫಲನಾದನು. ಇಲ್ಲಿಗೆ ಇವರ ಆಳ್ವಿಕೆ ಕೊನೆಗೊಂಡಿತು.

ಕಾಕತೀಯರು

ರಾಯಚೂರು ಪ್ರದೇಶವು ಕೆಲವು ಕಾಲ ಕಾಕತೀಯರಿಗೆ ಸೇರಿತ್ತೆಂಬ ಅಂಶವನ್ನು ತಿಳಿಸುವ ಏಕೈಕ ಶಾಸನವೊಂದು ರಾಯಚೂರಿನಲ್ಲಿ ದೊರೆತಿದೆ. ಕ್ರಿ.ಶ. ೧೨೯೪ರ ಶಾಸನದಲ್ಲಿ ಕಾಕತೀಯ ರುದ್ರದೇವ ಆಳುತ್ತಿದ್ದಾಗ ಅವನ ಮಾಂಡಳೀಕನಾಗಿ ಗೋನ ಗಂನಯರೆಡ್ಡಿಯೆಂಬುವವನು ವರ್ಧಮಾನಪುರದಿಂದ ಅಳುತ್ತಿದ್ದಂತೆಯೂ ಅವನ ರಾಜ್ಯದ ರಕ್ಷಾಮಣಿಯಾಗಿದ್ದ ವಿಶಾಲನಾಥ ಭೂಪಲನು ರಾಯಚೂರು ಪಟ್ಟಣದಿಂದ ರಾಜ್ಯಭಾರ ಮಾಡುತ್ತಾ ಸರ್ವರಾಷ್ಟ್ರ ಪ್ರಜಾ ರಕ್ಷಣಾರ್ಥವಾಗಿ ರಾಯಚೂರು ಕೋಟೆಯನ್ನು ಕಟ್ಟಿಸಿದಂತೆಯೂ ಹೇಳಿದೆ. ಈ ಶಾಸನವೊಂದೇ ಈ ರಾಯಚೂರು ಪ್ರದೇಶದಲ್ಲಿ ದೊರೆತಿಯವ ಕಾಕತೀಯ ಏಕೈಕ ಶಾಸನ ಕಾಕತೀಯರು ಬಹುಶಃ ದೇವಗಿರಿ ಯಾದವರಿಂದ ಈ ಪ್ರದೇಶವನ್ನು ಇವರು ಗೆದ್ದುಕೊಂಡಿರಬೇಕು. (ಕವಿವಿಶಾಸಂ. ೭, ರಾ.೪೫).

ವಿಜಯನಗರ

ಭಾರತದ ಭವ್ಯ ಹಾಗೂ ವೈವಿಧ್ಯಮಯ ಇತಿಹಾಸದ ಪುಟಗಳಲ್ಲಿ ಸುಮಾರು ೨೦೦ ವರ್ಷಗಳಿಗೂ ಹೆಚ್ಚು ಕಾಲ ಅಸ್ತಿತ್ವದಲ್ಲಿದ್ದು ವೈಭವಪೂರ್ಣವಾಗಿ ರಾಜ್ಯಭಾರ ಮಾಡಿದ ಸಾಮ್ರಾಜ್ಯವೇ ವಿಜಯನಗರ ಸಾಮ್ರಾಜ್ಯ.

ಮುಸ್ಲಿಂ ದಾಳಿ ಹೊಡತೆಗಳಿಂದ ಜರ್ಝರಿತವಾಗಿದ್ದ ಹಿಂದೂ ಧರ್ಮದ ಶ್ರೀರಕ್ಷೆಯಾಗಿ ಉದಯವಾದ ಇದು ರಾಜಕೀಯ ಅಸ್ಥಿರತೆಯನ್ನು ತೊಡೆದ ಹಾಕಿದುದಲ್ಲದೆ ಮುಸ್ಲಿಮರ ದಾಳಿಯನ್ನು ಸತತವಾಗಿ ಎರಡು ಶತಮಾನಗಳಿಗೂ ಹೆಚ್ಚು ಕಾಲ ತಡೆಹಿಡಿದರು. ಹದಿನಾಲ್ಕನೆಯ ಶತಮಾನದ ಆದಿ ಭಾಗದ ವೇಳೆಗೆ ಹೊಯ್ಸಳರು ತಮ್ಮ ರಕ್ಷಣೆಯನ್ನು ಕಳೆದುಕೊಂಡರು ಮತ್ತು ದೇವಗಿರಿಯ ಸೇವುಣರು ಅವನತಿಯ ಹಾದಿಯಲ್ಲಿದ್ದರು. ಓರಂಗಲ್ಲಿನ ಕಾಕತೀಯರು ಇತಿಹಾಸದಿಂದ ಕಣ್ಮರೆಯಾಗಿದ್ದರು. ಇಂತಹ ಸಂದಿಗ್ವ ಸಮಯದಲ್ಲಿ ಅಂದರೆ ಕ್ರಿ.ಶ. ೧೩೩೬ರಲ್ಲಿ ಸಂಗಮ ೫ ಮಕ್ಕಳಲ್ಲಿ ಹಿರಿಯರಾದ ಹಕ್ಕ ಮತ್ತು ಬುಕ್ಕರು ವಿದ್ಯಾರಣ್ಯ ಮುನಿಯ ಸಹಾಯದಿಂದ ಈ ಸಾಮ್ರಾಜ್ಯ ಸ್ಥಾಪಿಸಿದರು. ಇವರ ರಾಜಮುದ್ರೆ 'ಶ್ರೀವಿರೂಪಾಕ್ಷ' ಎಂದಾದರೆ ಇವರ ಲಾಂಛನ 'ವರಾಹ'ವಾಗಿದೆ. ವಿಜಯನಗರ ಪಟ್ಟಣವೇ (ಹಂಪಿ) ಇವನ ರಾಜಧಾನಿಯಾಗಿತ್ತು. ಸಂಗಮ ವಂಶದ ಮೊದಲ ದೊರೆ ಹರಿಹರ ಇವನು ಕ್ರಿ.ಶ. ೧೩೩೬ ರಿಂದ ೧೩೫೬ರವರೆಗೆ ರಾಜ್ಯವಾಳಿದನು. ಇವನ ನಂತರ ಬುಕ್ಕರಾಯ ೧೩೫೬-೧೩೭೭ರವರೆಗೆ ಆಳಿದನು. ನಂತರ ಎರಡನೆಯ ಹರಿಹರ ೧೩೭೭–೧೪೦೪ರವರೆಗೆ ಆಳಿದನು. ನಂತರ ಒಂದನೇ ದೇವರಾಯ ೧೪೦೬-೧೪೨೨ರವರೆಗೆ ನಂತರ ೨ನೇ ದೇವರಾಯನ ೧೪೨೪-೪೬ರವರೆಗೆ ರಾಜ್ಯಭಾರ ಮಾಡಿದರು. ಇವರ ಆಳ್ವಿಕೆಯ ಶಾಸನ ರಾಯಚೂರು ಪ್ರದೇಶದ ಮುದಗಲ್‌ನಲ್ಲಿ ದೊರೆಯುವ ಪ್ರಥಮ ೧೪೩೬ರ ಶಾಸನವಾಗಿದೆ. ನಂತರ ಸಾಳುವ ವಂಶದ ನರಸಿಂಹ ೧೪೮೫-೯೧ರವರೆಗೆ ನಂತರ ತಿಮ್ಮಭೂಪ ೨ನೇ ನರಸಿಂಹ ಆಳ್ವಿಕೆ ಮಾಡಿದರು. ೧೫೦೩ರಲ್ಲಿ ಈ ವಂಶ ಪತನ ಹೊಂದಿ ನಂತರ ೧೫೦೫ರಲ್ಲಿ ಇಮ್ಮಡಿ ನರಸಿಂಹ ತುಳುವ ಸಂತತಿಯನ್ನು ಆರಂಭಿಸಿದನು.

ಕ್ರಿ.ಶ. ೧೫೦೩ರಲ್ಲಿ ೨ನೇ ನರಸನಾಯಕ ಕಾಲವಾದ ಮೇಲೆ ಇವನ ಮಕ್ಕಳಾದ ವೀರನರಸಿಂಹ ಕೃಷ್ಣದೇವರಾಯ ಆಳ್ವಿಕೆ ಪ್ರಾರಂಭಿಸಿದರು. ತುಳುವ ವಂಶದ ಮೊದಲ ದೊರೆಯಾಗಿ ವೀರನರಸಿಂಹ ಕ್ರಿ.ಶ. ೧೫೦೫-೧೫೨೦ರವರೆಗೆ ಆಳ್ವಿಕೆ ಮಾಡಿದನು. ಇವನ ನಂತರ ಕೃಷ್ಣದೇವರಾಯ ಪಟ್ಟಕ್ಕೆ ಬಂದನು. ಕೃಷ್ಣದೇವರಾಯ ೧೫೧೦ ರಿಂದ ೧೫೨೯ರವರೆಗೆ ರಾಜ್ಯಭಾರ ಮಾಡಿದನು. ಕೃಷ್ಣದೇವರಾಯನು ಕರ್ನಾಟಕ ಇತಿಹಾಸದಲ್ಲಿ ಮಾತ್ರವಲ್ಲದೆ ಸಮಗ್ರ ಭಾರತದ ಇತಿಹಾಸದಲ್ಲಿಯೂ ಒಬ್ಬ ಶ್ರೇಷ್ಠ ಅರಸನಾಗಿ ಮೆರೆದಿದ್ದಾನೆ. ಈತನು ವೀರಸೇನಾನಿ,

ಉತ್ತಮ ಆಡಳಿತಗಾರ ಪರಮಧರ್ಮ ಸಹಿಷ್ಣು, ಸಾಹಿತ್ಯ ಪ್ರೇಮಿ ಮಾತ್ರವಲ್ಲದೆ ಸ್ವತಃ ಸಾಹಿತಿ ಕಲಾ ಪೋಷಕನಾಗಿದ್ದನು. ಈತನ ಆಳ್ವಿಕೆಯ ವಿಜಯನಗರದ ಇತಿಹಾಸದಲ್ಲಿ ಸುವರ್ಣ ಯುಗವಾಯಿತು. ಇವನ ಆಳ್ವಿಕೆಯ ಕಾಲದಲ್ಲಿ ರಾಯಚೂರು ಪ್ರದೇಶ ಪ್ರಮುಖ ಸ್ಥಾನಪಡೆದಿದೆ. ಇವನ ಆಳ್ವಿಕೆ ಕಾಲದ ಶಾಸನಗಳು ಮಾನ್ವಿ ತಾಲ್ಲೂಕಿನ ಬೇಕಲಪರ್ವಿ, ಕ್ರಿ.ಶ.೧೫೨೧ರ ಶಾಸನದಲ್ಲಿ ಕೃಷ್ಣದೇವರಾಯನು, ಮಾನುವೆ, ಹಾನಗಲ್ಲು, ಅಲಂಪೂರು, ರಾಯಚೂರು, ಮಾಗಡೆ ದುರ್ಗಗಳನ್ನು ಗೆದ್ದು ಕೃಷ್ಣಾ ಮತ್ತು ಭೀಮಾ ನದಿ ಸಂಗಮದಲ್ಲಿ ರತ್ನಧೇನು ಮಹಾದಾನವನ್ನು ಮಾಡಿ ತನ್ನ ಹೆಂಡತಿ ಚಿನ್ನಾದೇವಿ ಕೈಯಲ್ಲಿ ಗೋದಾನವನ್ನು ತಿರುಮಲದೇವಿ ಕೈಯಲ್ಲಿ ಕನಕದಾನವನ್ನು ಮಾಡಿಸಿದ ಉಲ್ಲೇಖವಿದೆ. (ಕವಿವಿಶಾಸಂ.೭ ಮಾ. ೧೯) ಮತ್ತು ಸಿಂಧೂನೂರಿನ ಸಾಲಗುಂದ ಗ್ರಾಮದ ೧೫೨೮ರ ಶಾಸನದಲ್ಲಿ ವಿಜಯನಗರದ ಅರಸ ವೀರ ಕೃಷ್ಣರಾಯನು ರಾಜ್ಯವಾಳುತ್ತಿದ್ದಾಗ ಋವುಡುಕುಂದಿಯ ಸೀಮೆಯ ಸಾಲಿಗುಂಡ ಗ್ರಾಮವು ಅಬ್ಬರಾವು ಅಯ್ಯನ ಕುದುರೆಯನಾಯಕತನಕ್ಕೆ ಸೇರಿತ್ತು. ಆ ಗ್ರಾಮದ ಪಶ್ಚಿಮಕ್ಕೆ ಕಟ್ಟಿರುವ ಕರಿಯ ಕೆರೆಯ ಕೆಳಗೆ ಎರಡು ಕುಳಿಗ ಭೂಮಿಯನ್ನು ಅಬ್ಬರಾವು ಅಯ್ಯನಿಗೆ ಪುಣ್ಯವಾಗಲಿಯೆಂದು ಋವುಡುಗುಂದಿಯಲ್ಲಿದ್ದ ತಿರುಮಲದೇವರಿಗೆ ದಾನ ನೀಡುತ್ತಾನೆ. (ಕವಿವಿಶಾಸಂ.೭, ಸಿ.೩). ಕ್ರಿ.ಶ. ೧೫೩೦ರಲ್ಲಿ ಪಟ್ಟಕ್ಕೆ ಬಂದ ಅಚ್ಯುತದೇವರಾಯನ ಶಾಸನವು ಮಸ್ಕಿ ಪ್ರದೇಶದಲ್ಲಿ ದೊರೆತಿದೆ. ಈ ಭಾಗವನ್ನು ಕ್ರಿ.ಶ. ೧೫೩೭ರವರೆಗೆ ಅಚ್ಯುತರಾಯನ ಸಾಮಂತನಾಗಿ ಇಮ್ಮಡಿ ಮೇದಿನಿರಾಯನು ಆಳುತ್ತಿದುದ್ದಕ್ಕೆ ಅನೇಕ ಶಾಸನಗಳಲ್ಲಿ ಉಲ್ಲೇಖವನ್ನು ಕಾಣಬಹುದು (ಕವಿವಿಶಾಸಂ. ೭, ದೇ. ೩೬) ನಂತರ ಕ್ರಿ.ಶ. ೧೫೪೩ರಲ್ಲಿ ಸದಾಶಿವರಾಯನು ಪಟ್ಟಕ್ಕೆ ಬರುತ್ತಾನೆ. ಸಿಂದನೂರಿನ ತಾಲ್ಲೂಕಿನ ಮುಕ್ಕುಂದಿ ಗ್ರಾಮದಲ್ಲಿ ಹಾಗೂ ಮಾನ್ವಿಯಲ್ಲಿ ದೊರೆತ ಶಾಸನಗಳ ಇವನ ಆಳ್ವಿಕೆಯ ಉಲ್ಲೇಖವನ್ನು ತಿಳಿಸುತ್ತದೆ. ರಾಯಚೂರು ಪ್ರದೇಶ ಕ್ರಿ.ಶ. ೧೫೩೬ರ ಯುದ್ಧದವರೆಗೆ ವಿಜಯನಗರದ ಅರಸರ ಆಳ್ವಿಕೆಯಲ್ಲಿತ್ತು. ಕ್ರಿ.ಶ. ೧೫೬೫ರ ನಂತರ ಅದು ಬಿಜಾಪುರದ ಅರಸರ ವಶವಾಗುತ್ತದೆ. ಮಸ್ಕಿ ಗ್ರಾಮದ ೧೫೩೦-೧೫೩೭ರ ಶಾಸನದಲ್ಲಿ ಅಚ್ಯುತರಾಯನು ರಾಜ್ಯವಾಳುತ್ತಿದ್ದಾಗ ಮೊಗಸೆ ಸೀಮೆಗೆ ಸೇರಿದ್ದ ಗ್ರಾಮ ತಿದಗಿಬಾವಿಯೆಂಬ ಗ್ರಾಮವನ್ನು ದಾನ ನೀಡಿದ ಉಲ್ಲೇಖವಿದೆ (ಕವಿವಿಶಾಸಂ. ೭, ದೇ.೩೯).

ಮಸ್ಕಿ ಕ್ರಿ.ಶ. ೧೫೪೭ರ ಶಾಸನದಲ್ಲಿ ಸದಾಶಿವಮಹಾರಾಯನು ಆಳುತ್ತಿರುವಾಗ ಅವನ ಕಾರ್ಯಕ್ಕೆ ಕರ್ತನಾದ ಅಳಿಯ ರಾಮರಾಜ್ಯಯ್ಯದೇವ ಅರಸನು ನಾಯಿಂದರ ತಿಂಮ್ಮೋಜ ಕೊಂಡೋಜ ಮತ್ತು ಭದ್ರೋಜರುಗಳ ಮನವಿಯ ಮೇರೆಗೆ ಮೊಗಸೆ ಸೀಮೆಗೆ ಸೇರುವ ಒಂದು ಗ್ರಾಮವನ್ನು ಆ ಕುಲದವರಿಗೆ ದಾನವಾಗಿ ನೀಡುತ್ತಾನೆ. ಹೀಗೆ ಇವರ ಆಳ್ವಿಕೆಯಲ್ಲಿ ದೇವದುರ್ಗ, ಮಾನ್ವಿ, ಲಿಂಗಸೂಗೂರು, ಸಿಂದನೂರು ಮತ್ತು ರಾಯಚೂರನ್ನು ಒಳಗೊಂಡಂತೆ

ಅನೇಕ ಗ್ರಾಮಗಳು ಇವರ ಆಳ್ವಿಕೆಗೆ ಒಳಪಟ್ಟಿದ್ದು. ಇವರ ಕಾಲದಲ್ಲಿ ಅನೇಕ ಸ್ಮಾರಕಗಳ ನಿರ್ಮಾಣವಾಗಿದೆ. ಅಲ್ಲದೇ ಅನೇಕ ಹೋರಾಟಗಳು ನಡೆದ ಉಲ್ಲೇಖವನ್ನು ನಾವು ಕಾಣುತ್ತೇವೆ.

ಬಹಮನಿ ಸಾಮ್ರಾಜ್ಯ

ಬಹಮನಿ ಸಾಮ್ರಾಜ್ಯವು ಕ್ರಿ.ಶ. ೧೩೪೭ರಲ್ಲಿ ಹಸನಗಂಗು ಎಂಬುವವನು ದೆಹಲಿ ಸೈನ್ಯವನ್ನು ಸೋಲಿಸಿ ಅಲ್ಲಾ ಉದ್ದೀನ್ ಬಹುಮನ್‌ಷಾಹ ಎಂಬ ಬಿರುದು ಧರಿಸಿ ಸಿಂಹಾಸನವೇರಿದನು. ಇವನು ಕ್ರಿ.ಶ. ೧೩೫೮ರವರೆಗೆ ರಾಜ್ಯವಾಳಿದ. ಇವನ ಕಾಲದಲ್ಲಿಯೇ ರಾಜ್ಯವನ್ನು ನಾಲ್ಕು ತರಫ್‌ಗಳಾಗಿ (ಪ್ರಾಂತ್ಯ) ವಿಂಗಡಿಸಿ ಕಲ್ಬುರ್ಗಿ, ಬೀದರ, ದೌಲತ್‌ಬಾದ್ ಮತ್ತು ಬಿರಾರ್ ಅವುಗಳಿಗೆ ಪ್ರಾಂತ್ಯಾಧಿಕಾರಿಗಳನ್ನು ನೇಮಿಸಿದನು. ರಾಯಚೂರು ಪ್ರದೇಶದಲ್ಲಿ ಇವರ ಆರಂಭದ ಶಾಸನಗಳು ದೊರೆಯದಿದ್ದರೂ ಕ್ರಿ.ಶ. ೧೪೬೫ರ ಇಮ್ಮಡಿ ಮಹಮ್ಮದ್ ಷಾಹ ಹೆಸರಿಸುವ ಶಾಸನ ರಾಯಚೂರಿನಲ್ಲಿ ದೊರೆತಿದೆ ಮತ್ತು ಲಿಂಗಸೂಗೂರು ತಾಲ್ಲೂಕಿನಲ್ಲಿ ಮತ್ತು ಮಾನ್ವಿ, ಸಿಂದನೂರು ತಾಲ್ಲೂಕಿನಲ್ಲಿ ಇವರ ಕಾಲದ ಶಾಸನಗಳು ಲಭ್ಯವಾಗಿದೆ. ದೇವದುರ್ಗಕ್ಕೆ ಸಂಬಂಧಿಸಿದಂತೆ ಲಿಂಗಸೂಗೂರಿನ ತಾಲ್ಲೂಕಿನ ಗೋಣಿವತ್ತಿ ಗ್ರಾಮದ ಕ್ರಿ.ಶ. ೧೫೮೫ರ ಶಾಸನದಲ್ಲಿ ಬಾದುಶಹ ಸಾಹೇಬರಿಗೆ ಪುಣ್ಯವಾಗಬೇಕೆಂದು ಮುದಗಲ್ಲ ಸೀಮೆಯ ದೇವದುರ್ಗದ ಬಳಿಯ ಕಂಬಿತೆರದೊಡ್ಡಿ ಗ್ರಾಮವನ್ನು ಅಜರಜಿಖಾನೆ ಖೋದಾಯ ಚಂನ ಖಾನೆ ಅಜಂ ಮನಾಸುಕೆಖಾನನು ಬಾದಶಹ ಸಾಹೇಬರಿಗೆ ಪುಣ್ಯವಾಗಬೇಕೆಂದು ದೊಂಬರ ಬಂಡಿ ಹನುಮಂತ ಮತ್ತು ಮಲ್ಲೋಜರಿಗೆ ಮಜಗೂರು ಗ್ರಾಮವನ್ನು ಇನಾಮು ಕೊಟ್ಟ ವಿಷಯವಿದೆ (ಕವಿವಿಶಾಸಂ. ೭, ದೆ. ೧೫). ಆದ್ದರಿಂದ ದೇವದುರ್ಗದ ಕೆಲವು ಸ್ಥಳಗಳಲ್ಲಿ ಇವರ ಆಳ್ವಿಕೆಗೆ ಒಳಪಟ್ಟಿರಬೇಕೆಂದು ತಿಳಿದುಬರುತ್ತದೆ.

ಗಬ್ಬೂರು ಇವರ ಕಾಲದಲ್ಲಿ ಇವರ ಅಧೀನದಲ್ಲಿದ್ದ ಉಲ್ಲೇಖವು ರಾಯಚೂರು ಕ್ರಿ.ಶ. ೧೪೯೮-೯೯ ರ ಅವಧಿಯ ಶಾಸನದಲ್ಲಿ ಮಲ್ಲಿಕ್ ಹಾಜಿಯು ರಾಯಚೂರು ಪ್ರದೇಶದ ಗ್ರಾಮವಾದ 'ಗಬ್ಬೂರು' ಗ್ರಾಮದ ಒಂಬತ್ತು ಚದರ ಭೂಮಿಯನ್ನು ಮಸೀದಿಗೆ ದಾನ ನೀಡಿದ ಉಲ್ಲೇಖವಿದೆ. ಅಂದರೆ ದೇವದುರ್ಗದ ಅನೇಕ ಗ್ರಾಮಗಳ ಬಹುಮನಿ ಸುಲ್ತಾನರಿಗೆ ಸೇರಿತ್ತೆಂಬುದು ಸ್ಪಷ್ಟವಾಗುತ್ತದೆ.

ದೇವದುರ್ಗದ ನಾಯಕರು

ರಾಯಚೂರು ಪ್ರದೇಶವನ್ನು ಮೌರ್ಯರು, ಶಾತವಾಹನರು, ಕಲ್ಯಾಣ, ಚಾಲುಕ್ಯರು, ಯಾದವರು (ಸೇವುಣರು) ಆರಂಭದಲ್ಲಿ ಈ ಪ್ರದೇಶವನ್ನು ಆಳಿದರು. ವಿಜಯನಗರ ಅರಸರ ಆಳ್ವಿಕೆಯಲ್ಲಿ ಬೇಡ ಜನಾಂಗದವರಿಗೆ ಸೈನ್ಯದಲ್ಲಿ ಮುಖ್ಯ ಹುದ್ದೆಗಳನ್ನು ನೀಡಲಾಗಿತ್ತು. ಜೊತೆಗೆ

"ರಾಜಾ" ಎಂಬ ಬಿರುದನ್ನು ನೀಡಿ ಗೌರವಿಸಲಾಗಿತ್ತು. ವಿಜಯನಗರ ಸಾಮ್ರಾಜ್ಯ ಪತನಗೊಂಡ ನಂತರ ನಾಯಕರೆಲ್ಲರೂ ಸ್ವತಂತ್ರವಾಗಿ ಸುರುಪುರ, ದೇವದುರ್ಗಗಳಂತಹ ಚಿಕ್ಕಪುಟ್ಟ ಸಂಸ್ಥಾನಗಳನ್ನು ಕಟ್ಟಿಕೊಂಡು ಆಳತೊಡಗಿದರು. ಇವರಲ್ಲಿ ಕೆಲವರು ವಿಜಾಪುರದ ಮಂಡಲೀಕರಾಗಿದ್ದರು ಹಾಗೂ ಮುಂದೆ ಮೊಗಲ್ ಚಕ್ರವರ್ತಿಗಳಿಂದ ಗೌರವದ ಸನದುಗಳನ್ನೂ ಪಡೆದರು. ಅದರಲ್ಲಿ ದೇವದುರ್ಗದ ನಾಯಕರು ಪ್ರಮುಖರಾಗಿದ್ದಾರೆ (ದೇ.ತಾ.ದ. ಬಿ.ಟಿ. ಲಲಿತನಾಯಕ್, ಪು-೮).

ದೇವದುರ್ಗದ ಈರಣ್ಣದೇವರ ದೊಡ್ಡ ಬಂಡೆಯಲ್ಲಿರುವ ಕ್ರಿಶ. ೧೯೯೦ರ ಶಾಸನದಲ್ಲಿ (ಶಾಲಿವಾಹನ ಶಕ ೧೬೧೨) ಅರಿಕೇರಿಯ ಗೋಪಾಲನಾಯ್ಕರ ಮಗ ತಿರುಮಲನಾಯ್ಕ ಈತನ ಮಗ ಚಿಕ್ಕ ಕೇಶವನಾಯ್ಕನ ಉಲ್ಲೇಖವಿದೆ. ಈತನು ವಿಜಯನಗರ ಸಾಮ್ರಾಜ್ಯದ ದಂಡನಾಯಕನಾಗಿದ್ದ ದೇಸಾಯ ಮತ್ತು ಸರದೇಸಾಯಿಗಳಿಂದ ರಾಯಚೂರಿನಲ್ಲಿ ಕಪ್ಪು ಕಾಣಿಕೆಗಳನ್ನು ಪಡೆಯುತ್ತಿದ್ದನು ಎಂದು ತಿಳಿಸುತ್ತದೆ.

ದೇವದುರ್ಗದ ಸಂಸ್ಥಾಪಕನೆನ್ನಲಾಗುವ ಕೇಶವ ನಾಯಕ (ಕೆಶವ್ವಯಗವೊಡ)ನು ನಳನಾಮ ಸಂವತ್ಸರದಲ್ಲಿ ದೇವದುರ್ಗದಲ್ಲಿ ಕೆರೆ ಕಟ್ಟಿಸಿ ದೇವದುರ್ಗವನ್ನು ನಿರ್ಮಿಸಿದ ಊರಿನ ಗೋವರ್ಧನ ಗೋಪಾಲಕೃಷ್ಣನ ಪ್ರತಿಷ್ಠೆ ಮಾಡಿಸಿ, ಪೇಟೆ ಕಟ್ಟಿಸಿ ಸಂತೆ ಸೇರಿಸಿದ ಎಂದು ಉಲ್ಲೇಖವಿದೆ (ಕವಿವಿಶಾಸಂ. ೭, ದೇ.೧೪೪). ಈ ಅರಸು ಮನೆತನದವರು ಎತ್ತರದ ಕೋಟೆ-ಕೊತ್ತಲಗಳನ್ನು ಮಂದಿರಗಳನ್ನು ಉಪಯುಕ್ತವಾದ ಹಲವಾರು ಕೆರೆ ಬಾವಿಗಳನ್ನು ತೋಡಿಸಿ ಪಟ್ಟಣದ ಜನತೆಗೆ ಸೌಕರ್ಯ ಒದಗಿಸಿದ್ದರು. ಹೈದರಾಬಾದಿನ ಒಂದನೆ ಅಸಫ್‌ಜಾನ್ ಕುಲಕ್ಕೆ ದೇವದುರ್ಗ ಕಿಲ್ಲೆ ಬೇಡರ ದೊರೆಯೊಬ್ಬನ ಆಡಳಿತಕ್ಕೊಳಪಟ್ಟಿದ್ದಾಗ, ಆಸಫ್ ಜಾ ಆ ದೊರೆಯ ಸಹಾಯ ಕೋರಿದ್ದಾನೆಂದು ತಿಳಿದುಬರುತ್ತದೆ. ಕೇಶವನಾಯ್ಕ ಕಟ್ಟಿಸಿದ ಭವ್ಯವಾದ ಅರಮನೆ ಶಿಥಿಲವಾಗಿದ್ದರೂ ಉಳಿದ ಭಾಗ ಸೊಗಸಾಗಿದ್ದನ್ನು ಇಂದಿಗೂ ನೋಡಬಹುದಾಗಿದೆ. ಇದನ್ನು "ದರ್ಬಾರ್" ಎಂದು ಕೂಡ ಕರೆಯಲಾಗುತ್ತದೆ. ಇವನ ಕಾಲದಲ್ಲಿ ಸಂಸ್ಥಾನದ ವಾರ್ಷಿಕ ಆದಾಯ ಆ ಕಾಲಕ್ಕೆ ಮೂರು ಲಕ್ಷ ರೂಪಾಯಿಗಳಾಗಿತ್ತೆಂದು ತಿಳಿದು ಬರುತ್ತದೆ.

ಕೊನೆಗೆ ಇವರ ನಂತರ ಆಡಳಿತ ವಹಿಸಿಕೊಂಡ ಹೈದರಾಬಾದ್ ನಿಜಾಮನು ೧೮೫೭ರ ಹೊತ್ತಿಗೆ ದೇವದುರ್ಗ ಸಂಸ್ಥಾನವನ್ನು ತನ್ನ ವಶಕ್ಕೆ ತೆಗೆದುಕೊಂಡನು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ದೇವದುರ್ಗ ಪ್ರಮುಖ ಪಾತ್ರ ವಹಿಸಿತ್ತು ಎಂಬುದಕ್ಕೆ ಇಲ್ಲಿಯ ಸ್ವಾತಂತ್ರ್ಯ ಹೋರಾಟಗಾರ ಆದ ರಾಜಶೇಖರ ಆದಿ ಎಂಬ ವಕೀಲರು (ದೇ.ತಾ.ದ. ಬಿ.ಟಿ. ಲಲಿತನಾಯಕ,ಪು. ೪) ಇವರ ಕಾಲಕ್ಕೆ ಸಂಬಂಧಿಸಿದ ದೇವದುರ್ಗದ ಕ್ರಿಶ. ೧೮ನೇ ಶತಮಾನದ ಶಾಸನದಲ್ಲಿ ಪವಿನಾಯಕ ಎಂಬ ಹೆಸರು ಬಂದಿದೆ (ಕವಿವಿಶಾಸಂ. ೭, ದೇ. ೫೧) ಹಾಗೂ

ದೇವದುರ್ಗ ಶ್ರೀನಾಥಪ್ಪನ ಮಠದಲ್ಲಿ ವೀರಭದ್ರನ ಗುಡಿಗೆ ಸೇರಿಸಿರುವ ಶಾಸನದಲ್ಲಿ ಕೃಷ್ಣಪ್ಪನಾಯಕನ ಉಲ್ಲೇಖವಿದೆ ಹಾಗೂ ಕೃಷ್ಣದೇವರ ಪಾದ ಪೂಜೆ ಮಾಡಿಸಬೇಕೆಂದಿದೆ. (ಕವಿವಿಶಾಸಂ. ೭, ದೇ. ೫೧-೫೪).

ದೇವದುರ್ಗದ ಕೊಳ್ಳಿ ರಂಗಪ್ಪನಾಯಕನೊಡನೆ ಕಾಳಗ (೧೭೮೦-೮೪)

ದೇವದುರ್ಗದ ರಂಗಪ್ಪನಾಯಕನು ಇಮ್ಮಡಿ ವೆಂಕಟಪ್ಪನಾಯಕನ ಸೋದರ ಮಾವನು ದೇವದುರ್ಗ-ಚದನಕೇರಿ ಪಾಳೆಯಗಳ ವಾಸ್ತವವಾಗಿ ದೇವದುರ್ಗದ ದೊರೆಗಳ ಆಧೀನದಲ್ಲಿದ್ದಾರೂ ಶತ್ರುಗಳಿಂದ ಈ ಭಾಗವನ್ನು ರಕ್ಷಿಸಲು ಪಾಮನಾಯಕನಿಗೆ ಕೊಡಲಾಗಿತ್ತು. ಪೀತಾಂಬರ ಪಿಡ್ಡನಾಯಕನ ಕಾಲದಲ್ಲಿ ಈ ರಂಗಪ್ಪನಾಯಕನ ಅಜ್ಜ ವಾಸುದೇವನಾಯಕನಿಗೆ ಮೊಗಲರಿಂದ ಪಿತಾಂಬರ ನಾಯಕನ ವಿರುದ್ಧ ಸಹಾಯ ಮಾಡಿದುದ್ದಕ್ಕಾಗಿ ರಾಯಚೂರು ಪ್ರಾಂತದ ಜಮೀನುದಾರಿ ಸಿಕ್ಕ ಸಂಗತಿಯೂ ವಿಧಿತವೇ ಆದರೂ ದೇವದುರ್ಗವನ್ನು ವೆಂಕಟಪ್ಪನಾಯಕನಿಗೆ ಕೊಟ್ಟಿದ್ದನು. ರಂಗಪ್ಪನಾಯಕನು ಒಪ್ಪದೇ ತಿರುಗಿಬಿದ್ದನು. ಈ ಮಧ್ಯೆ ಕನಕಗಿರಿಯ ನರಸಿಂಗಮ್ಮನ ಉದರದಿಂದ ಜನಿಸಿದ ಶ್ರೀನಿವಾಸನಾಯಕನ "ಜಾವಳ" ಕಾರ್ಯಕ್ರಮಕ್ಕೆ ಸೋದರಮಾವನಾದ ರಂಗಪ್ಪ ನಾಯಕನನ್ನು ಇತರ ಬಂಧುಬಳಗವನ್ನು ಕರೆ ಕಳುಹಿಸಿದನು. ಆದರೆ ಅವರಾರೂ ಬರಲಿಲ್ಲ. ಕಾರಣವೇನೆಂದರೆ ವೆಂಕಟಪ್ಪನಾಯಕನು ಮುಸಲ್ಮಾನೀ ಸ್ತ್ರೀಯಳನ್ನು ಮದುವೆಯಾಗಿದ್ದನು. ಇದು ಈತನಿಗೆ ಇಷ್ಟವಿರಲಿಲ್ಲ. ಇದೆಲ್ಲಕ್ಕೂ ರಂಗಪ್ಪನಾಯಕನೇ ಕಾರಣನೆಂದು ಭಾವಿಸಿದ ವೆಂಕಟಪ್ಪನಾಯಕನು ಇವರಲ್ಲಿ ಜಾಗೀರು ಇನಾಮುಗಳನ್ನು ಕಸಿದುಕೊಂಡನು. ಅಲ್ಲದೆ ಸಾಸಿವಿಗೇರಿ, ಚಂದನಕೇರಿ ಮತ್ತು ದೇವದುರ್ಗದ ಪ್ರಮುಖ ಬಂಟರನ್ನು ತನ್ನಂತೆ ಮಾಡಿಕೊಂಡನು. ನಂತರ ಸುರಪುರದ ಸದರ ಭಾರಗೀರ ಗಾರಡಿಯವರು. ಶಿಲೇದಾರ, ಕೂಟಗಾರ ಮುಂತಾದ ದಂಡಿನ ಮುಖ್ಯಸ್ಥರನ್ನು ಒಟ್ಟುಗೂಡಿಸಿ. ನಿಪ್ಪ ವೀರಪ್ಪನ ನೇತೃತ್ವದಲ್ಲಿ ಯುದ್ಧಕ್ಕೆ ಅಣಿಯಾಗಿ ದೇವದುರ್ಗದ ರಂಗಪ್ಪನಾಯಕನನ್ನು ಸೆರೆ ಹಿಡಿದು ತರಬೇಕೆಂದು ಅಪ್ಪಣೆ ಮಾಡಿದನು.

ಸುರುಪುರದ ಸೈನ್ಯವು ಅಂಜಳ ಸ್ಥಳದಲ್ಲಿ ಒಂದು ದಿನ ಶಿಬಿರ ಹಾಕಿ ಮರುದಿನ ಉತ್ತರದ ನದಿ ಹರಿಯುತ್ತಿದ್ದ. ಭಾಗ ಬಿಟ್ಟು ಮೂರು ಕಡೆಗಳಿಂದ ಆಕರಣಗೈದರು. ಇತ್ತ ರಂಗಪ್ಪನಾಯಕನು ೮೦೦೦ ಸೈನ್ಯ ೫೦ ಕುದುರೆ ಇತ್ಯಾದಿಗಳ ಸಹಿತ ಕೃಷ್ಣಾ ತೀರದಲ್ಲಿರುವ ತುಮಕೂರು ಸಮತಿನ ವಡಿಗೇರಿ, ಬೀಳವಾರ, ಪುಡ ಪುಡಗಿ ಕಂಡಳ್ಳಿ ಬೆಂಡೆ ಬೊಮ್ಮನಹಳ್ಳಿ ಸುಲಿಗೆ ಮಾಡಿ ಅಲ್ಲಿಯ ಜನರಿಗೆ ಕಷ್ಟ ಕೂಡ ತೊಡಗಿದನು. ವೆಂಕಟಪ್ಪನಾಯಕನು ಅವರನ್ನು ಸಮಾಧಾನಗೊಳಿಸಿ ದೇವದುರ್ಗ ರಂಗಪ್ಪನಾಯಕನ ಮೇಲೆ ಯುದ್ಧ ಪ್ರಾರಂಭಿಸಿದನು. ರಂಗಪ್ಪನಾಯಕನ ೮೦೦೦ ಸೈನ್ಯವು ಇವರನ್ನು ಎದುರಿಸಿತು. ಅವರ ತೋಪುಗಳ ಹೊಡೆತ

ಸಹಿಸಲಾಗದೆ ಕೇವಲ ಒಂದೇ ತಾಸಿನಲ್ಲಿ ಹಿಮ್ಮೆಟ್ಟಿದರು. ಸುರುಪುರದವರು. ಅವರ ಬೆನ್ನುಹತ್ತಿ ದೇವದುರ್ಗವನ್ನು ಲೂಟಿ ಮಾಡಿದ ತರುವಾಯ ರಂಗಪ್ಪನಾಯಕನನ್ನು ಹುಡುಕ ಹತ್ತಿದರು. ಸೋಲಿನ ಅವಮಾನದಿಂದ ಉಳಿಯುವುದಕ್ಕಾಗಿ ರಂಗಪ್ಪನಾಯಕನು ೨ ತಾಸುಗಳವರೆಗೆ ಧೈರ್ಯದಿಂದ ಹೋರಾಡಿದನು. ಗೆಲ್ಲುವ ಆಸೆ ಕಂಡುಬರುಲಿಲ್ಲ. ಈ ಸಮಯದಲ್ಲಿ ನಿರಾಸೆ ಹೊಂದಿ ರಂಗಪ್ಪನಾಯಕ ತನ್ನ ಕೈಯಲ್ಲಿದ್ದ ಕೊಳ್ಳಿಯಿಂದ ಸಿಡಮದ್ದಿಗೆ ಬೆಂಕಿ ಹಚ್ಚಿದಾಗ ತಾನು ತನ್ನ ಪರಿವಾದವು ಒಳಗೆ ಪ್ರವೇಶ ಮಾಡಲು ಬಂದ ಶತ್ರು, ಸೈನಿಕರು ಎಲ್ಲರೂ ಸ್ಫೋಟಕ್ಕೊಳಗಾಗಿ ಗುರುತು ಕೂಡ ಸಿಗದೇ ಭಸ್ಮಗೊಂಡರು. ಈ ಕೃತ್ಯದಿಂದಲೇ ರಂಗಪ್ಪನಾಯಕನನ್ನು ಕೊಳ್ಳಿ ರಂಗಪ್ಪನಾಯಕನೆಂದು ಕರೆಯಲಾಗಿದೆ (ಮರೆಯಲಾಗದ ಸರಪುರ ರಾಜರ ಚರಿತ್ರೆ, ಶ್ರೀ ವಿ. ಕೃಷ್ಣಮಚಾರ್ಯ, ಪುಟ–೧೧೦).

ಆಡಳಿತದ ವಿಭಾಗಗಳು

ಅರಸರು ತಮ್ಮ ರಾಜ್ಯದ ಆಡಳಿತವನ್ನು ಹಿಡಿತದಲ್ಲಿಟ್ಟುಕೊಳ್ಳಲು ಅನೇಕ ಭಾಗಗಳಾಗಿ ವಿಂಗಡಿಸಿದ್ದರು. ಈ ಭಾಗಗಳಿಗೆ ಕೆಲವೊಮ್ಮೆ ನದಿ, ಬೆಟ್ಟದಂತಹ ಭೌಗೋಳಿಕ ಗಡಿಗಳೇ ಮೇರೆಯಾಗಿದ್ದವು. ಇದರೊಂದಿಗೆ ಆ ಕಾಲಕ್ಕಿದ್ದ ಪ್ರಸಿದ್ಧ ಸ್ಥಳಗಳನ್ನು ಕೇಂದ್ರಗಳನ್ನಾಗಿಸಿ ಆ ನಾಡನ್ನು ಅದೇ ಹೆಸರಿನಿಂದ ಕರೆಯುತ್ತಿದ್ದರು. ಈ ನಾಡುಗಳನ್ನು ರಾಜವಂಶದವರು ಅಥವಾ ರಾಜ ಪ್ರತಿನಿಧಿಗಳು, ಸಾಮಂತರು ಆಳುವಂತೆ ನೇಮಿಸುತ್ತಿದ್ದರು. ಕೆಲವೊಮ್ಮೆ ಯುವರಾಜರು ರಾಣಿಯರು ಇಂತಹ ಪ್ರಾಂತ್ಯಾಧಿಕಾರಿಗಳಾಗಿ ರಾಜ್ಯಭಾರ ಮಾಡುತ್ತಿದ್ದುದೂ ಉಂಟು. ಭೌಗೋಳಿಕ ಪ್ರದೇಶಗಳಿಗೆ ಯಾವುದಾದರೂ ಪ್ರಸಿದ್ಧ ಪಟ್ಟಣ ರಾಜಧಾನಿಯಾಗುತ್ತಿತ್ತು. ಇಂತಹ ಆಡಳಿತದ ಕೆಲವು ಭಾಗಗಳು ರಾಯಚೂರು ಪ್ರದೇಶದ ಶಾಸನಗಳಲ್ಲಿ ಕಾಣಬಹುದಾಗಿದೆ.

೧. ಅಯ್ಯಣವಾಡಿ - ೩೦೦

ಈ ನಾಡಿನ ಪ್ರದೇಶಗಳಾದ ಬಲ್ಲಟಗಿ, ಸುಂಕೇಶ್ವರ, ಕುರಡಿ, ಕಲ್ಲೂರು, ಗಬ್ಬೂರು ಗ್ರಾಮಗಳು ಈ ನಾಡಿಗೆ ಸೇರಿದ್ದವು. ಮಾನ್ವಿ ತಾಲ್ಲೂಕಿನ ಶಾಸನಗಳಲ್ಲಿ ಮತ್ತು ದೇವದುರ್ಗ ತಾಲ್ಲೂಕಿನ ಶಾಸನಗಳಲ್ಲಿ ಇದರ ಉಲ್ಲೇಖವನ್ನು ಕಾಣಬಹುದು. ಕ್ರಿ.ಶ. ೧೨೨೩ರ ದೇವದುರ್ಗದ ವೀರಗೋಟ ಗ್ರಾಮದ ಶಾಸನದಲ್ಲಿ ಯರಡ್ಡೆಯಣವಾಡಿ ನಾಡಿನ ಸೇಟಿಗಳು ಸೇರಿ ಹರಳ ಹನ್ನೆರಡರಲ್ಲಿ ಒಂದು ಗ್ರಾಮವನ್ನು ಸಂಕರ ದೇವರಿಗೆ ದಾನವಾಗಿ ನೀಡಿದ್ದಾರೆ (ಕವಿವಿಶಾಸಂ. ೭, ದೇ.೩೧). ಅಂದರೆ ಗಬ್ಬರೂ ಗ್ರಾಮವು ಅಯ್ಯಣವಾಡಿಯಲ್ಲಿ ಒಂದು ಪ್ರದೇಶವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಗಬ್ಬೂರ ಗ್ರಾಮದ ೧೧೮೫ರ ಶಾಸನದಲ್ಲಿ ಅಯ್ಯಣವಾಡಿ ನಾಡಿನಲ್ಲಿ ಪ್ರಸಿದ್ಧವಾದ ಗೋಪುರ ಗ್ರಾಮ ಎಂದು ಉಲ್ಲೇಖವಿದೆ.

ಹಿರೇರಾಯಕುಂಪಿ ಗ್ರಾಮದ ಕ್ರಿ.ಶ. ೧೦೩೦ರ ಶಾಸನದಲ್ಲಿ ಭೂಲೋಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ, ಅಹಿಹಯ ವಂಶದವನಾದ ಅಣ್ಣಲದೇವನ ಸೇವಕನಾದ ಪೆರ್ಮಾಡಿದೇವನು ಅಯ್ಯಣವಾಡಿ ನಾಡನ್ನು ಅಳುತ್ತಿದ್ದನೆಂದು ಉಲ್ಲೇಖಿಸುತ್ತದೆ. (ಕವಿವಿಶಾಸಂ. ೭, ದೇ.೨೭). ಕ್ರಿ.ಶ. ೧೧೯೭ರ ಮಾನ್ವಿ ತಾಲೂಕಿನ ಸಂಕೇಶ್ವರ ಗ್ರಾಮದ ಶಾಸನದಲ್ಲಿ ಚಾಲುಕ್ಯರ ತ್ರಿಭುವನಮಲ್ಲದೇವರ ಆಳ್ವಿಕೆಯಲ್ಲಿ ನೊಳಂಬ ಪಲ್ಲವ ಪೆರ್ಮಾಡಿ ಉದಯಾದಿತ್ಯ ದೇವನು ಅಯ್ಯಣವಾಡಿಯನ್ನು ಆಳುತ್ತಿದ್ದನೆಂದು ತಿಳಿಸಿದೆ. (ಕವಿವಿಶಾಸಂ. ೭, ಮಾ.೨೯). ಕಲ್ಲೂರಿನ ಕ್ರಿ.ಶ. ೧೧೫೧ ಶಾಸನದಲ್ಲಿ ಅಯ್ಯಣ ವಾಡಿಯ ಹೆಗ್ಗಡಿ ಮತ್ತು ದಂಡನಾಯಕನಾದ ಸುರಿಗೆ ವೆಣ್ಣಮರಸನು ಮತ್ತು ಮಹಾಮಂಡಳೇಶ್ವರನಾದ ಬೂಚಿ ದೇವರಸರು ಸೇರಿ ಕಲ್ಲೂರಿನ ಮಾರಟೇಶ್ವರ ದೇವರ ಅಂಗಭೋಗಕ್ಕೆ ನಂದಾದೀವಿಗೆಗೆ ದಾನ ಬಿಟ್ಟ ಉಲ್ಲೇಖವನ್ನು ಕಾಣುತ್ತೇವೆ. (ಕವಿವಿಶಾಸಂ. ೭, ಮಾ. ೬೮).

೨. ಎಡದೊರೆ - ೨೦೦೦

ಎಡೆದೊರೆ ಹೆಸರಿನ ಇನ್ನೂ ಕೆಲವು ವಿಭಾಗಗಳು ಪ್ರಾಚೀನ ಕರ್ನಾಟಕದಲ್ಲಿ ಆಡಳಿತ ವಿಭಾಗಗಳಾಗಿದ್ದುದು ಶಾಸನಗಳಿಂದ ತಿಳಿಯುತ್ತದೆ ಮತ್ತು ಎಡೆದೊರೆ ಎನ್ನುವ ಶಬ್ದವನ್ನು ಸಾಮಾನ್ಯವಾಗಿ ಅರ್ಥೈಸಿದಾಗ ಎಡ ಮತ್ತು ತೊರೆ ಎಂದು ಬಿಡಿಸಿದಾಗ ಎಡೆ ಎಂದರೆ ಎಡಭಾಗ ಎಂದು ಅರ್ಥೈಸುತ್ತಾರೆ. ಆದರೆ ಎರಡು+ತೊರೆ = ಎರಡುತೊರೆ ಎಡೆತೊರೆ ಅಂದರೆ ಎರಡು ನದಿಗಳ ಮಧ್ಯದ ಪ್ರದೇಶದ ಭಾಗಗಳೆಂದು ಅರ್ಥೈಸಬೇಕಾಗುತ್ತದೆ. ಮುಂದೆ ಬಳಕೆಯಲ್ಲಿ ಈ ಭಾಗವನ್ನು ದೊ - ಆಬ್ ಎಂದು ಕರೆದಿರುವುದನ್ನು ಗಮನದಲ್ಲಿಟ್ಟುಕೊಂಡಲ್ಲಿ ಎರಡು ತೊರೆಯ ಮಧ್ಯದ ಪ್ರಾದೇಶವನ್ನು ಎಡೆದೊರೆ ೨೦೦೦ ಎಂದು ಅರ್ಥೈಸುವುದು ಸೂಕ್ತವಾಗಿದೆ. ಈ ಮೇಲಿನ ಸಂಖ್ಯಾ ಪ್ರದೇಶಗಳಾದ ಮೊಸಳಿಕಲ್ಲು ೩೦೦ ಕುದಿಯ ಪರವಿ ೨೦, ಸಾಗ ೩೦೦, ಅಯಜ್ಯ ೩೦೦, ಕಳವಾಡಿ ೩೨೦, ಕರಡಿಕಲ್ ೩೦೦, ಅತ್ತಿನೂರು ೮೦, ಮಂಚಾಲ ೩೬, ತೆಕ್ಕಕಲ್ಲು ೧೨, ನೆಲ್ಲುಡಿ ೧೧, ಮಾಸವಾಡಿ ೧೪೦, ಕುಕನೂರು ೩೦ (ಎಡೆದೊರೆ ನಾಡು, ಡಾ. ಚನ್ನಬಸವ ಹಿರೇಮಠ, ಪುಟ–೩). ಎಡೆದೊರೆ ನಾಡು ಮುಂತಾದ ನಾಡುಗಳು ಸೇರಿಸಿದಾಗ ಎಡೆದೊರೆ ೨೦೦೦ ಸಂಖ್ಯೆ ಆಗುತ್ತದೆ. ತುಂಗಭದ್ರ ಕೃಷ್ಣಾನದಿಯ ಸಂಗಮದವರೆಗಿನ ಭಾಗಗಳು ಎಡದೊರೆ ೨೦೦೦ದಲ್ಲಿ ಅಂತರ್ಗತವಾಗಿದೆ.

ಎಡೆದೊರೆ ೨೦೦೦ದ ಉಲ್ಲೇಖ ರಾಷ್ಟ್ರಕೂಟರ ಅರಸ ಕಾಲವರ್ಷನ ಶಾಸನದಲ್ಲಿ ಬಂದಿದೆ. ಆಗ ಜಗತುಂಗನು ಎಡೆದೊರೆ ೨೦೦೦ ಆಳುತ್ತಿದ್ದ. ಗಬ್ಬೂರಿನ ಗ್ರಾಮದ ಕ್ರಿ.ಶ.೧೦೪೮ರ ಶಾಸನದಲ್ಲಿ ಚಾಳುಕ್ಯ ತ್ರಿಭುವನಮಲ್ಲ ರಾಜ್ಯಭಾರ ಮಾಡುತ್ತಿದ್ದಾಗ ಮಹಾಮಂಡಳೇಶ್ವರನಾದ ಜೋಯಿಮರಸನು ಎಡೆದೊರೆ - ೨೦೦೦ ಪ್ರಾಂತವನ್ನು ಆಳುತ್ತಿದ್ದನು ಎಂದು ಉಲ್ಲೇಖಿಸುತ್ತದೆ

(ಕವಿವಿಶಾಸಂ. ೭, ದೇ. ೨೬). ಚಾಳುಕ್ಯ ಜಗದೇಗಮಲ್ಲನ ಹೆಂಡತಿ ಸೋಮಲದೇವಿ ೧ನೆಯ ಸೋಮೇಶ್ವರನ ಪತ್ನಿ ಚಾಲದೇವಿ, ತ್ರಿಭುವನಮಲ್ಲ ತಮ್ಮ ದಸವರ್ಮ ಮುಂತಾದವರು ಈ ರಾಜ್ಯದ ಕೆಲವು ಭಾಗಗಳನ್ನು ಆಳಿದ್ದಾರೆ. ಈಗಿನ ಮಾನ್ವಿ ಮತ್ತು ಬಲ್ಲಟಗಿ, ಮೂಢಶಿರವಾರ, ನುಗಡೋಣಿ, ಅತ್ತನೂರು ಹರವಿ, ದೇವರ ಗುಡಿ, ಕಲ್ಲೂರು, ಸಾಲುಗಂದೆ ಲಿಂಗಸೂಗೂರಿನ ಕರಡಿಕಲ್ ಅಂದು ಈ ನಾಡಿನ ಮುಖ್ಯ ಗ್ರಾಮಗಳಾಗಿದ್ದವು.

೩. ಮೊಸಳಿಕಲ್ - ೩೦೦

ಕ್ರಿ.ಶ.೧೦೩೬ರ ಶಾಸನದಲ್ಲಿ ಈ ಪ್ರದೇಶದಲ್ಲಿ ಮೊದಲಿಗೆ ಈ ನಾಡಿನ ಉಲ್ಲೇಖ ಬಂದಿದೆ. ಎಡೆದೊರೆ ೨೦೦೦ದ ಭಾಗವಾಗಿ ಮಾಸಳಿಕಲ್ - ೩೦೦ ಇತ್ತೆಂಬ ಅಂಶ ಇದರಿಂದ ತಿಳಿಯುತ್ತದೆ. ಮಾನ್ವಿ ತಾಲ್ಲೂಕಿನ ಕ್ರಿ.ಶ.೧೦೩೬ರ ಶಾಸನ ಕ್ರಿ.ಶ.೧೦೮೯ರ ಕಪಗಲ್ ಶಾಸನ, ಕ್ರಿ.ಶ. ೧೦೭೬ರ ಸಿರವಾರ ಶಾಸನಗಳು ಈ ಪ್ರದೇಶವನ್ನು ಉಲ್ಲೇಖಿಸುತ್ತದೆ.

ರಾಯಚೂರು ಶಾಸನಗಳು ಈ ಪ್ರದೇಶದ ದೇವದುರ್ಗ ಪ್ರದೇಶದ ಪಕ್ಕದ ನಾಡಾಗಿ ಇದು ಉಲ್ಲೇಖಗೊಂಡಿದೆ. ತ್ರೈಲೋಕ್ಯಮಲ್ಲ ಇವನ ಮಗ ಭುವನೈಕಮಲ್ಲ ಇವನು ತಮ್ಮ ವಿಕ್ರಮಾದಿತ್ಯನ ಕಾಲದಲ್ಲಿ ಈ ನಾಡಿನ ಉಲ್ಲೇಖವಿದೆ. ಈ ನಾಡಿನಲ್ಲಿದ್ದ ಅಗ್ರಹಾರ ಬಳ್ಳಿ ನಿಟ್ಟಿಗೆಯಲ್ಲಿ ಜಯಸಿಂಹನ ಪತ್ನಿ ಸೋಮಲದೇವಿ. ೧ನೆಯ ಸೋಮೇಶ್ವರನ ಪತ್ನಿ ಚಾಮಾಲಾದೇವಿ. ಭುವನೈಕಮಲ್ಲನ ಹೆಂಡತಿ ಪಂಪಾದೇವಿಯರು ಅಲ್ಲಿನ ದೇವಾಲಯಗಳಿಗೆ ದಾನಗಳನ್ನು ನೀಡಿದ್ದಾರೆ.

೪. ಮುದಗುಂದೂರು - ೩೦೦

ಕಲ್ಯಾಣಿ ಚಾಲುಕ್ಯ ವಿಕ್ರಮಾದಿತ್ಯನ ಆಳ್ವಿಕೆಯ ಶಾಸನದಲ್ಲಿ (ಕ್ರಿ.ಶ. ೧೧೨೪) ಈ ನಾಡಿನ ಉಲ್ಲೇಖ ಮೊದಲಿಗೆ ಬಂದಿದೆ. ಈ ಶಾಸನದಲ್ಲಿ ಸೇದೊರೆಮೇಳ ನಾಯಕನೆಂಬುವವನ ವರ್ಣನೆ ಬಂದಿದೆ. ಕ್ರಿ.ಶ. ೧೧೩೪ರ ಶಾಸನದಲ್ಲಿ ಮುದಗುಂದೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಹೈಹಯ ವಂಶದ ಬಾಚಿದೇವ ಆಳುತ್ತಿದ್ದಂತೆ ಹೇಳಿದೆ. ಕ್ರಿ.ಶ. ೧೧೩೦ರ ಶಾಸನದಲ್ಲಿ ಪೇರ್ಮಾಡಿ ದೇವನು ಅಯ್ಯಣವಾಡಿನಾಡನ್ನು ಅಳುತ್ತಿದ್ದಾಗ ಮುದ್ದನೂರಿನ ಬಳಿ ರಾಕುರ್ಪ್ಪ(ರಾಯಕುಂಪಿ)ಯಲ್ಲಿ ಜಯರಾಮ ಎಂಬುವವನು ಮಾಡಿಸಿದ ದೇವಾಲಯ ಕಾರ್ಯಗಳಿಗಾಗಿ ಧರಣಿ ದೇವನಕೋಲಿನಲ್ಲಿ ೪೦ ಮತ್ತರ ಹೊಲ, ತೋಟ ಮುಂತಾದವನ್ನು ನೀಡುತ್ತಾನೆ (ಕವಿವಿಶಾಸಂ. ೭, ದೇ.೨೭). ಮುದಗುಂದನೂರು - ೩೦೦ ಎಂಬುದು ಅಯ್ಯಣವಾಡಿ ನಾಡಿನ ಪೂರ್ವಕ್ಕೆ ಇದ್ದ ಪ್ರದೇಶ ಎಂಬುದು ರಾಯಚೂರು ಶಾಸನದಿಂದ ವಿಧಿತವಾಗುತ್ತದೆ.

ಗಬ್ಬೂರಿನ ಕ್ರಿ.ಶ. ೧೦೪೮ರ ಶಾಸನದಲ್ಲಿ ಮಹಾಮಂಡಳೇಶ್ವರ ಜೋಯಿಮರಸನು (ಮುದಗುಂದೂರಿನ - ೩೦೦) ಗಬ್ಬೂರು ಕಲಿದೇವ ಸ್ವಾಮಿಯ ಪೂಜಾ ವಿಧಾನಕ್ಕೆ ದೇಗುಲದ ಖಂಡ ಸ್ಫುಟಿತ ನವಕರ್ಮಕ್ಕೆಂದು ಮುದಗುಂದೂರಿನ - ೩೦೦ರ ಬಳಿಯ ಗ್ರಾಮದಾದ ಹಳ್ಳ ಸಿಂತೆಯನ್ನು ಧರ್ಮವಾಗಿ ಬಿಟ್ಟ ಉಲ್ಲೇಖವಿದೆ. ಪೇರ್ಮಾಡಿದೇವನು ಮುದಗುಂದೂರಿನ ಬಳಿ ಜಯರಾಮ ಎಂಬುವನು ಮಾಡಿಸಿದ ದೇವಾಲಯದ ಕಾರ್ಯಗಳಿಗಾಗಿ ಧರಣಿ ದೇವನ ತೋಟ ಮುಂತಾದವನ್ನು ನೀಡುತ್ತಾನೆ. ಅದೇ ಕ್ರಿ.ಶ. ೧೦೮೪ರ ಶಾಸನ ಗಬ್ಬೂರಿನ ಹಂಪಯ್ಯ ಬಾವಿಯ ಬಳಿ ಇರುವ ಶಾಸನದಲ್ಲಿ ಮಹಾಸಾಮಂತ ಬಸವದೇವನ ಭಿನ್ನಪದಂತೆ ಸಾಮಂತನಾದ ಚಂದ್ರರಸ ಇವನ ತಮ್ಮ ಅಣ್ಣಲದೇವ ಈ ಅಣ್ಣತಮ್ಮಂದಿಬ್ಬರೂ ಕೂಡಿ ಜಿನದೇವರ ಅರ್ಚನೆಗಾಗಿ ಗಬ್ಬೂರು ಮೂಲಿಗರು ಮಹಾಜನರು ಮುದಗುಂದೂರಿನ ಮೂಲಿಗದೆರೆ ಮತ್ತು ಬೆಳೆದೆರೆಯನ್ನು ದಾನ ಬಿಟ್ಟಂತೆ ಉಲ್ಲೇಖಿಸುತ್ತದೆ (ಕವಿವಿಶಾಸಂ. ೭, ದೇ. ೨೫).

ಈ ಶಾಸನಗಳು ಗಬ್ಬೂರು ರಾಯಕುಂಪಿಯಲ್ಲಿ ದೊರೆತಿರುವ ಸ್ಥಳಗಳನ್ನು ಗಮನಿಸಿದಾಗ ಈ ಪ್ರದೇಶದವು ರಾಯಚೂರಿನ ದೇವದುರ್ಗ ತಾಲ್ಲೂಕಿನಲ್ಲಿ ಇರಬಹುದೆಂದು ಊಹಿಸಬಹುದಾಗಿದೆ. ಇದರ ರಾಜಧಾನಿ ಮುದಗುಂದೂರು ಆಗಿದೆ. ಈ ಮುದಗುಂದ ಯಾವುದೆಂಬುದನ್ನು ಗುರುತಿಸಲು ಕಷ್ಟವಾಗಿದೆ.

೫. ಕರಡಿಕಲ್ಲು - ೩೦೦

ಕರಡಿಕಲ್ಲು ಕದಂಬ ಅರಸರ ಒಂದು ಶಾಖೆಯ ರಾಜಧಾನಿಯಾಗಿತ್ತು. ರಾಯಚೂರು ಪ್ರದೇಶದ ವೀರಗೋಟ ಗ್ರಾಮದ ಕ್ರಿ.ಶ. ೧೨೨೫ರ ಶಾಸನದಲ್ಲಿ ಯಾದವ ಸಿಂಘಣನು ದೇವಗಿರಿಯ ನೆಲೆವೀಡಿನಲ್ಲಿದ್ದಾಗ ಮಹಾಮಂಡಳೇಶ್ವರನಾದ ಚಾವುಂಡರಸನ ಕಾಲದಲ್ಲಿ ಕರಡಿಕಲ್ಲನಾಡ ಸೆಟ್ಟಿಗುತ್ತ ಸೇಗಿಸಟ್ಟಿ, ಹಗರಟಿಗೆಯಸೆಟ್ಟಿ ಹರಳ ಹನ್ನೆರಡರಲ್ಲಿ ಒಂದು ಗ್ರಾಮವನ್ನು ಸಂಕರದೇವರಿಗೆ ದಾನವಾಗಿ ನೀಡುತ್ತಾರೆ (ಕವಿವಿಶಾಸಂ. ೭, ದೇ. ೩೧). ಈ ಪ್ರದೇಶವು ಬಹುತೇಕವಾಗಿ ಲಿಂಗಸೂಗೂರಿನ ಪಶ್ಚಿಮ ಭಾಗದಲ್ಲಿದ್ದಿರಬಹುದು. ಈಗಿನ ಲಿಂಗಸೂಗೂರು ಈ ನಾಡಿಗೆ ಸೇರಿತ್ತು ಹಾಗೂ ಈ ನಾಡಿನಲ್ಲಿ ಮುಖ್ಯ ಗ್ರಾಮಗಳೆಂದರೆ ಹಿರಿಯ ಹೆಸರೂರು, ಕರಡಿಕಲ್ಲು, ಜಲದುರ್ಗ ಮತ್ತು ನವಿಲೆ ಈ ಗ್ರಾಮವು ಪ್ರಸಿದ್ಧವಾದ ತೀರ್ಥಕ್ಷೇತ್ರವಾಗಿತ್ತು.

೬. ಹರಳ - ೧೨

ದೇವದುರ್ಗ ತಾಲ್ಲೂಕಿನ ವೀರಗೋಟ ಗ್ರಾಮದ ಕ್ರಿ.ಶ. ೧೨೨೫ರ ಶಾಸನದಲ್ಲಿ ಯಾದವ ಸಿಂಘಣನು ದೇವಗಿರಿಯ ನೆಲೆವಿಡಿನಲ್ಲಿದ್ದಾಗ ಮಹಾಮಂಡಳೇಶ್ವರನಾದ ಚಾವುಂಡರಸನ ಕಾಲದಲ್ಲಿ ವ್ಯಾಪಾರಿ ಸಂಘಗಳಾದ ಯೆರಡ್ವೆಯ್ಯಣವಾಡಿನಾಡಿನ ಶೆಟ್ಟಿಗಳೂ, ಕರಡಿಕಲ್ಲು ನಾಡು ಸೆಟ್ಟಿಗಳು

ಸೇರಿ ಮಹಾನಾಡಾಗಿ ಹರಳ ಹನ್ನೆರಡರಲ್ಲಿ ಒಂದು ಗ್ರಾಮವನ್ನು ಸಂಕರ ದೇವರಿಗೆ ದಾನವಾಗಿ ನೀಡುತ್ತಾರೆ (ಕವಿವಿಶಾಸಂ. ೭, ದೇ.೩೧) ಇದನ್ನು ಹರಳ ಹನ್ನೆರಡರ ಪಳ್ಳಿ ಎಂದು ಕರೆಯಲಾಗಿದೆ.

೭. ಕಲ್ಲಕಳಗೈನೂರು ಅಥವಾ ಕಲ್ಲಕೆಳಗೆ - ೫೦೦

ರಾಯಚೂರು ಪ್ರದೇಶದ ಗಬ್ಬೂರ ಗ್ರಾಮದ ಕ್ರಿ.ಶ.೧೦೮೪ರ ಶಾಸನದಲ್ಲಿ ಚಾಳುಕ್ಯ ತ್ರಿಭುವನಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಮಂಡಳೇಶ್ವರನಾಗಿ ಜೋಯಿಮಯ್ಯ ರಸನಿರುತ್ತಾನೆ. ಇವನು ಎಡೆದೊರೆ ಎರಡು ಸಾವಿರ ಕಲ್ಲಿಕೆಳಿಗೈಯರು ಪ್ರಾಂತ್ಯಗಳನ್ನು ಆಳುತ್ತಿದ್ದಾಗ ಗಬ್ಬೂರು ಕಲಿದೇವಸ್ವಾಮಿಯ ಪೂಜಾ ವಿಧಾನಕ್ಕೆ ಮುಗುಂದೂರ-೩೦೦ ಬಳಿಯ ಗ್ರಾಮವಾದ ಹಳ್ಳಿ ಸಿಂತೆಯನ್ನು ಧರ್ಮವಾಗಿ ಬಿಟ್ಟ ಉಲ್ಲೇಖವಿದೆ. (ಕವಿವಿಶಾಸಂ. ೭, ದೇ. ೨೬)

೮. ಕುಂದರಣೆ - ೭೦

ಕ್ರಿ.ಶ. ೧೦೨೭ರ ಶಾಸನದಲ್ಲಿ ಈ ನಾಡಿನ ಉಲ್ಲೇಖ ಬಂದಿದೆ. ಈ ಪ್ರದೇಶವನ್ನು ತ್ರೈಲೋಕ್ಯಮಲ್ಲ ನಾಮಾದಿ ವಿಜಯಾದಿತ್ಯದೇವನೆಂಬುವವನು ಕುಂದರಣೆ - ೭೦ ಬಳಿಯ ಕಟ್ಟಿಗೆಗೆ ದಕ್ಷಿಣ ದಿಕ್ಕಿನ ಮೊರಗನೂರನಿಂದ ಆಳುತ್ತಿದ್ದಂತೆ ಹೇಳಿದೆ. ದೇವದುರ್ಗದ ಕ್ರಿ.ಶ. ೧೦೮೫ರ ಶಾಸನದಲ್ಲಿ ಮಹಾಮಂಡಳೇಶ್ವರ ಜೋಯಿರಸನು ಈ ಪ್ರದೇಶವನ್ನು ಆಳುತ್ತಿದ್ದಂತೆ ತಿಳಿಯುತ್ತದೆ. ಎಡೆದೊರೆ ೨೦೦೦ರ ಪಕ್ಕದಲ್ಲಿ ಈ ನಾಡದ್ದಿರಬೇಕು.

ಅಧ್ಯಾಯ ಮೂರು

ಹೈಹಯರ ಮೂಲ

ಅಧ್ಯಾಯ – ೩

ಹೈಹಯರ ಮೂಲ

ಪ್ರಾಚೀನ ಕರ್ನಾಟಕದಲ್ಲಿ ಗಂಗರು, ಚಾಲುಕ್ಯರು, ಯಾದವರು ಮೊದಲಾದ ಅರಸರು ರಾಜ್ಯಭಾರ ಮಾಡಿದವರಲ್ಲಿ ಕಲಚೂರಿ ಮನೆತನವು ಒಂದು. ಈ ಮನೆತನಗಳ ಅರಸರ ಈಚೆಯ ಕಾಲದ ಅನೇಕ ಶಾಸನಗಳಲ್ಲಿ ಅವರವರ ವಂಶಾವಳಿಯನ್ನು ನಿರೂಪಿಸುವ ಸಂದರ್ಭಗಳಲ್ಲಿ ಆ ಅರಸರು ಬಹು ಪುರಾತನ ಕಾಲದಲ್ಲಿ ಉತ್ತರ ಭಾರತದಲ್ಲಿ ಪ್ರಸಿದ್ಧಿ ಪಡೆದು ಇವರು ರಾಜವಂಶಗಳಿಗೆ ಹತ್ತಿರದ ಸಂಬಂಧಿಸಿದವರಾಗಿದ್ದರು ಎಂಬ ವಿಷಯ ಅಂದಿನ ಶಾಸನಗಳಿಂದ ತಿಳಿದುಕೊಳ್ಳಲಾಗಿದೆ. ಈ ಮನೆತನಗಳ ಮೂಲ ಪುರುಷರು ಉತ್ತರದೇಶದಿಂದ ದಕ್ಷಿಣಭಾರತಕ್ಕೆ ಬಂದವರಾಗಿರಬೇಕು.

ಕಲಚೂರಿಗಳು ಮಾತ್ರ ಮಧ್ಯಭಾರತದಿಂದ ಕನ್ನಡ ನಾಡಿಗೆ ನೇರವಾಗಿ ತೆರಳ ಬಂದವರು ಎಂಬ ವಿಷಯದಲ್ಲಿ ಹೆಚ್ಚು ನಿಶ್ಚಯಾತ್ಮಕ ನಿದರ್ಶನಗಳೂ ಸಮೀಪದ ಸಂಬಂಧಗಳಿಂದ ತಿಳಿಸಲಾಗುತ್ತದೆ. ಉತ್ತರದಿಂದ ದಕ್ಷಿಣಕ್ಕೆ ನಡೆದುಬಂದ ಕಲಚೂರಿಗಳ ಹೆಜ್ಜೆಯ ಗುರುತುಗಳನ್ನು ಚರಿತ್ರೆಯ ಚಿತ್ರಪಟದ ಮೇಲೆ ನಾವು ನಿಶ್ಚಳವಾಗಿ ಗುರುತಿಸಬಹುದಾಗಿದೆ.

ಕಲಚೂರಿಗಳ ಮೂಲ ಸ್ಥಾನವು ಮಧ್ಯಭಾರತವಾಗಿದ್ದಿತೆಂದು ಈ ಹಿಂದೆ ಸೂಚಿಸಲಾಗಿದೆಯಷ್ಟೆ. ಆದುದರಿಂದ ಕಲಚೂರಿಗಳು ಕ್ಷಣ ಹೊತ್ತು ಕರ್ನಾಟಕದಿಂದ ಉತ್ತರಕ್ಕೆ ತೆರಳಿ ಮೂಲ ಸ್ಥಾನದಲ್ಲಿಯು ಕಲಚೂರಿಗಳ ಪೂರ್ವ ವೃತ್ತವನ್ನು ಮತ್ತು ಚಾರಿತ್ರಿಕ ಚಟುವಟಿಕೆಗಳನ್ನು ಸಂಕ್ಷೇಪವಾಗಿ ಅವಲೋಕಿಸುವ ಪುರಾಣಗಳಲ್ಲಿಯ ನಿರೂಪಣೆಯಂತೆ

ಯಯಾತಿಯ ಮೊಮ್ಮಗ ಯದು, ಯದುವಿನ ವಂಶದಲ್ಲಿ ಸಹಸ್ರಜಿತ್ ಎಂಬವನ್ನು ಹುಟ್ಟಿದನು. ಸಹಸ್ರಜಿತನ ಸಂತತಿಯಲ್ಲಿ ಜನಿಸಿದಾವನಾದ ಹೈಹಯನೆಂಬ ರಾಜನ ಮೂಲಕ ಹೈಹನವೆಂಬ ವಂಶನಾಮವನ್ನು ಧರಿಸಿದ ಹಲವಾರು ಅರಸು ಮನೆತನಗಳು ಪ್ರಸಿದ್ಧಿ ಪಡೆದವು.

ಇದೇ ಹೈಹಯ ವಂಶಸ್ಥಾನದ ಕಾರ್ತವೀರ್ಯ ಅರ್ಜುನನ ಸಮ್ರಾಜ ಚಕ್ರಮರ್ತಿಯೆಂಬ ಉನ್ನತ ಪದವಿಯನ್ನು ಸಂಪಾದಿಸಿ ಅತಿಶಯ ಪ್ರಸಿದ್ಧಿಯನ್ನು ಪಡೆದನು. ಭೋಜರು, ಅವಂತಿಗಳು, ತಾಲಜಂಘರು ಮುಂತಾದವರು ಈ ಹೈಹಯ ವಂಶದಲ್ಲಿ ಹುಟ್ಟಿದವರಾಗಿದ್ದಾರೆ. ಈ ಹೈಹಯರಮುಖ್ಯಸ್ಥಳವು ನರ್ಮದಾ ತೀರದ ಮಾಹಿಷ್ಮತೀ ಎಂಬ ನಗರವಾಗಿತ್ತು, ಈ ಹೈಹಯರು ಪುರಾಣಗಳಲ್ಲಿ ಕಾಣಿಸಿಕೊಳ್ಳದೆ ಇದ್ದರೂ ಕೆಲವು ಶಾಸನಗಳ ಸಾಧನಗಳ ಸಹಾಯದಿಂದ ಹೈಹಯ ಕುಲಕ್ಕೆ ಸೇರಿಸವರು ಎಂಬ ಅಂಶವನ್ನು ಅಂದಿನ ಕೆಲವಾರು ಅರಸು ಮನೆತನಗಳ ಚರಿತ್ರೆಯಲ್ಲಿ ಸಿಕುತ್ತವೆ. ಇಂಥವುಗಳಲ್ಲಿ ಕಲಚೂರಿಗಳೂ ಪ್ರಮುಖರು.

ಈ ಕಲಚೂರಿಗಳು ಕ್ರಿಸ್ತಕಾಲದ ೬ ರಿಂದ ೧೩ನೆಯ ಶತಮಾನದ ಕಾಲಾವಧಿಯಲ್ಲಿ ಮಧ್ಯಭಾರತ ಮತ್ತು ಉತ್ತರ ಪ್ರದೇಶಗಳಲ್ಲಿ ಆಗಾಗ ರಾಜ್ಯಭಾರ ಮಾಡಿದರು. ಒಂದೇ ವಂಶನಾಮದಿಂದ ಪರಿಚಿತರಾದ ಈ ಕಲಚೂರಿಗಳಲ್ಲಿ ಮೂರು ನಾಲ್ಕು ಭಿನ್ನ ಶಾಖೆಗಳು ಏರ್ಪಟ್ಟಿದ್ದವು ಎಂಬ ವಿಷಯವನ್ನು ಅನ್ವೇಷಕರು ಕಂಡು ಹಿಡಿದಿದ್ದಾರೆ. ಈ ಕಲಚೂರಿ ಮನೆತನಗಳಲ್ಲಿ ಪ್ರಾಚೀನವಾದದು ಕ್ರಿ.ಶ.ಕಾಲದ ಸುಮಾರು ೬–೭ನೇ ಶತಮಾನದಲ್ಲಿ ರಾಜ್ಯಭಾರ ಮಾಡಿತು. ಈ ಮನೆತನದ ಹೆಸರು ಕಟ್ಟಚುರಿ. ಈ ಮನೆತನದ ಅರಸರು ದಕ್ಷಿಣಕ್ಕೆ ನಾಸಿಕದವರೆಗಿನ ವಿಸ್ತಾರವಾದ ರಾಜ್ಯದ ಒಡೆಯರಾಗಿದ್ದರು. ಕಲಚೂರಿಗಳು ಬಾದಾಮಿಯ ಚಾಲುಕ್ಯರ ಸಮಸಾಮಯಿಕರು, ಕಟಚ್ಚುರಿಗಳಲ್ಲಿ ಪ್ರಖ್ಯಾತನಾದ ಮೊದಲನೆಯ ಅರಸ ಕೃಷ್ಣರಾಜ. ಈ ಕೃಷ್ಣರಾಜನ ಮಗ ಶಂಕರನಗಣ ಮಗ ಬುದ್ಧ, ಮಂಗಳೀಶನು ತನ್ನ ದಿಗ್ವಿಜಯದಲ್ಲಿ ಸೋಲಿಸಿದ ಅರಸುಗಳಲ್ಲಿ ಈ ಬುದ್ದರಾಜನು ಒಬ್ಬನಾಗಿದ್ದನು ಎಂಬ ಅಂಶವು ಮಂಗಳೀಶನ ಮಹಾಕೂಟದ ಸ್ತಂಭ ಶಾಸನದಿಂದ ತಿಳಿಸಲಾಗಿದೆ. ಈ ಘಟನೆ ಕ್ರಿ.ಶ.೫೯೭–೯೮ ಮತ್ತು ೬೦೨ರ ನಡುವೆ ಸಂಭವಿಸಿರಬೇಕು. ಈ ಸನ್ನಿವೇಶವನ್ನು ಐಹೊಳೆ ಶಾಸನ ಕವಿಯಾದ ರವಿಕೀರ್ತಿ ಕಾವ್ಯಮಯವಾಗಿ ವರ್ಣಿಸಿದ್ದಾನೆ.

ಸ್ಫುರನ್‌ಮಯೂಖೈರಸಿದೀಪಿಕಾಶತೈಃ
ವ್ಯುದಸ್ಯ ಮಾತಂಗತಮಿಸ್ರ ಸಂಚಯಂ
ಅವಾಪ್ತವಾನ್ ಯೋ ರಣರಂಗಮಂದಿರೇ
ಕಟಚ್ಚುರಿ ಶ್ರೀಲಲನಾಪರಿಗ್ರಹಮ್॥

ಹೈಹಯರ ಮೂಲ ಪ್ರದೇಶವು ಕಾಲಂಜರ ಮಂಡಲವಾಗಿದ್ದಿತು ಎಂದು ತೋರುತ್ತದೆ. ಕಾಲಂಜರಪುರದ ಕಾಲಂಜರ ಮಂಡಲದ ಮುಖ್ಯ ಸ್ಥಳವು ಭದ್ರವಾದ ದುರ್ಗವೂ ಆಗಿದ್ದತ್ತು. ಇದು ಇಂದಿನ ಬುಂದೇಲ ಖಂಡದ ಬಾಂದಾ ಜಿಲ್ಲೆಯಲ್ಲಿದೆ. ಮೊದಮೊದಲು ಈ ಹೈಹಯರಿಗೆ ದಕ್ಷಿಣದಲ್ಲಿ ಬಾದಾಮಿಯ ಚಾಲುಕ್ಯರು ಹಗೆಗಳಾಗಿದ್ದಂತೆ ಅನಂತರ ಉತ್ತರ ಭಾರತದಲ್ಲಿ ಪ್ರಬಲಿಸಿದ ಪ್ರತೀಹಾರ ಮನೆತನದ ಅರಸರು ಶತ್ರುಗಳಾಗಿ ನಿಂತರು ಈ ಉಭಯರ ಅಕ್ರಮಣಗಳಿಂದ ಭರ್ಜಿತರಾದ ಹೈಹಯರ ದುರ್ಬಲರಾಗಿ ಒಂಭತ್ತನೆಯ ಶತಮಾನದ ಪ್ರಾರಂಭದಲ್ಲಿ ತಮ್ಮ ಸ್ವಸ್ಥಾನವಾಧ ಕಾಲಂಜರಮಂಡಲದ ಒಡೆತನವನ್ನು ಕಳೆದುಕೊಂಡಿರಬೇಕು. ಅಂತು ಸ್ಥಾನಭ್ರಷ್ಟರಾದ ಹೈಹಯರು ಚದರಿ ಹೋದವರಾಗಿ ಅಲ್ಲಲ್ಲಿ ಬೇರೆ ಬೇರೆ ಪ್ರದೇಶಗಳಿಗೆ ಪಯಣ ಬೆಳಿಸಿದರು. ಮುಂದೆ ಒಂದೆರಡು ಶತಮಾನಗಳು ಕಳೆಯುವಷ್ಟರಲ್ಲಿ ಹೈಹಯರು ಮನೆತನದ ಮೂರು ನಾಲ್ಕು ಶಾಖೆಗಳು ಮಧ್ಯೋತ್ತರ ಭಾರತದಲ್ಲಿ ಆಳುತ್ತಿರುವ ಸನ್ನಿವೇಶವು ಗೋಚರವಾಗುತ್ತದೆ. ಇವರುಗಳಿಗೆ 'ಸರಯೂಪಾರ' ಇಲ್ಲವೆ ಗೋರಖಪುರದ ಕಲಚೂರಿಗಳು, ಡಾಹಲ ಅಥವಾ ತ್ರಿಪುರಿಯ ಕಲಚೂರಿಗಳು ಮತ್ತು ತುಮ್ಮಾಣ ಇಲ್ಲವೆ ರತ್ನಪುರದ ಕಲಚುರಿಗಳು ಎಂಬ ಹೆಸರುಗಳು ಬಂದಿವೆ. ಇವರಲ್ಲಿ ಮೊದಲನೆಯವರಾದ ಗೋರಖಪುರದ ಕಲಚುರಿಗಳು ಉತ್ತರ ಪ್ರದೇಶದಲ್ಲಿ ಅಳಿದರು. ಈ ಮನೆತನದ ಎರಡು ಶಾಖೆಗಳು ಇದ್ದುವೆಂದು ತಿಳಿದುಬಂದಿವೆ. ಉಳಿದೆರಡು ಮನೆತನಗಳು ಮಧ್ಯಭಾರತದಲ್ಲಿ ರಾಜಭಾರ ಮಾಡಿದುವು. ಈ ಕಲಚೂರಿಗಳ ಮೇಲೆ ವಿವರಿಸಿದ ಹೈಹಯರ ಅನುವಂಶಿಕರಾಗಿದ್ದರೆಂಬ ಸಂಗತಿಯನ್ನು ಅನ್ವೇಷಕರು ಅನುಮೋದಿಸಿದ್ದಾರೆ.

ಹೈಹಯರ ಪೌರಾಣಿಕ ಪದ್ಧತಿಯಲ್ಲಿ ತಮ್ಮ ವಂಶಕ್ರಮವನ್ನು ಹೇಳಿಕೊಂಡಿಲ್ಲ. ಅವರಿಂದೀಚೆಯವರಾದ ಕಲಚೂರಿಗಳ ಮಾತ್ರ ತಾವು ಚಂದ್ರ ಇಲ್ಲವೆ ಸೂರ್ಯ ವಂಶಜರೆಂದೂ ಹೈಹಯ ಕುಲೀನರೆಂದೂ ಹೊಗಳಿಕೊಂಡಿರುವರು. ಗೋರಖಪುರದ ಮತ್ತು ತ್ರಿಪುರಿಯ ಕಲಚೂರಿಗಳು ಚಂದ್ರನಿಂದ ತಮ್ಮ ವಂಶಾವಳಿಯನ್ನು ಆರಂಭಿಸಿದರೆ, ರತ್ನಪುರದ ಕಲಚೂರಿಗಳು ಸೂರ್ಯನಿಂದ ಆರಂಭಿಸುವರು. ರತ್ನಪುರದ ಕಚೂರಿಗಳ ವಂಶವರ್ಣನೆ ಬ್ರಹ್ಮಸ್ತುತಿಯಿಂದ ಆರಂಭವಾಗಿ ಅದರ ಮುಂದಿನ ಪದ್ಯವು ಹೀಗೆ ಬರುತ್ತದೆ.

ಯದೇತದಗ್ರೇಸರಮಂಬರಸ್ಯ
ಜ್ಯೋತೀಃ ಸ ಪೂಷಾ ಪುರಷಃ ಪುರಾಣಃ।
ಅಥಾಸ್ಯ ಪುತ್ರೋ ಮನುರಾದಿರಾಜಃ
ತದನ್ವಯೇಽ ಭೂದ್ ಭುವಿ ಕಾರ್ತವೀರ್ಯಃ॥

ಮಧ್ಯೋತ್ತರ ಭಾರತೀಯ ಕಲಚೂರಿಗಳ ಮನೆತನದ ಹೆಸರಿನ ಭಿನ್ನ ರೂಪಗಳನ್ನು ಕುರಿತು ಮತ್ತು ಕರ್ನಾಟಕದಲ್ಲಿ ಆಳಿದ ಈ ವಂಶದವರ ಬಳಕೆಯ ಹೆಸರಿನ ಸಮರ್ಪಕತೆಯನ್ನು

ಕುರಿತು ಸ್ವಲ್ಪಮಟ್ಟಿಗೆ ವಿಚಾರ ಮಾಡುವಾಗ ಈ ವಂಶದ ಮೇಲೆ ನಿರ್ದೇಶಿಸಿದ ಕಟಚ್ಚುರಿ ಮತ್ತು ಕಲಚೂರಿ ಎಂಬ ಎರಡು ಹೆಸರುಗಳಿಂದ ಮಾತ್ರವಲ್ಲದೆ ಬೇರೆ ಪರ್ಯಾಯ ನಾಮಗಳಿಂದ ನಿರ್ದಿಷ್ಟವಾಗಿದೆ. ಮೇಲೆ ಉಲ್ಲೇಖಿಸಿದ ಮಂಗಳೀಶನ ಮಹಾಕೂಟದ ಸ್ತಂಭಶಾಸನದಲ್ಲಿ ಈ ಮನೆತನವನ್ನು ಕಲತ್ಸೂರಿ ಎಂದು ಕರೆದಿದೆ. ಕೌಠೆಮ್ ಶಾಸನದಲ್ಲಿ ಕಾಲಚ್ಚುರಿ ಎಂಬ ರೂಪವು ಸಿಕ್ಕುತ್ತದೆ. ಇನ್ನೊಂದೆಡೆ ಕುಲಚುರಿ ಎಂದು ಹೇಳಿದೆ. ಸೋರಬ ೧೩೧ ಮತ್ತು ೨೮೭ ಅಂಕದ ಶಾಸನಗಳಲ್ಲಿ ಕಳತೂರ್ಯ ಎಂಬುದಾಗಿ ಹೆಸರಿಸಿದೆ. ವಿಜಾಪುರ ಸಿಂದಗಿಯ ತಾಲೂಕಿನ ಹಡಗಿನಾಳ ಗ್ರಾಮದ ಶಾಸನದಲ್ಲಿ ಕಳಿತ್ ಸೂರ್ಯ ಎಂಬ ಉಲ್ಲೇಖವು ದೊರೆತಿದೆ. ಇದಲ್ಲದೆ ಇನ್ನೂ ಬೇರೆ ರೂಪಗಳೂ ದೊರೆಯುತ್ತವೆ. **(ಕರ್ನಾಟಕದ ಕಲಚುರಿಗಳು ದೇಸಾಯಿ ಪಾಂಡುರಂಗರಾಯರು ಕರ್ನಾಟಕದ ಕಲಚುರಿಗಳು, ಪುಟ ೫ ರಿಂದ ೧೦)**

೩.೧. ರಾಯಚೂರು ಪ್ರದೇಶದ ಹೈಹಯರು

ಕ್ರಿ.ಶ. ಒಂಭತ್ತರಿಂದ ಹದಿಮೂರನೇ ಶತಮಾನದವರೆಗಿನ ರಾಯಚೂರು ಪ್ರದೇಶದ ಶಾಸನಗಳು ಕೆಲವು ಆಡಳಿತ ವಿಭಾಗ ಮತ್ತು ಅದರ ಉಪವಿಭಾಗಗಳನ್ನು ಉಲ್ಲೇಖಿಸಿವೆ. **'ನಾಡು'** ಇದನ್ನು ದೇಶ ಕಂಪಣ ವಿಷಯ ಎಂದು ಕರೆಯಲಾಗಿದೆ. ಒಂದೊಂದು ನಾಡಿಗೆ ನಿರ್ದಿಷ್ಟ ಸಂಖ್ಯೆಗಳನ್ನು ಕೊಡಲಾಗಿದೆ. ಈ ಸಂಖ್ಯೆಯು ಆ ನಾಡಿಗೆ ಒಳಪಟ್ಟಿದ್ದ ಹಳ್ಳಿಗಳನ್ನು ತಿಳಿಸುತ್ತದೆ ಎನ್ನಲಾಗಿದೆ. ಕೃಷ್ಣ ಹಾಗೂ ತುಂಗಭದ್ರಾ ನದಿಗಳ ಮಧ್ಯದ ಇಂದಿನ ರಾಯಚೂರು ಪ್ರದೇಶವನ್ನು ಎಡೆದೊರೆ ೨೦೦೦ ಎಂದು ಕರೆಯುತ್ತಿದ್ದರು. ಈ ಪ್ರದೇಶದಲ್ಲಿ ಅನೇಕ ಉಪವಿಭಾಗಗಳಿದ್ದವು. ಕರಡಿಕಲ್ಲು ೪೦೦ ಇಂದಿನ ಲಿಂಗಸೂಗೂರು ತಾಲ್ಲೂಕಿನ ಕರಡಿಕಲ್ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶವಾಗಿತ್ತು. ಮುದಗಲ್ಲು ಅದರ ರಾಜಧಾನಿಯಾಗಿತ್ತು. ಮೊಸಳೆಕಲ್ಲು-೩೦೦ ಇಂದಿನ ದೇವದುರ್ಗ ತಾಲ್ಲೂಕಿನ ಮೊಸರಕಲ್ಲು ಹಾಗೂ ಅದರ ಸುತ್ತಲಿನ ಪ್ರದೇಶವಾಗಿತ್ತು. ಅದೇ ರೀತಿ ಮೊರಟ-೩೦೦ ಇಂದಿನ ಮಾನ್ವಿ ತಾಲ್ಲೂಕಿನ ಮಲ್ಲಟ ಮತ್ತು ಅದರ ಸುತ್ತಲಿನ ಪ್ರದೇಶವಾಗಿತ್ತು. ಕಳವಾಡಿ-೩೦೦ ಇನ್ನೊಂದು ಉಪವಿಭಾಗವಾಗಿದ್ದು, ಕಲುಕೆರೆ ಅದರ ರಾಜಧಾನಿಯಾಗಿತ್ತು. ಅಯ್ಯಣವಾಡಿ-೩೦೦ ಮುದುಗೂಂದೂರು-೩೦೦ ಹಾಗೂ ನಿಟ್ಟರವೆ-೭೦ ಇವೆಲ್ಲವೂ ಎಡೆದೊರೆ ನಾಡಿನ ಉಪವಿಭಾಗಗಳಾಗಿದ್ದವು.

ಶಾಸನಗಳ ಆಧಾರದ ಮೇಲೆ ರಾಯಚೂರು ಪ್ರದೇಶದ ಇತಿಹಾಸವನ್ನು ಎಂಟನೆಯ ಶತಮಾನದಷ್ಟು ಹಿಂದಕ್ಕೆ ಒಯ್ಯಬಹುದು. ಈ ಕಾಲದ ಮೂರು ತ್ರುಟಿತ ಶಾಸನಗಳು ಮಸೀದಿಯೊಂದರಲ್ಲಿ ಇವೆ. 'ಬೀಯಳೇಶ್ವರ ದೇವರು ಮತ್ತು ಕೆಲವು ವ್ಯಕ್ತಿಗಳ ಹೆಸರುಗಳು ಮಾತ್ರ ಇವುಗಳಿಂದ ತಿಳಿಯುತ್ತದೆ. ಇದರ ನಂತರ ಕಾಣುವುದು ಹನ್ನೆರಡನೇ ಶತಮಾನದ ಶಾಸನಗಳು ಇವು ಸಹ ತ್ರುಟಿತವಾಗಿರುವುದರಿಂದ ಸಾಮಂತ ಅರಸರಾದ ಹೈಹಯರು ಮತ್ತು

ಅವರ ವಂಶಾವಳಿ ನಮಗೆ ಲಭ್ಯವಾಗಿದೆ. ಈ ಕಾಲಕ್ಕಾಗಲೇ ರಾಯಚೂರು ಪ್ರದೇಶದಲ್ಲಿ ಒಂದು ಕೋಟೆಯಿತ್ತು. ಆ ಕೋಟೆಯನ್ನು ಹೊಯ್ಸಳ ವಿಷ್ಣುವರ್ಧನನು (ಕ್ರಿ.ಶ. ೧೧೦೮–೧೧೫೨)ರಲ್ಲಿ ಗೆದ್ದಿದ್ದನೆಂಬುದು ಅನೇಕ ಹೊಯ್ಸಳರ ಶಾಸನಗಳಲ್ಲಿ ಉಲ್ಲೇಖವಾಗಿದೆ. ಈ ಶಾಸನಗಳು ಊರಿನ ಹೆಸರನ್ನು 'ರಾಚವೂರು', 'ಪೆರ್ಮ್ಮನ ರಾಚವೂರು' ಮತ್ತು 'ರಾಚನೂರು' ಎಂದು ಉಲ್ಲೇಖಿಸುತ್ತದೆ.

ಹೈಹಯರ ವಂಶಾವಳಿ

ಲೋಕರಸ ಕ್ರಿ.ಶ. ೧೦೪೦

↓

ನುಂಗ್ಯಪರಸ

↓

ರೇವರಸ

↓

ಮಳೆಯರಸ ಕ್ರಿ.ಶ. ೧೦೬೮

↓

ಘಟ್ಟದೇವ ಕ್ರಿ.ಶ. ೧೦೭೮

↓

ಚಂದರಸ ಕ್ರಿ.ಶ. ೧೦೮೫ — ಅಣ್ಣಲದೇವ ಕ್ರಿ.ಶ. ೧೦೮೫

(ಸಿಡಿಲಮಾರ್ಕೊಳ್ವ)

↓

ಅಯ್ಯಣದೇವ ಕ್ರಿ.ಶ. ೧೧೯೬.

↓

ಬೂಚಿದೇವ

↓

ಎರಡನೆಯ ಘಟ್ಟದೇವ

↓

ಹಿರಿಯಮಲ್ಲರಸ ಕ್ರಿ.ಶ. ೧೧೭೮.

↓

ಮೈಳುಗಿದೇವ ಕ್ರಿ.ಶ. ೧೧೯೧

↓

ಹಲ್ಲೆಗದೇವ, ಹೆಂ.ರೇಕಲದೇವ

↓

ಮಲ್ಲರಸ ಕ್ರಿ.ಶ. ೧೨೧೮

ಪತ್ನಿಯರು ೧. ಮಾಕಲದೇವಿ ೨. ಬೆಸಲದೇವಿ

↓

ಅಲ್ಲಹುಲಿದೇವ — ಹಲ್ಲೆಗದೇವ — ಬಯಿರುಗಿದೇವ

↓ (ಬಯಿರುಗಿದೇವ)

ಇಮ್ಮಡಿ ಮಲ್ಲಿದೇವ

ರಾಯಚೂರು ಪ್ರದೇಶದ ಮಾನ್ವಿ ತಾಲ್ಲೂಕಿನ ಮಲ್ಲಟ ಗ್ರಾಮ ಮಾನ್ವಿಯಿಂದ ಉತ್ತರಕ್ಕೆ ೨೦ ಕಿ.ಮೀ. ದೂರದಲ್ಲಿ ಅಕ್ಷಾಂಶ ೧೬'.೬' ಮತ್ತು ರೇಖಾಂಶ ೭೬'-೫೧'ರಲ್ಲಿದೆ. ಈ ಚಿಕ್ಕ ಗ್ರಾಮವಾಗಿರುವ ಈ ಸ್ಥಳ ಮೊರಟ ಎಂಬ ಹೆಸರಿನಿಂದ ಹನ್ನೊಂದು ಹನ್ನೆರಡನೇ ಶತಮಾನದಲ್ಲಿ ಹೈಹಯರರಾಜಧಾನಿಯಾಗಿತ್ತು.

ಅಲ್ಲದೆ ಮೊರಟದ-೩೦೦ ವಿಭಾಗದ ರಾಜಧಾನಿಯೂ ಆಗಿತ್ತು. ಹೈಹಯರಅರಸರು ಕಲ್ಯಾಣ ಚಾಲುಕ್ಯರ ಸಾಮಂತರಾಗಿ ಈ ಪ್ರದೇಶವನ್ನು ಆಳುತ್ತಿದ್ದರು. ಹೈಹಯರದೇವರಸನು ಕ್ರಿ.ಶ. ೧೦೫೨ರಲ್ಲಿ ಎಡೆದೊರೆ ೨೦೦೦ನ್ನು ಆಳುತ್ತಿದ್ದನು. ಮೊರಟ-೩೦೦ ಪ್ರದೇಶವು ಎಡೆದೊರೆ-೨೦೦೦ರದ ಒಂದು ಉಪವಿಭಾಗವಾಗಿತ್ತು. ಐತಿಹಾಸಿಕ ಮಹತ್ವವುಳ್ಳ ಈ ಊರಿನಲ್ಲಿ ಹೈಹಯರಕಾಲದಲ್ಲಿ ಕೋಟೆಯಿದುದ್ದು ಇಲ್ಲಿನ ಶಾಸನದಲ್ಲಿ ಉಲ್ಲೇಖಗೊಂಡಿದೆ. ಕೋಟೆಯೊಳಗಿನ ನಾಗರ ಕರೆಯ ದಕ್ಷಿಣ ಭಾಗದಲ್ಲಿ ಪ್ರತಿಷ್ಠಾಪಿಸಿದ ಸೋಮೇಶ್ವರ ದೇವರಿಗೆ ಭೂಮಿಯನ್ನು ದಾನವಾಗಿ ಕೊಟ್ಟಿದ್ದನ್ನು ಕ್ರಿ.ಶ. ೧೧೪೮ರ ಶಾಸನವು ಉಲ್ಲೇಖಿಸುತ್ತದೆ. ಈ ಕೋಟೆ ಈಗ ಉಳಿದಿಲ್ಲ ಆದರೆ ಹೈಹಯರಕಾಲದ ಕೆಲವು ದೇವಾಲಯಗಳನ್ನು ಇಂದಿಗೂ ಸಹ ನಾವು ನೋಡಬಹುದು.

ಹೈಹಯರು ಮಾಂಡಳೀಕ ಅರಸರಾಗಿ ಎಡದೊರೆಯ ನಾಡಿನಲ್ಲಿ ಆಳ್ವಿಕೆ ಮಾಡಿದ್ದಾರೆ. ಹೈಹಯರವಂಶದಲ್ಲಿ ಲೋಕರಸನು ಆರಂಭದ ಅರಸನಾಗಿದ್ದನು. ನಂತರ ನುಂಗ್ಯಪರಸ, ರೇವರಸ, ಮಳೆಯರಸ, ಘಟ್ಟಿದೇವ, ಚಂದರಸ, ಅಣ್ಣಲದೇವ, ಅಯಣ್ಯದೇವ, ಬೂಚಿದೇವ, ೨ನೇ ಘಟ್ಟಿದೇವ, ಹಿರಿಯ ಮಲ್ಲರಸ, ಮೈಳುಗಿದೇವ, ಹಲ್ಲೆಗದೇವ, ಮಲ್ಲರಸ, ಅಲ್ಲಹುಲಿದೇವ, ಹಲ್ಲೆಗದೇವ ಬಯರುಗಿದೇವ ಮತ್ತು ಇಮ್ಮಡಿ ಮಲ್ಲಿದೇವ ಈ ರೀತಿಯಾಗಿ ಇವರು ಕ್ರಮವಾಗಿ ಆಳ್ವಿಕೆಯನ್ನು ರಾಯಚೂರು ಪ್ರದೇಶದಲ್ಲಿ ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ ಆಳ್ವಿಕೆ ಮಾಡಿದ್ದಾರೆ.

ಕ್ರಿ.ಶ.೧೧ನೆಯ ಶತಮಾನದ ಬಲ್ಲಟಗಿ ಗ್ರಾಮದ ಗಿರಿಜವ್ವನ ಗದ್ದುಗೆಯಲ್ಲಿರುವ ಶಾಸನದಲ್ಲಿ ಚಾಲುಕ್ಯ ಜಗದೇಕಮಲ್ಲನ ಆಳ್ವಿಕೆಯ ಕಾಲದಲ್ಲಿ ಈತನ ಸಾಮಾಂತನಾದ ಹೈಹಯ ವಂಶದ ಲೋಕರಸನಿದ್ದು, ಇವನನ್ನು ಭೃಗುಮಹಾಚಾರ್ಯ ಹಯವತ್ಸರಾಜ, ಜಗದೇಕಮಲ್ಲನ ಮಗ ಮುಂತಾದ ವಿಶೇಷಣಗಳಿಂದ ಕರೆಯಲಾಗಿದೆ. ಈ ಲೋಕರಸನು ಸೂತ್ರದಾರಿ ನೇಮೋಜನಿಗೆ ಮಾರಟದಲ್ಲಿ ಕರಿಯ ನೆಲವನ್ನು ದಾನವಾಗಿ ಕೊಟ್ಟಿದ್ದನ್ನು, ಶಾಸನದಲ್ಲಿ ಉಲ್ಲೇಖಿಸುತ್ತದೆ. (ಕವಿವಿಶಾಸಂ. ೭, ಮಾ. ೯೩) ತ್ರೈಲೋಕ್ಯಮಲ್ಲನ ಆಳ್ವಿಕೆಯಲ್ಲಿ ಹೈಹಯ ವಂಶದ ನಂಗ್ಯಪರಸನು ಆಳುತ್ತಿದ್ದಂತೆ ಹೇಳಿದೆ. ಇವನನ್ನು ಶಾಸನದಲ್ಲಿ ಮಾಹಿಸ್ಮತೀ ಪುರವರಾಧೀಶ್ವರ ಮಧ್ಯದೇಶಾಧೀಶ್ವರಂ' ಮುಂತಾಗಿ ಕರೆದಿದೆ.

ಮಾನ್ವಿ ದಿಡ್ಡಿಕೆರೆಯ ಬಳಿಯ ಕ್ರಿ.ಶ.೧೦೫೨ರ ಶಾಸನದಲ್ಲಿ ಚಾಲುಕ್ಯ ಅರಸ ತ್ರೈಲೋಕ್ಯ ಮಲ್ಲನ ಕಲ್ಯಾಣದಲ್ಲಿ ಆಳುತ್ತಿದ್ದಾಗ ಅವನ ಸಾಮಾಂತನಾದ ಮಾಹಿಷ್ಮತೀಪುರವರೇಶ್ವರ, ರಿಪುಮಂಡಳೀಕ ಭೇರುಂಡ, ಮೂವಡಿಗಂಡ ಮುಂತಾದ ವಿಶೇಷಣಗಳನ್ನು ಹೊಂದಿದ್ದ ರೇವರಸನು ಎಡದೊರೆ ೨೦೦೦ವನ್ನು ಆಳುತ್ತಿದ್ದ. ಅವನ ಪಾದೋಪಜೀವಿ ತಂತ್ರಪಾಳ ಗಂಗರ ಚಾವುಂಡಮಯ ನಾಯಕನು ಕರೆಯ ನಿರ್ವಹಣೆಗಾಗಿ ೧೩ ಮತ್ತರ ಕರಿಯ ಭೂಮಿಯನ್ನು ಬೀಡುತ್ತಾನೆ. (ಕವಿವಿಶಾಸಂ.೭, ಮಾ. ೧೫)

ದದ್ದಲ ಊರ ಹೊರಗೆ ನಿಲ್ಲಿಸಿದ ಕಲ್ಲಿನ ಮೇಲೆ ಕ್ರಿ.ಶ.೧೬೬೯ರ ಶಾಸನದಲ್ಲಿ ಚಾಲುಕ್ಯರಾಜ ಭುವನೈಕಮಲ್ಲನು ಆಳುತ್ತಿದ್ದಾಗ ಜಟಾಚೋಳ ಭೀಮರಾಯನು ಮಹಾಮಂಡಳೇಶ್ವರನಾಗಿದ್ದ. ಇವನ ಸಾಮಾಂತನಾಗಿ ಮಾಹಿಷ್ಮತೀ ಪುರವರೇಶ್ವರ ಸಹಸ್ರಬಾಹು ಪ್ರತಾಪ, ಹಯಾರೂಢರೇವನ್ತ, ಮಂಗಿಯ ಮರಳ ಮುಂತಾದ ವಿಶೇಷಣಗಳನ್ನು ಧರಿಸಿದ ಮಳೆಯಮರಸನು ಆಳುತ್ತಿದ್ದಾಗ ಉತ್ತಾರಾಯಣ ಸಂಕ್ರಮಣದ ನಿಮಿತ್ತವಾಗಿ ಗಿರಿಗೋಟೆಮಲ್ಲ ಎಂಬ ಹೆಸರಿನ ಜಿನಾಲಯವನ್ನು ಕಟ್ಟಿಸುತ್ತಾನೆ. ಇದಕ್ಕೆ ನಿಗರ ಮತ್ತರು ೨೪ನ್ನು ಬಂದು ಮತ್ತರು ಹೂದೋಟವನ್ನು ದಾನ ನೀಡಿದಂತೆ ಉಲ್ಲೇಖಿಸಿದೆ. (ಕವಿವಿಶಾಸಂ. ೭, ಮಾ.೨೨)

ಬಳಿಗಾನೂರು ಗ್ರಾಮದ ಲಕ್ಷ್ಮೀನಾರಾಯಣ ದೇವಾಲಯದ ಮಂಟಪಕ್ಕೆ ಸೇರಿಸಿರುವ ಕ್ರಿ.ಶ. ೧೧೯೧ರ ಶಾಸನದಲ್ಲಿ ಚಾಲುಕ್ಯ ವಂಶದ ಅರಸ ಸೋಮೇಶ್ವರ ದೇವನು ಆಳುತ್ತಿದ್ದಾಗ ಅವನ ಸಾಮಂತನಾಗಿ ಹೈಹಯ ವಂಶದ ಮಹಾಮಂಡಳೇಶ್ವರ ಮಲ್ಲಿದೇವರಸನು ಮದನಸಿರಿವಾರ ರಾಜಧಾನಿಯಲ್ಲಿ ತನ್ನ ಪತ್ನಿ ಮಾಕಲದೇವಿ ಮಕ್ಕಳು ಪ್ರಧಾನರೊಂದಿಗೆ ಸೇರಿ ಸಬ್ಬದೇವಸೆಟ್ಟಿ ಅವನ ತಮ್ಮಂದಿರಾದ ಮಹೇಶ್ವರ ಮತ್ತು ವಿರೂಪಾಕ್ಷರು ಕಟ್ಟಿಸಿದ ಲಕ್ಷ್ಮೀನಾರಾಯಣ ದೇವರಿಗೆ ಉತ್ತರಾಯಣ ಸಂಕ್ರಮಣದಲ್ಲಿ ೨೦ ಮತ್ತರು ೩೦೦ ಕಂಬ ಭೂದಾನ ನೀಡುತ್ತಾನೆ. ಮುಂದೆ ಇದೇ ಶಾಸನದಲ್ಲಿ ಹೈಹಯ ವಂಶದ ಅಲ್ಲಹುಲಿದೇವನು ತನ್ನ ಪತ್ನಿ ವೈಷ್ಣವ ರಬ್ಬಲದೇವಿ, ಮಕ್ಕಳು, ಮಂತ್ರಿಗಳೊಂದಿಗೆ ಸೇರಿ ಅಗ್ರಹಾರ ಹಿರಿಯ ಭಳಿಗಾರನೂರಿನಲ್ಲಿ ಸೆಟ್ಟಿಯರು ಮಾಡಿಸಿದ ಲಕ್ಷ್ಮೀನಾರಾಯಣ ದೇವರಿಗೆ ಹದಿನೆಂಟು ಮತ್ತರು ಭೂದಾನ ನೀಡುತ್ತಾರೆ. (ಕವಿವಿಶಾಸಂ. ೭, ಸಿ.೩೯)

ಗಬ್ಬೂರಿನ ಹಂಪಯ್ಯನ ಬಾವಿಯ ಬಳಿಯಲ್ಲಿರುವ ಕ್ರಿ.ಶ. ೧೦೮೪ರ ಶಾಸನದಲ್ಲಿ ಚಾಲುಕ್ಯ ತ್ರಿಭುವನಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತನಾಗಿ ಚಂದರಸನಿರುತ್ತಾನೆ. ಈತನನ್ನು ಶಾಸನದಲ್ಲಿ ಮಹಿಮ್ಮತೀಪುರವೇಶ್ವರ, ಪ್ರತಾಪ ಲಂಕೇಶ್ವರ, ಪ್ರಳಯ ಭೈರವ ಮುಂತಾದ ವಿಶೇಷಣಗಳಿಂದ ಕರೆಯುತ್ತಿದ್ದರು. ಚಂದರಸನು ತಮ್ಮ ಅಣ್ಣಲದೇವ ಇಬ್ಬರೂ

ಕೂಡಿ ಮಹಾಸಾಮಂತ ಬಸವದೇವನ ಭಿನ್ನಪದಂತೆ ಜೀನ ದೇವರ ಅರ್ಚನೆಗಾಗಿ ದಾನ ಬಿಟ್ಟ ಉಲ್ಲೇಖವಿದೆ. (ಕವಿವಿಶಾಸಂ. ೭, ಪುಟ.೨೫)

ಚಾಲುಕ್ಯ ತ್ರಿಭುವನಮಲ್ಲ ಕಾಲದ ಗಬ್ಬೂರು ಸುಗೂರೇಶ್ವರ ದೇವಾಲಯದ ಬೆಟ್ಟದ ದಾರಿಯಲ್ಲಿರುವ ಕ್ರಿ.ಶ. ೧೦೮೪ರ ಇನ್ನೊಂದು ಶಾಸನದಲ್ಲಿ ಮಹಾಮಂಡಳೇಶ್ವರ ಜೋಯಿಮಯ್ಯರಸನ ಉಲ್ಲೇಖವಿದೆ. ಈತನನ್ನು ಶಾಸನದಲ್ಲಿ ಮದನ ಮಹೇಶ್ವರ, ಅಭಿನವ ಚಾರುದತ್ತ, ಉಭಯದಳ, ರಣಾಚಾರ್ಯ ಮುಂತಾದ ವಿಶೇಷಣಗಳಿಂದ ಕರೆಯಲಾಗಿದೆ. ಇವನು ಎಡೆದೊರೆ ಎರಡು ಸಾವಿರ ಕಲ್ಲ ಕೆಳಗೈ ನೂರು ಪ್ರಾಂತ್ಯಗಳನ್ನು ಆಳುತ್ತಿದ್ದನು. ಮತ್ತು ಜೋಯಿಮರಸನು ಮುಗುಂದೂರು ೩೦೦ರ ಬಳಿಯ ಗ್ರಾಮವಾದ ಹಳ್ಳಿ ಸಂತೆಯನ್ನು ಧರ್ಮವಾಗಿ ಬಿಟ್ಟನು. ಈ ಶಾಸನದಲ್ಲಿ ಚಂದರಸ ಮತ್ತು ಕಣಲದೇವ ಜಕ್ಕರಸರ ಉಲ್ಲೇಖವಿದೆ. (ಕವಿವಿಶಾಸಂ. ೭, ದೇ.೨೬)

ಬಾಗಲವಾಡ ಮಾನ್ವಿ ಕರಿಯಮ್ಮನ ಮನೆಯ ಸಮೀಪದ ಬಂಗಾರದ ಬಸವಣ್ಣನ ಹೊಲದಲ್ಲಿನ ಕ್ರಿ.ಶ. ೧೧೯೬ರ ಶಾಸನವು ಚಾಲುಕ್ಯ ವಿಕ್ರಮಾದಿತ್ಯನ ಕಾಲದಲ್ಲಿ ಅವನ ಸಾಮಂತನಾಗಿದ್ದ ಅಹಿಹಯ ವಂಶೋದ್ಭವನಾದ ಅಯ್ಯಣ ಎಂಬುವವನು ಬಮ್ಮಹಾಳ ಗ್ರಾಮದ ಪ್ರಭು ಗಾಮುಂಡರಿಗೆ ಕೆಲವು ತೆರಿಗೆಗಳನ್ನು ನೀಡಿ ೭೫ ಮತ್ತರ ಭೂಮಿಯನ್ನು ನೀಡಿರುತ್ತಾನೆ. ಈ ಶಾಸನದಲ್ಲಿ ತ್ರಿಭುವನಮಲ್ಲನ ರಾಣಿ ಮಲಯಮತಿಯನ್ನು ಹೆಸರಿಸಿದೆ. ಆಕೆಯನ್ನು ತನ್ನ ಪಿರಿಯರಸಿ ಎಂದು ಕರೆದಿರುವಂತೆ ತೋರುತ್ತದೆ. (ಕವಿವಿಶಾಸಂ. ೭, ಮಾ. ೧೦೬)

ಕಲ್ಲೂರು ಮಾರಟೇಶ್ವರ ಗುಡಿಯ ಆವರಣದಲ್ಲಿರುವ ಕ್ರಿ.ಶ. ೧೧೯೬ರ ಶಾಸನವು ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ನರ್ಮದಾ ದೇವಿಯ ದಂಡಿನ ನೆಲೆವಿಡಿನಲ್ಲಿದ್ದಾಗ ಇವನಿಗೆ ಪೂಜ್ಯನಾಗಿ ವಿಕ್ರಮಾದಿತ್ಯನ ಮಾಂಡಳೀಕನಾಗಿ ಹೈಹಯ ಕುಲದ ಚಂದರಸನಿದ್ದು, ಇವನು ಈ ಕಲ್ಲೂರನ್ನು ಬ್ರಾಹ್ಮಣರಿಗೆ ಸರ್ವನಮಸ್ಯವಾಗಿ ಕೊಡುವಾಗ ಆ ಊರಿನ ಸ್ವಯಂಭೂ ಮಾಱಟೇಶ್ವರ ದೇವರ ಚೈತ್ರ-ಪವಿತ್ರ ದೇವರಂಗ ಭೋಗ ನೈವೇದ್ಯ ಪಾತ್ರ-ಪಾವುಳಿ ಪೂಜರಿಗೆ ಎಂದು ಮಾಣಿಕೇಶ್ವರದ ಕೋಲಲ್ಲಿ ಅಳೆದು ನೂರು ಮತ್ತರ ಭೂಮಿ ಎರಡು ಮತ್ತರ ತೋಟ ನಂದಾ ದೀಪಕ್ಕಾಗಿ ಎರಡು ಗಾಣ ಒಂದು ಅಂಗಡಿ ಐದು ನಿವೇಶನಗಳನ್ನು ದಾನ ಬಿಡುತ್ತಾನೆ. ವಿಕ್ರಮಾದಿತ್ಯ ಭಟ್ಟೋಪಾಧ್ಯಾಯನ ಮುಯ್ದನ ವಾಮರಸನ ಖಂಡ್ಯಕ್ಕಾಗಿ ಐದು ಮತ್ತರ ೫೦೦ ಕಮ್ಮ ಭೂಮಿಯನ್ನು ದಾನ ಬಿಡುತ್ತಾನೆ. (ಕವಿವಿಶಾಸಂ. ೭, ಮಾ.೬೩)

ಹಿರೇರಾಯ ಕುಂಪಿ ಈಶ್ವರ ದೇವಾಲಯದೆದುರು ಇರುವ ಕ್ರಿ.ಶ. ೧೧೩೦ರ ಶಾಸನದಲ್ಲಿ ಭೂಲೋಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಇವನ ಸಾಮಂತನಾಗಿ ವೀರಪೆರ್ಮಾಡಿ

ದೇವನಿರುತ್ತಾನೆ. ಅಹಿಹಯ ವಂಶದವನಾದ ಅಣ್ಣಲದೇವ ಸೇವಕನಾದ ಪೆರ್ಮಾಡಿದೇವನು ಅಯ್ಯಣವಾಡಿ ನಾಡನ್ನು ಮಾಡಿಸಿದ ದೇವಾಲಯದ ಅಂಗ-ಭೋಗ ಜೀರ್ಣೋದ್ಧಾರಕ್ಕಾಗಿ ಧರಣಿ ದೇವನ ಕೋಲಿನಲ್ಲಿ ೪೦ ಮತ್ತರ ಹೊಲ ತೋಟ ದಾನವಾಗಿ ನೀಡುತ್ತಾನೆ. **(ಕವಿವಿಶಾಸಂ. ೭, ದೇ.೨೭)**

ಕಲ್ಲೂರು ಮಾರಟೇಶ್ವರ ಗುಡಿಯ ಎಡಭಾಗದ ಗೋಡೆಯ ಮೇಲೆ ಇರುವ ಕ್ರಿ.ಶ. ೧೧೩೪ರ ಶಾಸನದಲ್ಲಿ ಚಾಳುಕ್ಯ ಚಕ್ರವರ್ತಿ ಭೂಲೋಕಮಲ್ಲ (ಮೂರನೆಯ ಸೋಮೇಶ್ವರ)ನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಾಂಡಳಿಕ ಬೂಚಿದೇವರಸನಿದ್ದನು. ಇವನು ಮುದುಗೂಂದೂರು-೩೦೦ನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಮುದುಗುಂದೂರಿನಿಂದ ಆಳುತ್ತಿದ್ದ. ಇವನನ್ನು ಮಾಹಿಷ್ಮತೀ ಪುರವರಾಧೀಶ್ವರ ಅಹಿಹಯ ವಂಶೋದ್ಭವ ಅತ್ಯುಗ್ರ ನರಶಿರೋದರ್ಪ್ಪಣಧ್ವಜ, ಮಾಲೆಪಱೆಘೋಷಣ, ಬಂಟರಭಾವ, ಕೇಶವ ದೇವರ ಪಾದಾಜ್ಜಭೃಂಗ ಮುಂತಾದ ವಿಶೇಷಣಗಳಿಂದ ಕರೆಯಲಾಗಿದೆ. ಈ ಬೂಚಿದೇವನು ಸರ್ವನಮಸ್ಯದಗ್ರಹಾರ ಕಲ್ಲೂರಿನಲ್ಲಿ ಮಹಾಜನರ ಸನ್ನಿಧಿಯಲ್ಲಿ ಸ್ವಯಂಭು ಮಾರಟೇಶ್ವರ ದೇವರಿಗೆ ವಿಕ್ರಮಾದಿತ್ಯ ಭಟ್ಟಯ್ಯನಿಗೆ ನೀಡಿದ ಹೊಲದಿಂದ ಗಬ್ಬೂರು ದಾರಿಯ ಪಶ್ಚಿಮಕ್ಕೆ ದಸವಾದದ ಭೂಮಿಯಲ್ಲಿ ೧೨ ಮತ್ತರು ಭೂಮಿಯನ್ನು ಹಿರಿಯ ಕೊಲ್ಲಲ್ಲಿ ಅಳೆದು ನೀಡುತ್ತಾನೆ. ಹೆಗಡೆ ಚವುಡಣನು ಮಾರಟೇಶ್ವರ ದೇವರ ಹಡಪಕ್ಕೆ ಒಂದು ಮತ್ತರ ಹೊಲವನ್ನು ದಾನ ನೀಡುತ್ತಾರೆ. (ಕವಿವಿಶಾಸಂ. **೭, ಮಾ. ೧೦೪)**

ಮಲ್ಲಟದ ಊರ ಹೊರಗಿನ ಅಲ್ಲಮ ದೇವಾಲಯದಲ್ಲಿರುವ ಕಲ್ಲಿನ ಮೇಲೆ ಇರುವ ಕ್ರಿ.ಶ. ೧೧೪೮ರ ಶಾಸನದಲ್ಲಿ ಜಗದೇಕಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತನಾಗಿ ಘಟ್ಟದೇವರಸ ಎಂಬುವವನಿದ್ದ. ಈತನನ್ನು ಅಹಿಹಯ ವಂಶೋದ್ಭವ, ಮೂತಿಪಱೆ ಘೋಷಣ, ನಾಲ್ಕು ಭಾಷೆಯ ಜಗಬಿರುದು, ಮಾಂಡಳೀಕರ ಗಂಡ, ಮಲ್ಲಿಕಾರ್ಜುನದೇವ ಪಾದಾರಾಧಕ ಮುಂತಾಗಿ ಪ್ರಶಂಸಿದೆ. ಇವನು ಮೊಜಟದಲ್ಲಿ ರಾಜ್ಯಭಾರ ಮಾಡುತ್ತಿದ್ದ. ಮಲ್ಲಿಕಾರ್ಜುನ ದೇವರಿಗೆ ಅಂಗಭೋಗ ನೈವೇದ್ಯ ಪಾತ್ರ ತಪೋಧರನಗರ ಆಹಾರ ದಾನಕ್ಕೆಂದು ಬಮ್ಮರಾಸಿ ಪಾಂಡಿತವನ್ನು ಭಿನ್ನವಿಸಿ ಮಾಡಗಿರಿಯ ಬಳಿ ಮಾರುವ ಭತ್ತಕ್ಕೆ ಸುಂಕವನ್ನು ನಿಗದಿಪಡಿಸಿ ದೇವಾಲಯಕ್ಕೆ ಬಿಡುತ್ತಾನೆ. ಅಲ್ಲದೆ ಎರದ ಹಳ್ಳಿಯ ಉತ್ತರಕ್ಕೆ ಪಿಟ್ಟಿಗನ ಹಳ್ಳದ ಎರಡು ಕಡೆ ಕುರುಕುಂದೆಯ ಗಡಿಂಬ (ಕೋಲು)ದಲ್ಲಿ ಆರು ಮತ್ತರ ಭೂಮಿಯನ್ನು ದೇವರ ಹಡಪಕ್ಕೆ ಹೆರಿಗೆ ಐವತ್ತು ಎಲೆ ಬಿಡುವಂತೆ ಕಟ್ಟಳೆ, ಮಾಡಿದಂತೆ ಉಲ್ಲೇಖವಿದೆ. (ಕವಿವಿಶಾಸಂ. ೭, ಮಾ. ೧೦೪)

ನಿಲವಂಜಿ ಗ್ರಾಮದ ಹನುಮಂತರಾಯ ಮಾಲಿ ಪಾಟೀಲರ ಹೊಲದಲ್ಲಿರುವ ಕ್ರಿ.ಶ. ೧೧೭೭ರ ಶಾಸನದಲ್ಲಿ ಚಾಳುಕ್ಯ ವಿಕ್ರಮನು ಕಲ್ಯಾಣಪುರದ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ, ಇವನ ಮಹಾಮಂಡಳೇಶ್ವರನಾಗಿ ಹಿರಿಯ ಮಲ್ಲರಸನಿರುತ್ತಾನೆ. ಇವನನ್ನು ಶಾಸನದಲ್ಲಿ ಗಂಗಾತೀರ ಪರಿಯಾತ್ರ ಮಾಹಿಷ್ಮತೀಪಾರವರಾಧೀಶ್ವರ ಸಹಸ್ರಬಹು ಪ್ರತಾತ, ಅಹಿಹಯವಂಶ, ಅತ್ಯುಗ್ರ ನರಸಿಂಹ ದರ್ಪಣ ಧ್ವಜ, ವಿರಾಜಮಾನ ಮುಂತಾದ ವಿಶೇಷಣಗಳಿಂದ ಕರೆಯಲಾಗಿದೆ. ಈ ಮಲ್ಲರಸನು ನಿಲವಂಜಿಗೆಯ ಮಲ್ಲಿಕಾರ್ಜುನ ದೇವರ ಅಂಗಭೋಗ ನೈವೇದ್ಯಕ್ಕೆ ಕುರಕುಂದೆ ಗಡಿಂಬದಲ್ಲಿ ೧೮ ಮತ್ತರ ಭೂಮಿಯನ್ನು ನೀಡಿದನು. ಮಹಾಮಂಡಳೇಶ್ವರ ಅಯ್ಯರಸನು ಸೂರ್ಯಗ್ರಹಣದ ದಿನ ಕರೆಕಂಠ ಪಂಡಿತನಿಗೆ ಕುರುಕುಂದೆ ಗಡಿಂಬದ ಕೊಲಲ್ಲಿ ೧೨ ಮತ್ತರ ಭೂಮಿ ನೀಡುತ್ತಾನೆ. (ಕವಿವಿಶಾಸಂ. ೭, ದೇ. ೨೯)

ಹಿರೇಕೊಟ್ನಕಲ್ಲು ಬನ್ನಿಕಟ್ಟೆಯ ಮೇಲಿನ ಶಾಸನ ಇದು ಕ್ರಿ.ಶ. ೧೧೯೧ರ ಚಾಳುಕ್ಯ ರಾಜ ಸೋಮೇಶ್ವರನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಮಂಡಳೇಶ್ವರನಾಗಿ ಮಾನುವೆಯ ಮೈಳುಗಿದೇವರಸನು ಇದ್ದ. ಇವನನ್ನು ಶಾಸನದಲ್ಲಿ ಮಾಹಿಷ್ಮತೀ ಪುರವರಾಧೀಶ್ವರ, ಹೈಹಯ, ಕುಳಸಂಭವ, ಅತ್ಯುಗ್ರ ನರಸಿರದರ್ಪಣ ಮೂಲಪರ್ಜಘೋಷಣ, ಮುಂತಾದ ವಿಶೇಷಣಗಳಿಂದ ಕರೆಯಲಾಗಿದೆ. ನಾನಾ ಅಗ್ನಿಹೋತ್ರ ದ್ವಿಜ ಗುರು ದೇವತಾ ಪೂಜಾತತ್ವರರೂ ಸಕಳಶಾಸ್ತ್ರ ವಿಶಾರದರೂ ಆದ ಸರ್ವನಮಸ್ಯದ ಅಗ್ರಹಾರ ಕೊಟ್ಟು ಕುಣುಹೆಯ ಅಶೇಷ ಮಹಾಜನರ ಸನ್ನಿಧಾನದಲ್ಲಿ ಚಿಕ್ಕ ತಿಪ್ಪಣ್ಣ ಭಟ್ಟೋಪಾಧ್ಯಾಯನ ಮೊಮ್ಮಗನಾದ ಬ್ರಹ್ಮದೇವನ ತನ್ನ ಆಸ್ತಿಯಲ್ಲಿ ಚಿಕನಬ ರವಿಯಣ್ಣನು ಗಂಗಾದೇವನಾಯಕನ ಮಕ್ಕಳು ಬಾಗಾಳಹಾಱ ಈಶ್ವರಣ್ಣನಿಂದ ಕ್ರಯಕ್ಕೆ ಪಡೆದು ಧರ್ಮತಕ್ಕೆ ಮತ್ತು ಸತ್ರಕ್ಕೆಂದು ಆ ಮಹಾಜನಗಳ ಪಾದಪೂಜೆ ಮಾಡಿ ದಾನ ನೀಡಿದ ಉಲ್ಲೇಖವಿದೆ. (ಕವಿವಿಶಾಸಂ. ೭, ಮಾ. ೧೭)

ಚಂದನಕೇರಿಯ ಹನುಮಂತ ದೇವಾಲಯದ ಸಮೀಪವಿರುವ ಕ್ರಿ.ಶ. ೧೨ನೇ ಶತಮಾನದ ಶಾಸನದಲ್ಲಿ ಮಂಡಳೇಶ್ವರ ಹೆಮ್ಮಡಿ ದೇವರಸನು ತಾನು ಪ್ರತಿಷ್ಠೆ ಮಾಡಿದ ಹೆಮ್ಮೇಶ್ವರ ದೇವರಿಗೆ ಊರಿನ ಉತ್ತರಕ್ಕೆ ೪೮ ಗೇಣ ಕೋಲಲ್ಲಿ ಅಳೆದು ಒಂದೂವರೆ ಮತ್ತರ ಭೂಮಿ ಬಿಡುತ್ತಾನೆ. ಗದ್ದೆ ೧೦೦ ಕಮ್ಮವಲ್ಲದ ಮಲ್ಲಿಕಾರ್ಜುನದೇವರ ಕರೆಯ ಪಶ್ಚಿಮಕ್ಕೆ ೧ ಮತ್ತರ ಹೊಲವನ್ನು ನಂದಾದೀವಿಗೆಗೆ ೧ ಗಾಣವನ್ನು ೧ ನಿವೇಶನವನ್ನು ನೀಡುತ್ತಾನೆ. ದೇವರ ಭಕ್ತನಾದ ಹಾಚಿ ದೇವರಸನ ಉಲ್ಲೇಖವಿದೆ. (ಕವಿವಿಶಾಸಂ. ೭, ದೇ.೪೧)

ಅಧ್ಯಾಯ ನಾಲ್ಕು

ಹೈಹಯರ ಕೊಡುಗೆ

ಅಧ್ಯಾಯ – ೪

ಹೈಹಯರ ಕೊಡುಗೆ

ರಾಯಚೂರು ಪ್ರದೇಶದ ಸಾಂಸ್ಕೃತಿಕ ಪರಂಪರೆ ಆರಂಭಗೊಂಡಿರುವುದು ಕ್ರಿಪೂ ೩೦೦೦ ವರ್ಷ ಹಿಂದಿನಿಂದ ಆ ಕಾಲದ ಸಂದರ್ಭದಲ್ಲಿ ರಾಯಚೂರು ಪ್ರದೇಶವು ಹಲವು ರಾಜಮನೆತನಗಳು ಮತ್ತು ಸಾಮಂತರ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಅಂದಿನ ಸಾಮಂತ ಅರಸರಾದ ಹೈಹಯರು ರಾಯಚೂರು ಪ್ರದೇಶಕ್ಕೆ ಕೊಟ್ಟ ಕೊಡುಗೆ ಬಹಳ ಮಹತ್ವದಾಗಿದೆ. ಏಕೆಂದರೆ ಸಣ್ಣ ಆಡಳಿತಗಾರರಾದ ಹೈಹಯರು ಚಾಲುಕ್ಯರ ಕಾಲದಲ್ಲಿ ವಲಸೆ ಬಂದವರು ಇವರ ಅಧೀನರಾಗಿ ಆಡಳಿತ ಪ್ರಾರಂಭಿಸಿ ಕರ್ನಾಟಕದ ಹಲವಾರು ಕಡೆ ಆಡಳಿತ ನಡೆಸಿದರು. ಅಂತೇಯೇ ಹೈಹಯರು ಅಯಾಯಾ ಸ್ಥಳಗಳ ಹೆಸರನ್ನು ಬಳಸಿ ಅವರನ್ನು ಮೊರಟದ ಹೈಹಯರು ಅಯ್ಯಣವಾಡಿಯ ಹೈಹಯರು ಮತ್ತು ಎಡೆದೊರೆ ನಾಡಿನ ಹೈಹಯರೆಂದು ಕರೆಯಲಾಗಿದೆ. ಅಧೀನವಾಗಿ ಆಡಳಿತ ನಡೆಸಿದ ಹೈಹಯರ ಕೊಡೆಗೆ ರಾಯಚೂರು ಪ್ರದೇಶಕ್ಕೆ ಅಪಾರವಾದುದು.

ಗಬ್ಬೂರು ಊರ ಹೊರಗೆ ಹಂಪಯ್ಯನ ಬಾವಿಯ ಬಳಿಯ ಕ್ರಿಶ ೨೧.೦೬.೧೦೮೪ರ ಶಾಸನವು ಚಾಳುಕ್ಯ ತ್ರಿಭುವನಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತನಾಗಿ ಚಂದ್ರರಸನಿರುತ್ತಾನೆ. ಇವನನ್ನು ಮಹಿಷ್ಮತೀಪುರವರೇಶ್ವರ ಪ್ರತಾಪ ಲಂಕೇಶ್ವರ, ಪ್ರಳಯ ಭೈರವ ಮುಂತಾದ ವಿಶೇಷಣಗಳಿಂದ ಹೊಗಳಲಾಗಿದೆ. ಇವನ ತಮ್ಮ ಕಣ್ವಲದೇವ ಈ ಅಣ್ಣ ತಮ್ಮಂದಿರಿಬ್ಬರೂ ಕೂಡಿ ಮಹಾ ಸಾಮಂತ ಬಸವದೇವ ಭಿನ್ನಪದಂತೆ ಧರ್ಮ ಕಾರ್ಯತತ್ಪರರಾಗಿ ಜಿನದೇವರ ಅರ್ಚನೆಗಾಗಿ ಗಬ್ಬೂರು ಮೂಲಿಗ ಮಹಾಜನರಿಗೆ ಬೆಳೆದರೆಯನ್ನು ದಾನ ಬಿಟ್ಟಂತೆ ಉಲ್ಲೇಖಿಸುತ್ತದೆ. (ಕವಿವಿಶಾಸಂ. ೭, ದೇ. ೨೫) ಸೂಗರೇಶ್ವರ ಬೆಟ್ಟದ ದಾರಿಯಲ್ಲಿ

ಬಿದ್ದಿರುವ ಕ್ರಿಶ ೧೬.೯.೧೦೪೮ರ ಮತ್ತೊಂದು ಶಾಸನವು ಚಾಳುಕ್ಯ ತ್ರಿಭುವನಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಮಂಡಳೇಶ್ವರನಾಗಿ ಜೋಯಿಮಯ್ಯರಸನಿರುತ್ತಾನೆ. ಇವನನ್ನು ಮದನಮಹೇಶ್ವರ, ಅಭಿನವಚಾರದತ್ತ ಉಭಯ ಬಳಚರಣಚಾರ್ಯ ಮುಂತಾದ ವಿಶೇಷಣಗಳಿಂದ ಕರೆಯಲಾಗಿದೆ. ಇವನು ಎಡೆದೊರೆ ಎರಡು ಸಾವಿರ ಕಲ್ಲಕಳಗೈನೂರು ಪ್ರಾಂತ್ಯಗಳನ್ನು ದುಷ್ಟನಿಗ್ರಹ ಶಿಷ್ಟಪಾಳನಾ ಮಾಡಿಕೊಂಡು ಆಳುತ್ತಿದ್ದ. ಮನೆವೆಗ್ಗಡೆ ಮತ್ತು ದಂಡನಾಯಕ ಕಲ್ಲಪ್ಪಯ್ಯನಾ ವಿನಂತಿಯ ಮೇರೆಗೆ ಗಬ್ಬೂರು ಕಲಿದೇವಸ್ವಾಮಿಯ ಪೂಜಾ ವಿಧಾನಕ್ಕೆ ದೇಗುಲದ ನವಕರ್ಮಕ್ಕೆಂದು ಮಹಾಮಂಡಳೇಶ್ವರ ಜೋಯಿಮರಸನು ಮುಗುಂದೂರು ೩೦೦ ಬಳಿಯ ಗ್ರಾಮದ ಹಳ್ಳಿ ಸಿಂತೆಯನ್ನು ಧರ್ಮವಾಗಿ ಬಿಟ್ಟನು. ಈ ಶಾಸನದಲ್ಲಿ ಚಂದರಸ, ಕಣಲದೇವ ಜಕ್ಕರಸರ ಉಲ್ಲೇಖವಿದೆ. (ಕವಿವಿಶಾಸಂ. ೭, ದೇ. ೨೬) ಗಬ್ಬೂರಿನ ಮೇಲ ಶಂಕರ ದೇವಾಲಯದ ಮುಂದೆ ನಿಲ್ಲಿಸಲಾಗಿರುವ ಕ್ರಿಶ ೧೭.೨.೧೦೮೫ರ ಶಾಸನದಲ್ಲಿ ಹಿರಿಯ ಅಗ್ರಹಾರವಾದ ಗಬ್ಬೂರಿನ ಮಹಾಜನಗಳ ವರ್ಣನೆಯಿದೆ. ಅವರನ್ನು ಗಬ್ಬೂರ ವಿಪ್ರಚೂಡಮಣಿಗಳೆಂದಿದೆ. ಈ ಗ್ರಾಮವು ಅಯಣ್ಯವಾಡಿ ನಾಡಿನಲ್ಲಿ ಪ್ರಸಿದ್ಧವಾದ ಗೋಪುರ ಗ್ರಾಮವೆಂದು ಪ್ರಸಿದ್ದಿ ಪಡೆದಿತ್ತು. ಈ ಊರಿನಲ್ಲಿ ಮೇಳಶ್ವರ ದೇವರು ನೆಲೆಸಿ ಗ್ರಾಮದ ಜನಗಳನ್ನು ತನ್ನ ಅನುಗ್ರಹಕ್ಕೆ ಪಾತ್ರರನ್ನಾಗಿಸಿಕೊಂಡಿದ್ದು ತಿಳಿದುಬರುತ್ತದೆ. ಆದರೆ ಇಲ್ಲಿ ಇದ್ದಂತಹ ಮಾಂಡಲಿಕನ ಹೆಸರು ತಿಳಿದುಬಂದಿಲ್ಲ. (ಕವಿವಿಶಾಸಂ.೭, ದೇ.೨) ಇದೇ ದೇವಾಲಯದ ಬಲಗಡೆಯಲ್ಲಿರುವ ಕಲ್ಲಿನ ಮೇಲೆ ಇರುವ ಕ್ರಿ.ಶ. ೧೯.೯.೧೦೮೮ರ ಶಾಸನದಲ್ಲಿ ಹಿರಿಯ ಗಬ್ಬೂರಿನ ಮುಂಮರಿದಂಡ ಸಾಸ್ವಿರರು ಅಯ್ಯಾವೊಳೆ ಅಯಿನೂರ್ವ್ವರು ಮುಂತಾದ ವ್ಯಾಪಾರಿಗಳು ಮಹಾಲಿಂಗ ಮೇಳೇಶ್ವರ ದೇವರಿಗೆ ಭತ್ತವನ್ನು ದಾನ ಮಾಡಿದ ವಿಷಯದ ವಿಸ್ತಾರವಾದ ವರ್ಣನೆಯಿದೆ. (ಕವಿವಿಶಾಸಂ. ೭, ದೇ.೩)

ದದ್ದಲ ಊರ ಹೊರಗೆ ನಿಲ್ಲಿಸಿದ ಕಲ್ಲಿನ ಮೇಲೆ ಕ್ರಿಶ ೨೪-೧೨-೧೦೬೯ ರ ಶಾಸನದಲ್ಲಿ ಚಾಳುಕ್ಯರಾಜ ಭುವನೈಕಮಲ್ಲನು ಆಳುತ್ತಿದ್ದಾಗ ಜಟಾಚೋಳ ಮಹಾಮಂಡಳೇಶ್ವರನಾಗಿದ್ದ. ಇವನನ್ನು ಶಾಸನದಲ್ಲಿ ಕಾಸ್ಯಪಗೋತ್ರ, ಕಾವೇರಿವಲ್ಲಭ ಕಂಬಲ್ಪರೆಘೋಷಣ, ಮಯೂರು ಪಿಂಛಧ್ವಜ ಒರೆಯೂರು ಪುರುವರೇಶ್ವರ ಮುಂತಾಗಿ ಕರೆದಿದೆ. ಇವನ ಸಾಮಂತನಾಗಿ ಮಾಹಿಷ್ಮತೀ ಪುರವರೇಶ್ವರ, ಸಹಸ್ರಬಾಹುಪ್ರತಾಪ, ಹಯಾರೂಢರೇವನ್ತ ಮಂಗಿಯ ಮರುಳ, ಮುಂತಾದ ವಿಶೇಷಣಗಳನ್ನು ಧರಿಸಿದ ಮಳೆಯರಸನು ಆಳುತ್ತಿದ್ದಾಗ, ಈ ಮಳೆಯರಸನು ಉತ್ತರಾಯಣ ಸಂಕ್ರಮಣ ನಿಮಿತ್ತವಾಗಿ ಉತ್ತಮಮನ್ತಕೊಲದ ಮಾಕಿಸೆಟ್ಟಿಯು ಪೊನ್ನಪಾಳಿನಲ್ಲಿ ಗಿರಿಗೋಟೆಮಲ್ಲ ಎಂಬ ಹೆಸರಿನ ಜನಾಲಯವನ್ನು ಕಟ್ಟಿಸುತ್ತಾನೆ. ಇದಕ್ಕೆ ಪೊನ್ನಪಾಳಿನ ಪಶ್ಚಿಮಕ್ಕೆ ನಿಗರ ಮತ್ತರ ೨೪ನ್ನೂ ಒಂದು ಮತ್ತರ, ಹೂದೋಟವನ್ನು ೧ ಗಾಣ, ೫

ಮನೆಯ ನಿವೇಶನಗಳನ್ನು ದಾನ ನೀಡಿದಂತೆ ಶಾಸನದಲ್ಲಿ ತಿಳಿಸಲಾಗಿದೆ. (ಕವಿವಿಶಾಸಂ. ೭ ಮಾ. ೨೨)

ಚಂದನಕೇರಿ ಸೋಮಶೇಖರಪ್ಪನವರ ತೋಟದ ಬಾವಿನ ಬಳಿ ಇರುವ ಶಾಸನ. ಈ ಶಾಸನದ ಮೊದಲ ಭಾಗ ಹಾಳಾಗಿದೆ. ಅದರ ಅಂತ ಭಾಗವು ಇಲ್ಲ. ಹೀಗಾಗಿ ಶಾಸನದ ವಿವರಗಳ ಕೊರತೆ ಇದೆ. ಶಾಸನದ ಆರಂಭದಲ್ಲಿ ಚಾಳುಕ್ಯರಾಜನ ಪ್ರಶಸ್ತಿ ಇದೆ. ರಾಜನ ಹೆಸರಿನ ಉಲ್ಲೇಖವಿರುವ ಭಾಗ ಹಾಳಾಗಿದೆ. ಶಾಸನ ಮುಂದುವರಿದು, ಮಾಹಿಷ್ಮತಿಪುವರಾಧೀಶ್ವರ. ಅಹಿಹಯವಂಶೋದ್ಭವ, ಅತ್ಯುಗ್ರ ನರಸಿರದರ್ಪಣ ಧ್ವಜ, ವಿರಾಜಮಾನ, ರತ್ನಭೂಶಣಂ ಸಮರ ಪ್ರಚಂಡ ಮೂರುಲೋಕದ ಗಂಡ, ಪ್ರೌಢರೇಖಾ, ರೇವಂತ ಸತ್ಯಾರಾಧಯ, ಶೌಚಗಾಂಗೇಯ, ಅಭಿನವ ಕ್ರಿಷ್ಣರಾಜ ಮುಂತಾದ ಬಿರುದುಗಳನ್ನು ಒಳಗೊಂಡ ವ್ಯಕ್ತಿಯನ್ನು ಹೊಗಳಲಾಗಿದೆ. ಶಾಸನದಲ್ಲಿ ವ್ಯಕ್ತಿಯ ಹೆಸರು ಇರುವ ಮುಂದಿನ ಭಾಗ ಒಡೆದಿದೆ. (ಕವಿವಿಶಾಸಂ. ೭ ದೇ.೪೩)

ಬಲ್ಲಟಗಿ ಗ್ರಾಮದ ದೇಸಾಯಿಯವರ ತೋಟದಲ್ಲಿರುವ ಕಲ್ಲಿನ ಮೇಲೆ ಕ್ರಿಶ ೨೩-೬-೧೧೯೧ ರ ಶಾಸನದಲ್ಲಿ ಚಾಳುಕ್ಯ ದೊರೆ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಲ್ಲಿ ಚಕ್ರವರ್ತಿಯ ರಾಣಿ ಚಂದಲದೇವಿಯು ಬಲ್ಲಟ ಗ್ರಾಮದ ಕಲಿದೇವರಿಗೆ ಅಂಗಭೋಗ, ಖಣ್ಡಸ್ಫುಟಿತ ಮೊದಲಾದ ಕಾರ್ಯಗಳಿಗೆ ೧೨ ಮತ್ತರ ಭೂಮಿ, ಹೂವಿನ ತೋಟ ಗಾಣವನ್ನು ದಾನವಾಗಿ ಮಾಡಿದ್ದಾಳೆ. ಈ ಚಂದಲದೇವಿ ಶ್ರೀಮತ್ರಿಭೂವನಮಲ್ಲದೇವರ ವಿಜಯರಾಜ್ಯ ಮುತ್ತರೋತ್ತರ ಪರಮ ಕಲ್ಯಾಣಾಭ್ಯುದಯ ಸಹಸ್ರಫಳ ಭೋಗಭಾಗಿನಿ ದ್ವಿತೀಯಲಕ್ಷ್ಮೀ ಸಮಾನಳಾದ ಕಳ ಹಂಸಯಾನೆ ಶೃಂಗಾರ ವಿದ್ಯಾಧರ ಸಕಳಕಳಾಧರಿ ಕಸ್ತೂರಿ ಕಾಮೋದೆ ನೋದೆ ಶ್ರೀಮತ್ರಿಭುವನಮಲ್ಲ ವಂಶದ ನಿಯರಪ್ಪ ಮಗಳೆ ಚಂದಲದೇವಿ.

ಬಲ್ಲಟದ ಕ್ರಿ.ಶ. ೨೩-೬-೧೧೯೧ ರ ಶಾಸನದಲ್ಲಿ ಚಾಳುಕ್ಯ ದೊರೆ ವಿಕ್ರಮಾದಿತ್ಯನ ಕಾಲದಲ್ಲಿ ಅವನ ಸಾಮಂತನಾಗಿ ಘಟ್ಟಿದೇವರಸನಿದ್ದು, ಇವನು ಚಾಳುಕ್ಯ ವಿಕ್ರಮ ಚಕ್ರವರ್ತಿ ರಕ್ಕಸಗಂಗದೇವ ವರ್ಷದ ೨ ನೇಯ ಪ್ರಜಾಪತಿ ಶುದ್ಧ ೧೧ ಮಂಗಳವಾರದಂದು ದಕ್ಷಿಣಾಯನ ಸಂಕ್ರಮಣ ನಿಮಿತ್ತವಾಗಿ ಶ್ರೀಮತ್ ಕಲಿದೇವರ ನೈವೇದ್ಯ ಖಣ್ಡಸ್ಫಟತಂ. ಜೀರ್ಣೋ ದ್ಧಾರ, ಕಲೇಶ್ವರ ದೇವರ ಕೆಯ್ಯಿಂ ಮೂಡ ಸರ್ವ್ವಬಾದಾ ಪರಿಹಾರವಾಗಿ ಕೊಟ್ಟರೆಯ ನೆಲ ಮುತ್ತರ್ಪನ್ನೆರಡು ಕರಿಯ ನೆಲವನ್ನು ದಾನವಾಗಿ ಕೊಡಲಾಗಿದೆ. ಈ ಘಟ್ಟಿದೇವರಸನನ್ನು ಅಹಿಹಯ ವಂಶೋದ್ಯವ ಮಾಲೆಪರೆಘೋಷಣ ನರಸಿರದರ್ಪಣ ಮಾಹಿಷ್ಮತೀಪುರವರೇಶ್ವರ ಸಹಸ್ರಬಾಹು ಪ್ರತಾಪ ಭೂಪದೀಳಿಪನತ್ಯುಗ್ರ ನೃಪರತ್ನ ಭೂಷಣನ ಅಹಿಹಯ ವಂಶದ ರಾಜನಾದ ಘಟ್ಟಿದೇವರಸು ಶ್ರೀ ಮಲ್ಲಿಕಾರ್ಜುನ ದೇವರಿಗೆ (ಕಲಿ ದೇವರಿಗೆ) ೧೨ ಮತ್ತರು

ಎರೆ ಭೂಮಿಯನ್ನು ದಾನವಾಗಿ ಕೊಟ್ಟನು. ಘಟ್ಟಿದೇವರಸ, ಸ್ವದತ್ತಂ ಪರದತ್ತಂ ವಾಯೋಹರೇತಿ ವಸುಂಧರಾ ಷಷ್ಟಿ ವರ್ಷ ಸಹಸ್ರಾಣಿ ವಿಷ್ಟಯಾಂ. ಜಾಯತೇ ಕ್ರಿಮಿ ಮೂಲಸ್ಥಾನ ದೇವರ ಮುಂದಣಾದಿತ್ಯ-ದೇವರ್ಗ್ಗೆ ದೇವರ ಕೈಯಿಂ ಮಾಡಲು ಬಿಟ್ಟ ಕರಿಯ ನೆಲಂ ಮತ್ತಾರಾರು ಕೊಡುತ್ತಾನೆ. ಕ್ರಿಶ ೨೩-೬-೧೧೯೧ರ ಶಾಸನದಲ್ಲಿ ಚಾಳುಕ್ಯ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಲ್ಲಿ ಅಂದಿನ ಚಕ್ರವರ್ತಿ ರಾಣಿ ಚಂದಲದೇವಿ ವರ್ಷದ ೪೦ನೆಯ ಮನ್ಮಥ ಸಂವತ್ಸರದ ಪುಷ್ಯಶುದ್ಧ ೧ ವಡ್ಡವಾದರಂದುತ್ತರಾಯಣ. ಸಂಕ್ರಾಂತಿಯ ನಿಮಿತ್ತವಾಗಿ ಶ್ರೀ ಕಲ್ಲಿದೇವರ ನೈವೇದ್ಯ ವಂಗ ಭೋಗಕ್ಕೆಂ ಖಣ್ಡಸ್ಪುಟಿತ ಜೀರ್ಣೋದ್ಧಾರಕ್ಕೆ ಮಾನುವೆಯ ಬಟ್ಟೆಯಿಂ ಬಡಗ ದೆಸೆಯ ಧೋರಪರೇಶ್ವ ದೇವರ ಸರ್ವ್ವಬಾದಾ ಪರಿಹಾರವಾಗಿ ಬಿಟ್ಟ ಕರಿಯ ನೆಲ ೧೨ ಮತ್ತರ್, ಹೂವಿನ ತೋಟಕ್ಕೆ ಮತ್ತರ ೧, ನಂದಾದೀವಿಗೆಗೆ ಗಾಣ-೧ ಪೂಜರಿಗೆ ನಿವೇಶನ ಒಂದು ದಾನವಾಗಿ ಮಾಡಿದ್ದಾಳೆ. (ಕವಿವಿಶಾಸಂ. ೭, ಮಾ.೯೬)

ಬಲ್ಲಟಗಿ ಗಿರಿಜವ್ವನ ಗದ್ದುಗೆಯಲ್ಲಿರುವ ಕಲ್ಲಿನ ಮೇಲೆ ಕ್ರಿಶ. ೧೧ನೇ ಶಾಸನದಲ್ಲಿ ಚಾಲುಕ್ಯ ಜಗದೇಕಮಲ್ಲನ ಅಳ್ವಿಕೆಯ ಕಾಲದಲ್ಲಿ ಈತನ ಸಾಮಂತನಾದ ಹೈಹಯ ವಂಶದರಾಜ ಲೋಕರಸನಿದ್ದು, ಈತನನ್ನು ಅಹಿಹಯ ವಂಶೋದ್ಭವ ಮಾಲೆಪರೆ ಘೋಷಣ ವೈರೀಭಸಿಂಗಂ ಮುಂತಾದ ವಿಶೇಷಣಗಳಿಂದ ಕರೆಯಲಾಗಿದ್ದು. ಈ ಲೋಕರಸನು ಸೂತ್ರಧಾರಿ ನೇಮೋಜನಿಗೆ ಮೊರಟದಲ್ಲಿ ಕರಿಯ ನೆಲವನ್ನು ದಾನವಾಗಿ ಕೊಟ್ಟಿದ್ದನ್ನು ತಿಳಿಸಲಾಗಿದೆ. (ಕವಿಶಾಸಂ ೭ ಮಾ.೯೩)

ಮಲ್ಲಟ ಗ್ರಾಮದ ಹೊರೆಗೆ ಹೊಲದಲ್ಲಿರುವ ಕಲ್ಲಿನ ಮೇಲೆ ಕ್ರಿಶ ೨೫-೧೨-೧೧೪೮ ಶಾಸನದಲ್ಲಿ ಜಗದೇಕಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತನಾಗಿ ಘಟ್ಟಿದೇವರಸನಿದ್ದು, ಈತನನ್ನು ಶಾಸನದಲ್ಲಿ ಅಹಿಹಯ ವಂಶೋದ್ಭವ ಮಾಲೆಪರೆಘೋಷಣ, ಮೂರುಲೋಕದ ಗಂಡ, ಮಾಲ್ಕು ಭಾಷೆಯ ಜಗಬಿರುದು, ಮಂಡಳೀಕರಗಂಡ, ಮಲ್ಲಿಕಾರ್ಜುನ ದೇವರ ಪಾದಾರಾಧಕ ಮುಂತಾದ ಬಿರುದುಗಳಿಂದ ಪ್ರಶಂಸಿಸಿದೆ. ಈ ಘಟ್ಟಿದೇವರಸನು ಮೊರಟದಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ ಅಲ್ಲಿನ ಮಲ್ಲಿಕಾರ್ಜುನ ದೇವರಿಗೆ ಅಂಗಭೋಗ, ನೈವೇದ್ಯ ಪಾತ್ರ ತಪೋಧನರ ಆಹಾರ ದಾನಕ್ಕೆಂದು ಬಮ್ಮರಾಸಿ ಪಂಡಿತನನ್ನು ಭಿನ್ನವಿಸಿ ಮಾಡಗಿರಿಯ ಬಳಿ ಮಾರುವ ಭತ್ತಕ್ಕೆ ಸುಂಕವನ್ನು ನಿಗದಿಪಡಿಸಿ ದೇವಾಲಯಕ್ಕೆ ಬೇಡುತ್ತಾನೆ. ಅಲ್ಲದೆ ಎರದಹಳ್ಳಿಯ ಉತ್ತರಕ್ಕೆ, ಪಿಟ್ಟಿಗನ ಹಳ್ಳದ ಎರಡು ಕಡೆ ಕುರುಕುಂದೆಯ ಗಂಡಿಬ ಕೊಲದಲ್ಲಿ ಆರು ಮತ್ತರು ಭೂಮಿಯನ್ನು ದೇವರ ಹಡಪಕ್ಕೆ ಹೇರಿಗೆ ಐವತ್ತು ಎಲೆ ಬಿಡುವಂತೆ ಕಟ್ಟಳೆ ಮಾಡಿದಂತೆ ಶಾಸನದಲ್ಲಿ ಉಲ್ಲೇಖವಿದೆ. (ಕವಿವಿಶಾಸಂ. ೭, ಮಾ.೧೦೩)

ಕಲ್ಲೂರು ಮಾರಟೇಶ್ವರ ಗುಡಿಯ ಒಳಗಿನ ಗೋಡಯ ಮೇಲೆ ಕ್ರಿಶ ೧೯-೩-೧೧೫೧ರ ಶಾಸನದಲ್ಲಿ ಅಯ್ಯಣವಾಡಿಯ ಹೆಗ್ಗಡೆ ಮತ್ತು ದಂಡನಯಕನಾದ ಸುರಿಗೆವೆಣ್ಣಮರಸ ಮತ್ತು ಮಹಾಮಂಡಳೇಶ್ವರನಾದ ಬೂಚಿದೇವರಸರು ಸೇರಿಬಿಟ್ಟ ಧರ್ಮ, ಏನೆಂದರೆ ಬೂಚಿದೇವನ ಹೆಗ್ಗಡೆ ಮಲ್ಲಿದೇವರ ಸಮತ್ತುಕೊಪ್ಪರಸರು ತಮಗೆ ಸಲ್ಲುವ ಹೆಜ್ಜುಂಕ, ಬಿಲ್ಕೊಡೆ ಪನ್ನಾಯ, ವಡ್ಡರಾವುಳ ಮುಂತಾದ ತೆರಿಗೆಗಳಿಂದ ಬರುವ ಹಣದಲ್ಲಿ ಹೊಂಗೆಗೆ ಹಾಗವನ್ನು ಕಲ್ಲೂರಿನ ಮಾರಟೇಶ್ವರದೇವರ ಅಂಗಭೋಗಕ್ಕೆ, ನಂದಾದೀವಿಗೆ ಬಿಟ್ಟರು. ಈ ಧರ್ಮವನ್ನು ಮಹಾಜನಗಳು ಊರಿನ ಒಡೆಯರು ಸಕಲ ಭಕ್ತರು ಪಾಲಿಸಬೇಕೆಂದು ಶಾಸನದಲ್ಲಿ ತಿಳಿಸಲಾಗಿದೆ. ಈ ಶಾಸನದಲ್ಲಿ ಆರನೆಯ ವಿಕ್ರಮಾದಿತ್ಯನನ್ನು ರಕ್ಕಸಗಂಗಿದೇವನೆಂದು ಕರೆಯಲಾಗಿದೆ. (ಕವಿವಿಶಾಸಂ. ೭, ಮಾ.೬೮)

ಬಾಗಲವಾಡದ ಬಂಗಾರರದ ಬಸವಣ್ಣನ ಹೊಲದಲ್ಲಿನ ಕ್ರಿಶ ೧೨-೧೨-೧೯೬ರ ಶಾಸನವು ಚಾಳುಕ್ಯ ವಿಕ್ರಮಾದಿತ್ಯನ ಕಾಲದಲ್ಲಿ ಅವನ ಸಾಮಂತನಾಗಿದ್ದ ಅಹಿಹಯ ವಂಶೋದ್ಭವನಾದ ಅಯ್ಯಣ ಎಂಬುವವನು ಬಮ್ಮಳಹಾಳ ಗ್ರಾಮದ ಪ್ರಭು-ಗಾಮುಂಡರಿಗೆ ಕೆಲವು ತೆರಿಗೆಗಳನ್ನು ನೀಡಿ ೭೫ ಮತ್ತರು ಭೂಮಿಯನ್ನು ನೀಡಿರುತ್ತಾನೆ. ಈ ಶಾಸನದಲ್ಲಿ ತ್ರಿಭುವನಮಲ್ಲನ ರಾಣಿ ಮಲಮತಿಯನ್ನು ಹೆಸರಿಸಿ ಆಕೆಯನ್ನು ತನ್ನ ಪಿರಿಯರಸಿ ಎಂದು ಕರೆದಿರುವಂತೆ ತೋರುತ್ತದೆ. (ಕವಿವಿಶಾಸಂ. ೭, ಮಾ. ೧೦೪) ಗಬ್ಬೂರಿನ ಬಸದಿಯಲ್ಲಿರುವ ಕ್ರಿಶ ೧೧೯ರ ಶಾಸನದಲ್ಲಿ ತ್ರಿಭುವನಮಲ್ಲನು ಜಯಂತೀಪುರದ ನೆಲೆವೀಡಿನಲ್ಲಿದ್ದಾಗಿ ಅಗ್ರಹಾರ ಹಿರಿಯ ಗಬ್ಬೂರು ನಖರಗಳು ಕಮ್ಮಟದ ಅಧಿಕಾರಿಗಳು, ಕಮ್ಮಟಕಾರರು ಊರಲ್ಲಿಯ ಬ್ರಹ್ಮ ಜೀನಾಲಯಕ್ಕೆ ತಾವು ಮಾರಿದ ವಸ್ತುಗಳ ಮೇಲೆ ತೆರಿಗೆಯನ್ನು ಬಿಟ್ಟ ಉಲ್ಲೇಖವಿದೆ. (ಕವಿವಿಶಾಸಂ. ೭, ದೇ.೧೭).

ರಾಯಚೂರು ಅಗಸಿಯ ಹನುಮಂತ ದೇವಾಲಯ ಆಭರಣದಲ್ಲಿರುವ ಕ್ರಿಶ ೨೪.೧೨.೧೧೧೮ರ ಶಾಸನವು ತ್ರಿಭುವನಮಲ್ಲನ ಆಳ್ವಿಕೆಯಲ್ಲಿ ಗಬ್ಬೂರಿನ ಜನ್ನಯ್ಯಭಟ್ಟ ಸೋಮಾಯಾಜಿ ತನ್ನ ಪಾಲಿನ ವೃತ್ತಿಯ ಬೆಟ್ಟ ಬಾಗಿನವೆಂಬ ಸ್ಥಳದಲ್ಲಿ ಮಾಣಿಕೇಶ್ವರದ ಕೊಲಲ್ಲಿ ೫ ಮತ್ತರ ಭೂಮಿಯನ್ನು ಕರಿಯ ಮಸಣ್ಣ ಭಟ್ಟೋಪಾಧ್ಯಾಯ ಕಲ್ಲಯ್ಯನು ದಾನ ಮಾಡಿದುದ್ದನ್ನು ಶಾಸನದಲ್ಲಿ ಹೇಳಲಾಗಿದೆ. ಶಾಸನ ಮುಂದುವರಿದು ಮುಸ್ಯಣಭಟ್ಟ ಅವನ ಪತ್ನಿ ನಾಲಿಕಬ್ಬೆಯರು ಮಹಾದೇವರ ಪೂಜಾ ಕಾರ್ಯಗಳಿಗೆ ಭೂದಾನ ನೀಡಿರುವಂತೆ ಉಲ್ಲೇಖಿಸುತ್ತದೆ. (ಕವಿವಿಶಾಸಂ. ೭, ದೇ.೧) ಭೋಗೇಶ್ವರ ದೇವಾಲಯದ ಗೋಡೆಗೆ ಸೇರಿಸಿರುವ ಕ್ರಿ.ಶ. ೨೨.೬.೧೧೨೬ರ ಶಾಸನದಲ್ಲಿ ಹರಿದೇವನ ಮಗನಾದ ಮಾಧವ ಸೋಮಾಯಾಜಿಯು ಗೋಪುರ ನಗರದಲ್ಲಿ ಕೇಶವ ದೇವಾಲಯವನ್ನು ನಿರ್ಮಿಸಿದ ಚಾಳುಕ್ಯ ತ್ರಿಭುವನಮಲ್ಲದೇವನು

ಜಯಂತಿಪುರದ ನೆಲೆವೀಡಿನಲ್ಲಿದ್ದಾಗಿ ಸೂರ್ಯಗ್ರಹಣ ನಿಮಿತ್ತವಾಗಿ ಆದಿತ್ಯಭಟ್ಟ ಸೋಮಯಾಜಿಯು ತಾನು ಮಾಡಿಸಿದ ಕೇಶವ, ಹರಿಹರ, ಗಣಪತಿ, ಸರಸ್ವತಿ ಸೂರ್ಯ ಮುಂತಾದ ದೇವರ ಪೂಜೆಗಾಗಿ ಭೂದಾನ ನೀಡಿರುತ್ತಾನೆ (ಕವಿವಿಶಾಸಂ. ೭, ದೇ.೧೮).

ಹಿರೇರಾಯಕುಂಪಿ ಈಶ್ವರ ದೇವಾಲಯ ಎದುರು ಇರುವ ಕ್ರಿಶ ೨೫-೧೨-೧೧೩೦ರ ಶಾಸನದಲ್ಲಿ ಭೂಲೋಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಾಂತನಾಗಿ ವೀರ ಪೆರ್ಮಾಡಿ ದೇವನಿರುತ್ತಾನೆ. ಇವನನ್ನು ಶಾಸನದಲ್ಲಿ ಅಹಿಹಯ (ಐಹಯ) ವಂಶದವನೆಂದೂ ಮಾಲಪರೆಘೋಷಣೆ ಅತ್ಯುಗ್ರನರಶಿರೋದರ್ಪಣ ಧ್ವಜ ವಿರಾಜಮಾನ್ಯ ಅಣ್ಣಲದೇವನ ಸೇವಕನಾದ ಪೇರ್ಮಾಡಿದೇವನು ಅಯಣ್ಣವಾಡಿ ನಾಡನ್ನು ಆಳುತ್ತಿದ್ದಾಗ ಮುದ್ಗನೂರಿನ ಬಳಿಯ ರಾಕುರ್ಪ್ಪೆಯಲ್ಲಿ ಜಿಯರಾಮ ಎಂಬುವನು ಮಾಡಿಸಿದ ದೇವಾಲಯದ ಅಂಗಭೋಗ ಜೀರ್ಣೋದ್ಧಾರ ಮುಂತಾದ ಕಾರ್ಯಗಳಿಗಳಿಗಾಗಿ ಧರಣಿದೇವನ ಕೋಲಿನಲ್ಲಿ ೪೦ ಮತ್ತರು ಹೊಲ, ತೋಟ ಮುಂತಾದವನ್ನು ನೀಡುತ್ತಾನೆ. ಶಾಸನ ಮುಂದುವರಿದು ಮಂತ್ರಿಯಾದ ದೇವರಾಜನು ಅನೇಕ ಕೆರೆ, ದೇವಾಲಯಗಳನ್ನು ಕಟ್ಟಿಸಿದಂತೆ ಶಾಸನ ತಿಳಿಸುತ್ತದೆ. (ಕವಿವಿಶಾಸಂ. ೭, ದೇ. ೨೭) ಇವನ ಆಳ್ವಿಕೆಯ ಇನ್ನೊಂದು ಶಾಸನವು ಗಬ್ಬೂರಿನ ಬಾಲಾಂಜನೇಯ ದೇವಾಲಯ ಗರುಡ ಗಂಬದ ಬಳಿ ಇರುವ ಶಾಸನದಲ್ಲಿದೆ. ಇದರಲ್ಲಿ ಚಾಳುಕ್ಯರ ಬಿರುದುಗಳಿದ್ದು, ಸರ್ವಜ್ಞ ಚಕ್ರವರ್ತಿ ಎಂಬ ಬಿರುದು ಇರುವುದರಿಂದ ಇದು ಭೂಲೋಕಮಲ್ಲನ ಆಳ್ವಿಕೆಗೆ ಸೇರಿರಬಹುದಾಗಿದೆ. (ಕವಿವಿಶಾಸಂ. ೭, ದೇ.೨೫).

ಕಲ್ಲೂರು ಮಾರುಟೇಶ್ವರ ದೇವಾಲಯದ ಎಡಭಾಗದಗೋಡೆಯ ಮೇಲಿನ ಕ್ರಿಶ ೨೮.೧೧.೧೧೩೪ರ ಶಾಸನದಲ್ಲಿ ಚಾಳುಕ್ಯ ಚಕ್ರವರ್ತಿ ಭೂಲೋಕಮಲ್ಲ (ಮೂರನೆಯ ಸೋಮೇಶ್ವರನು) ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಾಂಡಳಿಕ ಸಾಮಂತನಾದ ಬೂಚಿದೇವರಸನಿದ್ದು, ಇವನು ಮುದುಗುಂದೂರು ೩೦೦ನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಮುದುಗುಂದೂರಿನಿಂದ ಆಳುತ್ತಿದ್ದನು. ಇವನನ್ನು ಶಾಸನದಲ್ಲಿ ಮಾಹಿಷ್ಮತೀಪುವರಾಧೀಶ್ವರ ಅಹಿಹಯ ವಂಶೋದ್ಭವ ಅತ್ಯುಗ್ರ ನರಶಿರೋದರ್ಪಣಧ್ವಜ ಮಲೆಪರೆಘೋಷಣ, ಬಂಟರಭಾವ, ಕೇಶವದೇವರ ಪಾದಾಜ್ಜಭೃಂಗ ಮುಂತಾದ ವಿಶೇಷಣಗಳಿಂದ ಕರೆಯಲಾಗಿದ್ದು ಈ ಬೂಚಿದೇವನು ಸರ್ವನಮಸ್ಯದಗ್ರಹಾರ ಕಲ್ಲೂರಿನಲ್ಲಿ ಮಹಾಜನರ ಸನ್ನಿಧಿಯಲ್ಲಿ ಸ್ವಯಂಭು ಮಾರಟೇಶ್ವರ ದೇವರಿಗೆ ವಿಕ್ರಮಾದಿತ್ಯ ಭಟ್ಟಯ್ಯನಿಗೆ ನೀಡಿದ ಹೊಲದಿಂದ ಗಬ್ಬೂರು ದಾರಿಯ ಪಶ್ಚಿಮಕ್ಕೆ ದಶವಂದದ ಭೂಮಿಯಲ್ಲಿ ೧೨ ಮತ್ತರು ಭೂಮಿಯನ್ನು ಹಿರಿಯ ಕೋಲಲ್ಲಿ ಅಳೆದು ನೀಡುತ್ತಾನೆ. ಶಾಸನದ ಮುಂದಿನ ಭಾಗದಲ್ಲಿ ಹೆಗಡೆ ಚವುಡನು ಮಾರಟೇಶ್ವರ ದೇವರ ಹಡಪಕ್ಕೆ ಒಂದು ಮತ್ತರ ಹೊಲವನ್ನು ನೀಡಿದ ಉಲ್ಲೇಖವಿದೆ. (ಕವಿವಿಶಾಸಂ.೭, ಮಾ. ೬೭)

ನಿಲವಂಜಿ ಹನುಮಂತರಾಯ ಮಾಲಿಪಾಟೀಲರ ಹೊಲದಲ್ಲಿ ಬಸವನಕಟ್ಟೆಯ ಹಿಂದೆ ಕ್ರಿ.ಶ ೫-೫-೧೧೭೭ರ ಶಾಸನದಲ್ಲಿ ಚಾಳುಕ್ಯ ವಿಕ್ರಮನು ಕಲ್ಯಾಣಪುರದ ನೆಲೆವಿಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಮಂಡಳೇಶ್ವರನಾಗಿ ಹಿರಿಯ ಮಲ್ಲರಸನಿರುತ್ತಾನೆ. ಅವನನ್ನು ಶಾಸನದಲ್ಲಿ ಗಂಗಾತೀರ, ಪಾರಿಯಾತ್ರ, ತನುಮಧ್ಯದೇಶಾಧೀಶ್ವರ, ಮಾಹಿಷ್ಮತೀ ಪುರವರಾಧೀಶ್ವರ, ಸಹಸ್ರಬಾಹು ಪ್ರತಾಪ, ಅಹಿಹಯ ಅತ್ಯುಗ್ಯ ನರಸಿರದರ್ಪಣ ಮಲೆಪರೆಘೋಷಣ ಸಮರ ಪ್ರಪಂಚ ಮೂರುಲೋಕದ ಗಂಡ, ವಿರಾಜಮಾನ, ನಾಲ್ಕು ಭಾಷೆಯ ಪಂಡಿತ ಮುಂತಾದ ಬಿರುದುಗಳನ್ನು ಪಡೆದುಕೊಂಡಿದ್ದನು. ಮಲ್ಲರಸನಿಗೆ ಮಲ್ಲಿಕಾರ್ಜುನದೇವ ಪಾದಾರಾಧಕ ಎಂದು ಸಹ ಕರೆಯಲಾಗಿದೆ. ಈ ಹಿರಿಯ ಮಲ್ಲರಸನು ನಿಲವಂಜಿಗೆಯ ಮಲ್ಲಿಕಾರ್ಜುನ ದೇವರಿಗೆ ಅಂಗಭೋಗ ನೈವೇದ್ಯ ತಪೋಧರನ್ನದಾನ ಮುಂತಾದವು ಅಲ್ಲಿಯ ಸ್ಥಾನಾಧಿಪತಿಯಾದ ಚಂದ್ರಶೇಖರ ಪಂಡಿತನ ಕಾಲನ್ನು ತೊಳೆದು ಕುರುಕುಂದೆ ಗಡಿಂಬದಲ್ಲಿ ೧೮ ಮತ್ತರ ಭೂಮಿಯನ್ನು ನೀಡುತ್ತಾನೆ.

ಇದೇ ಗ್ರಾಮದ ಇದೇ ಶಾಸನದಲ್ಲಿ ಚಾಳುಕ್ಯ ವಿಕ್ರಮಾದಿತ್ಯನ ಕಾಲದಲ್ಲಿ ಹಾಚಿದೇವ ಎಂಬ ಅರಸನಿದ್ದು, ಇತನು ಕಳಚುರ್ಯ್ಯ ಸಂಕಮ ದೇವನ ಮೇಲೆ ಉಲ್ಲೇಖಿತಕಾಲದಲ್ಲಿ ಶಿಲಾಶಾಸನ ಬರೆಯಿಸಿ ಅದರ ಪುನರ್ದ್ಧಾರೆಯಾಗಿ ಮಲ್ಲಿಕಾರ್ಜುನ ದೇವರಿಗೆ ನೀಡಿದ ಈ ಶಾಸನವನ್ನು ಹಾಚಿದೇವರಸನು ಆಜ್ಞೆಯಂತೆ ಶ್ರೀಕರಣ ವೆರ್ಗ್ಗಡೆ ಬರೆಸಿದ.

ಕ್ರಿ.ಶ. ೫-೫-೧೧೭೭ರ ಶಾಸನದಲ್ಲಿ ಚಾಳುಕ್ಯ ವಿಕ್ರಮಾದಿತ್ಯನ ಕಾಲದಲ್ಲಿ ಅಯ್ವರಸನು ಸಂಕರದೇವರಿಗೆ ಎರಡು ಮತ್ತರ ಹೂದೋಟಕ್ಕೆಂದು ಕಂಮ್ಮ ೪೫೦ನ್ನು ಬಿಟ್ಟು ಉಪ್ಪು, ಭತ್ತ, ಅಡಿಕೆ, ಕಾಜು ಮುಂತಾದವುಗಳನ್ನು ದಾನವಾಗಿ ಕೊಡುತ್ತಾನೆ ಚಾಳುಕ್ಯ ವಿಕ್ರಮಾದಿತ್ಯನ ಕಾಲದಲ್ಲಿ ಅಯ್ವರಸನು ಗೋಧುವೆಯ ಹೊಲಕ್ಕೆಂದು ಒಂದು ಮತ್ತರ ಭೂಮಿಯನ್ನು ನೀಡುತ್ತಾನೆ. ಜೊತೆಗೆ ಸೂರ್ಯಗ್ರಹಣದ ದಿನ ಮಲ್ಲಿಕಾರ್ಜುನ ದೇವರಲ್ಲಿಗೆ ಬಂದ ಕರೆಕಂಠ ಪಂಡಿತನಿಗೆ ಸ್ವತಃ ತನ್ನ ಕೈಯಿಂದ ಕುರುಕುಂದೆ ಗಡಿಂಬದ ಕೋಲಲ್ಲಿ ೧೨ ಮತ್ತರ ಭೂಮಿಯನ್ನು ನೀಡುತ್ತಾನೆ. (ಕವಿವಿಶಾಸಂ. ೭, ದೇ.೨೯)

ಹಿರೇಕೊಟ್ನಕಲ್ಲು ಬನ್ನಿಕಟ್ಟೆಯ ಮೇಲಿನ ಕ್ರಿ.ಶ. ೧೦-೨-೧೯೯೧ರ ಶಾಸನದಲ್ಲಿ ಚಾಳುಕ್ಯರಾಜ ಸೋಮೇಶ್ವರನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಮಂಡಳೇಶ್ವರನಾಗಿ ಮಾನುವೆಯ ಮೈಳುಗಿದೇವರಸನು ಇದ್ದ. ಇವನನ್ನು ಶಾಸನದಲ್ಲಿ ಮಾಹಿಷ್ಮತೀಪುರವರಾಧೀಶ್ವರ ಹೈಹಯ ಕುಳಸಂಭವ ಅತ್ಯುಗ್ರ ನರಸಿರದರ್ಪಣ ಮಾಲಪರೆ ಘೋಷಣೆ ಮುಂತಾದ ವಿಶೇಷಣಗಳಿಂದ ಕರೆಯಲಾಗಿದ್ದು. ನಾನಾ ಅಗ್ನಿಹೊತ್ರ, ದ್ವಿಜಗುರು ದೇವತಾ ಪೂಜಾತತ್ವರರೂ. ಸಕಳಶಾಸ್ತ್ರ ವಿಶಾರದರೂ ಅದ ಸರ್ವನಮಸ್ಯದ ಅಗ್ರಹಾರ ಕೊಟ್ಟು ಕುಣುಹೆಯ ಅಶೇಷ

ಮಹಾಜನರ ಸನ್ನಿಧಾನದಲ್ಲಿ ಚಿಕ್ಕತಿಪ್ಪಣ್ಣಭಟ್ಟೋಪಾಧ್ಯಾಯನ ಮೊಮ್ಮಗನಾದ ಬ್ರಹ್ಮದೇವನು ತನ್ನ ಆಸ್ತಿಯಲ್ಲಿ ಚಿಕನಬ ರವಿಯಣ್ಣನು ಗಂಗಾಶ್ರಯಕ್ಕೆ ಪಡೆದು ಧರ್ಮೆತಕ್ಕೆ ದೇವನಾಯಕನ ಮಕ್ಕಳು ಬಾಗುಳ ಹಾವಿ ಈಶ್ವರಣ್ಣನಿಂದ ಮತ್ತು ಸತ್ರಕ್ಕೆಂದು ಆ ಮಹಾಜನಗಳ ಪಾದ ಪೂಜೆ ಮಾಡಿ ದಾನ ನೀಡಿದ ಉಲ್ಲೇಖವಿದೆ. (ಕವಿವಿಶಾಸಂ. ೭, ಮಾ. ೧೭).

ಕಲ್ಲೂರು ಮಾರಟೇಶ್ವರ ಗುಡಿಯ ಒಳಗೋಡೆಯ ಮೇಲೆ ಕ್ರಿಶ ೨೭-೨-೧೧೯೬ ರ ಶಾಸನದಲ್ಲಿ, ಚಾಳುಕ್ಯ ಆರನೆಯ ವಿಕ್ರಮಾದಿತ್ಯನು ನರ್ಮದಾದೇವಿಯ ದಂಡಿನ ನೆಲೆವೀಡಿನಲ್ಲಿದ್ದಾಗ ಇವನಿಗೆ ಪೂಜ್ಯನಾಗಿ ವಿಕ್ರಮಾದಿತ್ಯದೇವ ಭಟ್ಟೋಪಾಧ್ಯಾಯ ಸರ್ವಕ್ರತು ಸೋಮಾಯಾಜಿ ಎಂಬುವವನಿದ್ದನು. ಇವನನ್ನು ಶಾಸನದಲ್ಲಿ ಉದ್ವಚ್ಚೂಡಾಮಣಿ, ದ್ವಿಜಕುಳಕಮಳ ದಿವಾಕರ ತರಂಗ ವಿದ್ಯಾನಳ, ರಣರಂಗದಾವಾನಳ, ತ್ರಿಭುವನಮಲ್ಲದೇವರ ಪರಮಾರಾಧ್ಯ ಮುಂತಾಗಿ ಕರೆಯಲಾಗಿದೆ. ನರ್ಮದಾನದಿ ಬಳಿ ಈತ ಮಾಡಿದ ಪಂಚಲಾಂಗೂಲ ಕ್ರತುವಿಗಾಗಿ (ಯಾಗಕ್ಕಾಗಿ) ಕಲ್ಲೂರನ್ನು ಧಾರಾಪೂರ್ವಕವಾಗಿ ದಾನ ಪಡೆಯುತ್ತಾನೆ. ಇದೇ ಶಾಸನದಲ್ಲಿ ಚಾಳುಕ್ಯ ಆರನೇಯ ವಿಕ್ರಮಾದಿತ್ಯನ ಮಾಂಡಳೀಕನಾಗಿ ಹೈಹಯ ಕುಲದ ಚಂದರಸನಿದ್ದು, ಇವನನ್ನು ಅತ್ಯುಗ್ರನರಶಿರೋದರ್ಪಣ ಧ್ವಜ ಮಾಲೆಪರೆಘೋಷಣ ಗಂಗಾಪಾರಿಯತ್ರೆ ವಿರಾಜಮಾನ ದಾನನಾಯಕ ಮುಂತಾದ ಬಿರುದುಗಳನ್ನು ಬಹುವಾಗಿ ಹೇಳಿದೆ. ಚಂದರಸನು ಈ ಕಲ್ಲೂರನ್ನು ಬ್ರಾಹ್ಮಣರಿಗೆ ಸರ್ವನಮಸ್ಯವಾಗಿ ಕೊಡುವಾಗ ಆ ಊರಿನ ಸ್ವಯಂಭೂಮಾರಟೇಶ್ವರ ದೇವರಿಗೆ ಚೈತ್ರ-ಪವಿತ್ರ ದೇವರಂಗ ಭೋಗ ನೈವೇದ್ಯ, ಪಾತ್ರ-ಪಾವುಳ ಪೂಜಾರಿಗೆ ಎಂದುಮಾಣಿಕೇಶ್ವರದ ಕೋಲಲ್ಲಿ ಅಳೆದು ನೂರು ಮತ್ತರ ಭೂಮಿ, ಎರಡು ಮತ್ತರು ತೋಟದ ನಂದಾ ದೀಪಕ್ಕಾಗಿ ಎರಡು ಗಾಣ ಒಂದು ಅಂಗಡಿ ಐದು ನಿವೇಶಗಳನ್ನು ದಾನ ಬಿಡುತ್ತಾನೆ. ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ವಿಕ್ರಮಾದಿತ್ಯ ಭಟ್ಟೋಪಾಧ್ಯಾಯನ ಮಯ್ದುನ ವಾಮರಸನು ಖಂಡ್ಯಕ್ಕಾಗಿ ಐದು ಮತ್ತರು ೫೦೦ ಕಮ್ಮ ಭೂಮಿಯನ್ನು ದಾನವಾಗಿ ಬಿಡುತ್ತಾನೆ. (ಕವಿವಿಶಾಸಂ. ೭, ಮಾ. ೬೫)

ಮಲ್ಲಟ ಊರ ಹೊರಗಿನ ಅಲ್ಲಮ ದೇವಾಲಯದಲ್ಲಿರುವ ಕಲ್ಲಿನ ಮೇಲೆ ಕ್ರಿಶ ೨೧-೧೨-೧೧೯೬ ರ ಶಾಸನದಲ್ಲಿ ಕಲ್ಯಾಣದ ಚಾಳುಕ್ಯ ವಿಕ್ರಮನ ಕಾಲದಲ್ಲಿ ಅವನ ಮಹಾಮಂಡಳೇಶ್ವರ ನಾಗಿ ಮೊರಟದ ಮಲ್ಲರಸನೆಂಬುವನಿದ್ದ. ಈ ಮಲ್ಲನನ್ನು ಮಾಹಿಷ್ಮತೀಪುರವರಾಧೀಶ್ವರ ಅಹಿಹಯ ವಂಶೋದ್ಭವ, ಅತ್ಯುಗ್ರ ನರಶಿರದರ್ಪಣ ಧ್ವಜ ಮಾಲಪರೆ ಘೋಷಣ ಸಮರ ಪ್ರಚಂಡ, ಮೂರು ಲೋಕದ ಗಂಡ, ನಾಲ್ಕು ಭಾಷೆಯ ಜಗಬಿರುದು, ಮಂಡಳಿಕರ ಗಂಡ, ಶೌಚ ಗಾಂಗೇಯ, ಪರಾಂಗನ ಪುತ್ರ, ಶ್ರೀ ಮಲ್ಲಿಕಾರ್ಜುನದೇವರ ದಿವ್ಯಶ್ರೀ ಪಾದಾರಾಧಕ ಮುಂತಾದ ವಿಶೇಷಣಗಳಿಂದ ಕರೆಯಲಾಗಿದೆ.

ಮಲ್ಲರಸನ ತಂದೆ ಹಲ್ಲಗದೇವ ತಾಯಿ ರೇಕಲದೇವಿ ಮಲ್ಲರಸನು ವಿಕ್ರಮನ ಕಾಲದಲ್ಲಿ ಲೋಕೇಶ್ವರ ದೇವರಿಗೆ ಕುರುಕುಂದೆಯ ಹಿರಿಯ ಗಡಿಂಬದಲು ಬಿಟ್ಟ ಮಸುಂಬು ಮತ್ತರ ಆರು ದೇವರ ಹೂದೋಟಕ್ಕೆ ಹಳ್ಳದಿಂ ಮೂಡಲು ತೋಟದಿಂ ಬಡಗಲು ಬಿಟ್ಟ ಕಂಮ್ಮ ೧೫೦ ನಂದಾದೀವಿಗೆ ಗಾಣ ೧ ಇಪ್ಪತ್ತು ಕಾಯಿ, ನಿವೇಶನ ೧ ದಾನವಾಗಿ ನೀಡಿರುತ್ತಾನೆ.

ಕ್ರಿಶ ೨೧-೧೨-೧೧೯೬ರ ಶಾಸನದಲ್ಲಿ ಕಲ್ಯಾಣದ ವಿಕ್ರಮಾದಿತ್ಯನ ಕಾಲದಲ್ಲಿ ಮಹೇಶ್ವರದೇವರ ಆಹಾರ ದಾನಕ್ಕೆಂದು ಗಣಮಠವಾಗಿ ಕಲ್ಲಯ್ಯನಿಗೆ ಮಲ್ಲರಸನು ಭೂ ದಾನವನ್ನು ನೀಡುತ್ತಾನೆ. ಜೊತೆಗೆ ಅಲ್ಲಿನ ಮಲ್ಲಿಕಾರ್ಜುನ ದೇವರಿಗೆ ಬಡಗಲು ಬಾವಿಯರೆಯಿಂ ಮೂಡಲು ಕುರುಕುಂದೆಯ ಹಿರಿಯ ಗಡಿಂಬದಲು ಬಿಟ್ಟ ಕರಿಯ ನೆಲ ಮತ್ತರ ಹನ್ನೆರಡು ಬಳೆಗರೆಯ ಮುಂದಣ ಅಡ್ಡದಾರಿಯಂ ಬಡಗಲು ರಾಜವೈಯ ಕೆಯಿಂ ಮೂಡಲು ಅಯ್ತನ ಕೆಯ್ಯ ಬಾಗಿಂದಂ ತೆಂಕಲು ಹಿರಿಯ ಹಳ್ಳದಿಂ ಪಡೆವಲು ಚತುರಾಸ್ತಯವಾಗಿ ಉಳಿದಿವೆ. ಇದೇ ಶಾಸನದಲ್ಲಿ ಮಾಳಯ್ಯನ ಮಗಳು ಮತ್ತು ಮಲ್ಲರಸನ ಹೆಂಡತಿ ಬೆಸವಲದೇವಿಯರು ಸೇರಿ ಅಲ್ಲಿನ ಮಾದೇಶ್ವರ ದೇವರಿಗೆ ಅಂಗಭೋಗ, ರಂಗಭೋಗ ಪಾತ್ರಪವುಳ ಖಂಡಸ್ಫುಟಿತ ಜೀರ್ಣೋದ್ಧಾರವನ್ನು ದಾನವಾಗಿ ನೀಡುತ್ತಾರೆ. ಈ ಶಾಸನದಲ್ಲಿ ಮೊರಟದ ಮಲ್ಲದೇವರಸ ಅವನ ಪಿರಿಯರಸಿ ಪಟ್ಟಮಹಾದೇವಿ ಮತ್ತು ಮಾಕಲದೇವಿ ಇವರ ಮಕ್ಕಳಾದ ಅಲ್ಲಹುಲಿದೇವ, ಹಲ್ಲೆಗದೇವ, ಬಯಿರುಗಿದೇವರು ಇವರು ಸಮಸ್ತ ಪ್ರಧಾನರು ಸಕಳ ಪರಿಜನ ಸಮೇತವಾಗಿ ಅಯ್ಯಣಸಿರಿವುರದ ನೆಲೆವೀಡಿನಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ, ಕೊಡೆಯ ಹಂದಿಗನು ಬಿಲ್ಲಮನ ಸಾಹಣಿಬ್ರಹ್ಮನು ಒಟ್ಟಾಗಿ ಹಲಂಬರನ್ನು ಕೊಂದು ಅವರ ಮೇಲೆ ದಂಡೆತ್ತಿ ಬಂದು ಯುದ್ಧ ಮಾಡಿ ೧೭೦೦ ತಲೆಗಳನ್ನು ರಾಸಿ ಮಾಡಿ ಜಯವನ್ನು ಪಡೆದರು.

ಮಲ್ಲಟದ ಊರ ಹೊರಗಿನ ಅಲ್ಲಮ ದೇವಾಲಯದಲ್ಲಿರುವ ಕಲ್ಲಿನ ಮೇಲೆ ಕ್ರಿಶ ೨೧-೧೨-೧೧೯೬ ರ ಶಾಸನದಲ್ಲಿ ಕಲ್ಯಾಣ ಚಾಳುಕ್ಯ ವಿಕ್ರಮನ ಕಾಲದಲ್ಲಿ ವಂಶದ ರಾಜ ಅವುಜದ ಮಾಳಯನು ಸಂಕ್ರಾಂತಿಯ ಹಬ್ಬದ ನಿಮಿತ್ತವಾಗಿ ಮೊರಟದ ಸಪ್ತನಾಥ ದೇವರ ಸೇವಕನಾದ ಅವುಜದ ಮಾಳಯನು ಮಲ್ಲಟದ ಸಕಳೇಶ್ವರ ದೇವರಿಗೆಮಾದಿರಾಜಯ್ಯನ ಹೆಸರಿನಲ್ಲಿ ದೇವರಿಗೆ ಪ್ರತಿಷ್ಠೆ ಮಾಡಿಸಿದ. ಈ ಶಾಸನದಲ್ಲಿ ದಾನ ಗಡಿಗಳನ್ನು ಹೇಳುವಾಗ ಕಮ್ಮ ೧೫೦. ನಂದಾದೀವಿಗೆ ಯೆಣ್ಣೆಗೆ ತೆರು ಸಹಿತವಾಗಿ ಕೊಟ್ಟ ಗಾಣ೧, ಇಪ್ಪತ್ತು ಕಾಯಿ, ನಿವೇಶಣ೧ ಮತ್ತು ಅಲ್ಲಿನ ಮಲ್ಲಿಕಾರ್ಜುನದೇವರಿಗೆ ಅಂಗಭೋಗ, ರಾಗಭೋಗ, ಪಾತ್ರ ಪಾವುಳ, ಖಂಡಸ್ಫುಟಿತ ಜೀರ್ಣೋದ್ಧಾರ ಮುಂತಾದವುಗಳನ್ನು ಅರಸರು ದೇವಾಲಯಗಳಿಗೆ ದಾನವಾಗಿ ಕೊಟ್ಟಿದ್ದಾರೆ. (ಕವಿವಿಶಾಸಂ. ೭, ಮಾ.೧೦೭)

ಕೂಡ್ಲೂರು ಬಸಪ್ಪನ ಮನೆಯ ಬಳಿ ಇರುವ ಶಾಸನದಲ್ಲಿ ಕಾಲದ ಉಲ್ಲೇಖವಿದ್ದ ಭಾಗವು ಹಾಳಾಗಿದೆ. ಇದನ್ನು ಕ್ರಿ.ಶ. ೧೨ನೆಯ ಶತಮಾನಕ್ಕೆ ಸೇರಿಸಬಹುದು. ಇದೊಂದು ಜೈನ ಶಾಸನ. ಈ ಶಾಸನದಲ್ಲಿ ಹೈಹಯರ ವಂಶದರಾಜ ಬೋಮ್ಮಿದೇವ ಹೆಸರು ಉಲ್ಲೇಖವಿದ್ದು. ಇವನನ್ನು ಶಾಸನದಲ್ಲಿ ಮಾಹಿಷ್ಮತೀ ಪುರಾವರಾಧೀಶ್ವರ ಅತ್ಯುಗ್ರನರಶಿರೋದರ್ಪಣಧ್ವಜ ಮಾಲಪರೆ ಘೋಷಣೆ ಮುಂತಾದ ವಿಶೇಷಣಗಳಿಂದ ಕರೆಯಲಾಗಿದೆ. ಈ ವೀರ ಬೊಮ್ಮಿದೇವನು ಮುದ್ಗನೂರು ೩೦೦ನ್ನು ಮುದುಗೂಂದೂರಿನಿಂದ ಆಳುತ್ತಿದ್ದನು. ಈ ಶಾಸನದಲ್ಲಿ ಕುಮುದ ಚಂದ್ರಮುನಿ ತ್ರೈವಿದ್ಯ ಚಕ್ರೇಶ್ವರ ಮತ್ತು ಏಚನಾಯಕನ ಹೆಸರು ಉಲ್ಲೇಖ ಬರುತ್ತದೆ. ಈ ಶಾಸನದ ಮುಂದಿನ ವಿವರಗಳು ಹಾಳಾಗಿವೆ. (ಕವಿವಿಶಾಸಂ. ೭, ರಾ.೫೩).

ಕವುತಾಳ ತ್ರೈಯಂಬಕೇಶ್ವರ ದೇವಾಲಯ ಒಳಗೆ ಇಟ್ಟಿರುವ ಕಲ್ಲಿನ ಮೇಲೆ ಕ್ರಿ.ಶ. ೨೦-೪-೧೨೧೭ರ ಶಾಸನದಲ್ಲಿ ಯಾದವ ಚಕ್ರವರ್ತಿ ಸೇವುಣ ಸಿಂಗಣನು ದೇವಗಿರಿಯ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತನಾಗಿ ಹೈಹಯ ವಂಶದ ಮಲ್ಲಿದೇವರಸನಿದ್ದು. ಈ ಮಲ್ಲಿದೇವರಸನನ್ನು ಅಹಿಹಯ ವಂಶೋದ್ಭವ ಮಾಲಪರೆ ಘೋಷಣ. ಪ್ರಚಂಡ ಮೂರು ಲೋಕದ ಗಂಡ, ನಾಲ್ಕು ಭಾಷೆಯ ಧೀರ, ಸಮರ ಭಯಂಕರ ಮುಂತಾದ ಬಿರುದುಗಳಿಂದ ಕರೆದಿದೆ. ಮತ್ತು ಮೊರಟದ ಶ್ರೀ ಮಲ್ಲಿಕಾರ್ಜುನ ದೇವರ ಪಾದಾರಾಧಕುನುಮಪ್ಪ ಮಹಾಮಂಡಳೇಶ್ವರ ಮಲ್ಲಿದೇವರಸನ ಅಧೀನದಲ್ಲಿ ಬೆಚ್ಚಿಸೆಟ್ಟಿ ಎಂಬುವವನಿದ್ದು, ಇವನನ್ನು ಮೊರಟ-೩೦೦ರ ಸೆಟ್ಟಿಗುತ್ತನೆಂದು ಕರೆದಿದೆ. ಈ ಬೆಚ್ಚಿಶೆಟ್ಟಿ ಎಂಬುವವನು ಕವುತಾಳದ ಹಲ್ಲೇಶ್ವರದೇವರಿಗೆ ಭೂದಾನವನ್ನು ನೀಡುತ್ತಾನೆ. ಭೂದಾನ ನೀಡುವಾಗ ಅಲ್ಲಿದ್ದ ದೇವಾಲಯದ ಸ್ಥಾನಿಕರಾದ ಸಂಕರಾಶಿ ಪಂಡಿತರ ಶಿಷ್ಯ ಯೋಗಿಶ್ವರದೇವರ ಕಾಲನ್ನು ತೊಳೆದು ಹಲ್ಲೇಶ್ವರ ದೇವರಿಗೆ ಭೂದಾನ ನೀಡುತ್ತಾನೆ. ಇದೇ ಗ್ರಾಮದ ಇದೆ ಶಾಸನದಲ್ಲಿ ಮಲ್ಲಿ ದೇವನು ರಾಜ್ಯಭಾರ ಮಾಡುತ್ತಿದ್ದಾಗ ವಿಕ್ರಮೇಶ್ವರ ದೇವರ ಸ್ಥಾನಾಚಾರ್ಯನಾದ ಯೋಗಿಶ್ವರದೇವನು ಈ ಅಣ್ಣ ತಮ್ಮಂದಿರಿಗೆ ಧರ್ಮೋಪದೇಶ ಮಾಡಿದಾಗ. ತ್ರಯಂಬಕ ಶಂಕರ ದಾಸೇಶ್ವರ ಮತ್ತು ಐಹೇಶ್ವರ ದೇವರ ಸೇವೆ ಮಾಡುವ ಶಂಕರ ಪಂಡಿತರ ಕಾಲನ್ನು ತೊಳೆದು ತ್ರೈಯಂಬಕ ದೇವರ ಅಂಗಭೋಗ ರಂಗಭೊಗ ಖಂಡಸ್ಪಟಿತ ಜೀರ್ಣೋದ್ಧಾರಕ್ಕೆ ಅಲ್ಲಿಯ ತಪಸ್ವಿಗಳು ಆಹಾರ ದಾನಕ್ಕೊಂದು ಕವುತಾಳದ ದಕ್ಷಿಣಕ್ಕೆ ೧೪ ಮತ್ತರ ಭೂಮಿ ಹೊಲ ೧೨೦ ಕಮ್ಮ ೧ ಗಾಣ ೧ ನಿವೇಶನ ಹೂತೋಟಕ್ಕೆ ದಾನವನ್ನು ನೀಡುತ್ತಾರೆ. ಮಲ್ಲಿದೇವನ ಕಾಲದಲ್ಲಿ ಬೆಚ್ಚಿಸೆಟ್ಟಿ ಮತ್ತು ರೇಚ್ಚಿಸೆಟ್ಟಿಯರಿಬ್ಬರೂ ತಮ್ಮ ತಂದೆಯ ಹೆಸರಿನಲ್ಲಿ ಕವುತಾಳದಲ್ಲಿ ಲಿಂಗ ಪ್ರತಿಷ್ಠೆ ಮಾಡಿಸುತ್ತಾರೆ.

ಕವುತಾಳದ ಕ್ರಿ.ಶ. ೨೦-೪-೧೨೧೭ರ ಶಾಸನದಲ್ಲಿ ಮಲ್ಲಿದೇವನು ಐಯಣಸಿರಿವುರದಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ ಇವನ ಕೈಕೆಳಗೆ ಬೇಚ್ಚಿಸೆಟ್ಟಿ ಶಿವದೇವಾಲಯನ್ನು ಮಾಡಿಸಿದಂತೆ ಶಾಸನದಲ್ಲಿ ತಿಳಿಸುತ್ತದೆ. ಈ ಬೇಚ್ಚಿಸೆಟ್ಟಿಯನ್ನು ಚಾಳುಕ್ಯಾನ್ವಯನೆಂದೂ ಮೊರಟ-೩೦೦ರ ಸೆಟ್ಟಿಗುತ್ತನೆಂದು ಇವನ ತಮ್ಮ ರೆಚಿಸೆಟ್ಟಿಯೆಂದು ತಿಳಿಸಲಾಗಿದೆ. ಮುಂದೆ ಇದೇ ಗ್ರಾಮದ ಇದೆ ಶಾಸನದಲ್ಲಿ ಯಾದವ ಚಕ್ರವರ್ತಿ ಸೇವುಣ ಸಿಂಗಣನು ಕಾಲದಲ್ಲಿ ಮಲ್ಲಿದೇವರಸನು ಹೆಲ್ಲೇಶ್ವರ ದೇವರಿಗೆ ಕವಿತಾಳ ಊರಲ್ಲಿ ನಾಲ್ಕು ದಿಕ್ಕಿಗೆ ಲಿಂಗ ಮುಂದ್ರೆ ಕಲ್ಲು ನೆಟ್ಟು ಹೊಲವನ್ನು ೫ ಮತ್ತರ ಹಾಗೆ ಲಿಂಗದಕಲ್ಲು ನೆಟ್ಟಿಕೊಟ್ಟು ಹೂತೋಟ ಶಂಕರ ದೇವರ ಸಮೀಪ ೫೦ ಕಂಬ ಗದ್ದೆ ಮತ್ತು ಹೆಲ್ಲೇಶ್ವರ ದೇವರ ಭಟ್ಟನಿಗೆ ೧ ನಿವೇಶನವನ್ನು ದಾನ ನೀಡಲಾಗಿದೆ. ಜೊತೆಗೆ ಭಂಡವುನ ಮಾರೆದಡಂ ಕೊಂಡಲ್ಲಿ ಕಾಣಿ,೧ ಕೊಟ್ಟಲ್ಲಿ ಕಾಣಿಕೆ-೧ ದೇವರ ನಂದಾದೀವಿಗೆಗೆ ಗಾಣಕ್ಕೆ ಪ್ರತ್ಯೇಕ ಅಡ್ಡನಗೊಂಬ ಸೊಂಟ್ಟಿಗೆ ೧ ಡಂ ಕೊಟ್ಟರು ಹಂನ್ನವಣಿಗರು.... ದೇವರ ವಿಳಯಕ್ಕೆ ಕೊಟ್ಟ ಎಲೆ ಹೊರಗೆ ೨೫ ಹೋರೆ ಹೋತ್ತಳೆ ೧೨ ದಾನವಾಗಿ ಕೊಟ್ಟಿರುತ್ತಾನೆ.

ಕ್ರಿ.ಶ. ೨೦-೪-೧೨೧೭ರ ಶಾಸನದಲ್ಲಿ ಯಾದವ ಚಕ್ರವರ್ತಿ ಸೇವುಣ ಕಾಲದಲ್ಲಿ ಹೆಲ್ಲೇಶ್ವರ ದೇವಾಲಯದ ಸ್ಥಾನಿಕರಾದ ಸಂಕರಾಶಿ ಪಂಡಿತ ಶಿಷ್ಯ ಯೋಗಿಶ್ವರ ದೇವರ ಕಾಲನ್ನು ತೊಳೆದು ಹೆಲ್ಲೇಶ್ವರ ದೇವರಿಗೆ ಭೂದಾನ ನೀಡುತ್ತಾರೆ. ಜೋತೆಗೆ ಹೆಲ್ಲೇಶ್ವರ ದೇವರ ಅಂಗ ಭೋಗ ರಂಗ ಭೋಗ ಸಮೇತವಾಗಿ ಸರ್ವ್ವಭಾವ ಪರಿಹಾರ ಸರ್ನ್ನನಮಸ್ಯವೆಂದು ಧಾರಾಪೋರ್ಬ್ಬಕಂ ಮಾಡಿಕೊಟ್ಟ ಎರೆ ಹೂ ಬೆಟ್ಟ ಮೂಡಣ ಹಳ್ಳಿಯ ಪಡುವಯರೆ ಬಡಗಲು ಮಹಾಲಿಂಗ ದೇವರ ಕೇಯಿಯ ಮೇರೆ ಮೂಡಲು ಭೂಮಿಯ ನೀಡುತ್ತಾನೆ. ಮಲ್ಲಿದೇವರಸನು ರಾಜ್ಯಭಾರ ಕಾಲದಲ್ಲಿ ಸೇಟ್ಟಿಗುತ್ತರು ನಾನಾ ದೇಸಿಗಳ ಕವುತಾಳ ಸಮಸ್ತ ಪ್ರಜೆಗಳ ವ್ಯಾಪಾರಿಗಳು ಸೇರಿ ಬೇರೆ-ಬೇರೆ ದಾನಗಳನ್ನು ದೇವರಿಗೆ ನೀಡುತ್ತಾರೆ. (ಕವಿವಿಶಾಸಂ. ೭, ಮಾ.೧೧೫).

೪.೧. ಶಾಸನಗಳ ಸಾಹಿತ್ಯ ಸ್ವರೂಪ

ಶಾಸನ ಸಂಸ್ಕೃತ ಪದವು ಶಾಸ್ ಧಾತುವಿನಿಂದ ಬಂದಿದೆ. ಮೂಲಾರ್ಥ ರಾಜಾಜ್ಞೆ ಆಗಿದೆ. ಕಾಲಾಂತರದಲ್ಲಿ ರಾಜಾಜ್ಞೆ ಎಂಬ ಸಂಕುಚಿತಾರ್ಥ ತಪ್ಪಿಹೋಗಿ ವ್ಯಾಪಕರ್ಥ ಪಡೆಯಿತು. ದಾನಕ್ಕೆ ಸಂಬಂಧಿಸಿದ, ರಾಜಾಜ್ಞೆಯನ್ನು ಒಳಗೊಂಡಿರದ, ಸಂಕೀರ್ಣ ವಿಷಯ ಬರಹಗಳಿಗೆಲ್ಲ ಇಂದು ಶಾಸನ ಹೆಸರು ಅನ್ವಯಿಸುತ್ತದೆ. ನಮ್ಮ ನಾಡಿನ ಚಾರಿತ್ರಿಕ ಆಧಾರಗಳ ಅಭಾವ ಅಸಮರ್ಪಕತೆ, ಅವಿಶ್ವಾಸನೀಯತೆಗಳನ್ನು ಗಮನಿಸಿದಾಗ ಶಾಸನಗಳ ಮಹತ್ವ ಹಾಗೂ ಸ್ವರೂಪ ತಿಳಿಯುತ್ತದೆ.

ಶಾಸನಗಳು ಪ್ರಮುಖವಾಗಿ ಒಂದು ಕಾಲದಲ್ಲಿ ನಡೆದ ವ್ಯವಹಾರಗಳ ಲಿಖಿತ ದಾಖಲೆಗಲು, ಚಾರಿತ್ರಿಕ ಉದ್ದೇಶದಿಂದ ಸಂಗತಿಗಳನ್ನಾ ದಾಖಲಿಸುವ ಸಲುವಾಗಿ ರಚಿತವಾದವುಗಳು, ನಾಡಿನ ರಾಜಕೀಯ, ಸಾಂಸ್ಕೃತಿಕ, ಆರ್ಥಿಕ, ಧಾರ್ಮಿಕ ಅಂಶಗಳನ್ನು ಅರ್ಥಮಾಡಿಕೊಳ್ಳುವ ಮೂಲ ಅಥವಾ ನೇರವಾದ ಸಾಮಗ್ರಿಗಳು, ರಾಜಕೀಯ ಹಾಗೂ ಸಾಂಸ್ಕೃತಿಕ ಚರಿತ್ರೆಯನ್ನು ಪುನರ್ರಚಿಸುವಲ್ಲಿ ಉಳಿದೆಲ್ಲವುಗಳಿಗಿಂತ ಮಹತ್ವರವಾದ ಮತ್ತು ಅಧಿಕೃತಿ ದಾಖಲೆಗಳಾಗಿವೆ.

ಶಾಸನಗಳು ಸಾಹಿತ್ಯವಾಗಬೇಕೆಂಬ ಉದ್ದೇಶದಿಂದ ರೂಪಗೊಂಡವುಗಳು ಅಲ್ಲ, ಅದಾಗ್ಯೂ ಎಷ್ಟೋ ವೇಳೆ ಶಾಸನಗಳನ್ನು ಬರೆಸಿದ ಅಥವಾ ಬರೆದ ವ್ಯಕ್ತಿಯ ಮನೋಧರ್ಮ ಅಥವಾ ಸಾಮರ್ಥ್ಯದಿಂದಾಗಿ ಶಾಸನಗಳಲ್ಲಿ ಸಾಹಿತ್ಯದ ಸೊಗಸು ಕಾವ್ಯಗುಣ ಕಾಣಿಸಿಕೊಳ್ಳಬಹುದು. ಯಾವುದೇ ಒಂದು ವಿಷಯವನ್ನು ಕುರಿತು ಭಾಷೆಯ ಮೂಲಕ ಕೇಳುವಾಗ ಹೇಳುವ ವಿಧಾನ ಕೇವಲ ವಿಷಯ ನಿರೂಪಣೆಯಷ್ಟೇ ಆಗದೆ ಭಾವನೆಯ ವರ್ಣನಾಕ್ರಮ ಆದಾಗ ಕವಿತ್ವದ ಅಂಶ ಸೇರ್ಪಡೆಯಾಗುತ್ತದೆ. ಶಾಸನದಲ್ಲಿ ವಿವರವು ವರದಿಯ ನೆಲೆಯನ್ನು ಮೀರಿದಾಗ ಅದು ಆಸ್ವಾದ ಹಾಗೂ ಪರಿಭಾವನೆಯ ವಿಷಯವಾದಾಗ ಕಾವ್ಯತ್ವದ ನೆಲೆಯನ್ನು ಪ್ರವೇಶಿಸುತ್ತದೆ. ಅಭಿವ್ಯಕ್ತಿಗೆ ಒದಗುವ ಛಂದೋಬದ್ಧತೆಯ ಸೊಗಸಿನಿಂದ ಕಾವ್ಯಗುಣವನ್ನು ಗುರುತಿಸಬಹುದು. ಶಾಸನಗಳು ಛಂದೋಬದ್ಧವಾಗಿ ಬರವಣಿಗೆಗಳ (ಚಂಪೂಶೈಲಿ) ಸ್ವರೂಪಕ್ಕೆ ಒಳಪಡುವುದರಿಂದ ಶಾಸನಗಳುದ್ದಕ್ಕೂ ಅಲ್ಲಲ್ಲಿ ಕಾವ್ಯಗುಣ ವ್ಯಕ್ತವಾಗಿರುವುದು ಕಂಡುಬರುತ್ತದೆ. ಇನ್ನೊಂದು ಕಾರಣ ಎಂದರೆ ಶಾಸನಗಳನ್ನು ರಚಿಸುವ ಕರ್ತೃವು ಚೊಕ್ಕದಾಗಿ ಶಾಸನವನ್ನು ಬರೆದವನೆಂಬ ಹೆಸರನ್ನು ಪಡೆಯಬೇಕೆಂಬ ಹಂಬಲ. ತನ್ನ ಮತ್ತು ತನ್ನ ವಂಶದ ಹಿರಿಯರ ಹೊಗಳಿಕೆಯೂ ಅದರಲ್ಲಿ ಮೂಡಿಬರಬೇಕೆಂಬ ದಾತೃವಿನ ಹಂಬಲ. ದಾನವಿತ್ತವನ ಬಗೆಗೆ ಜನರಿಗಿರುವ ಗೌರವಗಳ ಒತ್ತಡಗಳಿಂದಾಗಿ ರಾಜಕೀಯ ಹಾಗೂ ಸಾಂಸ್ಕೃತಿಕ ದಾಖಲೆಗಳಾದ ಶಾಸನಗಳನ್ನು ತಮ್ಮ ಪ್ರತಿಭಾ ಗುಣದಿಂದ ಸಾಹಿತ್ಯವನ್ನಾಗಿಸಲು ಕವಿಹೃದಯವುಳ್ಳ ಕೆಲವು ಶಾಸನಕಾರರು ಪ್ರಯತ್ನಪಟ್ಟಂತೆ ಕಂಡುಬರುತ್ತದೆ.

ಶಾಸನ ರಚಿಸುವ ವ್ಯಕ್ತಿಯು ಸೀಮಿತ ಚೌಕಟ್ಟಿನೊಳಗೆ ಕೆಲಸ ಮಾಡಬೇಕಾಗುತ್ತದೆ. ತನ್ನ ಅಭಿವ್ಯಕ್ತಿಗೆ ಆಶ್ರಯಿಸಬೇಕಾದ ಮಾಧ್ಯಮವಾದ ಶಿಲೆ-ಲೋಹಗಳಲ್ಲಿ ಆಳುತ್ತಿರುವ ರಾಜ, ಆತನ ವಂಶಾವಳಿ, ತಿಥಿ, ವಾರ, ನಕ್ಷತ್ರಗಳ, ದಾನ ಕೊಟ್ಟವನ ವಿವರ, ದಾನ ಪಡೆದವನ ವಿವರ, ದಾನದ ಉದ್ದೇಶ, ಅದರ ಸಂಪೂರ್ಣ ವಿವರ ಮುಂತಾದವುಗಳನ್ನು ಅಡಗಿಸಿ ಬೇಕಾಗುತ್ತದೆ. ಯಾವುದೇ ವಿವರಗಳನ್ನು ಬದಲಾಯಿಸುವಂತಿಲ್ಲ. ಉತ್ಪ್ರೇಕ್ಷೆ ಏನಿದ್ದರೂ ವ್ಯಕ್ತಿಗಳನ್ನು ನಾಡನ್ನು ದೇವಾಲಯಗಳನ್ನು ವರ್ಣಿಸುವಾಗ ಬರುವಂತಹದ್ದು ಇಲ್ಲೆಲ್ಲಾ ತನ್ನ ಪ್ರತಿಭೆಯನ್ನು ಪ್ರದರ್ಶಿಸಬೇಕಾಗುತ್ತದೆ.

ಶಾಸನಕಾರನಿಗೆ ತಾನು ಹೇಳಲಿರುವ ವಿಷಯದ ಖಚಿತತೆ ಮುಖ್ಯವೇ ಹೊರತು ಸಾಹಿತ್ಯ ಅಷ್ಟು ಮುಖ್ಯವಲ್ಲ. ನಡೆದ ಸಂಗತಿಯನ್ನು ಯಥಾವತ್ತಾಗಿ ನಿರೂಪಿಸುವುದಾಗಿರುತ್ತದೆ. ಶಾಸನಕಾರನಿಗೆ ತನ್ನ ಮನಬಂದಂತೆ ಕಥೆ ಹೆಣೆಯಲು ವರ್ಣನೆಗಳನ್ನು ತುಂಬಲು ಅವಕಾಶ ಇಲ್ಲ. ವಿಷಯ ವೈವಿಧ್ಯ ಕಡಿಮೆ. ಈ ಹಿನ್ನೆಲೆಯಲ್ಲಿ ಶಾಸನಗಳ ಸಾಹಿತ್ಯ ಮೌಲ್ಯವನ್ನು ನಿರ್ಧರಿಸಬೇಕಾಗುತ್ತದೆ. ಈ ಇತಿಮಿತಿಗಳ ನಡುವೆಯೂ ಶಾಸನಗಳಲ್ಲಿ ಸಾಹಿತ್ಯಾಂಶ ಮೂಡಿಬಂದಿದ್ದರೆ ಅದು ಶಾಸನಕಾರರ ಪ್ರತಿಭೆ, ಔಚಿತ್ಯ ಪ್ರಜ್ಞೆ ಹಾಗೂ ಕುಶಲಮತಿಯನ್ನು ತೋರಿಸುತ್ತದೆ.

ಕನ್ನಡ ಕಾವ್ಯಗಳು ಮೂಲತಃ ಸಾಹಿತ್ಯ ಕ್ಷೇತ್ರಕ್ಕೆ ಸೇರಿದವುಗಳಾದರೂ ಅನುಷಂಗಿಕವಾಗಿ ಆಯಾ ಕಾಲದ ಚರಿತ್ರೆಗೆ ಸಲ್ಲುವಂತೆ, ಶಾಸನಗಳು ಚಾರಿತ್ರಿಕ ಸಂಗತಿಗಳ ಪ್ರಾತಿನಿಧಿಕವಾಗಿದ್ದರೂ ಅನುಷಂಗಿಕವಾಗಿ ಕಾವ್ಯ ಅಥವಾ ಸಾಹಿತ್ಯಕ್ಕೂ ಕೊಂಚಮಟ್ಟಿಗೆ ಸಲ್ಲುವ ಲಕ್ಷಣಗಳನ್ನು ಒಳಗೊಂಡಿವೆ. ಶಾಸನಗಳಿಗೂ ಕಾವ್ಯಗಳಿಗೂ ಇರುವ ಮುಖ್ಯ ವ್ಯತ್ಯಾಸ ಎಂದರೆ, ಶಾಸನ ರಚನೆ ಸಾಂದರ್ಭಿಕವಾದದ್ದು ಅಂದರೆ ದಾನದತ್ತಿಗೆ ಸಂಬಂಧಿಸಿದ ದೇವಾಲಯಗಳ ನಿರ್ಮಾಣ ಲೋಕೋಪಯೋಗಿ ಕಾರ್ಯ ನಿಸದಿಗೆ, ವೀರಗಲ್ಲು, ಮಾಸ್ತಿಕಲ್ಲು ಸ್ಥಾಪಿಸುವುದು ಇತ್ಯಾದಿ ಕ್ರಿಯೆಯ ಸಂದರ್ಭಕ್ಕೆ ಸಂಬಂಧ ಪಟ್ಟಿದ್ದು ಅವೆಲ್ಲ ನಿರ್ದೇಶಿತ ರಚನೆಗೆ ಸಂಬಂಧ ಪಟ್ಟವುಗಳು ಶಾಸನಗಳ ನಿರ್ಮಾಣ ಮೂರು ಹಂತಗಳಲ್ಲಿ ನಡೆಯುತ್ತದೆ.

೧. ಶಾಸನಗಳನ್ನು ಹಾಕಿಸಬೇಕೆಂಬ ಪ್ರಭುವರ್ಗ

೨. ಪ್ರಭುವರ್ಗದ ನಿರ್ದೇಶನದ ಮೇರೆಗೆ ಅಸಂದರ್ಭದ ವಸ್ತುವಿಗೆ ತಕ್ಕ ಪದ ಸಂಯೋಜನೆಯ ಮೂಲಕ ಶಾಸನ ಪಠ್ಯವನ್ನು ಸಿದ್ಧಪಡಿಸಿದ ವ್ಯಕ್ತಿ.

೩. ಶಾಸನ ಪಾಠವನ್ನು ಕಲ್ಲಿನಲ್ಲಿ ಕಂಡರಿಸುವ ವ್ಯಕ್ತಿ. ಈ ಕ್ರಿಯೆಯಲ್ಲಿ ತನಗೆ ತಾನೆ ಇಚ್ಛಿಸಿದ ವಸ್ತುವೊಂದನ್ನು ಆಯ್ಕೆ ಮಾಡಿಕೊಂಡು ಏಕಾಂತದಲ್ಲಿ ಕುಳಿತು ಕೃತಿ ರಚನೆ ಮಾಡುವ ಕವಿಯ ಕಾವ್ಯದಲ್ಲಿರುವ 'ಕಾವ್ಯಗುಣ'ವನ್ನು ಹುಡುಕಲಿಕ್ಕೆ ಸಾಧ್ಯವಿಲ್ಲ. ಕವಿಯಾದವನು ತನ್ನನ್ನು ನಿಯಂತ್ರಿಸುವ ಪ್ರಭುಶಕ್ತಿಗೆ ಎಷ್ಟೋ ನಿಷ್ಠನಾಗಿದ್ದರೂ ಬರೆಯುವ ಹೊತ್ತಿನಲ್ಲಿ ಆತ ಬದ್ಧತೆಯನ್ನು ಮೀರಿ, ತಾನು ಆರಿಸಿಕೊಂಡು ವಸ್ತು ಹಾಗೂ ರಸಕ್ಕೆ ಅಧೀನವಾಗುವುದರಿಂದಲೇ ಆತ ತನ್ನ ಬರವಣಿಗೆಯಲ್ಲಿ ಕಾವ್ಯತ್ವವನ್ನು ಸಾಧಿಸಲು ಸಾಧ್ಯವಾಗುತ್ತದೆ. ಆದರೆ ಶಾಸನ ರಚನೆಯ ಕ್ರಿಯೆ ಹಾಗಲ್ಲ. ಸಾಂದರ್ಭಿಕವಾದದ್ದು ನಿರ್ದೇಶಿತವಾದದ್ದು. ತನ್ನ ಅಭಿವ್ಯಕ್ತಿಗೆ ಆಶ್ರಯಿಸಬೇಕಾದ ಮಾಧ್ಯಮದ (ಶಿಲೆ-ಲೋಹ) ಪರಿಮಿತಿಯಿಂದ ನಿರ್ಬಂಧಿತವಾದದ್ದು ಈ ಹಿನ್ನೆಲೆಯಲ್ಲಿ ಶಾಸನಗಳಲ್ಲಿ ಒಂದು ವೇಳೆ ಕಾವ್ಯಗುಣವೇನಾದರೂ ಪ್ರಾಸಂಗೀಕವಾಗಿ ಕಂಡುಬಂದರೆ ಅದು ಶಾಸನ ಸಿದ್ಧಪಡಿಸಿದವನ ಮನೋಧರ್ಮ ಹಾಗೂ ರಚನಾ ಸಾಮರ್ಥ್ಯದ

ಪರಿಣಾಮವಲ್ಲದೆ ಬೇರೇನೂ ಅಲ್ಲ. ಶಾಸನಗಳನ್ನು ರಚಿಸಿದವರಲ್ಲಿ ಎಷ್ಟೋ ಮಂದಿ ಕವಿಗುಣವುಳ್ಳವರೂ ಹಾಗೂ ಕವಿಗಳೂ ಆಗಿರುವ ಸಾಧ್ಯತೆ ಇರುವುದರಿಂದ ಹಾಗೂ ಅವು ಭಾಷಿಕ ಸಂಧರ್ಭದಲ್ಲಿ ಕೆಲಸ ಮಾಡುತ್ತಿರುವುದರಿಂದ ಹೇಳುವ ವಿಷಯವನ್ನು ತಮಗೆ ಹಿನ್ನೆಲೆಯಾದ ಕಾವ್ಯ ಪರಂಪರೆಯ ಭಾಷಾ ಸಾಮಗ್ರಿಯಿಂದ ಕಟ್ಟಿ ಕೊಡುವ ಕಲೆಗಾರಿಕೆಯನ್ನು ಅಲ್ಲಲ್ಲಿ ಪ್ರಕಟಿಸಿದ್ದಾರೆ. ಹೀಗಾಗಿ ಶಾಸನಗಳಲ್ಲಿ ಹಲವೆಡೆ ಕಾವ್ಯಗುಣ ಪ್ರಾಸಂಗಿಕವಾಗಿ ಕಾಣಿಸಿಕೊಂಡಿದ್ದು ಕಡೆಗಣಿಸುವಂತಹದ್ದಲ್ಲ ವಾಗಿದೆ. ಉತ್ತಮ ಕಾವ್ಯದ ಯಾವುದೋ ಭಾಗವನ್ನು ಓದುವಾಗ ಉಂಟಾಗುವ ಅನುಭವ ಕೆಲವು ಶಾಸನಗಳನ್ನು ಓದುವಾಗಲೂ ಆಗುತ್ತದೆ. ಶಾಸನಗಳಲ್ಲಿ ಕಾವ್ಯವಲ್ಲದ ಭಾಗವೂ ಉಂಟು. ಆದಾಗ್ಯೂ ಶಾಸನ ಸಾಹಿತ್ಯವನ್ನು ಮಾರ್ಗ ಸಾಹಿತ್ಯಕ್ಕಾಗಲೀ ದೇಸಿ ಸಾಹಿತ್ಯಕ್ಕಾಗಲೀ ಸೇರಿಸುವ ಪ್ರಶ್ನೆಯೇ ಇಲ್ಲ. ಅದು ಕನ್ನಡ ಸಾಹಿತ್ಯ ವಾಹಿನಿಯ ಪಕ್ಕದಲ್ಲೇ ಹರಿಯುವ ಇನ್ನೊಂದು ನದಿ ಎಂದು ಹೇಳಬಹುದು. ಶಾಸನಗಳನ್ನು ಓದಿದಾಗ ಒಳ್ಳೆಯ ಕಾವ್ಯವನ್ನು ಎದುರುಗೊಂಡ ಅನುಭವವಾಗುತ್ತದೆ. ಶಾಸನಗಳು ನೇರ ಜೀವನದಿಂದ ಹೊರಹೊಮ್ಮಿದವು. ಜೀವನವನ್ನೇ ಚಿತ್ರಿಸುವ ಉದ್ದೇಶವುಳ್ಳವು. ಶಾಸನಗಳಿಂದ ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ಎಷ್ಟರ ಮಟ್ಟಿಗೆ ನೆರವು ಉಂಟಾಗಿದೆ ಎಂಬುದು ಒಂದು ಸಂಶೋಧನಾ ನಿಬಂಧದ ವಸ್ತುವಾಗುವಂತಹದ್ದು.

ಶಾಸನಗಳ ಸಾಹಿತ್ಯ ಸ್ವರೂಪದ ಅಧ್ಯಯನವನ್ನು ಅನ್ಯೋನ್ಯ ಪೂರಕವಾಗಿಯೂ, ಪ್ರತ್ಯೇಕವಾಗಿಯೂ ಮಾಡುವುದರಿಂದ ಆಗುವ ಪ್ರಯೋಜನಗಳು ಬಹು ವಿಧವಾಗಿವೆ. ಶಾಸನಗಳು ಮತ್ತು ಸಾಹಿತ್ಯದ ಸ್ವರೂಪವನ್ನು ಎರಡು ದೃಷ್ಟಿಕೋನಗಳಿಂದ ನೋಡಲಾಗಿದೆ.

ಅ. ೧. ಶಾಸನಗಳ ಹಾಗೂ ಆರಂಭಕಾಲದ ಕನ್ನಡ ಸಾಹಿತ್ಯ
೨. ಕವಿಗಳ ವೈಯಕ್ತಿಕ ವಿಚಾರಗಳು (ವಂಶಾವಳಿ, ಜನ್ಮಸ್ಥಳ ಇತ್ಯಾದಿ)
೩. ಕವಿಗಳ ಜೀವಿತದ ಕಾಲವನ್ನು ಗುರುತಿಸುವಲ್ಲಿ
೪. ಕವಿಗಳ ಅನುಪಲಬ್ದ ಕೃತಿಗಳನ್ನು ತಿಳಿಯುವಲ್ಲಿ
೫. ಕವಿಗಳ ಕಾವ್ಯಗಳಲ್ಲಿಯೂ ಪದ್ಯಗಳು ಶಾಸನಗಳಲ್ಲಿ ಉದ್ಧೃತವಾಗಿರುವುದು.
೬. ಸಾಹಿತ್ಯ ಕೃತಿಗಳ ಯುಗಧರ್ಮ ಹಾಗೂ ಶಾಸನಗಳು
೭. ಪ್ರಾಚೀನ ಕನ್ನಡ ಗದ್ಯ ಸಾಹಿತ್ಯ ಹಾಗೂ ಶಾಸನಗಳು
೮. ಕನ್ನಡ ಸಾಹಿತ್ಯದ ಛಂದಸ್ಸು ಭಾಷಿಕ ಸ್ವರೂಪ ಮತ್ತು ಶಾಸನಗಳು

ಆ. ೧. ಶಾಸನಗಳ ಮೇಲೆ ಕನ್ನಡ ಸಾಹಿತ್ಯದ ಪ್ರಭಾವ
೨. ಚಂಪೂ ಸಾಹಿತ್ಯದ ಪ್ರಭಾವ
೩. ದೇಸಿ ಸಾಹಿತ್ಯದ ಪ್ರಭಾವ.

ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನು ಗುರುತಿಸುವಲ್ಲಿ ಶಾಸನಗಳನ್ನೇ ಅವಲಂಭಿಸಬೇಕಾಗಿದೆ. ಕವಿರಾಜಮಾರ್ಗ ಮತ್ತು ಇನ್ನಿತರ ಆಧಾರಗಳು ಕ್ರಿಶ ೮೫೦ಕ್ಕಿಂತ ಹಿಂದೆ ಕನ್ನಡ ಸಾಹಿತ್ಯವಿದ್ದಿತು ಎಂಬುದಕ್ಕೆ ಆಧಾರಗಳೇ ಹೊರತು ಎಷ್ಟು ಹಿಂದೆ ಎಂಬುದಕ್ಕೆಲ್ಲ ಕ್ರಿಪೂ. ೩ನೇ ಶತಮಾನದ ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ ಬರುವ 'ಇಸಿಲ' ಎಂಬ ಸ್ಥಳವಾಚಿ ಪದವು ಅಚ್ಚಗನ್ನಡವೆಂದೂ ತೇದಿಯುಳ್ಳ ಅತ್ಯಂತ ಪ್ರಾಚೀನವಾದ ಕನ್ನಡ ಪದವೆಂದು ಈಗಾಗಲೇ ಸಂಶೋಧಕರು ಗುರುತಿಸಿದ್ದಾರೆ. ಈ ಉಲ್ಲೇಖದಿಂದ ಕ್ರಿಶ ಕ್ಕಿಂತಲೂ ಪೂರ್ವದಲ್ಲಿ ಕನ್ನಡ ಭಾಷೆ ಸಾಕಷ್ಟು ಪ್ರಚಾರದಲ್ಲಿತ್ತು ಎಂದು ಹೇಳಬಹುದಾಗಿದೆ. (ಪಿ. ನಾಗಭೂಷಣ, ಶಾಸನಗಳು ಮತ್ತು ಕನ್ನಡ ಸಾಹಿತ್ಯ, ಪು.೧೧-೧೫)

ಒಂದು ಜನಾಂಗದ ಸಂಸ್ಕೃತಿಯ ಸಾಧನೆ ಸ್ಪಷ್ಟವಾಗಿ ಗೋಚರವಾಗುವುದು ಸಾಹಿತ್ಯದಲ್ಲಿ ಸಾಹಿತ್ಯವು ಜನ ಜೀವನದ ಆದರ್ಶಗಳನ್ನು ಸಾಧನೆಯ ಸಾಹಸಗಳನ್ನು ಎತ್ತಿ ತೋರಿಸುವುದಾಗಿದೆ. ಇಂತಹ ಸಾಹಿತ್ಯವನ್ನು ಕವಿಗಳು ತಮ್ಮ ಸಾಹಿತ್ಯದ ಮೂಲಕ ಹೊರೆಹಾಕಿದ್ದಾರೆ.

ವಿಲಿಯಂ ಹೆನ್ರಿ ಹಡ್ಸನ್ ಎಂಬುವವನು ಸಾಹಿತ್ಯ ಚರಿತ್ರೆಯ ಬಗ್ಗೆ ಹೀಗೆ ಅಭಿಪ್ರಾಯಪಟ್ಟಿದ್ದಾನೆ. "ಯಾವುದೇ ದೇಶದ ಸಾಹಿತ್ಯ ಚರಿತ್ರೆ ಆ ದೇಶದ ಬುದ್ದಿ ಮತ್ತು ಸ್ವಭಾವದ ಅಭಿವ್ಯಕ್ತಿಯ ದಾಖಲೆ ಸಾಹಿತ್ಯ ಅವುಗಳ ಪಾಲಿಗೆ ಅತ್ಯಂತ ಮುಖ್ಯವಾದ ಒಂದು ಅಭಿವ್ಯಕ್ತ ವಿಧಾನ. ಈ ರೀತಿಯಲ್ಲಿ ಸಾಹಿತ್ಯ ಚರಿತ್ರೆ ಎಂದು ಕರೆಯುವ ವಸ್ತುವಿಗೆ ಪೂರಕವೂ ವ್ಯಾಖ್ಯಾನವೂ ಆಗುತ್ತದೆ. ಚರಿತ್ರೆ ಮುಖ್ಯವಾಗಿ ಒಂದು ಜನಾಂಗದವರು ಬಾಹ್ಯ ನಾಗರಿಕತೆಗೆ ಸಂಬಂಧಿಸಿದೆ. ಅವರ ಆಸ್ತಿತ್ವದ ಹೊರರೀತಿಯನ್ನು ಚಿತ್ರಿಸುತ್ತದೆ. ಮತ್ತು ಅವರ ಜಗತ್ತಿನ ವಾಸ್ತವ ಕಾರ್ಯರಂಗದಲ್ಲಿ ಏನು ಸಾಧಿಸಿದರು. ಏನು ಸಾಧಿಸಲಿಲ್ಲ ಎಂಬುದನ್ನು ತಿಳಿಸುತ್ತದೆ. ಆದರೆ ಅವರ ಮಾನಸಿಕ ಮತ್ತು ನೈತಿಕ ಗುಣ ವಿಶೇಷಗಳನ್ನು ಅರಿಯಬೇಕಾದರೆ ಅವರ ಭಾವಸತ್ತ್ವಗಳನ್ನು ಪೋಷಿಸಿ ಬೌದ್ಧಿಕ, ಆಧ್ಯಾತ್ಮಿಕ ಜೀವನವನ್ನು ರೂಪಿಸಿದ ಶಕ್ತಿಗಳ ಏರಿಳಿತವನ್ನು ಅವರ ಪರಿವರ್ತನಶೀಲ ಅದೃಷ್ಟದ ಘಟ್ಟಗಳ ಮೂಲಕ ಅನುಸರಿಸಬೇಕಾದರೆ ಅವರ ಸಾಹಿತ್ಯಕ್ಕೆ ನಾವು ಮೊರೆ ಹೋಗಬೇಕಾಗುತ್ತದೆ.

ಇಂತಹ ಕನ್ನಡ ಸಾಹಿತ್ಯಕ್ಕೆ ೨೦೦೦ ವರ್ಷಗಳ ಚರಿತ್ರೆಯಿದೆ. ಕನ್ನಡ ಸಾಹಿತ್ಯದಲ್ಲಿ ಮೂರು ಪ್ರಧಾನ ಧಾರೆಗಳನ್ನು ಗುರುತಿಸಬಹುದು ಮೊದಲನೆಯದು ಅಕ್ಷರ ಜ್ಞಾನವಿಲ್ಲದ ಜನಸಮೂಹ ತಮ್ಮ ಅಗತ್ಯಗಳಿಗೆ ತಕ್ಕಂತೆ ಸೃಷ್ಟಿಸಿಕೊಂಡಿರುವ ಮೌಖಿಕ ಸಾಹಿತ್ಯ ಇನ್ನೊಂದು ತಮ್ಮ ಕಾಲದಲ್ಲಿ ಶಿಕ್ಷಣ ಪಡೆದು ತಮ್ಮ ಅನುಭವವನ್ನು ಬರವಣಿಗೆಯಲ್ಲಿ ಹಿಡಿದಿಟ್ಟಿರುವ ಲಿಖಿತ ಸಾಹಿತ್ಯ ಮೌಖಿಕ ಸಾಹಿತ್ಯದ ಚರಿತ್ರೆಯನ್ನು ಗುರುತಿಸುವುದು ಕಷ್ಟ. ಅದು ತಲೆಮಾರಿನಿಂದ ತಲೆಮಾರಿಗೆ ಬಾಯಿ ಮಾತಿನ ಮುಖಾಂತರ ದಾಟಿಕೊಂಡು ಬಂದಿದೆ. ಹಾಗೆ ಉಳಿದು

ಬರುವಾಗ ಎಷ್ಟೋ ಬದಲಾವಣೆಗಳಿಗೂ ಒಳಗಾಗಿದೆ. ಹಾಡು, ಕಥೆ, ಒಗಟು, ಗಾದೆ ಇವೆಲ್ಲ ಮೌಖಿಕ ಸಾಹಿತ್ಯದಲ್ಲಿ ಹೇರಳವಾಗಿ ಇವೆ.

ಕನ್ನಡ ಸಾಹಿತ್ಯವು ಕಾಲ ಕಾಲಕ್ಕೆ ಪಡೆದುಕೊಂಡ ತಿರುವುಗಳನ್ನು ಅದರ ಚರಿತ್ರೆಯೊಂದಿಗೆ ನೋಡಲಾಗಿದೆ. ೨೦೦೦ ವರ್ಷಗಳ ಚರಿತ್ರೆಯಲ್ಲಿ ಕನ್ನಡ ಸಾಹಿತ್ಯವು ಚಂಪು, ವಚನ, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ ಮುಂತಾದ ರೂಪಗಳಲ್ಲಿ ಅರಳಿತು. ಆಧುನಿಕ ಕಾಲದಲ್ಲಿ ಹೊಸಗನ್ನಡ ಪ್ರಕಾರಗಳಾದ ಕಾವ್ಯನಾಟಕ, ಕಾದಂಬರಿ, ಕಥೆ, ಲಲಿತಕಲೆ, ಪ್ರಬಂಧ, ವಿಮರ್ಶೆ ಮುಂತಾದವುಗಳಲ್ಲಿ ವೈವಿಧ್ಯಮಯವಾಗಿ ಬೆಳೆಯಿತು. ಇದರ ಜೊತೆಗೆ ಸಮುದಾಯಗಳಿಂದ ಸೃಷ್ಟಿಯಾದ ಜಾನಪದ ಸಾಹಿತ್ಯ ಸಮೃದ್ಧವಾಗಿದೆ.

ಕನ್ನಡ ನಾಡಿನ ಶಾಸನ ಪ್ರಪಂಚಕ್ಕೆ ಸಾಹಿತ್ಯ ದೃಷ್ಟಿಯಿಂದ ಘನತೆಯನ್ನು ದೊರಕಿಸಿಕೊಟ್ಟರು ಶಾಸನ ಕವಿಗಳ ರಾಜಕೀಯ ಮತ್ತು ಸಾಂಸ್ಕೃತಿಕ ದಾಖಲೆಗಳಾದ ಶಾಸನಗಳನ್ನು ತಮ್ಮ ಪ್ರತಿಭಾಸ್ಪರ್ಶದಿಂದ ಸಾಹಿತ್ಯವನ್ನಾಗಿಸಿದ ಈ ಕವಿಗಳ ಸಂಖ್ಯೆ ಕರ್ನಾಟಕದಲ್ಲಿ ವಿಪುಲವಾಗಿದೆ. ನಮ್ಮ ನಾಡಿನ ಸುಮಾರು ೨೫೦೦೦ಕ್ಕೂ ಹೆಚ್ಚು ಶಾಸನಗಳನ್ನು ಬರೆದಿರುವ ಶಾಸನ ಕವಿಗಳು ತಮ್ಮ ಹೆಸರನ್ನು ಕೆಲವು ಕಡೆ ಹೇಳಿಕೊಂಡಿದ್ದಾರೆ. ಕೆಲವು ಕಡೆ ಹೇಳಿಕೊಂಡಿಲ್ಲ. ಇದರ ಜೊತೆಗೆ ರಾಯಚೂರು ಪ್ರದೇಶದಲ್ಲಿ ಬರುವ ವಚನಕಾರರು, ಶರಣರು, ಅನುಭಾವಿ ಕವಿಗಳು ದಾಸರು ಮುಂತಾದವರನ್ನು ಈ ಕೆಳಗಿನಂತೆ ಪರಿಚಯ ಮಾಡಬಹುದಾಗಿದೆ.

ಗಬ್ಬೂರಿನ ವೆಂಕಟೇಶ್ವರ ದೇವಾಲಯದ ಆವರಣದಲ್ಲಿರುವ ಕ್ರಿ.ಶ.೧೨೧೫ರ ನಾಗರಲಿಪಿ ಹಾಗೂ ಸಂಸ್ಕೃತ ಭಾಷೆಯ ಶಾಸನವು ಯಾದವ ಸಿಂಹಣನು ಗೋಪುರದಲ್ಲಿ ಪ್ರಸನ್ನ ರಾಜೇಶ್ವರ ಮತ್ತು ಕೇಶವ ದೇವರನ್ನು ಪ್ರತಿಷ್ಠಾಪಿಸಿದೆ. ಇದರೊಂದಿಗೆ ಕೇಶವಾದಿ ಚತುರ್ವಿಂಶತಿ ಮೂರ್ತಿಗಳನ್ನು ಸಕಲ ಪರಿವಾರ ದೇವತೆಗಳನ್ನು ಪ್ರತಿಷ್ಠಾಪಿಸಿದೆ. ಗೋಪುರವನ್ನು ಇವನ ದಂಡನಾಯಕನಾದ ಲಕ್ಷ್ಮಿದೇವನು ಅಳುತ್ತಿದ್ದು ಇವನು ಅನೇಕರಿಗೆ ಮನೆಯ ವೃತ್ತಿಗಳನ್ನು ಹಂಚಿದ ವಿಷಯವನ್ನು ತಿಳಿಸುವುದರ ಜೊತೆಗೆ ಈ ಶಾಸನವನ್ನು 'ಶ್ರೀನಿತ್ಯವರದ ದಾಸೇಶ್ವರಾರ್ಯ್ಯೇನ ರಚಿತೇಯಂ' ಶಾಸನ ಎಂದು ಉಲ್ಲೇಖವಿದೆ. ಗಬ್ಬೂರಿನ ಮೇಲಶಂಕರ ದೇವಾಲಯದ ಮುಂದೆ ಇರುವ ಶಾಸನವನ್ನು ಮಲ್ಲಿದೇವ ರಚಿಸಿದನೆಂದು ತಿಳಿದು ಬರುತ್ತದೆ. **(ಕವಿವಿಶಾಸಂ. ೭, ದೇ.೯)** ರಾಯಚೂರು ಪ್ರದೇಶದ ಹೈಹಯರ ಶಾಸನಗಳಲ್ಲಿ ಕವಿಯ ಹೆಸರು ಇಲ್ಲದಿದ್ದರೂ ಅನೇಕ ಶಾಸನಗಳಲ್ಲಿ ದಾಸರ ಅನೇಕ ದೇವಾಲಯಗಳು ಮಠಗಳ ಮುಂತಾದ ಹೆಸರುಗಳ ಉಲ್ಲೇಖವನ್ನು ಕಾಣಬಹುದಾಗಿದೆ. ಅನೇಕ ಶರಣರು, ದಾಸರು, ತತ್ವಪದಕಾರರೂ, ವಚನಕಾರರು ಮುಂತಾದ ಕವಿಗಳನ್ನು ರಾಯಚೂರು ಪ್ರದೇಶದಲ್ಲಿ ನೋಡಬಹುದಾಗಿದೆ.

ಗಬ್ಬೂರು ಬಿಬ್ಬಿ ಬಾಚಯ್ಯ

ಹನ್ನೆರಡನೆಯ ಶತಮಾನದ ಪ್ರಮುಖ ಶರಣರಲ್ಲಿ ಗಬ್ಬೂರಿನ ಬಿಬ್ಬಿ ಬಾಚಯ್ಯನು ಒಬ್ಬ. ಬಿಬ್ಬಿ ಇಲ್ಲವೆ ಬಿಬ್ಬಿ ಬಾಚಯ್ಯನು ಬಾಚರಸ ಎಂದು ಶರಣರಿಂದ (ಸಿದ್ದರಾಮ) ಕರೆಸಿಕೊಂಡಿದ್ದಾನೆ.

"ಏಣಾಂಕಧರ ಸೋಮೇಶ್ವರ" ಎಂಬ ವಚನಾಂಕಿತವನ್ನು ಇಟ್ಟುಕೊಂಡು ಅನೇಕ ವಚನಗಳನ್ನು ರಚಿಸಿದ್ದಾನೆ. ಈತನ 'ಪ್ರಸಾದ ಮಹಾತ್ಮ' ಪ್ರಸಿದ್ಧವಾದುದು. ಪ್ರಸಾದವನ್ನು ಎಂಜಲೆಂದು ನಿಂದಿಸಿದ ಗಬ್ಬೂರಿನ ವಿಪ್ರರಿಗೆ ಶರಣರ ಪ್ರಸಾದ ಮಹಿಮೆಯನ್ನು ಮನಗಾಣಿಸಿದ ಪವಾಡವೊಂದು ಈತನ ಹೆಸರಿನಲ್ಲಿದೆ. ಅದು ಈ ಕೆಳಗಿನಂತೆಯಿದೆ. ಗಬ್ಬೂರು ಒಂದು ಅಗ್ರಹಾರ. ಇಲ್ಲಿ ಆದಿತ್ಯದೇವ ಎಂಬ ವಿಪ್ರನ ಮಗ ಬಾಚಯ್ಯ ಕುಲದಿಂದ ವಿಪ್ರನಾದರೂ ಶರಣ ಮಾರ್ಗದ ಆಕರ್ಷಣೆಗೆ ಒಳಗಾಗಿ ತನ್ನ ಕುಲ ತೊರೆದು ಶರಣನಾದ. ಶರಣರ ಒಕ್ಕುಮಿಕ್ಕ ಪ್ರಸಾದ ಜೀವಿಯಾದ ಒಂದು ದಿನ ಪಕ್ಕದ ಹಳ್ಳಿಯಲ್ಲಿ (ಪೆದ್ದವಾಡ ಎಂದು ಭೈ.ಕಾ ರತ್ನಕರ) ಜಂಗಮಾರಾಧನೆ ಮುಗಿಸಿ ಪ್ರಸಾದವನ್ನು ಬಂಡಿಯಲ್ಲಿ ತುಂಬಿಕೊಂಡು ಗಬ್ಬೂರಿಗೆ ಮರುಳುವಾಗ ಊರೊಳಗಿನ ವಿಪ್ರರು ಪ್ರಸಾದವನ್ನು ಎಂಜಲೆಂದು ನಿಂದಿಸುತ್ತಾರೆ. ಕೋಪಾಪಿಷ್ಟನಾದ ಬಾಚಯ್ಯನು ಅವರ ಕುಹಕ ನುಡಿಗಳಿಗೆ ಪ್ರತಿಯಾಗಿ ಪ್ರಸಾದವೆತ್ತಿ ಅವರ ಮನೆಗಳ ಮೇಲೆ ತೋರುತ್ತಾನೆ. ಮನೆಗೆ ಉರಿಬಿದ್ದು ಧಗಧಗಿಸಿ ತೊಡಗುತ್ತದೆ. ತಪ್ಪಾಯಿತೆಂದು ವಿಪ್ರರು ಬಾಚಯ್ಯನಿಗೆ ಶರಣ ಬರುತ್ತಾರೆ. ಬಾಚಯ್ಯ ಪ್ರಸಾದದ ಉರಿಯನ್ನು ಹಿಂತೆಗೆದುಕೊಳ್ಳಲಾಗಿ ಅವರ ಮನೆ ಮೊದಲಿನಂತಾಗುತ್ತದೆ. ಹೀಗೆ ಚಾರಿತ್ರಿಕ ಎನ್ನಬಹುದಾದ ಬಾಚಯ್ಯನ ಪ್ರಸಾದದ ಪವಾಡ ಮುಂದೆ ಕಾವ್ಯ ಪುರಾಣಗಳಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲದೆ ನಿರೂಪಿತವಾಗಿರುವುದು ಅರಿವಿಗೆ ಬರುತ್ತದೆ. ಕ್ರಿಶ ೧೧೯೦ ರಲ್ಲಿ ರಚಿತವಾದ ಪಾಲ್ಕುರಿಕೆ ಸೋಮನಾಥ ಕವಿಯ ತೆಲುಗು 'ಬಸವಪುರಾಣ'ದಲ್ಲಿ ಎರಡು ಕಡೆ ಬಿಚ್ಚಿ ಬಾಚಯ್ಯನ ಪ್ರಸ್ತಾಪ ಬರುತ್ತದೆ. ಸಂಗಮೇಶ್ವರುಡು ಬಸವಣಿ ಮಾಡುವ ಕನ್ನಡುಗು ಕಥೆ ಹೇಳುವಲ್ಲಿ 'ಪ್ರಸಾದುಲು ಬಿಬ್ಬಿಬಾಚ್ಚಯ್ಯಗಾರು' (ಪ್ರಸಾದ ಬಿಬ್ಬಿ ಬಾಚಯ್ಯ) ವರ್ಣನೆ ಬರುತ್ತದೆ. ಮತ್ತು ಸಪ್ತಮಾಶ್ವಾಸನದಲ್ಲಿ 'ಬಿಬ್ಬಿ ಬಾಚಯ್ಯಗಾರ ಕಥೆ' ಎಂಬಲ್ಲಿ ಬಿಬ್ಬಿಬಾತಯ್ಯನ ಕಥೆ ಬರುತ್ತದೆ.

ಕ್ರಿಶ ೧೧೯೦ರಲ್ಲಿ ರಚಿತವಾದ ಪಾಲ್ಕುರಿಕೆ ಸೋಮನಾಥ ಕವಿಯ ತೆಲುಗು 'ಬಸವಪುರಾಣ' ದಲ್ಲಿ ಎರಡು ಕಡೆ ಬಿಬ್ಬಿ ಬಾಚಯ್ಯನ ಪ್ರಸ್ತಾಪ ಬರುತ್ತದೆ. ಸಂಗಮೇಶ್ವರುಡು ಬಸವಣಿ ಮಾಡುವ ಕನ್ನಡಗು ಕಥೆ ಹೇಳುವಲ್ಲಿ ಪ್ರಸಾದುಲು ಬಿಬ್ಬಿಬಾಚ್ಚಯ್ಯಗಾರು (ಪ್ರಸಾದಿ ಬಿಬ್ಬಿಬಾಚಯ್ಯ) ವರ್ಣನೆ ಬರುತ್ತದೆ. ಮತ್ತೆ ಸಪ್ತಮಾಶ್ವಾಸನದಲ್ಲಿ "ಬಿಬ್ಬಿ ಬಾಚಯ್ಯಗಾರ ಕಥೆ"

ಕ್ರಿಶ ೧೪೬೦ರಲ್ಲಿದ್ದ ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿಯಲ್ಲಿ.

ಗೊಬ್ಬೂರಿನೊಳು ಬಿಬ್ಬಿಬಾಚಯ್ಯನುಂ
ಭಕ್ತ ಪ್ರಸಾದಮಂ ಕೈ ಕೊಳಲು ಮತ್ತೋರ್ವ
ಭಕ್ತ ಗ್ರಹದಿಂದ ಪ್ರಸಾದದ ಭಂಡಿ ತುಂಬಿ ಬರೆ
ದ್ವಿಜರದಂ ಜರಿಯ ಕೇಳಿ
ಸುತ್ತ ಮನೆಗಳ ಮೇಲೆ ತಳೆಯ ಭಸ್ಮಗಳಾಗಿ
ಭಕ್ತಿಯಂ ವಿಪ್ರದುಂ ಬೇಡಿಕೊಳ್ಳಲಾಕ್ಷಣಂ
ಉತ್ಸವದ ಭವನಗಳ ಮಾಡಿ ತೋದವನವರ
ಚರಣಾಂಬುಜಕ್ಕೆ ಶರಣು ಎಂದಿದ್ದಾನೆ.

ಕ್ರಿಶ ೧೫೩೦ರಲ್ಲಿ ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣದಲ್ಲಿ.

ಶಿವಚಿತ್ತರಾವಿಪ್ರರೊಂದೆಸೆ ಹಿರಿಯ ಭಕ್ತ
ರವರ ಕೆರೆಹಿನ ಕುಣಿಕೆಯೊಂದೆಸೆಯೊಳಟ್ಟ ತೊ
ಗುವ ಕಾಲದಲ್ಲಿ ಕೀಳಾಗದೇ ಪಾರ್ವರಾ ಬಿಬ್ಬಿ
ಬಾಚರ ಬಂಡಿಯಾ
ನವ ಸುಪ್ತನಾದಮಂಜರೆದು ಒಂದೆರಗರೇ

ಕ್ರಿಶ ೧೫೫೦ರಲ್ಲಿದ್ದ ನಂಜುಂಡನ ಭೈರವೇಶ್ವರ ಕಾವ್ಯದಲ್ಲಿ

ಸವಿದುಳುಹಿದ ಪ್ರಸಾ
ದುವೆ ಭವರೋಗಕ್ಕೆ ಮದ್ದು
ಅವಿರತ ಮುಕ್ತಿಗೆ ತವರೆಂದು ನಂಬಿರ್ದ
ಭುವಿಯೊಳ್ ಬಿಬ್ಬಿಬಾಚಯ್ಯ
ಎಂಬುದಾಗಿ ಮೊದಲನೆಯ ಸಂಧಿಯಲ್ಲಿ ಬಂದರೆ.
ಪರಮ ಪ್ರಸಾದವ
ತೆರುತಿರೆ ಕಂಡೂ ಭೂ
ಸುರರೆಲ್ಲ ನಿಂದಿಸಲವರ
ಪುರವ ಸುಡಲು ಬಂದು
ಶರಣ ಪೊಕ್ಕರಿಗೆಲ್ಲಿ
ಮರಳಿತ್ತ ಬಿಬ್ಬಿಬಾಚಯ್ಯ

ಎಂಬುದಾಗಿ ಐದನೆಯ ಸಂಧಿಯಲ್ಲಿ ಬರುತ್ತದೆ.

ಕ್ರಿ.ಶ.೧೯೫೦ ರಲ್ಲಿದ್ದ ಪಂಚಯ್ಯನ ಭಕ್ತಿರಸದ ಸೋನೆಯಲ್ಲಿ

ಗಬ್ಬೂರೊಳಗೆ ಒಬ್ಬ ಬಿಬ್ಬಿ ಬಾಚಯ್ಯನು

ಉಬ್ಬಿ ಶೇಷವನೊಯಿವಾಗಾ

ಗಬ್ಬಿ ಪಾರುವರೆಲ್ಲಾ ಕೊಬ್ಬಿಂದ ಜರೆಯಲು

ಅಬ್ಬರದಲ್ಲಿ ಸುಟ್ಟ ಪುರವೆ.

ಹೀಗೆ ಬಿಬ್ಬಿ ಬಾಚಯ್ಯನ ಕಥೆ ವಿವಿಧ ಕಾವ್ಯಗಳಲ್ಲಿ, ಕಥೆಗಳಲ್ಲಿ ಬರುತ್ತಿದ್ದ. ಎಲ್ಲೆಡೆಯೂ ನಾವು ನೋಡುವುದು ಬಿಬ್ಬಿ ಬಾಚಯ್ಯನ ಪ್ರಸಾದದ ಬಗ್ಗೆ ಇಟ್ಟಿದ ನಂಬುಗೆ ರಾಯಚೂರು ಪ್ರದೇಶದ ಗೂಬ್ಬೂರಿನ ಪೂರ್ವ ದಿಕ್ಕಿಗೆ ೯ಕಿ.ಮೀ. ಅಂತರದಲ್ಲಿ ಬಿಬ್ಬಿ ಬಾಚಯ್ಯನ ಹೊಲವಿದೆ. ಈ ಹೊಲದಲ್ಲಿ ಬಾಚಯ್ಯ ಜಂಗಮರಿಗೆ ನಿತ್ಯ ಪ್ರಸಾದ ಅರ್ಪಿಸುತ್ತಿದ್ದ. ಎಂದು ಹೇಳಲಾಗುವ 'ಅರ್ಪಣಕಟ್ಟೆ' ಇದೆ ಈ ಕಟ್ಟೆಯ ಮೇಲೆ ಸೊಂಪಾಗಿ ಬೆಳೆದು ವಿಶಾಲವಾಗಿ ಹರಡಿಕೊಂಡು ನೆಲದವರೆಗೂ ಬಾಗಿ ಮೇಲೆದ್ದಿರುವ ವಿಲಕ್ಷಣ ಆಕರ್ಷಕವಾಗಿರುವ ಬನ್ನಿಯ ಮರ ಇದೆ. ಈ ಅರ್ಪಣಕಟ್ಟೆಯನ್ನು ಬಾಚಯ್ಯನವರು 'ಪ್ರಸಾದ ಅರ್ಪಣದ ಕಟ್ಟೆ' ಎಂದು ಹೇಳುವುದರ ಜೊತೆಗೆ ಬಾಚಯ್ಯನವರ ಸಮಾಧಿ ಗದ್ದುಗೆ ಇದೆ. ಅರ್ಪಣ ಎಂದಾಗ ಪ್ರಸಾದದ ನೆನಪಾಗುತ್ತದೆ. (ವೀರಶೈವ ಪಾರಿಭಾಸಿಕ ಪದ ಅರ್ಪಣ). ಬಿಬ್ಬಿ ಬಾಚಯ್ಯ ಪ್ರಾಸಾದಿಕನಂದೇ ಪ್ರಸಿದ್ಧಿ. ಈ ಹಿನ್ನೆಲೆಯಲ್ಲಿ ಈ 'ಅರ್ಪಣ ಕಟ್ಟೆ' ಜಂಗಮ ದಾಸೋಹದ ಕಟ್ಟೆಯಾಗಿದ್ದಿರಬಹುದು. ಎನಿಸುತ್ತದೆ. ಈ ಅರ್ಪಣ ಕಟ್ಟೆ'ಗೆ ನಿತ್ಯ ಪೂಜೆ ಸಲ್ಲುತ್ತಿದ್ದ. ಇದರ ಪೂಜಾರಿಗಳು ಗಂಜಿಗುಡಿ ಮಠ ಎಂಬ ವೀರಶೈವ ಜಂಗಮರಾಗಿದ್ದು. ಅವರೇ ಈ ಹೊಲದ ವಸ್ತುವಾರಿಯನ್ನೂ ನೋಡಿಕೊಳ್ಳುತ್ತ ಬಂದಿದ್ದಾರೆ. ಈ ಹೊಲಕ್ಕೆ ಸಂಬಂಧಿಸಿದ ವಿಶೇಷ ಆಚರಣೆ ಎಂದರೆ ಗಬ್ಬೂರು ಹಾಗೂ ಸುತ್ತಮುತ್ತಲಿನ ಜನ ಯಾರೂ ಹೊಲದಲ್ಲಿ ದನಗಳನ್ನು ಬಿಡುವುದಿಲ್ಲ. ಸುಗ್ಗಿಯಲ್ಲಿ ಕದಿಯುವುದಿಲ್ಲ. ಚಪ್ಪಲಿಯನ್ನು ಮೆಟ್ಟಿಕೊಂಡು ಯಾರು ಹೊಲದೊಳಗೆ ಪ್ರವೇಶಿಸುವುದಿಲ್ಲ. ಕಾರಣ ಕೇಳಿದರೆ ಬಿಬ್ಬಿ ಬಾಚಯ್ಯನವರು ಶರಣರು ಹೇಳುತ್ತಾರೆ. ಬಾಚಯ್ಯನವರು ಬಗ್ಗೆ ಈ ಜನತೆ ಹೊಂದಿದ ಭಯ ಭಕ್ತಿ ಗಮನಾರ್ಹವಾದುದು.

ರಾಯಚೂರು ಪ್ರದೇಶದ ಗಬ್ಬೂರಿನಲ್ಲಿ ಬಾಚಯ್ಯ, ಬಿಬ್ಬಣಯ್ಯ ಬಿಬ್ಬಣ್ಣ, ಬಿಬಿಬಾಚರಸ ಎಂಬ ಹೆಸರಿಡುವುದು ತತಿ ತಲೆಮಾರಿನಿಂದ ಪರಂಪರೆ ಬೆಳೆದು ಬಂದಿದೆ. ಈ ಊರಿನಲ್ಲಿ ಪ್ರತ್ಯೇಕವಾಗಿ ಬ್ರಾಹ್ಮಣರ ಓಣಿ ಇದ್ದು. ಈ ಬ್ರಾಹ್ಮಣ ಮನೆತನದವರು ಮೇಲೆ ಹೇಳಿದ್ದ ಬಿಬ್ಬಿ ಬಾಚಯ್ಯನ ಅರ್ಪಣಕಟ್ಟೆಗೆ ನೆಡೆದುಕೊಳ್ಳುವುದು. ಈಗಲೂ ಇದೆ. ಇದರ ಬಗ್ಗೆ ತಾವು ಹಿಂದೆ ಬಾಚಯ್ಯನವರ ಪ್ರಸಾದವನ್ನು ನಿಂದಿಸಿ ತಪ್ಪ ಮಾಡದ್ದಾಗಿ. ಹೇಳುತ್ತಾರೆ. ಅವರ ಅನುಗ್ರಹಕ್ಕೆ ಈ ಪೂಜೆ ಎನ್ನುತ್ತಾರೆ.

ಬಿಬ್ಬಿಬಾಚಯ್ಯನವರ ೧೦೨ ವಚನಗಳಿವೆ ಇವುಗಳಲ್ಲಿ ಅವರ ಅಂಕಿತನಾಮ 'ಏಣಾಂಕದರ ಸೋಮೇಶ್ವರಲಿಂಗ' ಆಗಿದೆ. ಗಬ್ಬೂರಿನಿಂದ ೩ಕಿ.ಮೀ. ದೂರದಲ್ಲಿ ಸೋಮೇಶ್ವರ (ಜಂಬುಲಿಂಗ) ದೇವಾಲಯವಿದ್ದು ಈ ದೇವಾಲಯದ ಲಿಂಗದಲ್ಲಿ ಏಳು ಬಣ್ಣಗಳು ಕಾಣಿಸುತ್ತದೆ. ಇದೇ ದೇವಾಲಯಕ್ಕೆ ಹನ್ನೆರಡನೆಯ ಶತಮಾನದಲ್ಲಿ ಬಿಬ್ಬಿ ಬಾಚಯ್ಯ ಶಿವಶರಣರು ನಡೆದುಕೊಂಡು ಈ ದೇವರ ಹೆಸರಿನಲ್ಲಿ ತಮ್ಮ ವಚನಗಳಿಗೆ ಅಂಕಿತವಿಟ್ಟುಕೊಂಡಿರಬಹುದೆಂದು ಊಹಿಸಲಾಗಿದೆ. ಬಿಬ್ಬಿ ಬಾಚಯ್ಯನವರ ವಚನ ಶೈಲಿ ದೀರ್ಘವಲ್ಲದ ಅವರ ಅನೇಕ ವಚನಗಳು ಸೂತ್ರ ಪ್ರಾಯವಾಗಿದ್ದು. ವ್ಯಾಖ್ಯಾನದ ಅಗತ್ಯವಿರದಷ್ಟು ಸರಳವಾಗಿವೆ. ಮತ್ತು ಅರ್ಥಪೂರ್ಣವಾಗಿದೆ. ಮಾದರಿಗೆ ಕೆಳಗಿನ ಈ ವಚನವನನು ಗಮನಿಸಬಹುದು.

ಭ್ರಾಂತಳಿದು ನಿಂದಲ್ಲಿ ಆರ್ಚನೆ
ವಿಕಾರವಳಿದಲ್ಲಿ ಪೂಜೆ
ಸಮತೆ ನಿಂದಲ್ಲಿ ನೈವೇದ್ಯ
ಸಕಲವನರಿದು ಮರೆದಲ್ಲಿ ಪರಿಪೂರ್ಣ
ಏಣಾಂಕಧರ ಸೋಮೇಶ್ವರ ಲಿಂಗದಲ್ಲಿ॥೮೪॥

ಅಂಗಕ್ಕೆ ಲಿಂಗ ಸಂಬಂಧ
ಆತ್ಮಂಗೆ ಅರಿವು ಸಂಬಂಧ
ಅರಿವಿಂಗೆ ನಿಶ್ಚಯ ಸಂಬಂಧ
ನಿಶ್ಚಯ ನಿಜದಲ್ಲಿ ನಿಂದಲ್ಲಿ
ಇಷ್ಟಲಿಂಗದ ತೃಷ್ಣೆ ಆಡಗಿತ್ತು.
ಏಣಾಂಕಧರ ಸೋಮೇಶ್ವರ ಲಿಂಗವರಿಯಲಾಗಿ॥೪॥

ಸ್ವಪ್ನದಲ್ಲಿ ಸಕಲಭೋಗಂಗಳ ಕಂಡು
ಎಚ್ಚೆತ್ತು ನೋಡಿದಡೆ ಮತ್ತಲ್ಲಿಯೆ ಬಚ್ಚಬಯಲಾಯಿತ್ತು.
ಅದು ತನುವಿನ ಇದುವು ಮನದ ಭ್ರಾಂತ
ತೋರಿ ಅಡಗುವ ಭೇದ
ಏಣಾಂಕಧರ ಸೋಮೇಶ್ವರಲಿಂಗದಲ್ಲಿಯೇ ಐಕ್ಯ॥೨೨॥

ಎಲೆಯಿಲ್ಲದ ವೃಕ್ಷದಲ್ಲಿ ಹೂವಿಲ್ಲದ ಕಾಯಾಗಿತ್ತು.
ಕಾಯಿ ಉದ್ದುರಿ ಹಣ್ಣು ಬಲಿಯಾತ್ತು.
ಕಣ್ಣಿಗೆ ಹಣಲ್ಲದೆ ಮೆಲುವುದಕಲ್ಲ

ಏಣಾಂಕಧರ ಸೋಮೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು.॥೫೫॥

ಯೋನಿಯಿಲ್ಲದ ಆಕಳಿನಲ್ಲಿ ಬಾಯಿಯಿಲ್ಲದ ಕರು ಹುಟ್ಟಿತ್ತು.
ಮೊಲೆಯಿಲ್ಲದೆ ಹಾಲು ಕುಡಿದು ಬಡಲಿಲ್ಲವೆ ತಿರುಗಾಡುತ್ತದೆ.
ಏಣಾಂಕಧರ ಸೋಮೇಶ್ವರಲಿಂಗ ಇದೇನು ಸೋಜಿಗವೆಂದರಿಯೆ ॥೩೮॥

ಸ್ವಾದವಿಲ್ಲದ ಹಣ್ಣು, ಸೌರಭವಿಲ್ಲದ ಕುಸುಮ
ಸಾರವಿಲ್ಲದೆ ದ್ರವ್ಯ, ಆದಾರಿಗೆ ಯೋಗ್ಯ.
ಅರಿವಿಲ್ಲದವನ ಇಷ್ಟದ ಬರಿಯೇ ಡಂಬಕದ ಪೂಜೆ
ಅಡಿಯಿಡಲಿಲ್ಲ ವಣಾಂಕಧರ ಸೋಮೇಶ್ವರ ಲಿಂಗಕ್ಕೆ ॥೮೪॥

(ಬಸವಲಿಂಗ ಸೊಪ್ಪನಮಠ, ಗೊಬ್ಬೂರು ಶ್ರೀ ಬಿಬ್ಬಿ ಬಾಚಯ್ಯ ಕೆಲವು ವಿಚಾರಗಳು ಪು.೪೦.)

೪.೨. ಶಾಸನಗಳ ಧಾರ್ಮಿಕ ಸ್ವರೂಪ

ಶಾಸನದ ಉದ್ದೇಶ ಸಾಹಿತ್ಯ ನಿರ್ಮಿತಿಯಲ್ಲ. ಆದರೂ ಕವಿಯ ಪ್ರತಿಭೆಯಿಂದ ನಿರೂಪಣೆ, ಭಾಷೆಯ ಹದ, ಅಲಂಕಾರ, ಕಲ್ಪಕತೆ ಇತ್ಯಾದಿಗಳಿಂದ ಕೂಡಿದ ಶಾಸನ ಪದ್ಯಗಳು ರಸಾನುಭವವನ್ನು ನೀಡುತ್ತವೆ. ಕನ್ನಡ ಸಾಹಿತ್ಯಕ್ಕಿರುವಂತೆಯೇ ಕನ್ನಡ ಶಾಸನ ಸಾಹಿತ್ಯಕ್ಕೂ ಒಂದು ಸಾಹಿತ್ಯ ಚರಿತ್ರೆಯಿದೆ ಎಂಬುದನ್ನು ವಿದ್ವಾಂಸರು ಗುರುತಿಸಿದ್ದಾರೆ.

ಪ್ರಸ್ತುತ ಅಧ್ಯಯನ ಪ್ರದೇಶದ ಶಾಸನಗಳು ೮ನೇ ಶತಮಾನದಿಂದ ೧೫ನೇ ಶತಮಾನದವರೆಗೆ ಹರಡಿಕೊಂಡಿದ್ದು. ಕಲ್ಯಾಣ ಚಾಲುಕ್ಯರ ಪೂರ್ವ ಕಲ್ಯಾಣ ಚಾಲುಕ್ಯರ ಕಾಲ, ಕಲ್ಯಾಣ ಚಾಲುಕ್ಯೋತ್ತರಗಳೆಂದು ವಿಭಾಗಿಸಿಕೊಳ್ಳಬಹುದು. ಮೊದಲ ಹಂತದ ಶಾಸನಗಳೂ ಸರಳ ಸಂಕ್ಷಿಪ್ತವಾಗಿವೆ. ಎರಡನೆಯ ಹಂತದಲ್ಲಿ ಪ್ರೌಢ ದೀರ್ಘ ಸಾಹಿತ್ಯಕವಾಗಿವೆ. ಮೂರನೆಯ ಹಂತದ ಶಾಸನಗಳು ಸಂಸ್ಕೃತ ಶಾಸನಗಳು. ಭಾಷೆ ಕನ್ನಡ ದೇಸಿ ಸಂಕ್ಷಿಪ್ತವಾದ ಗದ್ಯ ಶಾಸನಗಳು ಹೆಚ್ಚು ಕಾಣಿಸಿಕೊಂಡಿವೆ.

ಕನ್ನಡ ಸಾಹಿತ್ಯವು ಕಾಲಕಾಲಕ್ಕೆ ಬದಲಾದ ಆಶಯಕ್ಕೆ ತಕ್ಕಂತೆ ಆಕೃತಿಗಳನ್ನು ಪಡೆಯುತ್ತ ಆಯಾ ಕಾಲ ಘಟ್ಟದ ಸಂಸ್ಕೃತಿಯ ಸಂವೇದನೆಗಳನ್ನು ಹಿಡಿದಿಟ್ಟಿದೆ. ಅವುಗಳನ್ನು ರಾಜನಿಷ್ಠ ಧರ್ಮನಿಷ್ಠ, ಭಕ್ತಿನಿಷ್ಠ, ಸ್ವತಂತ್ರ ಇತ್ಯಾದಿಯಾಗಿ ವಿಭಾಗಿಸಿ ಅರ್ಥೈಸಿಕೊಳ್ಳುವ ಪ್ರಯತ್ನ ನಡೆದಿದೆ. ಯಾವುದೆ ಸಾಹಿತ್ಯ ಒಂದು ಕಾಲದ ಸಾಮಾಜಿಕ ಸಂದರ್ಭದಲ್ಲಿ ಸಂಭವಿಸುತ್ತದೆಯಾದ್ದರಿಂದ ಈ ಎಲ್ಲ ಆಶಯ ಆಕೃತಿಗಳು ಆಯ ಸಮಾಜದ ಒತ್ತಡ ವಿನ್ಯಾಸಗಳು ಫಲವೇ ಆಗಿರುತ್ತದೆ. ಎನುವುದಾದರೆ ಭಿನ್ನಭಿನ್ನ ಕಾಲದಲ್ಲಿ ಸೃಷ್ಟಿಯಾದ ಶಾಸನ ಸಾಹಿತ್ಯ ಏನಾಗಿದೆ. ಅದು ಆಯಾ

ಕಾಲದ ಸಮಾಜದ ಸಾಂಸ್ಕೃತಿಕ ಕಥನವನ್ನು ಕಟ್ಟಿಕೊಳ್ಳಲು ಹೇಗೆ ಸಹಾಯಕವಾಗಿದೆ. ಕನ್ನಡ ಸಾಹಿತ್ಯಕ್ಕೂ ಶಾಸನ ಸಾಹಿತ್ಯಕ್ಕೂ ಇರುವ ಸಾಮ್ಯ ವ್ಯತ್ಯಾಸಗಳೇನು? ಮಿತಿ ಸ್ವಾತಂತ್ರ್ಯಗಳೇನೆಂಬುದನ್ನು ಗಮನಿಸಬೇಕಾಗುತ್ತದೆ. ಕನ್ನಡ ಶುದ್ಧ ಸಾಹಿತ್ಯದಲ್ಲಿ ಧಾರ್ಮಿಕ ಸ್ವರೂಪ ವೀರ ಮೌಲ್ಯಗಳ ಕಾಣಿಸಿಕೊಳ್ಳುವುದಕ್ಕೆ ಮೊದಲೇ ಅವು ಶಾಸನಗಳಲ್ಲಿ ಕಾಣಿಸಿಕೊಂಡಿವೆ. ಅಶೋಕನ ಶಾಸನಗಳು ಧರ್ಮ ಶಾಸನಗಳೇ ಆಗಿವೆ. ಅದರ ಸಾಹಿತ್ಯ ಸರಳ ಗದ್ಯದಲ್ಲಿದ್ದು ಆತ್ಮೀಯವಾಗಿವೆ. ನಂದಿಸೇನ ಮುನಿಯ ವೈರಾಗ್ಯ ಗುಣ ಮಧುರ, ಅರಭಟ್ಟರ ತೇಜಸ್ವಿಯಾದ ಪಾತ್ರ ಚಿತ್ರಗಳು ಅದ್ಭುತವಾಗಿ ಮೂಡಿ ಬಂದಿದ್ದು, ಶಾಸನಗಳಲ್ಲೇ ಒಂಭತ್ತು ಹತ್ತನೇ ಶತಮಾನದಲ್ಲಿ ಧಾರ್ಮಿಕ ಸ್ವರೂಪ ವೀರರನ್ನು ಕ್ಷಾತ್ರ ವೀರರನ್ನು ನಾಯಕರನ್ನಾಗಿ ಮಾಡಿಕೊಂಡು ಧರ್ಮ ಮತ್ತು ಅರಸೋತ್ತಿಗೆಯ ಕೊಂಡಾಟಕ್ಕಾಗಿ ಸೃಷ್ಟಿಯಾದ ಸಾಹಿತ್ಯ ಕೃತಿಗಳಂತೆ ಶಾಸನಗಳೂ ಕೂಡ ಅದೇ ನಿಯೋಗವನ್ನು ಹೊತ್ತಂತೆ ಧಾರ್ಮಿಕ ಕೊಡುಗೆಗಳನ್ನು ದಿಗ್ವಿಜಯ ಸಾಧನೆಗಳನ್ನು ಕೊಂಡಾಡಿ ವೀರ ಮೌಲ್ಯವನ್ನು, ಧರ್ಮನಿಷ್ಠೆಯನ್ನು ಪ್ರಸರಣ ಮಾಡಿದೆ. ಚಂಪೂಕಾವ್ಯದ ಎಲ್ಲ ಲಕ್ಷಣಗಳೂ ಇಲ್ಲಿ ಕಾಣಿಸಿಕೊಂಡವು. ೧೨ನೇ ಶತಮಾನದ ಹೊತ್ತಿಗೆ ಈ ಉಬ್ಬರವಿಳಿದು ಕನ್ನಡ ಸಾಹಿತ್ಯವಾಹಿನಿ ಹೊಸತಿರುವನ್ನು ಪಡೆದುಕೊಂಡಿತು. ಅರಮನೆಯ ಒತ್ತೆಯಿಂದ ಬಿಡಿಸಿಕೊಂಡು ಸ್ವತಂತ್ರವಾಗಿ ಜನಸಾಮಾನ್ಯರ ಹತ್ತಿರಕ್ಕೆ ಬಂದಿತು. ಚಕ್ರವರ್ತಿಯ ಜಾಗದಲ್ಲಿ ದೈವವೂ ಪರಾಕ್ರಮಿಯ ಶೌರ್ಯ ಸಾಹಸದ ಜಾಗದಲ್ಲಿ ಭಕ್ತನೂ ವೀರಭಕ್ತಿಯೂ ಕಾಣಿಸಿಕೊಂಡವು. ಪ್ರಸ್ತುತ ಅಧ್ಯಯನ ಪ್ರದೇಶದ ಶಾಸನದಲ್ಲಿ ಈ ಪಲ್ಲಟ ನೇರವಾಗಿ ಕಾಣಿಸಿಕೊಂಡದ್ದು ೧೬ನೇ ಶತಮಾನದ ಒಂದು ಶಾಸನದಲ್ಲಿ ಚಕ್ರವರ್ತಿಗಳ ಬಿರುದಾವಳಿ ವಂಶಾವಳಿಗಳಾವುವೂ ಕಾಣದೆ ಆ ಜಾಗದಲ್ಲಿ "ಶ್ರೀ ಮಲ್ಲಿಕಾರ್ಜುನ ದೇವ"ರೆಂದೂ ಅರಸನ ಪಾದಪದ್ಮೋಹ ಜೀವಿಗಳಾದ ಅಧಿಕಾರಿಗಳೂ, ನಿಷ್ಠಾವಂತ ಬಂಟರ ಹೊಗಳಿಕೆಯ ಜಾಗದಲ್ಲಿ ಮಲ್ಲಿಕಾರ್ಜುನ ದೇವರ ದಿವ್ಯ ಶ್ರೀಪಾದ ಪದ್ಮಾರಾಧಕರಾದ ಶ್ರೀ ಭಿಕ್ಷಾವೃತ್ತಿ ಅಯ್ಯನೆಂಬ ಶರಣನೊಬ್ಬನ ಹೆಸರು ಕಾಣಿಸಿಕೊಂಡಿದೆ.

ಈ ಪ್ರದೇಶದ ಪ್ರಾರಂಭಿಕ ಶಾಸನಗಳಲ್ಲಿ ಹೈಹಯ ಅರಸರ ಬಿರುದಾವಳಿ ಕಡಿಮೆಯಿದ್ದು ವೀರನಿಗೆ ಪ್ರಾಮುಖ್ಯತೆಯಿರುವುದು ಕಂಡು ಬಂದಿದೆ. 'ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನ' ಎಂಬ ತತ್ವವನ್ನು ಹಿಡಿಯುವ ಇಂಥ ವೀರರನ್ನು "ಉಣ್ಡುಟ್ಟು ಸಾಯಲಮ್ಮದ ಲೆಂಕರಗಂಡರೆಂದೂ" ವೈರಿಗಳನ್ನು ಮೆಟ್ಟಿ ತಲೆಯ ಕಡಿವವರೆಂದು ಅರಸರ 'ಚಿತ್ತ ಸರಿತಾನ'ವೆಂದೂ ಅವರ ಸ್ವಾಮಿನಿಷ್ಠೆಯನ್ನು ಶಾಸನ ಕವಿಗಳು ಹೊಗಳಿದ್ದಾರೆ. ಚಕ್ರವರ್ತಿಗಳ ಸಾಮಂತರ, ಮಾಂಡಲೀಕರ ಬಿರುದಾವಳಿಗಳು, ಚಾಲುಕ್ಯರ ಕಾಲದಲ್ಲಿ ಉದ್ದುದ್ದವಾಗಿ ಬೆಳೆದಿದೆ. ಚಕ್ರವರ್ತಿ ಅಥವಾ ರಾಜ ಮತ್ತು ಸ್ಥಳೀಯ ಸಾಮಾಂತರ ಅರಸರು, ಅಧಿಕಾರಿಗಳ ಸಂಬಂಧಾಂತರಗಳಿಗೆ ತಕ್ಕಂತೆ ಅರಸರ ಬಲಿಷ್ಠತೆ, ದೌರ್ಬಲಕ್ಕೆ ತಕ್ಕಂತೆ ಇದು ಹಿಗ್ಗುತ್ತ, ಕುಗ್ಗುತ್ತ, ಹೋದಂತೆ

ಕಂಡುಬರುತ್ತದೆ. ಇದರಿಂದ ಶಾಸನ ಹಾಕಿಸಿದವರು ಯಾಕೆಂಬುದರ ಮೇಲೆ ಶಾಸನ ಸಾಹಿತ್ಯ ಭಾಷೆ ಮುಖ್ಯವಾಗುತ್ತದೆಯೇ ಹೊರತು ಯುಗಧರ್ಮ ಕಾರಣವಲ್ಲವೆನಿಸುತ್ತದೆ.

ಜನಸಾಮಾನ್ಯರ ಶಾಸನಗಳ ಸರಳ ಗದ್ಯದಲ್ಲಿ ಘಟನೆಯನ್ನು ದಾಖಲಿಸಿರುತ್ತವೆ. ಅಥವಾ ಅವರ ಅಭಿವ್ಯಕ್ತಿಗೆ ಬರಹದ ಹಂಗು ಬೇಕಿಲ್ಲ. ಕೇವಲ ಸ್ಮಾರಕವಷ್ಟೇ ಇರುತ್ತದೆ. ಅರಸರು ಅಧಿಕಾರಿಗಳ ಪಂಡಿತರನ್ನು ಕವಿಗಳನ್ನು ಶಾಸನ ರಚನೆಗೆ ನಿಯೋಜಿಸುತ್ತಿದ್ದುದರಿಂದ ಅಲ್ಲಿ ಸಾಹಿತ್ಯಾಂಶ ಹೆಚ್ಚು ಕಾಣುತ್ತದೆ.

ಮಧ್ಯಕಾಲೀನ ಭಕ್ತಿಯುಗದ ಕನ್ನಡ ಸಾಹಿತ್ಯವು ಭಕ್ತ ಮತ್ತು ಭಗವಂತರ ಸಂಬಂಧವನ್ನು ವೈಭವೀಕರಿಸಿತು. ಪ್ರಭುತ್ವದ ಪ್ರಾಬಲ್ಯವನ್ನು ವಿರೋಧಿಸಿತು. ಶಾಸನಗಳಲ್ಲಿ ಈ ಪ್ರಭುತ್ವ ವಿರೋಧಿ ನಿಲುವು ಕಂಡುಬರುವುದಿಲ್ಲ. ಹಾಗೊಮ್ಮೆ ಕಂಡಬಂದರೂ ಅದು ಅತಿಸೂಕ್ಷ್ಮವಾಗಿ ಪರೋಕ್ಷವಾಗಿ ಕಾಣಿಸಿಕೊಂಡಿದೆ. ಕೊಟ್ಟ ದಾನವನ್ನು ಊರ್ಜಿತ ಮಾಡದೆ ಕೆಡಿಸುವ ಅರಸರನ್ನು ಅರಸಿನ ಮನುಷ್ಯರನ್ನು ಮುಲಾಜಿಲ್ಲದೆ ಎಚ್ಚರಿಸಲಾಗಿದೆ. ತಾವು ಸುರಕ್ಷಿತವಾಗಿದ್ದು ಇತರ ವೀರರನ್ನು ಸಾಯಲು ಮುನ್ನುಗ್ಗಿಸುವ ಅರಸರ ಸ್ವಾರ್ಥವನ್ನು ಒಂದು ಶಾಸನ ಕವಿ ವಿಡಂಬಿಸಿದ್ದಾನೆ. ಅರಸರ ಮಿತಿಮೀರಿದ ಹಿಂಸಾರುಚಿ ದುರಾಚಾರದಿಂದಾಗಿ ಮಹೀಕಾಂತ ಬೇಸತ್ತು ಹೊಲೆಯಾಗಿ ಅಳವಳಿದಿದ್ದಾಳೆ. ಈ ಪ್ರಬಲತರದುರಾಚಾರ ಸಂದೇಹದಿಂದ ಅವಳನ್ನು ರಕ್ಷಿಸುವ ಅವಶ್ಯಕತೆಯಿದೆ. ಎಂಬ ಭಾಷೆ ಮತ್ತೊಂದು ಶಾಸನ ಪದ್ಯದಲ್ಲಿ ವ್ಯಕ್ತವಾಗಿದೆ.

ಮಧ್ಯಕಾಲೀನ ಕನ್ನಡ ಸಾಹಿತ್ಯದ ಪ್ರಧಾನ ಮೌಲ್ಯವಾದ ಭಕ್ತಿಯನ್ನು ರಾಜ ಭಕ್ತಿಯನ್ನಾಗಿಯೇ ವೈಭವೀಕರಿಸುತ್ತ ಶಾಸನಗಳು ಮುಂದುವರೆಸಿದವು. ಪೂರ್ಣ ಶರಣಾಗತಿಯ ಭಕ್ತಿ ಭಾವವು ಊಳಿಗಮಾನ್ಯತೆಗೆ ಪೂರಕವಾಗಿದ್ದು. ಆ ತತ್ವವು ಇಲ್ಲಿ ಮುಕ್ತಿ ಸಾಧನವಾಗದೇ ಪ್ರಭುತ್ವದ ವಿಜೃಂಭಣೆಗೆ ಪೋಷಕವಾಗಿ ಬಂದಿದೆ. ಪುರಾಣ ಪ್ರತೀಕ ಮತ್ತು ಆಶಯಗಳು ಯಜಮಾನ ಸಂಸ್ಕೃತಿಯನ್ನು ಘೋಷಿಸಿ ಪ್ರವಹಿಸುವಂತೆ ಮಾಡುತ್ತದೆಂಬುದನ್ನು ಅರಿತು ವಚನಕಾರರು ಅವುಗಳನ್ನು ಭಂಜಿಸಿ ತನ್ಮೂಲಕ ಜನಪರವಾದ ಪ್ರತಿ ಸಂಸ್ಕೃತಿಯೊಂದನ್ನು ನಿರ್ಮಾಣ ಮಾಡಲು ಪ್ರಯತ್ನಿಸಿದರು. ಅರಸೊತ್ತಿಗೆಯನ್ನು ವೇಳೆವಾಳಿತವನ್ನು ಕನ್ನಡ ಸಾಹಿತ್ಯ ನಿರಾಕರಿಸುತ್ತಿದ್ದ ಕಾಲದಲ್ಲೇ ಶಾಸನೋಲ್ಲೇಖಿತ ನೂರಾರು ಲೆಂಕರು, ಗರುಡರು, ಎಕ್ಕಟಿಗರು ಇತ್ಯಾದಿ ವೀರಸಮುದಾಯಗಳು ರಾಜನಿಷ್ಠೆ, ಊಳಿಗದವರು ವಿಜೃಂಭಿಸುತ್ತಿದ್ದರೆಂಬುದನ್ನು ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡಿದ್ದೇವೆ. ಯಜಮಾನ ಸಂಸ್ಕೃತಿಯ ವಕ್ತಾರರಂತೆ ಶಾಸನಗಳ ತುಂಬಾ ಪುರಾಣದ ರೂಪಕ ಸಾಮತಿಗಳು, ಪ್ರತಿಮೆಗಳು, ಸನ್ನಿವೇಶಗಳೂ ಪದೇ ಪದೇ ಅನುಕರಣಗೊಂಡಿವೆ. ಶರಣರ ಚಳುವಳಿ ಸಮಾಜದಲ್ಲಿ ಯಾವುದೇ ಸ್ವರಗಳನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿತು? ಅಥವಾ ತೆಗೆದುಕೊಳ್ಳಲಾಗಲಿಲ್ಲ? ಎಂಬ ಪ್ರಶ್ನೆಗಳು ಏಳುತ್ತವೆ. ಕೆಲವು

ವಚನಕಾರರು, ಶರಣನಾಯಕರ ವೈಚಾರಿಕತೆಯ ಪ್ರಭಾವದಿಂದ ಹಾಗೂ ಬಿಜ್ಜಳನ ಮಹಾತ್ವಾಕಾಂಕ್ಷೆ ಆಕ್ರಮಣಶೀಲತೆ, ದೌರ್ಬಲ್ಯಗಳು ಕಾರಣವಾಗಿ ೧೨ನೇ ಶತಮಾನದಲ್ಲಿ ಕರ್ನಾಟಕ ಕಲ್ಯಾಣ ಭಾಗದಲ್ಲಿ ಕಂಡುಬಂದ ಈ ಪ್ರಭುತ್ವ ವಿರೋಧಿ ನೆಲೆಗಳ ಇಡೀ ಕರ್ನಾಟಕದಲ್ಲೇ ಇತ್ತು. ಎಂದು ಹೇಳಲು ಸಾಧ್ಯವಾಗುವುದಿಲ್ಲ.

ಕಲ್ಯಾಣ ಚಾಲುಕ್ಯ ಆಶ್ರಯಕ್ಕೆ ಒಳಪಟ್ಟಿದ್ದ ಈ ಪ್ರದೇಶದ ಕವಿ ಕಲಾವಿದರ ಬಿಂಬಿಸಿದ ಧೋರಣೆಗಳೆಂಥವು ಅನೇಕ ಮಿತಿಗಳ ಮಧ್ಯೆ ಶಾಸನ ಕವಿ ತನ್ನಾವ ಸ್ವತಂತ್ರ ಧೋರಣೆಯನ್ನು ಅಥವಾ ಸಾಮಾಜಿಕ ಒತ್ತಡ ವಿನ್ಯಾಸವನ್ನು ಬಿಂಬಿಸಲು ಸಾಧ್ಯವಾಯಿತು ಎಂಬುದು ಚರ್ಚಿಸಬೇಕಾದ ವಿಷಯ. ಇಷ್ಟೆಲ್ಲ ಚರ್ಚೆಗಳ ಫಲಿತಾಂಶವಷ್ಟೆ ಶಾಸನ ಸಾಹಿತ್ಯ ಅಳರಸರ ಅಧೀನವಾಗಿತ್ತಾಗಿ ಆ ಯುಗ ಧರ್ಮದ ಸಂಪೂರ್ಣ ಮಿಡಿತಗಳಿಗೆ ತೆರೆದುಕೊಳ್ಳಲಾಗಲಿಲ್ಲ. ಎಂಬುದು ಹಾಗೆಂದು ಮಾತ್ರಕ್ಕೆ ಶಾಸನ ಬರಹವನ್ನು ಕಡೆಗಣಿಸಬೇಕಿಲ್ಲ. ಅವು ಆಯಾ ಕಾಲದ ನಿರ್ದಿಷ್ಟ ಸಾರ್ವತ್ರಿಕ ದಾಖಲೆಗಾಗಿ ವೈಯುಕ್ತಿಕ ದಾಖಲೆಗಳಾಗಿ ಬಿತ್ತರಿಸಿರುವ ನೂರಾರು ವಿಚಾರಗಳು ಆಯಾ ಕಾಲದ ಸಮಾಜದ ಸ್ಥಿತಿ ಸಂಚಲನಗಳನ್ನು ಆಶಯ, ಅಪೇಕ್ಷೆ, ಒತ್ತಡಗಳು, ಪ್ರಗತಿ ಪತನಗಳನ್ನು ಸೆರೆಹಿಡಿದಿವೆ. ಇದನ್ನು ಈ ಹಿಂದಿನ ಅಧ್ಯಾಯಗಳಲ್ಲಿ ಕಂಡುಕೊಂಡಿದ್ದೇವೆ. ಕನ್ನಡ ಭಾಷೆ ಛಂದಸ್ಸು ಲಿಪಿಗಳಲ್ಲಿ ಕಾಲಕಾಲಕ್ಕೆ ಆಗಿರುವ ಅವಸ್ಥಾಂತರಗಳು ಕನ್ನಡದ ಆಡುಭಾಷೆ ಸಾಮಾಜಿಕ ಮತ್ತು ಪ್ರಾದೇಶಿಕ ಉಪಭಾಷೆಗಳನ್ನು ಅರಿಯಲು, ದ್ವಿಭಾಷಿಕ ಮತ್ತು ಬಹುಭಾಷಿಕ ಶಾಸನಗಳು, ಭಾಷಾಸ್ವೀಕರಣ ಮತ್ತು ಲಿಪಿಕರಣ ಸಮಸ್ಯೆಗಳು, ಗಡಿನಾಡಿನ ಶಾಸನಗಳು ಮತ್ತು ಭಾಷಾ ಬೆರೆಕೆ ಭಾಷಾ ಸಂಗೋಪನೆ ಇತ್ಯಾದಿ. ಅಧ್ಯಯನಗಳಿಗೆ ಶಾಸನ ಬರಹ ಅತ್ಯುತ್ತಮ ಆಕರವಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಇವುಗಳನ್ನು ಚರ್ಚಿಸಲು ಸಾಧ್ಯವಾಗಿಲ್ಲ. ಇಲ್ಲಿನ ಶಾಸನ ಕವಿಗಳ, ಮತ್ತು ವರ್ಣನೆಗಳನ್ನಷ್ಟೇ ಗಮನಿಸಲಾಗಿದೆ.

ಕನ್ನಡ ಶ್ರೇಷ್ಠ ಕವಿಗಳು ತಮ್ಮ ಕಾಲಕ್ಕೆ ಬದುಕನ್ನು ಅದಕ್ಕೆ ಹಿನ್ನೆಲೆಯಾದ ಯುಗಧರ್ಮವನ್ನು ಮೌಲ್ಯಗಳನ್ನು ಸಾಂಸ್ಕೃತಿಕ ಮುಖಾಮುಖಿಗಳನ್ನು ತನ್ನ ತೀವ್ರ ಸಂವೇದನೆಯಿಂದ ಕಾವ್ಯಾನುಭವವನ್ನಾಗಿ ಮಾಡಿದರೆ ಜನಪದರು ಅನೇಕ ರೀತಿಯ ಪುರಾಣಗಳನ್ನು ಗಾದೆಗಳನ್ನು ಸೃಷ್ಟಿಸುವ ಮೂಲಕ ಸಾಂಕೇತಿಕ ಆಚರಣೆಗಳ ಮೂಲಕ ಸಮಾಜದ ಒಳ ಸೆಳವುಗಳನ್ನು ದಾಖಲಿಸುತ್ತಾರೆ. ಶಾಸನ ಬರಹಗಾರನಿಗೆ ಹೊಸ ಪ್ರತಿಮೆ ಸಂಕೇತಗಳನ್ನು ಸೃಷ್ಟಿಸಿ ತನ್ನ ಸಂವೇದನೆಗಳನ್ನು ಹಿಡಿಯಲು ಹೆಚ್ಚು ಅವಕಾಶವಿಲ್ಲ. ಹಾಗಾಗಿ ಜನಪ್ರಿಯವಾದ ಪುರಾಣ ಪ್ರತಿಮೆ ಪ್ರತೀಕ ಘಟನೆಗಳನ್ನು ತಾನು ಬಿಂಬಿಸಬೇಕಾದ ಮೌಲ್ಯಕ್ಕೆ ತಕ್ಕಂತೆ ದುಡಿಸಿಕೊಂಡಿದ್ದಾನೆ.

ಪ್ರತಿಯೊಂದು ಸಂಸ್ಕೃತಿಯೂ ಒಡಲೂ ಅನೇಕ ಪುರಾಣಗಳನ್ನು ಅಡಗಿಸಿಕೊಂಡಿರುತ್ತವೆ. ಕಾಲಮಾನದ ಒತ್ತಡಗಳಿಗೆ ತಕ್ಕಂತೆ ಅದನ್ನು ಒಗ್ಗಿಸುತ್ತ, ಹಿಗ್ಗಿಸುತ್ತ ಮುರಿದು ಕಟ್ಟುತ್ತ ತನ್ನ

ಸಂಸ್ಕೃತಿಯ ಚಹರೆಗಳನ್ನು ಹಿಡಿಯುವ ಪ್ರಯತ್ನ ಈ ಪುರಾಣದ ಪ್ರಜ್ಞೆಯು ಮೂಡಿ ಬಂದಿರು ಬಗೆಯನ್ನು ಪುರಾಣಗಳ ಸಂಕ್ಷಿಪ್ತತೆ ಆಕರ್ಷಕತೆಯನ್ನು ಮತ್ತು ಯಾವ ನಿಯೋಗವನ್ನು ಹೊತ್ತು ಅವು ಅಲ್ಲಿ ಪ್ರಕಟಗೊಳ್ಳುತ್ತಿವೆ ಎಂಬುದನ್ನು ಗಮನಿಸುವ ಅವಶ್ಯಕತೆಯಿದೆ.

ಪುರಾಣ ಪುರಷರೊಂದಿಗೆ ಬೆಸೆದುಕೊಳ್ಳುವ ರಾಜವಂಶಗಳು ರಾಜರುಗಳು, ವಂಶೋತ್ಪತ್ತಿಯನ್ನು ಪುರಾಣೀಕರಿಸುವ ಬಗೆ ಬಗೆಯ ಕಥೆಗಳು, ಭಿನ್ನ ಭಿನ್ನ ಮೌಲ್ಯಗಳಿಗೆ ಪ್ರತೀಕಗಳಾದ ರಾಮಾಯಣ ಮಹಾಭಾರತ ಭಾಗವತಗಳ ಪಾತ್ರಗಳ, ಚರಿತ್ರೆಯ ಪ್ರಸಿದ್ಧ ವ್ಯಕ್ತಿಗಳು ಅವರುಗಳ ಗುಣ ವಿಶೇಷತೆಗಳಾದ ಶೌರ್ಯ, ಶೌಚ, ಔದರ್ಯ, ಸತ್ಯಸಂಧತೆ, ಚಾಣಾಕ್ಷತೆ, ಸ್ವಾಮಿನಿಷ್ಠೆ, ಇತ್ಯಾದಿಗಳನ್ನು ಬಿಂಬಿಸುವ ಸಿದ್ಧ ಪಾತ್ರಗಳನ್ನು ಸನ್ನಿವೇಶಗಳನ್ನು ಶಾಸನ ಕವಿಗಳು ಯಥೇಚ್ಚವಾಗಿ ವರ್ಣನೆಯಲ್ಲಿ ತಂದಿದ್ದಾರೆ. ಸಕಲ ಭೋಗ ಭಾಗ್ಯಗಳೂ ಶಿಷ್ಟ ರಕ್ಷಕನಾದ ಅರಸನಿಗೇ ಸೇರಬೇಕೆಂಬ ತತ್ವವನ್ನು ಮುಂದಿಟ್ಟು ತನ್ನ ಅರಸನನ್ನು ದೈವತ್ವಕ್ಕೇರಿಸುವ ಪ್ರಯತ್ನವನ್ನು ಶಾಸನ ಕವಿಗಳ ತಮ್ಮ ವರ್ಣನೆಗಳಲ್ಲಿ ಸಮರ್ಥವಾಗಿ ಮಾಡಿದ್ದಾರೆ.

೪.೩. ದೇವಾಲಯಗಳು

ಭಾರತೀಯರಿಗೆ ದೇವಸ್ಥಾನಗಳ ಬಗೆಗಿರುವ ನಂಬಿಕೆ, ಭಕ್ತಿ ವಿಶಿಷ್ಟವಾಗಿದೆ. ಪ್ರಾಚೀನ ಕಾಲದಲ್ಲಿ ಅವುಗಳ ಕಾರ್ಯಕ್ಷೇತ್ರವು ವ್ಯಾಪಕವಾಗಿದ್ದಿತು. ಅವು ಕರ್ನಾಟಕದ ಕಲೆಗಳ ಬಹು ಪ್ರಾಚೀನ ನಿದರ್ಶಗಳಾಗಿವೆ. ಮುಂದೆ ವಿವಿಧ ಅರಸು ಮನೆತನಗಳು ಅಧಿಕಾರಕ್ಕೆ ಬಂದಾಗ ಅನೇಕ ದೇವಾಲಯಗಳು ನಿರ್ಮಾಣಗೊಂಡವೆ. ರಾಜರು ತಮ್ಮ ವಿಜಯೋತ್ಸವದ ಹೆಗ್ಗುರುತಾಗಿ ದೇವಾಲಯಗಳನ್ನು ನಿರ್ಮಿಸಿದರು. ಇಲ್ಲಿರುವ ಅನೇಕ ಪುಣ್ಯ ಕ್ಷೇತ್ರಗಳು ಈ ಭಾಗವನ್ನು ಪಾವನಗೊಳಿಸಿವೆ. ದೇವಾಲಯಗಳ ಸಮಾಜದ ಅವಿಭಾಜ್ಯ ಅಂಗಗಳಾಗಿವೆ. ದೇವಾಲಯಗಳಿಂದಲೇ ಇಂದಿಗೂ ಕೆಲವು ಸ್ಥಳಗಳು ಪ್ರಸಿದ್ಧವಾಗಿವೆ. ದೇವಾಲಯಗಳು ಬದುಕಿನ ಹಲವು ಮುಖಗಳನ್ನು ಸಾಮುದಾಯಿಕವಾಗಿ ನಿಯಂತ್ರಿಸುತ್ತಿದ್ದು, ಸಾಂಸ್ಕೃತಿಕ ಚಟುವಟಿಕೆಗಳ ನೆಲೆವೀಡಾಗಿದ್ದವು. ಜನತೆಯ ಉತ್ತಮ ನಡೆತೆಗೆ ಮಾರ್ಗದರ್ಶನ ನೀಡಿ ಸಂಸ್ಕೃತಿಯನ್ನು ಉಳಿಸಿ ಬೆಳೆಸಿ ಬದುಕನ್ನು ಸಾರ್ಥಕಗೊಳಿಸುವ ಕಾರ್ಯವನ್ನು ಮಾಡುವುದರ ಮೂಲಕ ಜನತೆಯ ಕೇಂದ್ರಸ್ಥಾನಗಳಾಗಿದ್ದವು. ಜನಜೀವನದ ಭಾಗವಾಗಿದ್ದು ಅವರನ್ನು ತಿದ್ದುವ ಬೆಳೆಸುವ ಶಕ್ತಿಗಳಾಗಿರಬೇಕೆಂಬುದು ದೇವಾಲಯಗಳ ಸ್ಥಾಪನೆಯ ಉದ್ದೇಶವಾಗಿತ್ತು.

ಸಮಾಜದಲ್ಲಿಯ ಎಲ್ಲ ವರ್ಗದ ಜನರು ದೇವಾಲಯಗಳೊಡನೆ ಸಂಬಂಧ ಇರಿಸಿಕೊಂಡದ್ದು ಶಾಸನಗಳಿಂದ ತಿಳಿದುಬರುತ್ತದೆ. ದೇವಾಲಗಳನ್ನು ಸ್ಥಾಪಿಸುತ್ತಿದ್ದವರು ಅಂದಿನ ಅರಸರು, ರಾಣಿಯರು, ಮಾಂಡಳಿಕರು, ದಂಡನಾಯಕರು ವಣೀಕರು ಅಷ್ಟೇ ಅಲ್ಲ ಸಾಮಾನ್ಯ ಜನರು

ಕೂಡ ನಿರ್ಮಿಸಿದರು. ಎಲ್ಲರೂ ಒಂದೇ ರೀತಿಯ ಅಂತರಂಗದ ಬದುಕು ದೇವಾಲಯಗಳಿಗೆ ಸ್ಪಂದಿಸುವ ರೀತಿ ದೇವಾಲಯಗಳು ಜನತೆಯ ಅಂತರಂಗವನ್ನು ವಿಕಾಸಿಸಿದ ರೀತಿಯನ್ನು ಆಯಾ ಕಾಲದ ಶಾಸನಗಳ ಮೂಲಕ ತಿಳಿಯಬಹುದಾಗಿದೆ. ಆಯಾ ಅರಸು ಮನೆತನಗಳ ಕಾಲದ ಧಾರ್ಮಿಕ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ನಿರ್ಮಾಣವಾದ ದೇವಾಲಯಗಳು ಸಮಾಜಕ್ಕೆ ಸಲ್ಲಿಸಿದ ಕೊಡುಗೆ ಅಪಾರ ಸಮಾಜದಲ್ಲಿ ಶಿಕ್ಷಣ ಸಂಸ್ಥೆಗಳಾಗಿ ಸಾಮಾಜಿಕ ಮತ್ತು ಆರ್ಥಿಕ ವಿಕಾಸದ ಹೊಣೆ ಹೊತ್ತಿದ್ದವು. ದೇವಾಲಯಗಳು ನ್ಯಾಯ ವಿತರಣಾ ಸಂಸ್ಥೆಗಳು ಆಗಿದ್ದವು. ಹೀಗೆ ಅಂದಿನ ದೇವಾಲಯಗಳು ಮತ್ತು ಅದರ ಕೇಂದ್ರ ವ್ಯಕ್ತಿಗಳು ಕರ್ನಾಟಕದ ಸಂಸ್ಕೃತಿಯನ್ನು ಪ್ರತಿನಿಧಿಸುವ ಮಹಾಶಕ್ತಿಗಳಾಗಿದ್ದವು. ದೇವಾಲಯಗಳ ನಿರ್ಮಾಣ ಉದಾತ್ತವಾದ ಸಂಸ್ಕೃತಿಯ ಸಾಧನೆಗೆ ಹಿನ್ನೆಲೆ ಎಂಬ ಆಶಯದಿಂದಲೇ ಅಧಿಕ ಸಂಖ್ಯೆಯಲ್ಲಿ ದೇವಾಲಯಗಳು ನಿರ್ಮಾಣವಾದವು.

ಪ್ರಾಚೀನ ಕರ್ನಾಟಕದ ದೇವಾಲಯಗಳು ಜನರ ಭಕ್ತಿಯ ಪ್ರತೀಕಗಳಾಗಿದ್ದವು. ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅವುಗಳ ಪ್ರಾಮುಖ್ಯತೆಯಿದ್ದುದು ಅಂದಿನ ಶಾಸನಗಳಿಂದ ತಿಳಿದುಬರುತ್ತದೆ. ದೇವಸ್ಥಾನ ನಿರ್ಮಾಣ ವಿಷಯದಲ್ಲಿ ಹೆಚ್ಚು ಮಾನ್ಯತೆ ಮತ್ತು ಪ್ರೋತ್ಸಾಹಗಳು ಕಂಡುಬರುವುದು ಎಂಟು ಅಥವಾ ಒಂಭತ್ತನೆಯ ಶತಮಾನದಿಂದ ಬಳಿಕ ಭಕ್ತಿ ಹಾಗೂ ನಿಷ್ಠೆಗಳನ್ನು ಒಗ್ಗೂಡಿಸಿಕೊಂಡಿದ್ದ ಹಲವಾರು ವ್ಯಕ್ತಿಗಳು ಪ್ರಾಚೀನ ಹಾಗೂ ಮಧ್ಯಕಾಲಿನ ಯುಗದಲ್ಲಿ ದೇವಸ್ಥಾನಗಳ ನಿರ್ಮಾಣಕ್ಕೆ ಕಾರಣೀಭೂತರಾಗಿದ್ದಾರೆ. ವ್ಯಕ್ತಿಗಳು ತಾವು ನಿಷ್ಠೆಯಿಂದ ಸಂಪಾದಿಸಿದ ಸಂಪತ್ತನ್ನು ಸಾರ್ಥಕಗೊಳಿಸಿ ಕೊಳ್ಳಬೇಕಾದರೆ ತಮ್ಮ ಇಷ್ಟದೈವದ ಹೆಸರಿನಲ್ಲಿ ದೇವಾಲಯ ನಿರ್ಮಾಣ ಮಾಡುವ ಉದ್ದೇಶ ಹೊಂದಿದ್ದರು. ತಮ್ಮ ಹೆಸರನ್ನು ಇಷ್ಟ ದೈವದ ಹೆಸರಿನೊಂದಿಗೆ ಸೇರಿಸಿ ದೇವಾಲಯ ನಿರ್ಮಾಣ ಮಾಡುತ್ತಿದ್ದರು.

ರಾಯಚೂರು ಪ್ರದೇಶವು ಇತಿಹಾಸ ಮತ್ತು ಸಂಸ್ಕೃತಿ ಪ್ರಾಚೀನ ಸಂಸ್ಕೃತಿಗಳಲ್ಲಿ ಒಂದಾಗಿದೆ. ಎಂದೆಂದಿಗೂ ಅಳಿಸಲಾಗದಂತಹ ಮೌಲ್ಯಗಳನ್ನು ಇಂದಿಗೂ ಉಳಿಸಿಕೊಂಡುಬಂದಿದೆ. ಈ ಪ್ರದೇಶದ ಕಲ್ಲೂರು ಮತ್ತು ವಟಗಲ್‌ಗಳಲ್ಲಿ ನವಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗದ ಆಯುಧಗಳು ದೊರೆತಿರುವುದು ಈಗಾಗಲೇ ದೃಢಪಟ್ಟಿದೆ. ಕವಿತಾಳ ಮತ್ತು ವಟಗಲ್‌ಗಳಲ್ಲಿ ಕಬ್ಬಿಣ ಯುಗದ ಅವಶೇಷಗಳು ಪತ್ತೆಯಾಗಿರುವುದು ತಿಳಿದು ಬರುತ್ತದೆ. ಇದು ರಾಯಚೂರು ಪ್ರದೇಶದ ಐತಿಹಾಸಿಕ ಹಿನ್ನೆಲೆಯನ್ನು ಎತ್ತಿ ತೋರಿಸುತ್ತದೆ. ಕಲೆ, ಸಾಹಿತ್ಯ, ಸ್ಮಾರಕಗಳು, ದೇವಾಲಯಗಳು, ಖನಿಜ, ಐಶ್ವರ್ಯ, ಧಾರ್ಮಿಕ, ಭಕ್ತಿ, ರಾಜಕೀಯ, ಸಾಮಾಜಿಕ, ಆರ್ಥಿಕ ಮುಂತಾದ ವಿಷಯಗಳಲ್ಲಿ ತುಂಬಾ ದಾಸ ಸಾಹಿತ್ಯದ ತೊಟ್ಟಿಲು ಎಂದು ಕೀರ್ತಿ ಇದೆ. ಎನ್ನುವುದು ಹೆಮ್ಮೆಯ ವಿಷಯವಾಗಿದೆ.

ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ಹಾಗೂ ಇಲ್ಲಿ ದೊರೆತಿರುವ ಸಾಂಸ್ಕೃತಿಕ ಅವಶೇಷಗಳಿಂದ ಈ ಪ್ರದೇಶದ ಅಖಂಡವಾದ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ಪರಿಚಯವಾಗುತ್ತದೆ ಧಾರ್ಮಿಕ ಕೇಂದ್ರ ಹೆಜ್ಜೆಗೊಂದು ದೇವಾಲಯಗಳ ಸ್ಮಾರಕಗಳಿರುವಂತೆ ಪ್ರದೇಶದಲ್ಲಿ ಅನೇಕ ದೇವಾಲಯಗಳು ಕಂಡುಬರುತ್ತವೆ. ಅಲ್ಲದೆ ಶಿಲಾ ಶಾಸನಗಳು, ಶಿಲ್ಪಗಳು, ಗುಹೆಗಳು, ಸ್ಮಾರಕಗಳು, ಬಸದಿಗಳು ಇತ್ಯಾದಿಗಳು ಈ ಪ್ರದೇಶದ ಭವ್ಯವಾದ ಇತಿಹಾಸ ಮತ್ತು ಸಾಂಸ್ಕೃತಿಕ ಮಹತ್ವವನ್ನು ಸಾರುತ್ತಾ ಇಂದಿಗೂ ನಿಂತಿವೆ.

ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕಲೆಗಳಾದ ತೊಗಲುಗೊಂಬೆಯಾಟ, ಕೋಲಾಟ, ಡೊಳ್ಳುಕುಣಿತ, ಹಬ್ಬ, ಹರಿದಿನಗಳು, ಜನಪದ ನೃತ್ಯ ಈ ಪ್ರದೇಶದ ಹಲವು ಗ್ರಾಮಗಳಲ್ಲಿ ಇಂದಿಗೂ ಕಂಡುಬರುತ್ತವೆ. ಆಯಾ ಕಾಲದಲ್ಲಿ ಆಡಳಿತ ನಡೆಸಿದ ಅರಸು ಮನೆತನಗಳು ಶಾಸನಗಳನ್ನು ಅಧ್ಯಯನ ಮಾಡುವುದರ ಮೂಲಕ ಅಲ್ಲಿರುವ ವಿಷಯವನ್ನು ನೇರವಾಗಿ ತಿಳಿಯಲು ಸಹಾಯವಾಗುತ್ತದೆ. ಆದ್ದರಿಂದಲೇ ಇತಿಹಾಸದ ಆಕರಗಳಲ್ಲಿ ಶಾಸನಗಳಿಗೆ ಹೆಚ್ಚಿನ ಮಹತ್ವವಿದೆ. ಗತ ವೈಭವದ ಇತಿಹಾಸದ ಮೂಲ ಸ್ವರೂಪವನ್ನು ತಿಳಿಯಲು ಶಾಸನಗಳು ಸಹಕಾರಿಯಾಗಿವೆ. ಭಾರತೀಯ ಭವ್ಯ ಪರಂಪರೆಯೇ ದೊರೆತ ಮಾಹಿತಿಯನ್ನಾಧರಿಸಿ ವಿವರಿಸಲು ಪ್ರಯತ್ನಿಸಲಾಗಿದೆ.

ರಾಯಚೂರು ಪ್ರದೇಶದ ಇತಿಹಾಸ ರಚನೆಗೆ ಶಾಸನಗಳು ಎಷ್ಟು ಮುಖ್ಯವೋ ಹಾಗೆಯೇ ದೇವಾಲಯಗಳು ಕಲ್ಯಾಣಿ ಚಾಳುಕ್ಯರ ಆಳ್ವಿಕೆಯ ಕಾಲದಲ್ಲಿಯೇ ನಿರ್ಮಾಣಗೊಂಡಂಥವುಗಳು ಆಗಿವೆ. ಅವುಗಳ ಉಲ್ಲೇಖ ಮಾಡುವುದು ಇಲ್ಲಿ ಶಾಸನಗಳ ಸಹಾಯದಿಂದ ಉಚಿತವೆನಿಸುತ್ತದೆ.

ಚಾಲುಕ್ಯ ಭುವನೈಕಮಲ್ಲನ ಕಾಲದಲ್ಲಿ ಕಪ್ಪಗಲ್ಲಿನ ಭೋಗೇಶ್ವರ ಹರವಿಯ ಸ್ವಯಂಭೂ ದೇವಾಲಯ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಆಡಳಿತ ಅವಧಿಯಲ್ಲಿ ಕಲ್ಲೂರಿನ ಸ್ವಯಂಭೂ ಮಾರಟೇಶ್ವರ, ಅಯ್ಯಣವಾಡಿಯ ರೇಬಳೇಶ್ವರ ದೇವಾಲಯ ನಿರ್ಮಾಣಗೊಂಡಿವೆ. ಚಾಲುಕ್ಯ ೨ನೇ ಜಯಸಿಂಹನ ಅಧಿಕಾರದ ಅವಧಿಯಲ್ಲಿ ಬಲ್ಲಟಗಿಯ ತ್ರೈಪುರುಷ ದೇವಾಲಯ ಚಂದೇಶ್ವರ ದೇವಾಲಯಗಳು ನಿರ್ಮಾಣಗೊಂಡಿವೆ. ೩ನೇ ಸೋಮೇಶ್ವರನ ಆಳ್ವಿಕೆಯ ಸಮಯದಲ್ಲಿ ಶಂಕರೇಶ್ವರ ಮತ್ತು ನಾಗಲೇಶ್ವರ ದೇವಾಲಯಗಳು ನಿರ್ಮಿಸಲ್ಪಟ್ಟಿದ್ದವು. ಚಾಲುಕ್ಯರ ಕಾಲದಲ್ಲಿ ರಾಜರು ಹೆಚ್ಚಾಗಿ ಶೈವಧರ್ಮದ ದೇವಾಲಯಗಳನ್ನು ನಿರ್ಮಾಣ ಮಾಡಿದ್ದು ಕಂಡುಬರುತ್ತದೆ.

ಚಾಲುಕ್ಯ ತ್ರಿಭುವನಮಲ್ಲನ ಆಳ್ವಿಕೆಯಲ್ಲಿ ಕುರಡಿಯ ವಾಸುದೇವ ದೇವಾಲಯ ಮತ್ತು ಚಾಲುಕ್ಯ ಜಗದೇಕಮಲ್ಲನ ಆಳ್ವಿಕೆಯಲ್ಲಿ ಕೇಶದ ದೇವಾಲಯಗಳು ನಿರ್ಮಾಣಗೊಂಡಿವೆ. ಚಾಲುಕ್ಯ ಭುವನೈಕಮಲ್ಲನ ದೇವಾಲಯವು ಸಹ ನಿರ್ಮಾಣಗೊಂಡಿದೆ.

ವಿವಿಧ ಅರಸು ಮನೆತನಗಳ ಆಳ್ವಿಕೆಗೆ ಅನುಗುಣವಾಗಿ ರಾಯಚೂರು ಪ್ರದೇಶವು ಹಲವು ಮತ ಧರ್ಮಗಳ ದೇವಾಲಯಗಳು ನಿರ್ಮಾಣಗೊಂಡಿದ್ದವು. ಪರಧರ್ಮ ಸಹಿಷ್ಣುತೆಗೆ ಹೆಸರಾದ ಹಲವು ಪ್ರಮುಖ ನಾಡಿನಲ್ಲಿ ಈ ಪ್ರದೇಶವು ಒಂದಾಗಿತ್ತು. ಎನ್ನುವುದಕ್ಕೆ ಇಲ್ಲಿ ನಿರ್ಮಾಣಗೊಂಡ ಶೈವ, ವೈಷ್ಣವ, ಜೈನಧರ್ಮ ದೇವಾಲಯಗಳೇ ಸಾಕ್ಷಿಯಾಗಿವೆ. ಇದರಿಂದ ಇಲ್ಲಿಯ ಅರಸರು ಪರಮತ ಧರ್ಮವನ್ನು ಪೋಷಿಸಿಕೊಂಡು ಬಂದಿರುವುದಷ್ಟೇ ಅಲ್ಲದೇ ಈ ಧರ್ಮಗಳಿಗೆ ಆಶ್ರಯವನ್ನು ಒದಗಿಸಿದ್ದರು. ಎಲ್ಲಾ ಧರ್ಮಗಳಿಗೆ ಆಶ್ರಯವನ್ನಿತ್ತು. ಧಾರ್ಮಿಕ ಸಮನ್ವಯತೆಯನ್ನು ಕಾಪಾಡಿಕೊಂಡರೆಂಬುದು ಅವರ ವಿಶಾಲ ಮನೋಧರ್ಮವನ್ನು ತೋರಿಸುತ್ತದೆ.

ಪರಮಧರ್ಮ ಸಹಿಷ್ಣುತೆಗೆ ಹೆಸರಾದ ಪ್ರಮುಖ ನಾಡಿನಲ್ಲಿ ಈ ಪ್ರದೇಶವು ಒಂದು ವಿವಿಧ ಅರಸು ಮನೆತನಗಳ ಆಳ್ವಿಕೆಗೆ ಅನುಗುಣವಾಗಿ ದೇವಾಲಯಗಳು ರಚನೆಯ ಉತ್ತಮ ಪರಂಪರೆಯೇ ನಿರ್ಮಿತವಾಗಿವೆ. ಪರಧರ್ಮ ಸಹಿಷ್ಣತೆಯ ಬೀಡಾಗಿದ್ದು ನಮ್ಮ ನಾಡು ಅನೇಕ ಧರ್ಮಗಳನ್ನಾಧರಿಸಿ ಕಟ್ಟಿಸಿದ ದೇವಾಲಯಗಳು ಹೆಸರಾಗಿದೆ. ದೇವಾಲಯಗಳನ್ನು ರಾಜರು ಮಾಂಡಳೀಕರು, ದಂಡನಾಯಕರು, ಸಾಮಂತರು ಸಾಮಾನ್ಯ ಜನರು ತಮ್ಮ ಅದಿದೇವ ಹಾಗೂ ಬೇರೊಂದು ಸ್ಮರಣಾರ್ಥದ ಹೆಸರುಗಳ ಹಿನ್ನೆಲೆಯಲ್ಲಿ ದೇವಾಲಯಗಳನ್ನು ನಿರ್ಮಾಣ ಮಾಡಿದ್ದಾರೆ.

ಬಾದಾಮಿ ಚಾಲುಕ್ಯರ ಮತ್ತು ಕಲ್ಯಾಣಚಾಲುಕ್ಯರ ಅವಧಿಯಲ್ಲಿ ಕೆಲವರು ನಮ್ಮ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಿಸಿದರೆ ಇನ್ನೂ ಕೆಲವು ಅರಸರು, ರಾಣಿಯರು, ದಂಡನಾಯಕರು ಸಾಮಂತರು ನಿರ್ಮಿಸಿದ ದೇವಾಲಯಗಳಿಗೆ ದಾನ-ದತ್ತಿಗಳನ್ನು ಬಿಟ್ಟಿದ್ದಾರೆ.

ಅರಸರು ತಾವು ದೇವಾಲಯಗಳ ನಿರ್ಮಾಣಕ್ಕೆ ಪ್ರೋತ್ಸಾಹ ನೀಡುವುದರ ಜೊತೆಗೆ ಸ್ವತಃ ತಾವೇ ದೇವಾಲಯದ ನಿರ್ಮಾಣದೊಂದಿಗೆ ಅವುಗಳ ಉನ್ನತಿಗಾಗಿ ದಾನ-ದತ್ತಿ ನೀಡಿ ಪೋಷಿಸಿಕೊಂಡು ಬಂದಿದ್ದಾರೆ. ಕಲ್ಯಾಣಚಾಳುಕ್ಯ ಅರಸ ಎರಡನೆಯ ಜಯಸಿಂಹನು ಎಡದೊರೆ ೨೦೦ರ ಕಂಪಣ, ಮೊಸಳಿಕಲ್ಲೂ ೩೦೦ರ ಭತ್ತ ಗ್ರಾಮ ಬಲ್ಲಟಗಿಯ ಚಂದ್ರೇಶ್ವರ ದೇವಾಲಯಕ್ಕೆ ದಾನ ಬಿಟ್ಟು ಉಲ್ಲೇಖ ಬಲ್ಲಟಗಿ (ಕ್ರಿಶ ೧೦೨೯) ಶಾಸನದಿಂದ ತಿಳಿದುಬರುತ್ತದೆ. (ಕವಿವಿಶಾಸಂ. ೭, ಮಾ.೮೭)

ರಾಣಿಯರು ರಾಜನನ್ನು ಮೆಚ್ಚಿಸುವ ಸಲುವಾಗಿ ಅದರ ಕೀರ್ತಿಯನ್ನು ಶಾಶ್ವತಗೊಳಿಸಲಿಕ್ಕೆ ಅವರ ಸ್ಮರಣಾರ್ಥ ದೇವಾಲಯಗಳಿಗೆ ದಾನ-ದತ್ತಿಗಳನ್ನು ಬಿಟ್ಟ ಶಾಸನಗಳು ಇಲ್ಲಿ ದೊರೆತಿವೆ. ಬಳ್ಳನಿಟ್ಟಿಗೆ ತ್ರೈಪುರುದ ದೇವಾಲಯಕ್ಕೆ ಭೂಮಿಯನ್ನು ದಾನ ಬಿಟ್ಟಿರುವುದು. ಕ್ರಿ.ಶ.೧೧ನೇ ಶತಮಾನದ ಶಾಸನಗಳಿಂದ ಸೋಮೇಶ್ವರದ ರಾಣಿಯ ರಾಚಾಮೇಶ್ವರ ದೇವಾಲಯಕ್ಕೆ ದೇವರ ಅರ್ಚನೆ, ನೃತ್ಯ, ಸಂಗೀತ ಇವುಗಳ ಜೀರ್ಣೋದ್ಧಾರಕ್ಕೆ ದಾನ ಕೊಟ್ಟ ಉಲ್ಲೇಖ ಕಂಡುಬರುತ್ತದೆ.

ಚಾಲುಕ್ಯ ಭುವನೈಕಮಲ್ಲನ ಪತ್ನಿಯು ಸ್ವಯಂಭೂ ದೇವಾಲಯಕ್ಕೆ ೫೦ ಮತ್ತು ಕರಿಯ ನೆಲವನ್ನು ೨೦೦ ಕಮ್ಮಗದ್ದೆ. ಗಾಣ ಮನೆಯನ್ನು ಹಾಗೂ ಇದರೊಂದಿಗೆ ದೇವಾಲಯದ ಸೇವೆಗಾಗಿ ಅಲ್ಲಿರುವ ತಪೋಧನರ ಆಹಾರ ದಾನ, ವಾದ್ಯ ಅದರ ಜೀರ್ಣೋದ್ದಾರಕ್ಕಾಗಿ ಬಿಟ್ಟ ದಾನದ ಬಗ್ಗೆ (ಕ್ರಿ.ಶ.೧೦೬೯) ಹರವಿ ಶಾಸನ ತಿಳಿಸುತ್ತದೆ. (ಕವಿವಿಶಾಸಂ.೭, ಪು.೫೭) ವಿಶಾಲ ಸಾಮ್ರಾಜ್ಯದ ದೊರೆಯ ಪತ್ನಿಯರು ಬೇರೆ ಬೇರೆ ಭಾಗಗಳಲ್ಲಿ ಆಡಳಿತವನ್ನು ನೋಡಿಕೊಳ್ಳುತ್ತಿದ್ದ. ಕಾರಣ ಪ್ರಜೆಗಳೊಂದಿಗೆ ಬೆರೆತು ಬಾಳಬೇಕಾಗಿತ್ತು. ಈ ದೃಷ್ಟಿಯಲ್ಲಿ ದೇವಾಲಯಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳುತ್ತಿದ್ದರು.

ದೇವಾಲಯ ನಿರ್ಮಾಣದಲ್ಲಿ ದಾನ-ದತ್ತಿ ನೀಡುವಲ್ಲಿ ಅಂದಿನ ಜನರು ತಮ್ಮ ಧರ್ಮದ ಭದ್ರ ತಳಹದಿಗೆ ತಮ್ಮದೊಂದು ಕಾಣಿಕೆ ಸಲ್ಲಿಸಬೇಕೆಂಬ ಆಶಯ. ದೊರೆಯ ಕೀರ್ತಿಯನ್ನು ಶಾಶ್ವತಗೊಳಿಸಬೇಕೆಂಬ ಉದ್ದೇಶ ಅಡಗಿರುವುದನ್ನು ಗುರುತಿಸಬಹುದಾಗಿದೆ.

ದಂಡನಾಯಕ ನಿಂಬಣ್ಣಯ್ಯನ ಕಾಲದ ಕುರುಡಿಯಲ್ಲಿ ನಿಂಬಣೇಶ್ವರ ದೇವಾಲಯವನ್ನು ಮಾಡಿಸಿದ್ದನ್ನು ಚಾಲುಕ್ಯ ೬ನೇ ವಿಕ್ರಮಾದಿತ್ಯನ ಕಾಲದ ಶಾಸನ ತಿಳಿಸುತ್ತದೆ. ಚಾಲುಕ್ಯರ ಅರಸು ಮನೆತನದ ಈ ದಂಡನಾಯಕನು ತನ್ನ ಹೆಸರಿನೊಂದಿಗೆ ಈಶ್ವರ ಹೆಸರು ಸೇರಿಸಿ ದೇವಾಲಯ ಸ್ಥಾಪಿಸಿರುವುದು ಕಂಡುಬರುತ್ತದೆ. ಈರೀತಿಯ ಕೆಲವು ದೇವಾಲಯಗಳಲ್ಲಿ ಮೂಲತಃ ಇದ್ದ ಹೆಸರನ್ನು ಹೋಲುವ ಮತ್ತೊಂದು ಹೆಸರನ್ನು ಹೊಂದಿರುವುದು ಕಂಡುಬರುತ್ತದೆ. ಕುರಡಿಯ ಕ್ರಿ.ಶ.೧೨ನೇ ಶತಮಾನದ ಶಾಸನವು ೬ನೇ ವಿಕ್ರಮಾದಿತ್ಯನ ಆಳ್ವಿಕೆಯ ಸಮಯದಲ್ಲಿ ರಬ್ಬಲದೇವಿ ಎಂಬ ಮಹಿಳೆಯು ರೆಬ್ಬಳೇಶ್ವರ ದೇವಾಲಯವನ್ನು ನಿರ್ಮಿಸಿದ್ದನ್ನು ಹೇಳುತ್ತದೆ. (ಕವಿವಿಶಾಸಂ. ೭, ಮಾ.೪೨) ಶಂಕರಾರ್ಯನ ಹೆಂಡತಿಯಾದ ನಾಗಲದೇವಿಗೆ ನಿಂಬಣಯ್ಯ ಎಂಬ ವ್ಯಕ್ತಿಯು ಅಗ್ರಹಾರ ಹರವಿಯಲ್ಲಿ ಭೂಮಿಯನ್ನು ಬಳುವಳಿಯಾಗಿ ನೀಡಿರುತ್ತಾನೆ. ಅದರಲ್ಲಿ ಅರ್ಧ ವೃತ್ತಿಯನ್ನು ನಾಗಲದೇವಿಯ ಕುರಡಿಯ ಶಂಕರೇಶ್ವರ ಮತ್ತು ನಾಗಲೇಗೇಶ್ವರ ದೇವಾಲಯಕ್ಕೆ ದಾನ ಬಿಟ್ಟಿದ್ದನ್ನು ೩ನೇ ಸೋಮೇಶ್ವರ ಕಾಲದ ೧೧ನೇ ಶತಮಾನದ ಕುರಡಿ ಶಾಸನ ಹೇಳುತ್ತದೆ. ದೇವಾಲಯ ಕಟ್ಟಿಸಿದ್ದ ಯಾರು ಎಂಬ ವಿಷಯ ತಿಳಿದು ಬಂದಿದ್ದರು. ಶಂಕರಾರ್ಯ ಮತ್ತು ನಾಗಲದೇವಿ ಎಂಬ ಹೆಸರನ್ನೊಳಗೊಂಡ ಶಂಕರೇಶ್ವರ ಮತ್ತು ನಾಗಲೇಶ್ವರ ದೇವಾಲಯಗಳಿದ್ದುದು ತಿಳಿದು ಬರುತ್ತದೆ.

ದಂಡನಾಯಕರು ದೇವಾಲಯಗಳಿಗೆ ದಾನ-ದತ್ತಿಗಳನ್ನು ಬಿಟ್ಟ ಉಲ್ಲೇಖ ಶಾಸನಗಳಲ್ಲಿ ಸಿಗುತ್ತದೆ. ೬ನೇ ವಿಕ್ರಮಾದಿತ್ಯನ ದಂಡನಾಯಕ ನಿಂಬಣ್ಣನ ನಿಂಬಣೇಶ್ವರ ದೇವಾಲಯಕ್ಕೆ ಈ ಮೊದಲು ತಾನು ಚಂದ್ರಶೇಖರ ಭಟ್ಟರಿಗೆ ದಾನ ಬಿಟ್ಟಿದ್ದು. ಭೂಮಿಯನ್ನು ಮತ್ತೊಮ್ಮೆ ಕ್ರಯಕ್ಕೆ

ಪಡೆದು ದತ್ತಿ ಬಿಟ್ಟಿದ್ದು. ಕ್ರಿ.ಶ. ೧೧೨೩ನೇ ಕುರುಡಿ ಶಾಸನ ಹೇಳುತ್ತದೆ. (ಕವಿವಿಶಾಸಂ. ೭, ಮಾ.೪೨) ರವಿಯಣ್ಣ ಭಟ್ಟ ದಂಡನಾಯಕನು ರೇಬ್ಬಲೇಶ್ವರ ದೇವಾಲಯಕ್ಕೆ ದತ್ತಿ-ಬಿಟ್ಟ ವಿಷಯವು ಕ್ರಿ.ಶ.೧೨ನೇ ಶತಮಾನದ ಕುರಡಿ ಶಾಸನ ತಿಳಿಸುತ್ತದೆ. ದಂಡನಾಯಕ ಪಟ್ಟ ಸಾಹಣಿ ಭೀಮಣ್ಣಯ್ಯ ಮತ್ತು ಮಹಾಂಡಳೇಶ್ವರ ಭೂರಿ ದೇವರಸರು ಸೇರಿ ಕೇಶದ ದೇವರಿಗೆ ಅಂಗಬೋಗ, ನೈವೇದ್ಯ, ನಂದಾದೀಪ, ಚೈತ್ರ ಪವಿತ್ರಕ್ಕೆಂದು ದಕ್ಷಿಣದ ತಮ್ಮ ಭಾಗವನ್ನು ದಾನ ನೀಡಿದಂತೆ ಕಲ್ಲೂರಿನ (ಕ್ರಿ.ಶ.೧೧೪೩) ಶಾಸನ ಹೇಳಿದೆ. (ಕವಿವಿಶಾಸಂ. ೭, ಮಾ.೬) ಮಹಾಮಂಡಳೇಶ್ವರನ ಸಾಮಾಂತನಾದ ಮಳೆಯಮರಸನು ಗಿರಿಕೋಟೆಮಲ್ಲ ಎಂಬ ಹೆಸರಿನ ಜೀನಾಲಯಕ್ಕೆ ಗಾಣ ನಿವೇಶನಗಳನ್ನು ದಾನ ನೀಡಿದ್ದನ್ನು ದದ್ದಲ (ಕ್ರಿ.ಶ.೧೦೬)ರ ಶಾಸನ ತಿಳಿಸುತ್ತದೆ. (ಕವಿವಿಶಾಸಂ. ೭, ಮಾ.೨೨)

ಅರಸರು, ರಾಣಿಯರು, ದಂಡನಾಯಕರು, ಸಾಮಂತರು ದೇವಾಲಯಗಳಿಗೆ ದಾನ-ದತ್ತಿಗಳನ್ನು ಬಿಡುತ್ತಿದ್ದಷ್ಟೇ ಅಲ್ಲದೇ ಸಾಮಾನ್ಯ ಜನರು ವ್ಯಾಪಾರಿಗಳು, ಮಹಿಳೆಯರು ದತ್ತಿಯನ್ನು ಬಿಟ್ಟ ವಿವರವನ್ನು ಶಾಸನಗಳು ತಿಳಿಸುತ್ತವೆ. ಕ್ರಿಶ೧೨ನೇ ಶತಮಾನದಲ್ಲಿ ರೆಬ್ಬಲದೇವಿ ಎಂಬ ಮಹಿಳೆಯು ರೆಬ್ಬಳೇಶ್ವರ ದೇವಾಲಯಕ್ಕೆ ದಾನ ಬಿಟ್ಟ ಉಲ್ಲೇಖ ಕುರಡಿ ಶಾಸನದಲ್ಲಿದೆ. ಕ್ರಿ.ಶ.೧೧೪೩ರ ಕಲ್ಲೂರು ಶಾಸನವು "ಸಾತಿಕವ್ವೆ" ಎಂಬುವಳು ಕೇಶವ ದೇವಾಲಯಕ್ಕೆ ದಾನ ಕೊಟ್ಟ ಬಗ್ಗೆ ತಿಳಿಸುತ್ತದೆ. ವ್ಯಾಪಾರಿಗಳು ತಾವು ಮಾರುವ ಮೇಣಸು, ಸುಂಠಿ, ಹಿಪ್ಪಲ, ಸಕ್ಕರೆ, ಅರಸೀನ, ಅಲ್ಲ, ಸಾಸುವೆ. ಜೀರಿಗೆ ಮುಂತಾದವುಗಳಿಂದ ಬರುವ ಲಾಭಾಂಶವನ್ನು ದಾನವಾಗಿ ಬಿಟ್ಟ ಉಲ್ಲೇಖ ತುಪ್ಪದೂರಿನ ೧೨ನೇ ಶತಮಾನದ ಶಾಸನ ತಿಳಿಸುತ್ತದೆ.

ರಾಯಚೂರು ಪ್ರದೇಶದಲ್ಲಿ ಪ್ರಮುಖ ದೇವಾಲಯಗಳಿಗಿರುವ ಕುರುಡಿ, ಬಲ್ಲಟಗಿ, ಗಬ್ಬೂರು, ಕಲ್ಲೂರು, ಕವಿತಾಳ, ದೇವಸೂಗೂರು ಮುಂತಾದ ಗ್ರಾಮಗಳು ಅಗ್ರಹಾರಗಳಾಗಿದ್ದವು. ಈ ಅಗ್ರಹಾರಗಳು ಪ್ರಾಚೀನ ಕಾಲದಲ್ಲಿ ವಿದ್ಯಾಕೇಂದ್ರಗಳಾಗಿದ್ದವು. ಬ್ರಾಹ್ಮಣರ ನಿವಾಸಕ್ಕಾಗಿಯೇ ಕೆಲವು ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಮಾರ್ಪಡಿಸಿ ದಾನವಾಗಿ ಬಿಟ್ಟುಕೊಡುವ ಸಂಪ್ರದಾಯ ಹಿಂದಿನ ಕಾಲದಲ್ಲಿತ್ತೆಂದು ಶಾಸನಗಳ ಮೂಲಕ ತಿಳಿದು ಬರುತ್ತಾರೆ. ಪ್ರಾಚೀನ ಕಾಲದಲ್ಲಿ ದೇವಾಲಯಗಳು ವಿದ್ಯಾ ಚಟುವಟಿಕೆಗಳಿಗೆ ಆಶ್ರಯ ಕಲ್ಪಿಸಿದ್ದವು. ಭಕ್ತರು ದೇವಸ್ಥಾನಗಳ ಪೂಜಾರಿಗಳಿಗೆ ದತ್ತಿಯನ್ನು ಬಿಟ್ಟು ಕೊಡುವಾಗ ವಿದ್ಯಾಭ್ಯಾಸಕ್ಕಾಗಿಯೂ ದತ್ತಿಯನ್ನು ಬಿಡುವ ಸಂಪ್ರದಾಯವಿರಿಸಿ ಕೊಂಡಿದ್ದರು. ಹೀಗೆ ದೇವಸ್ಥಾನಗಳು ಜ್ಞಾನ ಮತ್ತು ವಿದ್ಯಾ ಪ್ರಸಾರದ ಕೇಂದ್ರಗಳಾಗಿದ್ದವು. ಒಟ್ಟಿನಲ್ಲಿ ಅರಸು ಮನೆತನ ಹಾಗೂ ಅಧಿಕಾರಿಗಳು ಗ್ರಾಮಗಳಲ್ಲಿ ಅಗ್ರಹಾರಗಳನ್ನಾಗಿ ಪರಿವರ್ತಿಸಿ ಅವುಗಳಿಗೆ ಅನೇಕ ದಾನ ದತ್ತಿಗಳನ್ನು ನೀಡುತ್ತಿದ್ದರು.

ಕರ್ನಾಟಕದ ವಾಸ್ತುಶಿಲ್ಪ ಶೈಲಿಯಲ್ಲಿ ಅನೇಕ ಬಗೆಯ ಪ್ರಯೋಗಗಳನ್ನು ನಡೆಸಿದ ಅವಧಿ ಎಂದರೆ ಚಾಳುಕ್ಯರು ಮತ್ತು ರಾಷ್ಟ್ರಕೂಟರ ಮನೆತನದ ಆಳ್ವಿಕೆಯ ಕಾಲ. ಈ ಎರಡು ಅರಸು ಮನೆತನಗಳ ಅವಧಿಯಲ್ಲಿ ರಾಯಚೂರು ಪ್ರದೇಶದಲ್ಲಿ ಅನೇಕ ದೇವಾಲಯಗಳು ನಿರ್ಮಾಣಗೊಂಡಿವೆ. ಇಲ್ಲಿಯ ದೇವಾಲಯಗಳು ಕಲೆಯ ದೃಷ್ಟಿಯಲ್ಲಿ ಅತ್ಯಂತ ವಾಸ್ತು ಅತ್ಯಂತ ವೈವಿಧ್ಯಮಯವು ಅಪೂರ್ವ ವಿನ್ಯಾಸಯುತವೂ ಅಗಿವೆ. ಅಲ್ಲದೆ ಅಲಂಕೃತದ ದೃಷ್ಟಿಯಿಂದ ಎಲ್ಲರ ಗಮನ ಸೆಳೆಯುತ್ತದೆ. ಇಲ್ಲಿಯ ದೇವಾಲಯಗಳಲ್ಲಿ ಬಲ್ಲಟಗಿಯ ಜಾಮೇಶ್ವರ ದೇವಾಲಯ, ತ್ರೈಪುರುಷ ದೇವಾಲಯ, ಕುರುಡಿಯ ಈಶ್ವರ ಕಲ್ಲೂರಿನ ಮಾರಟೇಶ್ವರ ಮತ್ತು ಕೇಶವ ದೇವಾಲಯ, ದದ್ದಲದ ಗಿರಿಕೋಟೆಮಲ್ಲ ಜೀನಾಲಯಗಳು ಐತಿಹಾಸಿಕ ದೃಷ್ಟಿಯಿಂದ ಪ್ರಮುಖವಾಗಿವೆ.

ದೇಗುಲದ ಕಲ್ಪನೆ ಮುಂದೆ ಕಲೆಯ ಪ್ರತಿರೂಪವಾಗಿ ಮೂಡಿ ವಾಸ್ತು ಶಿಲ್ಪ ಶೈಲಿಯಲ್ಲಿ ಅನೇಕ ವೈವಿಧ್ಯಮಯ ದೇವಾಲಯಗಳು ನಿರ್ಮಾಣಗೊಂಡವು. ಅರಸು ಮನೆತನಗಳು ದೇಗುಲಗಳ ನಿರ್ಮಾಣಕ್ಕೆ ವಿಶೇಷ ಪ್ರೋತ್ಸಾಹ ನೀಡಿ ಕಲೆಯನ್ನು ಪೋಷಿಸಿದ್ದಾರೆ. ಅಲ್ಲದೆ ದೇವಾಲಯಗಳು ಶಾಶ್ವತವಾಗಿ ಉಳಿಯಬೇಕೆನ್ನುವುದು ಮಹತ್ವದ ಅಂಶವಾಗಿ ಬೆಳೆಯಿತು.

ದೇವಾಲಯಗಳು ಪ್ರಾಚೀನ ಕಾಲದಲ್ಲಿ ಕೇವಲ ಧಾರ್ಮಿಕವಾಗಿ ತನ್ನ ಅಸ್ತಿತ್ವವನ್ನು ಹೊಂದಿರದೆ ವಿದ್ಯಾಕೇಂದ್ರಗಳಾಗಿ, ಆಶ್ರಯಧಾಮಗಳಾಗಿ ಕಲೆಗೆ ಪ್ರೋತ್ಸಾಹ ನೀಡುವುದರೊಂದಿಗೆ ಸಾಮಾಜಿಕ ಚಟುವಟಿಕೆಗಳಿಗೆ ಕಾರ್ಯ ನಿರ್ವಹಿಸಿ ತನ್ನದೇ ಆದ ಬಹುಮುಖ್ಯ ಕಾಣಿಕೆ ಸಲ್ಲಿಸಿವೆ. ದೇವಾಲಯಗಳಿಗೆ ದಾನ ದತ್ತಿಗಳನ್ನು ಬಿಡುವಾಗ ಶಿಕ್ಷಣಕ್ಕೆಂದು ಇಂತಿಷ್ಟು ಭಾಗವನ್ನು ಮೀಸಲಾಗಿರಿಸುತ್ತಿದ್ದರು. ಸಂಗೀತ ಮತ್ತು ನೃತ್ಯಕಲೆಗಳನ್ನು ದೇವಾಲಯಗಳು ವಿಶೇಷವಾಗಿ ಪ್ರೋತ್ಸಾಹಿಸಿದವು. ಶಾಸನ ಮತ್ತು ಸಾಹಿತ್ಯ ಕೃತಿಗಳ ಮೂಲಕ ದೇವಾಲಯಗಳಲ್ಲಿ ಸಂಗೀತ ಮತ್ತು ನೃತ್ಯ ಕಲೆಗಳು ಪಡೆದಿದ್ದ ಸ್ಥಾನ–ಮಾನಗಳನ್ನು ಗುರುತಿಸಬಹುದು. ಅಂತರಂಗದ ಅನುಭವದ ಆಧ್ಯಾತ್ಮಿಕ ಸಾಧನೆಗಳು ಧಾರ್ಮಿಕ ಆಚರಣೆಗಳು ಹಬ್ಬ ಹರಿದಿನಗಳು ಸಾಹಿತ್ಯ ಕಲೆಗಳು ಈ ಎಲ್ಲಾ ಅಂಶಗಳೂ ವಿಪುಲವೂ ವೈವಿಧ್ಯ ಪೂರ್ಣವೂ ವಿಸ್ತಾರವೂ, ವ್ಯಾಪಕವೂ ಪೂರ್ಣ ದೃಷ್ಟಿ ಸಮನ್ವಿತವೂ ಅಗಿ ಬೆಳೆಯಲು ದೇವಾಲಯಗಳ ಕೊಡುಗೆಯು ಅಪಾರವಾಗಿದೆ. ಅಂದಿನ ದೇವಾಲಯಗಳು ತನ್ನ ಸತ್ಯಾದ್ರಿಯನ್ನು ದಾನ ಮಾಡುವುದರ ಮೂಲಕ ಲೋಕೋಪಯೋಗಿ ಕಾರ್ಯವನ್ನು ಮಾಡುತ್ತಿದ್ದಿತು. ಹೀಗೆ ದೇವಾಲಯಗಳನ್ನು ಕಟ್ಟಿಸುವುದು. ಅವುಗಳ ವ್ಯವಸ್ಥೆಗಾಗಿ, ಸಾರ್ವಜನಿಕ ಹಿತಾಸಕ್ತಿಗಳ ಕಾರ್ಯಗಳಿಗಾಗಿ, ವಿದ್ಯಾಭ್ಯಾಸಕ್ಕಾಗಿ ದಾನ–ದತ್ತಿಗಳನ್ನು ಕೊಡುವುದು ಲೌಕಿಕ ಸಂಪತ್ತಿನ ಗಳಿಕೆ ಸಾರ್ಥಕತೆ ಎಂದು ಜನ ಭಾವಿಸಿದ್ದರೆ ರಾಜರಿಂದ ಹಿಡಿದು ಇಂದಿನ ಜನಸಾಮಾನ್ಯರವರೆಗೂ ಈ ಧಾರ್ಮಿಕ ಭಾವನೆ ಜೀವನದ

ಸಹಜಗುಣವಾಗಿ ಪರಿಣಮಿಸಿತ್ತು. ಒಟ್ಟಿನಲ್ಲಿ ಅಂದಿನ ದೇವಾಲಯಗಳು ಮತ್ತು ಅದರ ಕೇಂದ್ರ ವ್ಯಕ್ತಿಗಳೂ ಕರ್ನಾಟಕದ ಸಂಸ್ಕೃತಿಯನ್ನು ಪ್ರತಿನಿಧಿಸುವ ಮಹಾಶಕ್ತಿಗಳಾಗಿದ್ದರು. ಕನ್ನಡ ನಾಡಿನ ಶಿಲ್ಪಕಲಾ ಪ್ರಪಂಚದ ಬಹುದೊಡ್ಡ ಆಸ್ತಿಗಳು ಈ ದೇವಾಲಯಗಳು.

ಆರ್ಥಿಕ ಸಂಪತ್ತು ಮಾತ್ರ ದೇಶದ ಸಂಪತ್ತಾಗಿರಲಾರದು. ಅದರ ಜೊತೆಗೆ ಸಾಂಸ್ಕೃತಿಕ ಸಂಪತ್ತು ಎನಿಸಿಕೊಂಡಿರುವ ದೇವಾಲಯಗಳು ಈ ದೇಶದ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಇದರ ಜೊತೆ-ಜೊತೆಗೆ ಭಾರತ ಎನ್ನುವ ವಿಶಾಲ ಸಮುದಾಯ ಕಲೆ, ಸಾಹಿತ್ಯ, ಧರ್ಮ, ವಾಸ್ತುಶಿಲ್ಪಗಳು ಇನ್ನೂ ಮುಂತಾದವುಗಳನ್ನು ಒಳಗೊಂಡಿದ್ದು ತನ್ನ ವಿಶಿಷ್ಟ ಸಂಸ್ಕೃತಿಯಿಂದ ಇನ್ನಿತರ ದೇಶಗಳಿಗೂ ಮಾದರಿಯಾಗಿ ನಿಲ್ಲುತ್ತದೆ.

ದೇವಾಲಯಗಳು ಈ ಸಮಾಜದ ಅವಿಭಾಜ್ಯ ಅಂಗವಾಗಿ ವಿವಿಧ ಅರಸು ಮನೆತನಗಳ ಅಧಿಕಾರಕ್ಕೆ ಬಂದಾಗ ಅನೇಕ ದೇವಾಲಯಗಳು ನಿರ್ಮಾಣಗೊಂಡಿವೆ. ಇದಕ್ಕೂ ಪೂರ್ವದಲ್ಲಿ ಮಾನವ ತನ್ನ ಸುತ್ತಲಿನ ನಿಸರ್ಗದಲ್ಲಿ ನಡೆಯುವ ಬದಲಾವಣೆಗಳ ಹಿನ್ನೆಲೆಯಲ್ಲಿ ವೀಕ್ಷಿಸಿದಾಗ ತನಗೆ ಕಾಣದ ಯಾವದೋ ಶಕ್ತಿ ತನ್ನನ್ನು ನಡೆಸುತ್ತಿದೆ. ಎಂಬ ಭಾವನೆ ಮೂಡಿದಾಗ ಅವನಲ್ಲಿ ಭಯ ಭಕ್ತಿ ಗೌರವಕ್ಕೊಂದು ರೂಪಕೊಡಲು ಪ್ರಯತ್ನಿಸಿ ಪ್ರಕೃತಿಯಲ್ಲಿ ಕಂಡುಬರುವ ಸೂರ್ಯ, ಚಂದ್ರ, ಗಿಡಿ, ಮರ, ನದಿ ಮುಂತಾದವುಗಳಲ್ಲಿ ಪೂಜ್ಯ ಭಾವನೆ ಮೂಡಿ ಪೂಜಾಸ್ಥಾನಗಳು ನಿರ್ಮಾಣವಾದವು. ಈ ಸ್ಥಳಗಳಿಗೆ ರಕ್ಷಣಾತ್ಮಕವಾಗಿ ಚೌಕಟ್ಟನ್ನು ನಿರ್ಮಿಸಲು ಪ್ರಾರಂಭಿಸಿದಾಗ ಇದರ ಮುಂದೆ ದೇವಾಲಯಗಳು ಹುಟ್ಟಿಗೆ ಕಾರಣವಾಯಿತು. ದೇವರ + ಆಲಯ ದೇವಾಲಯ. ಆಲಯ ಎಂದರೆ ಕಟ್ಟಡ ಸಮಾಜದ ಅವಿಭಾಜ್ಯ ಅಂಗವಾಗಿರುವ ದೇವಾಲಯಗಳು ಇಂದಿಗೂ ಕೆಲವು ಸ್ಥಳಗಳು ಪವಿತ್ರಗೊಂಡು ಪುಣ್ಯಸ್ಥಳಗಳಾಗಿ ಪ್ರವಾಸಿ ತಾಣಗಳಾಗಿ ಪ್ರಸಿದ್ಧತೆಯನ್ನು ಪಡೆದುಕೊಂಡಿವೆ. ಪ್ರಾರಂಭದಲ್ಲೆಲ್ಲ ಚಿಕ್ಕ-ಚಿಕ್ಕ ಮಂಟಪವನ್ನು ಹೊಂದಿದ ಇವು ಕಾಲಗತಿಸಿದಂತೆಲ್ಲ ಮೊದಲ ಹೇಳಿದ ಹಾಗೆ ಅರಸರುಗಳ ಕಾಲಕ್ಕೆ ಪೂಜಾವಧಿ-ವಿಧಾನಗಳು ಆಚಾರ-ವಿಚಾರಗಳು ಹೆಚ್ಚುತ್ತಾ ಹೋದಂತೆಲ್ಲ ಗಾತ್ರದಲ್ಲಿ ದೇವಾಲಯಗಳು ವಿಶಾಲರೂಪವನ್ನು ಪಡೆದುಕೊಂಡವು. ಮಾನವ ಮೊದಲು ಗುಡ್ಡ ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಗಾತ್ರದ ಬಂಡೆಕಲ್ಲುಗಳ ನಡುವೆ ಗುಹಾಂತರ ಮೊದಲೆಲ್ಲಾ ದೇವಾಲಯಗಳನ್ನು ನಿರ್ಮಾಣ ಮಾಡುತ್ತಿದ್ದನು. ನಂತರದ ಕಾಲದಲ್ಲೆಲ್ಲಾ ವಿಶಾಲವಾದ ಆವರಣ ಹೊಂದಿದ ಬಯಲಿನಲ್ಲಿ ದೇವಾಲಯಗಳನ್ನು ನಿರ್ಮಿಸಲು ಮುಂದಾದನು. ಇಂದು ಇವು ಯಾತ್ರಿಕರನ್ನು ಕೈಬಿಸಿ ಕರೆಯುವ ಪುಣ್ಯ ಪವಿತ್ರ ಸ್ಥಳಗಳಾಗಿವೆ. ಒಟ್ಟಾರೆಯಾಗಿ ರಾಯಚೂರು ಪ್ರದೇಶದ ಸಂಸ್ಕೃತಿಯ ಹಿರಿಮೆಯನ್ನು ಸಾರುವಲ್ಲಿ ಅಲ್ಲಿರುವ ಶಾಸನಗಳು ಮತ್ತು ದೇವಾಲಯಗಳು ಮಹತ್ವದ ಪಾತ್ರ ವಹಿಸಿವೆ.

ಕಲ್ಲೂರು ಮಾರುಟೇಶ್ವರ ದೇವಾಲಯ

ಕಾಲ - ೧೦೮೦

ಜೀರ್ಣೋದ್ಧಾರಗೊಂಡಿರುವ ಈ ದೇವಾಲಯ ಎತ್ತರ ಜಗಲಿಯ ಮೇಲೆ ಪೂರ್ವಭಿ ಮುಖವಾಗಿದೆ. ಕ್ರಿಶ. ೧೦೮೦ರಿಂದ ಕಲ್ಯಾಣ ಚಾಲುಕ್ಯರ ಕಾಲದ ಹೈಹಯರ ದೇವಾಲಯವಾಗಿದೆ. ಈ ದೇವಾಲಯದ ಹೊರಭಾಗವು ಅಧಿಷ್ಠಾನವನ್ನು ಹೊಂದಿದೆ. ಇದರ ಶಿಖರವು ಕೀರ್ತಿ ಮುಖದ ಅಲಂಕಾರ ಹೊಂದಿದೆ. ಇದು ಕಲ್ಯಾಣ ಚಾಲುಕ್ಯರ ಶೈಲಿ ಹೊಂದಿದ ದೇವಾಲಯವಾಗಿದೆ. ಇದರ ವಿಶಾಲವಾದ ಆವರಣ ಸುತ್ತಮುತ್ತ ಆರು ಚಿಕ್ಕ ಚಿಕ್ಕ ಗುಡಿಗಳಿವೆ. ಮೆಟ್ಟಿಲು ಸೋಪಾನವನ್ನೂ ಹೊಂದಿರುವ ಜಗಲಿಯ ಮೇಲೆ ಈಶ್ವರನಿಗೆ ಎದುರಾಗಿ ನಂದಿಯ ಮೂರ್ತಿಯು ಇದ್ದು ಇದರ ಮುಂದೆ ಜೀರ್ಣೋದ್ಧಾರಗೊಂಡಿರುವ ಪ್ರವೇಶದ್ವಾರವಿದೆ.

ಮಾರುಟೇಶ್ವರ ದೇವಾಲಯದ ಗರ್ಭಗೃಹ ಚೌಕಕಾರವಾಗಿದ್ದು ಶಿವಲಿಂಗವನ್ನು ಹೊಂದಿದ ಪಾಣಿ ಪೀಠವಿದೆ. ಭುವನೇಶ್ವರ ಅಷ್ಟಾಕೋನಕಾರವಾಗಿದೆ. ಗರ್ಭಗೃಹಕ್ಕೆ ತಾಗಿಕೊಂಡಿರುವ ಕೋಣೆಯನ್ನು ಅಂತರಾಳ ಎಂದು ಕರೆಯುತ್ತಾರೆ. ಅಂತರಾಳವು ಅಯಾತಕಾರವಾಗಿದ್ದು ಇದಕ್ಕೆ ಹೊಂದಿಕೊಂಡಂತೆ ನವರಂಗವಿದೆ. ಈ ನವರಂಗವು ೪ ಕಂಬಗಳಿಂದ ಕೂಡಿದೆ. ಇದರ ಸುತ್ತಲೂ ಒಳ ಭಿತ್ತಿಯಲ್ಲಿ ಕಂಬಗಳಿವೆ. ಇಲ್ಲಿಯೇ ದೇವಾಲಯದ ಎಡಬಲಗಳಲ್ಲಿ ಒಳಗೋಡೆಗೆ ನಿಲ್ಲಿಸಲಾದ ಎರಡು ಎತ್ತರವಾದ ಶಾಸನಗಳಿವೆ. ಇವು ೬ನೇ ವಿಕ್ರಮಾದಿತ್ಯನ ಕಾಲದ್ದಾಗಿವೆ, ನವರಂಗ ಪ್ರವೇಶಿಸುವ ದ್ವಾರದಲ್ಲಿ ದೊಡ್ಡದಾದ ನಂದಿಯು ಶಿವಲಿಂಗಕ್ಕೆ ಅಭಿಮುಖವಾಗಿದೆ. ಒಟ್ಟಿನಲ್ಲಿ ಈ ದೇವಾಲಯ ಚೌಕಾಕಾರದ ಜಗಲಿಯ ಕಟ್ಟೆ ಪ್ರವೇಶ ಮಂಟಪ ಗರುಡಗಂಬ ನಂದಿ, ನವರಂಗ ಅಂತರಾಳ ಗರ್ಭಗೃಹಗಳನ್ನು ಒಳಗೊಂಡಿದ್ದು. ಇದರ ಹಿಂದೆ ಕಗ್ಗಲಿನ ಬೆಟ್ಟವಿದ್ದು ಕೊತ್ತಲವು ಕಂಡುಬರುತ್ತದೆ. **(ಕವಿವಿಶಾಸಂ. ೭, ಮಾ.೬೪)**

ಕಪ್ಪಗಲ್-ರಾಮಲಿಂಗೇಶ್ವರ ದೇವಾಲಯ

ಕಾಲ - ೧೦೬೯ ಸ್ಥಳ - ಊರು ಬಾವಿಯ ಪಕ್ಕದಲ್ಲಿ

ಎತ್ತರದ ಜಗಲಿಯ ಮೇಲೆ ಇದ್ದು ಮೆಟ್ಟಿಲುಗಳ ಸೋಪಾನವನ್ನು ಒಳಗೊಂಡ ಈ ದೇವಾಲಯ ಪೂರ್ವಾಭಿಮುಖವಾಗಿ ಜೀರ್ಣೋದ್ದಾರಗೊಂಡಿದೆ. ಗರ್ಭಗುಡಿಯಲ್ಲಿ ಈ ಶಿವಲಿಂಗವಿದ್ದು. ಇದರ ಮುಂದೆ ಸಭಾ ಮಂಟಪವಿದ್ದು, ಬಲಗಡೆ ಗಣೇಶ, ದೇವಿ ಮೂರ್ತಿಗಳನ್ನು ಇಡಲಾಗಿದೆ. ೪ ಕರಿ ಕಂಬಗಳ ಸಭಾಮಂಟಪವನ್ನು ಒಳಗೊಂಡಿದೆ. ಮೇಲ್ಭಾಗದ ನಾಲ್ಕು ಮೂರ್ತಿಗಳಲ್ಲಿ ನಂದಿ ವಿಗ್ರಹಗಳನ್ನು ಕಾಣಬಹುದಾಗಿದೆ. ಪ್ರದಕ್ಷಿಣ ಪಥವಿದ್ದು. ಚೌಕಾಕಾರದ ಸುರಳಿಯಾಕಾರದ ಕಂಬಗಳಿವೆ. ದೇವಾಲಯದ ಬಲಗಡೆ ಹೊಲ ಗದ್ದೆಗಳಿದ್ದು ಎಡಭಾಗದಲ್ಲಿ ಊರು ಬಾವಿ ಮತ್ತು ವೈಷ್ಣವ ದೇವಾಲವಿದೆ. ಬಾವಿಯ ಮೇಲೆ ಶಾಸನವಿದ್ದು ಕ್ರಿಶ.೧೦೬೯ರ ಕಲ್ಯಾಣ ಚಾಲುಕ್ಯರಸ ಭುವನೈಕ್ಯಮಲ್ಲನ

ಕಾಲದ್ದಾಗಿದೆ. ಪಂಪಾದೇವಿ ಈ ದೇವಾಲಯಕ್ಕೆ ಭೂಮಿಯನ್ನು ದಾನ ನೀಡಿರುವುದು ಈ ಶಾಸನಗಳಲ್ಲಿ ಬೋಗೇಶ್ವರ ಎಂದು ಉಲ್ಲೇಖಿಸಿದೆ. ಈಗ ಇದು ರಾಮಲಿಂಗೇಶ್ವರ ಅಥವಾ ಈಶ್ವರ ದೇವಾಲಯ ಎಂದು ಕರೆಯಲಾಗಿದೆ. (ಕವಿವಿಶಾಸಂ. ೭, ಮಾ.೫೫)

ಬಾಗಲವಾಡ – ರಾಮಲಿಂಗೇಶ್ವರ ದೇವಾಲಯ

ಕಾಲ–೧೧೯೩ ಸ್ಥಳ – ರಸ್ತೆಯ ಬಲಗಡೆ ಊರು ಒಳಗಡೆ ಹೋಗುವ ರಸ್ತೆಯಲ್ಲಿ

ಎತ್ತರದ ಜಗಲಿಯ ಮೇಲೆ ಎರಡು ಮೆಟ್ಟಿಲುಗಳ ಸೋಪಾನವನ್ನು ಹೊಂದಿದ ಈ ದೇವಾಲಯ ದಕ್ಷಿಣಾಭಿಮುಖವಾಗಿದ್ದು. ದಕ್ಷಣಕ್ಕೆ ಎರಡು ಗರ್ಭಗುಡಿಗಳು ಮುಖ ಹೊಂದಿದ್ದರೆ ಇನ್ನೊಂದು ದಕ್ಷಣಕ್ಕೆ ಮುಖ ಹೊಂದಿದ ತ್ರಿಕೂಟ ದೇವಾಲಯವಾಗಿ ನಯಗೊಳಿಸಲಾದ ಕಲ್ಲುಗಳಿಂದ ಈ ಗರ್ಭಗುಡಿಗಳನ್ನು ನಿರ್ಮಿಸಲಾಗಿದೆ. ಅಂತರಾಳ ಒಳಗೊಂಡಿಲ್ಲ ಮೂರು ಗರ್ಭ ಗುಡಿಗಳಲ್ಲಿ ಶಿವಲಿಂಗವನ್ನು ಹೊಂದಿವೆ. ರಾಷ್ಟ್ರಕೂಟರ ಕಾಲದ ಕಂಬದಂತೆ ಕಾಣುತ್ತದೆ. ದಕ್ಷಿಣಕ್ಕೆ ನಿಂತು ನೋಡಿದರೆ ಕಮಲ ದೇವಾಲಯವೆನ್ನುವಂತೆ ಮತ್ತು ಸಾಲುಗಂಬಗಳಂತೆ ನೋಡಲು ಸುಂದರವಾಗಿ ಕಾಣಿಸಿಕೊಳ್ಳುತ್ತವೆ. ಗರ್ಭಗುಡಿಯ ಮುಂದಿನ ಕಂಬಗಳ ನಡೆವೆ ಕೂಡಲು ಜಗಲಿಯಂತೆ ನಿರ್ಮಿಸಲಾಗಿದೆ. ಇದು ಅಧಿಷ್ಟಾನವನ್ನು ಹೊಂದಿದ್ದು ದೇವಾಲಯ ಮೇಲ್ಭಾವಣಿಯಲ್ಲಿ ಭುವನೇಶ್ವರಿಯ ಶಿಲ್ಪಗಳಿಂದ ಅಲಂಕೃತವಾಗಿದೆ. ಬಾಗಲವಾಡದ ಲಾಲಟದಲ್ಲಿ ಗಜ ಲಕ್ಷ್ಮಿಯ ಸುಂದರವಾದ ಉಬ್ಬು ಶಿಲ್ಪವಿದೆ. (ಕವಿವಿಶಾಸಂ. ೭, ಮಾ.೧೦೪)

ಮಲ್ಲಟ – ಮಲ್ಲಿಕಾರ್ಜುನ ದೇವಾಲಯ

ಕಾಲ – ೧೧೯೬ ಸ್ಥಳ – ಹಳ್ಳದ ದಂಡೆಯ ಸಮೀಪ.

ಈ ದೇವಾಲಯವು ದಕ್ಷಿಣಾಭಿಮುಖವಾಗಿದ್ದು, ತ್ರಿಕೂಟಾಚಲವಾಗಿದ್ದು, ಕಕ್ಷಾಸನವನ್ನು ಹೊಂದಿದೆ. ಚೌಕಾಕಾರದ ಗರ್ಭಗೃಹದಲ್ಲಿ ಮಲ್ಲಿಕಾರ್ಜುನ ಹೆಸರಿನ ನೆಲಭಾಗದಲ್ಲಿ ಶಿವಲಿಂಗವಿದೆ. ನೀರು ಹೊರ ಹೋಗಲು ಅನುಕೂಲ ಹೊಂದಿದೆ. ಚೌಕಾಕಾರದ ಅಂತರಾಳವನ್ನು ಹೊಂದಿದ್ದು. ಐದು ಕೋಷ್ಟಕಗಳ ಬಾಗಿಲಿದ್ದು. ಮತ್ತು ಐದು ಪಟ್ಟಿಕೆಗಳ ಅಲಂಕೃತವಾಗಿದ್ದು, ಬಾಗಲವಾಡದ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಚಿತ್ರವಿದೆ. ಹೊಸ್ತಿಲ ಎಡಬಲಗಳಲ್ಲಿ ಸ್ತ್ರೀಯರನ್ನೊಳಗೊಂಡ ದ್ವಾರಪಾಲಕರಿದ್ದಾರೆ. ಅಂತರಾಳದ ಬಾಗಿಲು ನವರಂಗದಿಂದ ಇದರ ಮುಂದೆ ನಾಲ್ಕು ಸುರಳಿಯಾಕಾರದ ಎತ್ತರ ನವರಂಗವಿದೆ. ಇದರ ಮುಂದೆ ನಂದಿ ಮೂರ್ತಿಯಿದ್ದು ಎಡಬಲಗಳಲ್ಲಿ ಈಶ್ವರ ತ್ರಿಯಾಂಭಕೇಶ್ವರ ಲಿಂಗಗಳಿವೆ. ಪ್ರವೇಶದ ದ್ವಾರಬಾಗಿಲು ಜಾಲಾಂದ್ರಗಳಿಂದ ಕೂಡಿದೆ. ಒಳ ಪ್ರವೇಶದ ಎಡ ಬಲಗಳಲ್ಲಿ ಕೂಡಲು ಜಾಗವಿದೆ. ಎರಡು ಕಂಬಗಳ ಪೀಠಭಾಗ ಚೌಕಾಕಾರವಾಗಿದ್ದು ಅಷ್ಟಾದಿಕ್ಪಾಲಕರಿದ್ದು ಮೇಲೆ ಸುರಳಿಯಾಕಾರದ ಬೋಧಿಗೆಗಳನ್ನು ಹೊಂದಿದೆ. ದೇವಾಲಯದ ಲಿಂಗವು ಪೂರ್ವಕ್ಕೆ ಮುಖ ಹೊಂದಿದ್ದು ಅದಕ್ಕೆ ಎದುರಾಗಿ ನಂದಿ ಮತ್ತು

ತ್ರಯಾಂಭಕೇಶ್ವರ ಈಶ್ವರ ಚಿಕ್ಕ ಗುಡಿಗಳಿಗೆ ಇವುಗಳ ಮಧ್ಯದಲ್ಲಿ ಧ್ವಾರಬಾಗಿಲಿನ ನೇರಕ್ಕೆ ದಕ್ಷಿಣಕ್ಕೆ ಮುಖ ಮಾಡಿ ಈಶ್ವರ ಲಿಂಗವಿದ್ದು ಮೂರ್ತಿ ಶಿಲ್ಪಗಳಿವೆ. ಹೊರಭಾಗದ ದ್ವಾರ ಬಾಗಿಲು ಪಕ್ಕದಲ್ಲಿ ಹನುಮಂತನ ಮೂರ್ತಿ ಶಿಲ್ಪವನ್ನು ಹೊಂದಿವೆ. ಅಧ್ಧಿಷ್ಠಾನ ಭಿತ್ತಿ ಮೂರು ಗೋಪುರುಗಳನ್ನು ಹೊಂದಿದ ತ್ರಿಕೂಟ ದೇವಾಲಯವಾಗಿದೆ. ಈ ದೇವಾಲಯದ ಎಡಗಡೆ ಬಾವಿಯಿದ್ದು. ವಿಶಾಲವಾದ ಹೊರ ಆವರಣವನ್ನು ಹೊಂದದೆ. ಪ್ರದೇಶ ದ್ವಾರದ ಎಡಭಗದಲ್ಲಿ ಸ್ವಲ್ಪದೂರದಲ್ಲಿ ರಾಷ್ಟ್ರಕೂಟದ ಕಾಲಕ್ಕೆ ಸಂಬಂಧಿಸಿದಂತೆ ಕಾಣುವ ಚಿಕ್ಕದಾದ ದೇವಾಲಯವಿದ್ದು ಸುತ್ತಲು ಆನೆಯ ಸಾಲನ್ನು ಹೊಂದಿದ ಗರ್ಭಗುಡಿಯಿದ್ದು. ಮೂರ್ತಿಯು ಹಾಳಾಗಿದೆ. ಇದೇ ಊರಿನ ಅದೇ ಹೊಲದಲ್ಲಿ ಅಲ್ಲಮ ದೇವಾಲಯದ ನವರಂಗ ಮಂಟಪದ ದಕ್ಷಿಣಕ್ಕೆ ಎದುರಾದ ಒಳಗೋಡೆಯಲ್ಲಿ ಒಂದು ಶಾಸನವಿದೆ. (ಕವಿವಿಶಾಸಂ. ೭, ಮಾ. ೧೦೭)

ಹರವಿ ಬಸವಣ್ಣ ದೇವಾಲಯ

ಕಾಲ – ಕ್ರಿ.ಶ.೧೧ನೇ. ಸ್ಥಳ – ಊರು ಬಿಟ್ಟು ಬಂಡೆಗಳ ಮೇಲೆ ಸ್ಥಾಪಿಸಲಾಗಿದೆ.

ಈ ದೇವಾಲಯ ಕೂಟ ದೇವಾಲಯವಾಗಿದ್ದು ಉತ್ತರಾಭಿಮುಖವಾಗಿದೆ. ದೇವಾಲಯ ಬಲ ಭಾಗದಲ್ಲಿ ಈಶ್ವರವಿದೆ. ಪೂರ್ವದಲ್ಲಿರುವ ದೊಡ್ಡದಾದನಂದಿಯು ಈಶ್ವರನಿಗೆ ಅಭಿಮುಖವಾಗಿದ್ದಾನೆ. ನಾಲ್ಕು ಕಂಬಗಳ ನವರಂಗವಿದ್ದು ಕೆಳಭಾಗದ ಪೂರ್ವದಲ್ಲಿ ನಂದಿಯಿದೆ. ಉತ್ತರಕ್ಕೆ ಮುಖಮಾಡಿರುವ ಗರ್ಭಗುಡಿ ಇದೆ. ವೀರಭದ್ರೇಶ್ವರನ ಸುತ್ತಲು ಇರುವ ಕಂಬಗಳ ಪೀಠವು ಆಯಾತಕಾರ ಚೌಕಾಕಾರ ಸುರಳಿಯಾಕಾರ ಬೋದಿಗೆಯನ್ನು ಹೊಂದಿದೆ. ನಂದಿಯನ್ನು ತುಳಿದು ಒಳಬರುತ್ತಾರೆ. ಜನ ಎಂದು ಪೂರ್ವದ ಬಾಗಿಲನ್ನು ಮುಚ್ಚಿ ಉತ್ತರ ಬಾಗಿಲನ್ನು ತೆರೆಯಲಾಗಿದೆ. ಉತ್ತರದ ಕಲ್ಲು ಬಂಡೆಯ ಮೇಲೆ ಈ ದೇವಾಲಯವನ್ನು ನಿರ್ಮಿಸಲಾಗಿದೆ. ತಳವಿಲ್ಲದ ಈ ದೇವಾಲಯವು ಉಪಾನದಿಂದ ಕಪೋತದವರೆ ಇದ್ದು ಮೇಲೆ ಭಿತ್ತಿಯನ್ನು ಮೂರು ಗೋಪುರಗಳನ್ನು ಒಳಗೊಂಡ ಪಾಂಸನ ರೀತಿಯಿದು. ಉತ್ತರ ಬಾಗಿಲಿನ ಮುಂಭಾಗದಲ್ಲಿ ಗಣೇಶನ ಇತ್ತೀಚಿನ ದೇವಾಲಯವನ್ನು ಕಟ್ಟಲಾಗಿದ್ದು ಇದರ ಪಕ್ಕದಲ್ಲಿ ಮಲ್ಲಿಕಾರ್ಜುನ ದೇವಾಲಯವು ಗರ್ಭಗುಡಿ ನಾಲ್ಕು ಕಂಬಗಳ ನವರಂಗವನ್ನು ಹೊಂದಿದ್ದು ಮುಂದೆ ವಿಶಾಲವಾದ ಆವರಣದಲ್ಲಿ ಸಿಡಿಲಬಾವಿಯಿತ್ತು. ಈಗ ಇದನ್ನು ಮುಚ್ಚಲಾಗಿದೆ. ಕಾರಣ ಇಲ್ಲಿ ಮದುವೆಗಳು ಜರುಗುವುದರಿಂದ ಮುಚ್ಚಲಾಗಿದೆ. (ಕವಿವಿಶಾಸಂ. ೭, ಮಾ. ೫೮)

ಕವುತಾಳ – ತ್ರಯಾಂಭಕೇಶ್ವರ ದೇವಾಲಯ

ಕಾಲ – ೧೨೧೭

ಕವುತಾಳವು ರಾಯಚೂರಿನಿಂದ ೪೦ ಮೈಲಿ ಮತ್ತು ಲಿಂಗಸೂರಿನಿಂದ ೧೮ ಮೈಲಿ ದೂರದಲ್ಲಿರುವ ಮಧ್ಯಕಾಲೀನ ತ್ರೈಯಂಬಕೇಶ್ವರ ದೇವಾಲಯವಿದೆ. ಇದರಲ್ಲಿ ಮೂರು

ಶಿವಲಿಂಗವಿರುವ ಗುಡಿಗಳಿದ್ದು ಅಂತರಾಳವನ್ನು ಹೊಂದಿದೆ. ಪೂರ್ವಾಭಿಮುಖವಾಗಿರುವ ಭಾಗಿಲಿನ ಲಿಂಗಕ್ಕೆ ಅಭಿಮುಖವಾಗಿರುವ ನಂದಿಯಿದೆ. ಅಂತರಾಳದ ಗರ್ಭಗೃಹದ ಬಾಗಿಲ ಮೇಲೆ ಉಬ್ಬು ಚಿತ್ರದ ಗಜಲಕ್ಷ್ಮಿಯಿದೆ. ನಾಲ್ಕು ಕಂಬಗಳ ಉತ್ತರ ನವರಂಗವಿದೆ. ಪ್ರವೇಶ ದ್ವಾರದ ಬಲಭಾಗದಲ್ಲಿ ಎರಡು ಕನ್ನಡ ಶಾಸನಗಳಿವೆ. ದೇವಾಲಯದ ಪಶ್ಚಿಮದ ಕೋಷ್ಠಕದಲ್ಲಿ ಸುಂದರವಾದ ಮಹಿಷಾಸುರ ಮರ್ದಿನಿಯ ಶಿಲ್ಪವಿದೆ. ಈ ಮೂರು ಗುಡಿಗಳು ಒಂದೇ ಪ್ರಮಾಣದವುಗಳಾಗಿ ಶಿಖರಗಳು ದ್ರಾವಿಡ ಶೈಲಿಯಲ್ಲಿವೆ. ಇದರ ಕೆಳಗಿನ ಮೂರನೆಯ ಎರಡು ಭಾಗ ಕಲ್ಲಿನಿಂದಲೂ ಮೇಲಿನ ಭಾಗಗಳು ಇಟ್ಟಿಗೆಯ ಮತ್ತು ಸುಣ್ಣದಿಂದಲೂ ಪೂರ್ಣಗೊಳಿಸಲ್ಪಟ್ಟಿದೆ. ಕವುತಾಳಕ್ಕೆ ಉತ್ತರದಲ್ಲಿ ನಾಲ್ಕು ಮೈಲು ದೂರದ ಮುಪ್ಪಲು ದೊಡ್ಡಿ ಎಂಬ ಗ್ರಾಮವಿದೆ. ಇಲ್ಲಿ ಪ್ರಾಚೀನ ಕಾಲದ ಚಿನ್ನ ತೆಗೆಯುವ ಉದ್ಯಮದ ಅವಶೇಷಗಳು ಕಂಡು ಬಂದಿದೆ. ಶಾಸನದ ಮೊದಲ ಸಾಲುಗಳಲ್ಲಿ ಯಾದವ ಚಕ್ರವರ್ತಿ ಸಿಂಗಣನನ್ನು ಹೊಗಳುವ ಪದ್ಯಗಳಿದ್ದು ಈತನ ಕೈಕೆಳಗೆ ಬೀಚಿ ಸೆಟ್ಟಿಯಿದ್ದನು. ಈತನು ತನ್ನ ಗುರುಗಳ ಕಾಲವನ್ನು ತೊಳೆದು ತ್ರಯಂಬಕೇಶ್ವರ ದೇವಾಲಯಕ್ಕೆ ರಂಭೋಗಕ್ಕೆ ದಾನ ನೀಡಿದಂತೆ ಉಲ್ಲೇಖಿಸುತ್ತಾರೆ. (ಕವಿವಿಶಾಸಂ. ೭, ಮಾ.೧೧೫)

ಈಶ್ವರ ದೇವಾಲಯ

ಸ್ಥಳ: ವೆಂಕಟೇಶ್ವರ ದೇವಾಲಯದ ಪೂರ್ವದ ಕಡೆಗೆ

ತಲವಿನ್ಯಾಸ: ಈ ದೇವಾಲಯವು ಗಬ್ಬೂರಿನ ಪ್ರಸಿದ್ಧ ದೇವಾಲಯವಾದ ವೆಂಕಟೇಶ್ವರ ದೇವಾಲಯದ ಪೂರ್ವ ಭಾಗದಲ್ಲಿದೆ. ಇದು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ದೇವಾಲಯವಾಗಿದ್ದು. ಏಕಕೂಟ ದೇವಾಲಯವಾಗಿದೆ. ಈ ದೇವಾಲಯವು ಪೂರ್ವಕ್ಕೆ ಮುಖಮಾಡಿ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮುಖಮಂಟಪಗಳನ್ನು ಹೊಂದಿದ ದೇವಾಲಯವಾಗಿದೆ.

ಗರ್ಭಗೃಹ: ಗರ್ಭಗೃಹವು ಚೌಕಾಕಾರವಾಗಿದ್ದು, ಗರ್ಭಗೃಹ ಮಧ್ಯದಲ್ಲಿ ವೃತ್ತಾಕಾರದ ಪೀಠದ ಮೇಲೆ ಲಿಂಗವನ್ನು ಇಡಲಾಗಿದೆ. ಇದರ ಜೊತೆಗೆ ಐದು ಮುಖದ ಕಾರ್ತಿಕೇಯನ ಶಿಲ್ಪವಿದ್ದು, ಕಾರ್ತಿಕೇಯನು ನವಿಲಿನ ಮೇಲೆ ಕುಳಿತಿದ್ದಾನೆ. ಈ ಗರ್ಭಗೃಹದ ಬಾಗಿಲು ಪಟ್ಟಿಕೆಗಳು ಶಾಖೆಗಳನ್ನು ಹೊಂದಿದ್ದು, ತಳಭಾಗದಲ್ಲಿ ಕಂಬಾಲತಾಗಳನ್ನು ಕಾಣಬಹುದು. ಬಾಗಿಲಿಗೆ ಅರ್ಧಕಂಬಗಳೂ ಹಾಗೂ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಿದ್ದಾರೆ.

ಅಂತರಾಳ: ಇದರ ಅಂತರಾಳವು ತೆರೆದುಕೊಂಡಿದ್ದು ಇಲ್ಲಿ ಕಂಬಗಳಿದ್ದು ಇದರ ಛತ್ತಿನಲ್ಲಿ ಚೌಕಾಕಾರದ ಕಮಲವನ್ನು ಕಾಣಬಹುದು.

ನವರಂಗ: ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಅವು ಪೀಠ ಚೌಕಾವೃತ್ತಕಾರದ ಪೆಟ್ಟಿಕೆಗಳ ಜೊತೆಗೆ ಪುಷ್ಪದಳಗಳನ್ನು ಹೊಂದಿ ಕಂಠಭಾಗದಲ್ಲಿ ವೃತ್ತಾಕಾರದ ಮುಚ್ಚಳವನ್ನು ಹೊಂದಿ ಅದರ ಮೇಲೆ ಚೌಕಾಕಾರದ ಹಲಗೆಯ ಮೇಲೆ ಸದಾ ಬೋದುಗೆಗಳಿರುವುದನ್ನು ಕಾಣಬಹುದು. ಉತ್ತರಕ್ಕಿರುವ ಕಂಬಗಳು ಮಂಟಪದ ಗೋಡೆಗಳು ಅಷ್ಟು ಆಳವಾಗಿ ನೆಟ್ಟಿಲ್ಲ. ಮಧ್ಯಭಾಗದಲ್ಲಿ ಕಮಲದ ಹೂ ಚಿತ್ರಿಸಲಾಗಿದೆ. ಉಳಿದವು ಅಂಕಣವು ದೊಡ್ಡದಾಗಿಯೂ ಇಕ್ಕಟ್ಟಾಗಿಯೂ ಇದೆ. ಪ್ರವೇಶದ ಬಾಗಿಲಿನಲ್ಲಿ ಎರಡು ಕಂಬಗಳಿವೆ. ಸಭಾಮಂಟಪ ಕಂಬಗಳ ಅದಕ್ಕೆ ಹೋಲುತ್ತದೆ. ಆದರೆ ಅವುಗಳನ್ನು ತಿರುವು ಮಾಡಿ ಕವಚ ರೂಪದಲ್ಲಿ ಇಡಲಾಗಿದೆ. ಭಿತ್ತಿ ಮತ್ತು ಸ್ತಂಭಗಳು ಮಂಟಪದ ಗೋಡೆಗಳ ಅಷ್ಟು ಆಳವಾಗಿ ನೆಟ್ಟಿಲ್ಲ ಗೋಡೆಗಳ ಆಳದಲ್ಲಿ ಹೂತು ಕೊಂಡಿದೆ. ಹೊರಗೋಡೆಗಳಲ್ಲಿ ಅಂತಹ ಸುಂದರವಾದ ಕೆತ್ತನೆ ಏನು ಕಾಣುವುದಿಲ್ಲ. ಆದರೆ ದೇವಾಲಯ ಒಳಭಾಗದಲ್ಲಿ ಸ್ವಲ್ಪ ಅಲಂಕೃತವಾದ ಕೆಲವೊಂದು ಚಿತ್ರಗಳನ್ನು ಕಂಬಗಳಲ್ಲಿ ಕಾಣಬಹುದು. ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಅವುಗಳನ್ನು ನೋಡಿದರೆ ಚೌಕಾಕಾರದ ಮಧ್ಯಮಕಾರದ ಅಷ್ಟಾಕಾರದ ಗೋಲಾಕಾರದ ಮತ್ತು ಬೊರಲು ಮಾಡಿದ ಮಣಿಕಟ್ಟುಗಳು ಕಾಣುತ್ತವೆ. ದೇವಾಲಯವು ಸಣ್ಣದಿರುವುದರಿಂದ ಸಣ್ಣ ಕಂಬಗಳನ್ನು ಹಾಕಲಾಗಿದೆ.

ಭಿತ್ತಿ ಮತ್ತು ಸ್ತಂಭಗಳು: ಈ ದೇವಾಲಯ ಬಹುತೇಕ ಭಾಗದ ಗೋಡೆ ಶಿಥಿಲಗೊಂಡಿದೆ. ಈಗ ಕೇವಲ ಒಂದೇ ಮಂಟಪವಿದೆ. ಭಿತ್ತಿಯಲ್ಲಿ ಒಟ್ಟು ಹತ್ತು ಕುಡ್ಯಸ್ತಂಭಗಳು ಬರುತ್ತದೆ. ಪಶ್ಚಿಮದಲ್ಲಿ ಐದು ಕುಡ್ಯಸ್ತಂಭಗಳು ಪೂರ್ವದಲ್ಲಿ ಐದು ಕುಡ್ಯಸ್ತಂಭಗಳು, ಉತ್ತರದಲ್ಲಿ ಮತ್ತೆ ಎರಡು ಕುಡ್ಯಸ್ತಂಭಗಳಿವೆ. ಒಟ್ಟು ಈ ದೇವಾಲಯದಲ್ಲಿ ೨೪ ಕಂಬಗಳಿದ್ದು ೧೨ ಭಿತ್ತಿ ಕಂಬಗಳಾದರೆ ಇನ್ನೂಳಿದ ಮಂಟಪದ ೧೨ ಕಂಬಗಳು ನವರಂಗ ಮಂಟಪದ ಕಂಬಗಳ ಕೆಳಗಡೆ ಭಾಗದಲ್ಲಿ ಗಣೇಶ ಮತ್ತು ವಿಷ್ಣುವಿನ ಮೂರ್ತಿಗಳನ್ನಿಡಲಾಗಿದೆ.

ಅಧಿಷ್ಠಾನ: ಬಂಗಾರ ಬಸವಣ್ಣ ದೇವಾಲಯದ ಅಧಿಷ್ಠಾನವು ಹೊತುಹೋಗಿದ್ದು ಅದರ ಸುತ್ತಲು ಮನೆಗಳು ಇರುವುದರಿಂದ ಮತ್ತು ಈ ದೇವಾಲಯದ ಹೆಚ್ಚಿನ ಭಾಗ ಶಿಥಿಲವಾಗಿದ್ದ ಕಾರಣ ಅಧಿಷ್ಠಾನ ಕಂಡುಬರುವುದಿಲ್ಲ. ಈ ದೇವಾಲಯದಲ್ಲಿ ಯಾವುದೇ ರೀತಿಯ ಅಲಂಕಾರವಾಗಿಲ್ಲ. ಸಾದಾ ರೀತಿಯಲ್ಲಿದ್ದು ಆದರೆ ಇತ್ತೀಚೆಗೆ ಈ ದೇವಾಲಯವು ಪಶುಗಳ ವಾಸಸ್ತಾನವಾಗಿದ್ದು ಜನರು ಕೂಡ ಇಲ್ಲಿ ವಾಸಮಾಡುತ್ತಿದ್ದ ಕಾರಣ ನಂದಿಯ ಕಂಬಗಳು ಮಾಸಿ ಹೋಗಿದ್ದು ಅವು ತಮ್ಮ ಮೂಲ ಸ್ವರೂಪವನ್ನು ಕಳೆದು ಕೊಳ್ಳುತ್ತಿವೆ. **(Temples of Raichur and Bellary District, C.S.Patil, Page-142)**

ಮಹಾಬಲೇಶ್ವರ ದೇವಾಲಯ.

ಸ್ಥಳ – ಊರಿನ ಮಧ್ಯಭಾಗದಲ್ಲಿ ಉತ್ತಾರಾಭಿಮುಖವಾಗಿದೆ.

ಈ ದೇವಾಲಯವು ಊರಿನ ಮಧ್ಯಭಾಗದಲ್ಲಿದೆ. ಇದು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ದೇವಾಲಯವಾಗಿದೆ. ಇದು ಏಕಕೂಟ ದೇವಾಲಯವಾಗಿದ್ದು ಹೆಚ್ಚಿನ ಭಾಗ ಶಿಥಿಲವಾಗಿದ್ದು, ಅದರ ಅವಶೇಷುಗಳು ನಾಶವಾಗಿವೆ. ಈ ದೇವಾಲಯವು ಗರ್ಭಗೃಹ ಅಂತರಾಳ, ಸಭಾಮಂಟಪಗಳನ್ನು ಒಳಗೊಂಡಿದೆ.

ಗರ್ಭಗೃಹ: ಈ ದೇವಾಲಯದ ಗರ್ಭಗೃಹವು ಆಯತಾಕಾರವಾಗಿದ್ದು, ಗರ್ಭಗೃಹದಲ್ಲಿ ನಂದಿ ಮತ್ತು ಈಶ್ವರ ಲಿಂಗಗಳಿವೆ. ಗರ್ಭಗೃಹದ ಬಾಗಿಲು ಪುಷ್ಪದಳಗಳಿಂದ ಅಲಂಕಾರವಾಗಿದ್ದು, ಇದರ ಲಲಾಟ ಪಟ್ಟಿಯಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಲಾಗಿದೆ. ಇದರ ಅಂತರಾಳವು ತೆರೆದು ಕೊಂಡಿದ್ದು ಎರಡು ಕಂಬಗಳಿಂದ ಕೂಡಿದೆ. ಇವುಗಳ ಪೀಠ ಚಾಕ, ಪಟ್ಟಿಕೆ, ಚೌಕಕಂಠ ಭಾಗದಲ್ಲಿ ಗೋಲಾಕಾರದ ಮುಚ್ಚಳದ ಮೇಲೆ ಚೌಕಾಕಾರದ ಹಲಗೆಯ ಸಾದಾ ಬೋದುಗೆಗಳನ್ನು ಹೊಂದಿದೆ.

ಸಭಾಮಂಟಪ: ಸಭಾಮಂಟಪವು ನಾಲ್ಕು ಕಂಬಗಳಿಂದ ಕೂಡಿದ್ದು ಎರಡು ಕಂಬಗಳು ಗೋಲಕಾರದಲ್ಲಿ ಎರಡು ಚೌಕಾಕಾರದಲ್ಲಿವೆ. ಕಂಬದ ಕೆಳಗಿನ ಭಾಗದಲ್ಲಿ ಚೌಕಾಕಾವಾಗಿದ್ದು, ಗೋಲಾಕಾರವಾಗಿಯೂ ಮತ್ತು ಅಷ್ಟಾಕಾರವಾಗಿಯೂ ಗುಂಪುಗಟ್ಟಿ ಮಧ್ಯ ಮೇಲ್ಭಾಗದಲ್ಲಿ ಬೋರಲು ಕೂಡದಂತೆ ಮಣಿಕಟ್ಟು ಕವಚವಿದೆ. ಈ ಮಂಟಪದ ಛತ್ತು ಸಪಾಟಾಗಿದೆ. ಈ ದೇವಾಲಯದ ಅಧಿಷ್ಟಾನ ಹೊತ್ತು ಹೋಗಿದೆ. ಇದರ ಗೋಡೆಗಳು ಹೊಸದಾಗಿ ನಿರ್ಮಿಸಲ್ಪಟ್ಟಿದ್ದು, ಮೇಲಿನ ಭಾಗ ಐದು ದ್ರಾವಿಡ ಗೋಪುರಗಳಿಂದ ಆಲಂಕೃತಗೊಂಡಿದೆ. **(Temples of Raichur and Bellary District .C.S.Patil, Page-168)**

ಸೂಗುರೇಶ್ವರ ದೇವಾಲಯ

ಸ್ಥಳ – ಊರಿನ ಪಶ್ಚಿಮ ದಿಕ್ಕಿನಲ್ಲಿರುವ ಬೆಟ್ಟದ ಮೇಲಿದೆ.

ಈ ದೇವಾಲಯದ ಉತ್ತರ ದಿಕ್ಕಿನ ಕಡೆಗೆ ಇರುವ ಕಂಬದಲ್ಲಿ ಶಾಸನವಿದ್ದು. ಜನರು ದುರುಪಯೋಗ ಪಡಿಸಿಕೊಂಡ ಕಾರಣ ಅಕ್ಷರಗಳು ಆಳಿಸಿ ಹೋಗಿವೆ. ಆದರ ಚಾಳುಕ್ಯ ತ್ರಿಭುವನ ಮಲ್ಲನು ರಾಜ್ಯಭಾರ ಮಾಡುತ್ತಿರುವಾಗ ಕ್ರಿ.ಶ.೧೧೦೮೫ರ ಶಾಸನವು ಈ ಬೆಟ್ಟದ ದಾರಿಯಲ್ಲಿದೆ.

ತಲವಿನ್ಯಾಸ: ಸೂಗುರೇಶ್ವರ ದೇವಾಲಯವು ಗಬ್ಬೂರಿಗೆ ಹೊಂದಿಕೊಂಡಂತೆ ಪಶ್ಚಿಮ ದಿಕ್ಕಿನಲ್ಲಿರುವ ಬೂದಿಬಸವೇಶ್ವರ ಬೆಟ್ಟದಲ್ಲಿದೆ. ಈ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲದ

ನಿರ್ಮಾಣವಾಗಿದ್ದು ಇದನ್ನು ನಿರ್ಮಾಣ ಮಾಡಲು ಕೆಂಪು ಬಿಳುಪು ಶಿಲೆಯ ಗ್ರೈನೇಟ್‌ದಿಂದ ನಾಜೂಕಾಗಿ ಕೆತ್ತಲಾಗಿದೆ. ನೋಡಲು ಬಹಳ ಸುಂದರವಾದ ಈ ದೇವಾಲಯವು ತಲವಿನ್ಯಾಸದಲ್ಲಿ ಗರ್ಭಗೃಹ ಅರ್ಧಮಂಟಪ ನವರಂಗ ಮತ್ತು ಮುಖಮಂಟಪ ನವರಂಗ ಮತ್ತು ಮುಖಮಂಟಪಗಳಿಂದ ಕೂಡಿದ ತ್ರಿಕೂಟ ದೇವಾಲಯವಾಗಿದೆ.

ಗರ್ಭಗೃಹ: ಈ ದೇವಾಲಯದ ಗರ್ಭಗುಡಿಯ ಪೂರ್ವಕ್ಕೆ ಮುಖ ಮಾಡಿದ್ದು ಚೌಕಾಕಾರವಾಗಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಗರ್ಭಗೃಹದ ಮಧ್ಯ ಶಿವಲಿಂಗವಿದ್ದು ನಂತರ ಕಾಲದಲ್ಲಿ ಈ ಗುಡಿಯಲ್ಲಿ ಶಿವಲಿಂಗವಿಲ್ಲದಂತಾಗಿದೆ. ಈಗ ಸದ್ಯ ಅಲ್ಲಿ ಶಿವಲಿಂಗವಿರದೆ ಖಾಲಿ ಗರ್ಭಗುಡಿ ಇರುವುದನ್ನು ಕಾಣಬಹುದು. ಇಲ್ಲಿಯ ಗರ್ಭಗೃಹದ ಬಾಗಿಲುಗಳನ್ನು ಸುಂದರವಾಗಿ ಕೆತ್ತಿದ್ದಾರೆ. ದ್ವಾರ ಬಾಗಿಲಿನ ಎರಡು ಬದಿಯಲ್ಲಿ ದ್ವಾರಪಾಲಕರು ನಿಂತಿದ್ದಾರೆ. ಇದು ಹೂಬಳ್ಳಿ, ಪುಷ್ಪದಳಗಳು ಅರ್ಧಕಂಬಗಳನ್ನು ಹೊಂದಿದ್ದು ದ್ವಾರದ ಮೇಲೆ ಗಜಲಕ್ಷ್ಮಿಯ ಶಿಲ್ಪವನ್ನು ಕಾಣಬಹುದು. ಈ ದ್ವಾರ ಬಾಗಿಲಿಗೆ ಇತ್ತೀಚೆಗೆ ಕಬ್ಬಿಣದ ಬಾಗಿಲನ್ನು ಮಾಡಿ ಗರ್ಭಗೃಹಕ್ಕೆ ಮುಚ್ಚುವ ವ್ಯವಸ್ಥೆ ಮಾಡಿದ್ದಾರೆ. ಉತ್ತರದ ಗರ್ಭಗೃಹದಲ್ಲಿ ನಂದಿ ಇದೆ. ಈಗ ಸಂಪೂರ್ಣವಾಗಿ ಇದರ ಗರ್ಭಗೃಹ ನಾಶವಾಗಿದೆ. ಇದರ ಅಂತರಾಳ ಶಿಥಿಲವಾಗಿದ್ದು ಎರಡು ಕಂಬಗಳನ್ನು ಒಳಗೊಂಡಿದೆ. ದಕ್ಷಿಣದಲ್ಲಿರುವ ಗರ್ಭಗೃಹವು ಈಗ ಕಾಲಿ ಇದ್ದು ಅದರಲ್ಲಿ ಯಾವ ಮೂರ್ತಿ ಇಲ್ಲ. ಇದರ ಅಂತರಾಳದಲ್ಲಿ ನಾಲ್ಕು ಕಂಬಗಳಿವೆ. ಪಶ್ಚಿಮದಲ್ಲಿರುವ ಅಂತರಾಳದಲ್ಲಿ ಎರಡು ದೇವಕೋಷ್ಟಕಗಳಿವೆ. ಆದರೆ ಯಾವ ಮೂರ್ತಿಯು ಇರುವುದಿಲ್ಲ. ಈ ಅಂತರಾಳದಲ್ಲಿ ಎರಡು ಪ್ರತ್ಯೇಕ ಕಂಬಗಳನ್ನು ಹೊಂದಿದ್ದು ಕಂಬಗಳು ಪೀಠ, ಚೌಕಾಕಾರ ಮುಚ್ಚಳವನ್ನು ಹೊಂದಿದ್ದು, ಸರಳವಾಗಿವೆ. ಇವುಗಳ ಮಧ್ಯ ಎರಡು ಕಡೆಗೆ ಗೋಡೆಗಳನ್ನು ನಿರ್ಮಿಸಿದ್ದಾರೆ.

ನವರಂಗ: ಕಲ್ಯಾಣ ಚಾಲುಕ್ಯರ ದೇವಾಲಯಗಳಲ್ಲಿ ಒಂದಾದ ಈ ಸೂಗೂರೇಶ್ವರ ದೇವಾಲಯದ ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ಮೂರು ದಿಕ್ಕಿನ ಕಡೆಗೆ ತೆರೆದುಕೊಂಡಿದೆ, ನವರಂಗದ ಕಂಬಗಳು ಪೀಠ. ಚೌಕಾಕಾರ ಪಟ್ಟಿಕೆಗಳು ಇಲ್ಲ ಮೂರ್ತಿಶಿಲ್ಪಗಳದ್ದು ಅವು ಮಾಸಿವೆ. ಮೇಲಿನ ಕಂಠ ಭಾಗದಲ್ಲಿ ಗೋಲಾಕಾರದ ಮುಚ್ಚಳ ಚೌಕಾಕಾರದ ಹಲಗೆಯ ಮೇಲೆ ಸಾದಾ ಬೋದುಗೆಗಳಿಂದ ಕೂಡಿದವುಗಳಾಗಿವೆ. ಇಲ್ಲಿಯ ಛತ್ತಿನಲ್ಲಿ ಭುವನೇಶ್ವರಿ ಇರುವುದನ್ನು ಕಾಣುತ್ತೇವೆ. ಇದರ ಸುತ್ತ ಮಂಟಪದಲ್ಲಿ ಇನ್ನು ಎಂಟು ಭುವನೇಶ್ವರಿಗಳಿವೆ.

ಮುಖಮಂಟಪ: ಈ ದೇವಾಲಯದ ಮುಖಮಂಟಪ ಪೂರ್ವ ದಿಕ್ಕಿಗೆ ಇದ್ದು. ದಕ್ಷಿಣ, ಉತ್ತರ ದಿಕ್ಕಿನ ಕಡೆಗೂ ತೆರೆದುಕೊಂಡಿದ್ದು. ಸುಂದರವಾದ ಕಂಬಗಳಿಂದ ಕೂಡಿದೆ. ಇಲ್ಲಿಯ ಕಂಬಗಳು ಪೀಠ ೧೬-೮೧೬ ಪಟ್ಟಿಕೆಗಳು ಇದ್ದು ಕಾಂಡಭಾಗದಲ್ಲಿ ಸಣ್ಣ ಕೋಷ್ಟಕಗಳಿವೆ. ಇವು

ಮಣಿ ಸರಗಳಿಂದ ಕೂಡಿದ್ದಾಗಿದೆ. ಕಂಠ ಭಾಗದಲ್ಲಿ ವೃತ್ತಾಕಾರದ ಮುಚ್ಚಳ ಹೊಂದಿ ಅದರ ಮೇಲೆ ಚೌಕಾಕಾರದ ಹಲಗೆಯ ಮೇಲೆ ಸಾದಾ ಬೋದುಗೆಗಳನ್ನು ಹೊಂದಿವೆ. ಈ ನಾಲ್ಕು ಕಂಬಗಳಲ್ಲಿ ಎರಡು ಕಂಬಗಳು ಚೌಕಾಕಾರದಲ್ಲಿದ್ದರೆ ಇನ್ನೆರಡು ಕಂಬಗಳು ಗೋಲಾಕಾರದಲ್ಲಿವೆ. ಆದರೆ ಇದರಲ್ಲಿ ಒಂದು ಕಂಬ ಈಗ ನಶಿಸಿ ಹೋಗಿದೆ. ಇದರ ಬಾಗಿಲ ಮೇಲೆ ಗಜಲಕ್ಷ್ಮಿಯ ಶಿಲ್ಪವಿದ್ದು ಅರ್ಧ ಕಂಬಗಳ ಹಾಗೂ ಪೂರ್ಣ ಕಂಭಗಳಿಂದ ಕೂಡಿದೆ.

ಭಿತ್ತಿ: ಈ ದೇವಾಲಯದ ಗೋಡೆಗಳು ಸರಳವಾಗಿದ್ದು ದೇವಾಲಯದ ದಕ್ಷಿಣ, ಪಶ್ಚಿಮ, ಉತ್ತರ ದಿಕ್ಕಿನಲ್ಲಿ ಆನೆಗಳ ಶಿಲ್ಪಗಳನ್ನು ಕೆತ್ತಲಾಗಿದ್ದು, ಪಶ್ಚಿಮ ದಿಕ್ಕಿನ ಗರ್ಭಗೃಹದ ಗೋಡೆ ಶಿಥಿಲವಾಗಿದ್ದರಿಂದ ಇತ್ತೀಚೆಗೆ ಅದನ್ನು ನಿರ್ಮಾಣ ಮಾಡಿ ಇದರ ಮೇಲೆ ಸಾದಾ ರೀತಿಯಲ್ಲಿ ಶಿಖರವನ್ನು ನಿರ್ಮಾಣ ಮಾಡುತ್ತಲಿದ್ದಾರೆ. ಈ ದೇವಾಲಯದ ಅಧಿಷ್ಠಾನವು ಸುಮಾರು ಮೂರರಿಂದ ಐದು ಅಡಿ ಎತ್ತರವಾಗಿದ್ದು ಪುಷ್ಪದಳಗಳ ಶಿಲ್ಪಗಳನ್ನು ಹೊಂದಿದೆ. ಈ ಸೂಗೂರೇಶ್ವರ ದೇವಾಲಯವು ಬೂದಿ ಬಸವೇಶ್ವರ ಬೆಟ್ಟದಲ್ಲಿದ್ದು ಇದಕ್ಕೆ ಏರಿ ಹೋಗಲು ಮೆಟ್ಟಿಲುಗಳ ವ್ಯವಸ್ಥೆ ಮಾಡಿದ್ದಾರೆ. ಇವುಗಳು ಉತ್ತರ ದಿಕ್ಕಿನಲ್ಲಿವೆ. (Temples of Raichur and Bellary District.C.S.Patil, Page-171)

ನಾಗಭೂಷಣ ದೇವಾಲಯ

ಸ್ಥಳ – ಊರಿನ ಉತ್ತರ ಭಾಗದಲ್ಲಿ ಪಶ್ಚಿಮಾಭಿಮುಖವಾಗಿದೆ.

ನೀಲಕಂಠೇಶ್ವರ ದೇವಾಲಯದ ಆಗಸಿಗೆ ಸೇರಿಸಿರುವ ಕ್ರಿ.ಶ.೧೧೪೫ರ ಶಾಸನ ಪ್ರಕಾರ ಗಬ್ಬೂರಿನ ಉತ್ತರಕ್ಕಿರುವ ಕನಕಗಿರಿಯ ನಾಗಭೂಷಣ ದೇವರ ಪೂಜೆ ಪುನಸ್ಕಾರಕ್ಕೆ ಗಬ್ಬೂರಿನ ಮಾಲೆಗಾರ ಅರವತ್ತೊಕ್ಕಲು ಮತ್ತು ಬಿಲ್ಲಿ ಮುನ್ನೂರುವರು ಬಾಡುಕಾಯಿ ಮಾರಿದ ಹೆಡಗೆಗೆ ಅರಮಾನ ಭತ್ತ ನೀಡಬೇಕೆಂದಿದೆ. ಇದನ್ನು ಹೊರೆಗೆ ಮಾರಿದಲ್ಲಿ ಬಿಲ್ಲಿಕಾಯಿ ಹೆಡಗೆಗೆ ಒಮ್ಮಾನ ಉಪ್ಪಿನ ಹೆಡಗೆಗೆ ಅರಮಾನ ಭತ್ತ ಕೊಡಬೇಕೆಂದು ತೀರ್ಮಾನಿಸುತ್ತಾರೆ. ಮಹಾಜನಗಳು ನಾಗಭೂಷಣ ದೇವರ ಸತ್ರಕ್ಕೆ ಜೋಳವನ್ನು ಬೀಡುತ್ತಾರೆ.

ತಲವಿನ್ಯಾಸ: ನಾಗಭೂಷಣ ದೇವಾಲಯವು ಗಬ್ಬೂರಿನ ಉತ್ತರ ದಿಕ್ಕಿಗೆ ಇದೆ. ಇದು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದ್ದು. ತಲವಿನ್ಯಾಸದಲ್ಲಿ ಗರ್ಭಗೃಹದ ಬಾಗಿಲಿನ ಮೇಲೆ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಿದ್ದಾರೆ. ಮತ್ತು ಬಾಗಿಲಿನಲ್ಲಿ ಅರ್ಧ ಕಂಬಗಳ ಹಾಗೂ ಪೂರ್ಣ ಕುಂಭಗಳಿದ್ದು ಛತ್ತಿನಲ್ಲಿ ಒಂದು ಮೇಲ್ಛಾವಣಿ ಇದೆ.

ಅಂತರಾಳ: ಈ ದೇವಾಲಯದ ಅಂತರಾಳವು ಲತಾಜಾಲಾಂಧ್ರದಿಂದ ಕೂಡಿದ್ದು ಅಂತರಾಳದ ಛತ್ರಿನಲ್ಲಿ ಒಂದು ಭುವನೇಶ್ವರಿಯ ಶಿಲ್ಪವಿದೆ. ಇದರ ಬಾಗಿಲಿನಲ್ಲಿ ಎಡಬದಿಯಲ್ಲಿ

ಚೌರಿದಾರಿಗಳಿದ್ದಾರೆ. ಮತ್ತು ಎರಡು ಬದಿಯಲ್ಲಿ ಎರಡು ದೇವ ಕೋಷ್ಠಗಳಿದ್ದು ಇವು ಮೊದಲ ದೇವರ ಮೂರ್ತಿಗಳನ್ನಿಡಲು ಮಾಡಲಾಗಿತ್ತು. ಅದರ ಸದ್ಯದಲ್ಲಿ ಯಾವ ಮೂರ್ತಿಗಳಲ್ಲ.

ನವರಂಗ: ನವರಂಗ ನಾಲ್ಕು ಕಂಬಗಳಿಂದ ಕೂಡಿದ್ದು, ಇವು ಪೀಠ ಪಟಿಕೆಗಳು ಸಾದಾ ರೀತಿಯ ಬೋದುಗೆಗಳನ್ನೊಳಗೊಂಡಿದೆ. ಇದರ ಛತ್ತಿನಲ್ಲಿ ನಕ್ಷತ್ರಾಕಾರದ ಒಂದು ಮೇಲ್ಬಾವಣಿಯು ಕೂಡ ಇದೆ. ಇದರ ಭಿತ್ತಿಯನ್ನು ಶಿಥಿಲಗೊಂಡಿದೆ. ಮುಖಮಂಟಪದ ಮುಂದೆ ಎಲ್ಲವು ಶಿಥಿಲಗೊಂಡಿದ್ದು, ಈಗ ಕೇವಲ ಎರಡು ಕಂಬಗಳಿಂದ ಮಾತ್ರ ಕೂಡಿದ್ದಾಗಿದೆ.

ಅಧಿಷ್ಠಾನ: ಇದರ ಅಧಿಷ್ಠಾನವು ಈಗ ನೆಲದಲ್ಲಿ ಹೂತು ಹೋಗಿದೆ. ಇದರ ಸುತ್ತಲೂ ಈಗ ಬೇಲಿಯ ಮರಗಳು ಬೆಳೆದು ಬಿಟ್ಟಿವೆ. ಇದರ ಸ್ವಲ್ಪ ದೂರದಲ್ಲಿಯೇ ಒಂದು ಸುಂದರವಾದ ನಾಗರ ಪಷ್ಕರಣಿ ಇದೆ. ಇವತ್ತಿಗೆ ಈ ಪಷ್ಕರಣಿಗೆ ನೀರನ ಬುಗ್ಗಿಯಿದ್ದು, ಮೂರು ಕಾಲಕ್ಕೆ ಇದರಲ್ಲಿ ನೀರು ತುಂಬಿರುತ್ತದೆ. ಇದರ ನೀರನ್ನು ಇತ್ತೀಚೆಗೆ ತೋಟಕ್ಕೆ ಉಪಯೋಗ ಪಡಿಸಿಕೊಳ್ಳುತ್ತಿದ್ದಾರೆ. **(Temples of Raichur and Bellary District .C.S.Patil, Page-182)**

ಅಧ್ಯಾಯ ಐದು

ಸಮಾರೋಪ

ಅಧ್ಯಾಯ ೫

ಸಮಾರೋಪ

ಕರ್ನಾಟಕ ಪುರಾತನ ಸಂಸ್ಕೃತಿ ಮತ್ತು ಐತಿಹಾಸಿಕ ಮಹತ್ವವನ್ನು ಪಡೆದ ಒಂದು ಪ್ರಾಚೀನ ನಾಡಾಗಿದೆ. ಇಲ್ಲಿರುವ ಅನೇಕ ಪ್ರದೇಶಗಳ ಹಲವಾರು ರಾಜಮನೆತನಗಳ ಆಳ್ವಿಕೆಗೊಳಪಟ್ಟು ಸರ್ವಧರ್ಮಗಳ ಸಮನ್ವಯ ಸಾಧಿಸಿದ ಭೂಮಿಯಾಗಿದೆ. ಇಂತಹ ಹಿನ್ನೆಲೆಯಲ್ಲಿ ರಾಯಚೂರು ಪ್ರದೇಶವು ಒಂದಾಗಿದೆ. ರಾಯಚೂರು ಪ್ರದೇಶದ ಅಂದಿನ ಪ್ರಾಚೀನ ಇತಿಹಾಸದ ಸಂಸ್ಕೃತಿಯನ್ನು ತಿಳಿಯುವಲ್ಲಿ ಶಾಸನಗಳು ಮತ್ತು ದೇವಾಲಯಗಳು ಪ್ರಮುಖ ಆಕರಗಳಾಗಿವೆ. ಇವುಗಳು ಕಲೆ, ಸಾಹಿತ್ಯಕ್ಕೆ ದೊರೆತ ಪ್ರೋತ್ಸಾಹವನ್ನು ಹಾಗೂ ಅಂದಿನ ಧಾರ್ಮಿಕ ಸ್ಥಿತಿಯನ್ನು ತಿಳಿಯುವಲ್ಲಿ ಮಹತ್ವ ಪಾತ್ರವಹಿಸಿದೆ. ಜೊತೆಗೆ ಧಾರ್ಮಿಕವಾಗಿ ಇತರೆ ಸಾಮಾಜಿಕ ಕಾರ್ಯಗಳಿಗೆ ಅಂದಿನ ರಾಜರು ಸಾಮಂತ ಅರಸರು, ದಂಡನಾಯಕರು ಹಾಗೂ ಆಡಳಿತ ಅಧಿಕಾರಿಗಳು ಇತರೆ ಸಾಮಾನ್ಯ ವ್ಯಕ್ತಿಗಳ ಅಂದಿನ ದೇವಾಲಯಗಳಿಗೆ ಕೆರೆ, ಬಾವಿಗಳಿಗೆ ನೀಡಿದ ದಾನದ ಮಹತ್ವವನ್ನು ನಾವು ಶಾಸನಗಳ ಮುಖಾಂತರ ತಿಳಿಯಬಹುದಾಗಿದೆ.

ಸಂಶೋಧನೆಯ ರಚನಾ ವಿಧಾನದ ಕ್ರಮಗಳಲ್ಲಿ ಸ್ಥಳೀಯ ಚರಿತ್ರೆಯಲ್ಲಿ ಪ್ರಾಮುಖ್ಯತೆಯನ್ನು ಸ್ಪಷ್ಟವಾಗಿ ನಿರ್ಧರಿಸಬೇಕಾಗುತ್ತದೆ. ಸ್ಥಳೀಯ ಚರಿತ್ರೆಯಿಂದ ಒಂದು ಸ್ಥಳ, ಹಳ್ಳಿ, ನಗರ ಪಟ್ಟಣಗಳಿಗಿಂತ ಕೆಳಮಟ್ಟದ ಭೌಗೋಳಿಕ ಜೀವನ ವ್ಯವಸ್ಥೆಯನ್ನು ಸಾಂಕೇತಿಸುವುದಾಗಿರುತ್ತದೆ. ಸ್ಥಳೀಯ ಚರಿತ್ರೆ ವಾಸ್ತವವಾಗಿ ಮಾನವನ ಸಮುದಾಯ ಬದುಕೇ ಚರಿತ್ರೆಯಾಗಿರುವುದರಿಂದ ಚರಿತ್ರೆಯ ಗರ್ಭದಲ್ಲಿ ಅಡಗಿಕೊಂಡಿರುವ ಅಂಶಗಳು ಹಲವು ರಾಜ ರಾಣಿಯರ ಬದುಕಿನಂತೆ ಜನಸಾಮಾನ್ಯರ ಬದುಕಯ ಪ್ರಾದೇಶಿಕವಾಗಿ ಹೇಗೆ ಭಿನ್ನ ಎಂಬುದನ್ನು ಚರಿತ್ರೆಯಲ್ಲಿ ಇದು ದಾಖಲಾಗಬೇಕಾದುದು ಅವಶ್ಯ.

ಸ್ಥಳೀಯ ಚರಿತ್ರೆಯಿಂದ ಪ್ರಧಾನ ಆಡಳಿತಗಾರರ ಒಂದು ಸಾಮ್ರಾಜ್ಯ ಅಥವಾ ಚಕ್ರವರ್ತಿಗಳ ಅಧ್ಯಯನವು ಸೂಕ್ಷ್ಮ ಅಧ್ಯಯನವಾಗಿರುವುದಿಲ್ಲ. ಅಂತೆಯೇ ಸೂಕ್ಷ್ಮ ಅಧ್ಯಾಯನದಿಂದ ಜನ ಸಮುದಾಯಗಳ ಹುಟ್ಟು ಬೆಳವಣಿಗೆ ಮತ್ತು ಸಣ್ಣ ಮನೆತನಗಳ ಕೊಡುಗೆ ಅವರ ಕೆಳ ಸಮುದಾಯ ಬದುಕು ಯಾವ ರೀತಿಯಾಗಿತ್ತು ಎಂಬುದನ್ನು ತಿಳಿದುಕೊಳ್ಳಲು ಇಂತಹ ಅಧ್ಯಯನಗಳು ಸಂಶೋಧನೆಗೆ ಸೂಕ್ಷ್ಮ ಅಧ್ಯಯನವಾಗಿರುವುದರಿಂದ ಸಣ್ಣ ಆಡಳಿತಗಾರರ ಮನೆತನದಿಂದ ಬಂದತಂಹ ಹೈಹಯರು ಸುಮಾರು ಒಂದು ನೂರು ವರ್ಷಗಳಿಂದ ಈ ಪ್ರದೇಶದಲ್ಲಿ ಕಲ್ಯಾಣ ಚಾಲುಕ್ಯರ ಸಾಮಂತ ಅರಸರಾಗಿ ಆಳ್ವಿಕೆ ಮಾಡಿದ್ದಾರೆ. ಇಂತಹ ಮಾಂಡಳಿಕ ಅರಸರನ್ನು ಸ್ಥಳೀಯ ಚರಿತ್ರೆಯಿಂದ ಅಧ್ಯಾಯನ ಮಾಡುವುದು ತುಂಬ ಅವಶ್ಯಕವಾಗಿರುವುದರಿಂದ ಇಂತಹ ಸಾಮಾಂತ ಅರಸರ ಅಧ್ಯಯನ ಸಂಶೋಧನೆಗೆ ಬಹಳ ಮಹತ್ವವಾಗಿದೆ.

ರಾಯಚೂರು ಪ್ರದೇಶದ ಹೈಹಯರ ಶಾಸನಗಳ ಸಮಾಜೋ ಧಾರ್ಮಿಕ ಅಧ್ಯಯನದಿಂದ ನಮ್ಮ ಸಂಸ್ಕೃತಿ ಮತ್ತು ಚರಿತ್ರೆಗಳಿಗೆ ಸಂಬಂಧಿಸಿದಂತೆ ವಾಸ್ತವಿಕ ಅಂಶಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಈ ಅಧ್ಯಯನದ ಅವಧಿಯಲ್ಲಿ ಸಂಗ್ರಹಿಸಿದ ಮೂಲ ಹಾಗೂ ಅನುಪಂಗಿಕ ಆಕರಗಳ ಈ ಪ್ರದೇಶದ ಅಂದಿನ ಕಾಲದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ವಿಚಾರಗಳ ಬಗೆಗೆ ನಿಖರವಾದ ಸ್ಪಷ್ಟತೆಯನ್ನು ಪಡೆಯಲು ವಿಫಲವಾದ ಸಾಮಗ್ರಿಗಳನ್ನು ಒದಗಿಸಿದೆ. ಸಂಗ್ರಹಿಸಿದ ಮಾಹಿತಿಯನ್ನು ಇದುವರೆಗೂ ನಡೆಸಿರುವ ಚರ್ಚೆಯಲ್ಲಿ ಪುನರ್ ಅವಲೋಜಿಸಲಾಗಿದೆ. ಇದರೊಂದಿಗೆ ನನ್ನ ಅಧ್ಯಯನದ ಚಿಂತನ ಶೀಲತೆಯಿಂದ ಹೈಹಯರ ಶಾಸನಗಳ ಸಾಮಾಜೋ ಧಾರ್ಮಿಕ ಹಿನ್ನೆಲೆಯಲ್ಲಿ ರಾಜಕೀಯ ಸಂಗತಿಗಳನ್ನು ಸಾಂಸ್ಕೃತಿಕ ಹಾಗೂ ಸಾಮಾಜಿಕ ಅಂಶಗಳನ್ನು ಸಂಗ್ರಹಿಸಲಾಗಿದೆ. ಅಂದಿನ ಜನಸಾಮಾನ್ಯರು ಬದುಕಿದ ರೀತಿ ಅವರ ವಿದ್ಯಾಭ್ಯಾಸ, ಕಲೆ, ಧಾರ್ಮಿಕ, ಕಲಾಪ ಆಡಳಿತ ಹೇಗೆ ಲೋಕೋಪಯೋಗಿ ಕಾರ್ಯಗಳ ಕುರಿತು ಅಧ್ಯಯನ ಶಾಸನಗಳನ್ನಾಧರಿಸಿ ನಡೆದಿದೆ. ಇದರಿಂದ ಸಮಾಜಕ್ಕೆ ಒಂದು ಹೊಸ ವಿಷಯದ ಮಹತ್ವತೆಯನ್ನು ಗುರುತಿಸಲಾಗಿದೆ. ಹೀಗಾಗಿ ರಾಯಚೂರು ಪ್ರದೇಶಕ್ಕೆ ಸಂಬಂಧಿಸಿದ ಹೈಹಯರ ಶಾಸನಗಳನ್ನು ಮೂಲ ಆಕಾರಗಳನ್ನಾಗಿಸಿಕೊಂಡು ಪೂರಕ ಆಕರಗಳೊಂದಿಗೆ ಕೈಗೊಂಡಿರುವ ಅಧ್ಯಯನ ಪ್ರಸ್ತುತ ಸಂಶೋಧನಾ ನಿಬಂಧದಲ್ಲಿ ವಿಂಗಡಿಸಿಕೊಳ್ಳಲಾಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಸ್ವರೂಪ ವ್ಯಾಪ್ತಿ ಮತ್ತು ವಿಧಾನವನ್ನು ಕುರಿತು ಕ್ಷೇತ್ರಕಾರ್ಯದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ರಾಯಚೂರು ಪ್ರದೇಶದಲ್ಲಿ ದೊರೆತ ಒಟ್ಟು ಶಾಸನಗಳನ್ನು ಕಲೆ ಹಾಕಿ ಅದರಲ್ಲಿ ಹೈಹಯರ ೧೭ ಶಾಸನಗಳನ್ನು ಇಟ್ಟುಕೊಂಡು ಅವುಗಳಿಂದ ತಿಳಿದು ಬಂದ ವಿಷಯವನ್ನು ನನ್ನ ಅಧ್ಯಯನದ ಪರಿಮಿತಿಯಲ್ಲಿ ಸ್ಥೂಲವಾಗಿ ಸಂಗ್ರಹಿಸಿ ಸ್ವರೂಪವನ್ನು ಸಮಗ್ರವಾಗಿ ಅಧ್ಯಯನಿಸಲಾಗಿದೆ.

ಅಧ್ಯಾಯ ಎರಡು: ಈ ಅಧ್ಯಾಯದಲ್ಲಿ ರಾಯಚೂರು ಪ್ರದೇಶದ ರಾಜಕೀಯ ಇತಿಹಾಸವನ್ನು ಚಿತ್ರಿಸಿದಾಗ ಕ್ರಿಪೂ. ೩ನೇ ಶತಮಾನದಿಂದ ಹಿಡಿದು ಇವತ್ತಿನವರೆಗೆ ಸೂಕ್ತವಾದ ಆಕರಗಳು ದೊರೆಯುವ ಭಂಡಾರವಾಗಿದ್ದು, ಈ ನೆಲೆಯಲ್ಲಿ ಮೊದಲಿಗೆ ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ವಂಶಗಳು ಇವರು ನಂತರ ಸಾಮಂತರ ಅರಸರಾದ ಕರಡಿಕಲ್ಲು ಕದಂಬರು, ಸಿಂದರು, ಹೈಹಯರು ಹಾಗೂ ಆಡಳಿತ ವಿಭಾಗಗಳಾದ ಅಯ್ಯಣವಾಡಿ ೩೦೦, ಎಡೆದೊರೆ ೨೦೦೦, ಮೊಸಳಿಕಲ್-೩೦೦, ಮುದುಗುಂದೂರು ೩೦೦, ಕರಡಿಕಲ್೩೦೦, ಹರಳ ೧೨, ಕಲ್ಲಕಳಗೈನೂರು ೫೦೦, ಮತ್ತು ಕುಂದರಗೆ ೭೦, ಹೀಗೆ ಆಡಳಿತ ಹಿನ್ನೆಲೆಯಲ್ಲಿ ರಾಜಕೀಯವನ್ನು ಮೈಗೂಡಿಸಿಕೊಂಡು ತನ್ನದೇ ಆದ ಒಂದು ಪ್ರದೇಶದ ನೆಲಕ್ಕೆ ಕೊಡುಗೆಗಳನ್ನು ನೀಡುತ್ತಾ ಹೋಗಿದ್ದಾರೆ. ಈ ನಿಟ್ಟಿನಲ್ಲಿ ಅವರ ಆಳ್ವಿಕೆಯ ಸಮಯದಲ್ಲಿ ಇಂದಿಗೂ ಅಳಿದುಳಿದ ಆಕಾರ-ಆಧಾರಗಳ ರೂಪರೋಷಗಳಲ್ಲಿ ಇತಿಹಾಸ ಕಟ್ಟುವಲ್ಲಿ ಪ್ರಯತ್ನಗಳು ಇಂದಿಗೂ ಮುಂದುವರೆದಿವೆ. ಈ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಸೂಕ್ತವಾಗಿ ರಾಯಚೂರು ಪ್ರದೇಶಕ್ಕೆ ಸಿಮೀತವಾಗಿ ಆಡಳಿತ ವಂಶಗಳ ಕಾಲದಲ್ಲಿ ಸಂಗ್ರಹಿಸಿದ ಘಟನೆಗಳ ಆಧಾರಗಳಿಂದ ಪ್ರಸ್ತುತ ಅಧ್ಯಯನದಲ್ಲಿ ಸಂಕ್ಷಿಪ್ತವಾಗಿ ಹೇಳಲಾಗಿದೆ.

ಅಧ್ಯಾಯ ಮೂರು: ಅಧ್ಯಾಯ ಮೂರರಲ್ಲಿ ಹೈಹಯರ ಮೂಲ ಇವರು ಮಧ್ಯ ಭಾರತದಿಂದ ಕನ್ನಡನಾಡಿಗೆ ನೇರವಾಗಿ ತೆರಳಿ ಬಂದವರು. ಕರ್ನಾಟಕದಿಂದ ಉತ್ತರಕ್ಕೆ ತೆರಳಿ ಮೂಲ ಸ್ಥಾನದಲ್ಲಿ ಕಲಚೂರಿಗಳ ಪೂರ್ವ ವೃತ್ತವನ್ನು ಮತ್ತು ಚಾರಿತ್ರಿಕ ಚಟುವಟಿಕೆಗಳನ್ನು ಸಂಕ್ಷೇಪವಾಗಿ ಅವಲೋಕಿಸುವಾಗ ಪುರಾಣಗಳಲ್ಲಿಯ ನಿರೂಪಣೆಯಂತೆ ಯಯಾತಿಯ ಮೊಮ್ಮಗ ಯದು, ಯದುವಿನ ವಂಶದಲ್ಲಿ ಸಹಸ್ರಜಿತ್ ಎಂಬುವವನು ಹುಟ್ಟಿದನು. ಸಹಸ್ರಜೀತನ ಸಂತತಿಯಲ್ಲಿ ಜನಿಸಿದವನೇ ಹೈಹಯನೆಂಬ ರಾಜನ ಮೂಲಕ ಹೈಹಯವೆಂಬ ವಂಶನಾಮವನ್ನು ಧರಿಸಿದ ಹಲವಾರು ಅರಸು ಮನೆತನಗಳು ಖ್ಯಾತಿವೆತ್ತವು. ಇದೇ ಹೈಹಯ ವಂಶಸ್ಥಾನಾದ ಕಾರ್ತವೀರ್ಯ ಅರ್ಜುನನು ಸಾಮ್ರಾಜ್ಯ ಮತ್ತು ಚಕ್ರವರ್ತಿಯೆಂಬ ಉನ್ನತ ಪದವನ್ನು ಸಂಪಾದಿಸಿ ಅತಿಶಯ ಪ್ರಸಿದ್ಧಿಯನ್ನು ಪಡೆದನು. ಹೈಹಯರ ಮುಖ್ಯ ಸ್ಥಳವು ನರ್ಮದಾ ತೀರದ ಮಾಹಿಷ್ಮತೀ ನಗರವಾಗಿತ್ತು. ಹೈಹಯರು ೧೧-೧೨ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಸಾಮಂತ ಅರಸರಾಗಿ ರಾಯಚೂರು ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದಾರೆ. ಹನ್ನೆರಡನೆಯ ಶತಮಾನದಲ್ಲಿ ಹೈಹಯರ ಶಾಸನಗಳು ತ್ರುಟಿತವಾಗಿರುವುದರಿಂದ ಸಾಮಂತ ಅರಸರಾದ ಹೈಹಯರು ಮತ್ತು ಅವರ ವಂಶಸ್ಥರ ವಂಶಾವಳಿಯನ್ನು ರಾಯಚೂರು ಪ್ರದೇಶದಲ್ಲಿ ಗುರುತಿಸಲಾಗಿದೆ.

ಅಧ್ಯಾಯ ನಾಲ್ಕು: ಈ ಅಧ್ಯಯನದಲ್ಲಿ ಸಾಮಂತ ಅರಸರಾದ ಹೈಹಯರು ರಾಯಚೂರು ಪ್ರದೇಶಕ್ಕೆ ಕೊಟ್ಟ ಕೊಡುಗೆ ಬಹಳ ಮಹತ್ವವಾಗಿದೆ. ಏಕೆಂದರೆ ಸಣ್ಣ ಆಡಳಿತಗಾರರಾದ ಹೈಹಯರು ಚಾಲುಕ್ಯರ ಕಾಲದಲ್ಲಿ ವಲಸೆ ಬಂದವರು ಇವರ ಅಧೀನವಾಗಿ ರಾಯಚೂರು ಪ್ರದೇಶದಲ್ಲಿ ಆಡಳಿತ ಪ್ರಾರಂಭಿಸಿದ ಹೈಹಯರ ಅರಸರು ಅಂದಿನ ದೇವಾಲಯಗಳಿಗೆ, ಪೂಜಾರಿಗಳಿಗೆ ಮತ್ತು ಕೆರೆ, ಬಾವಿಗಳಿಗೆ ೧.ಗಾಣ, ೧೨ ಮತ್ತರ ಭೂಮಿ ಮತ್ತು ೧. ನಿವೇಶನ ಮುಂತಾದವು ನೀಡಿದ ದಾನದ ಮಹತ್ವವನ್ನು ನಾವು ಹೈಹಯರ ಶಾಸನಗಳ ಮುಖಾಂತರ ತಿಳಿಯಬಹುದಾಗಿದೆ. ಜೊತೆಗೆ ಈ ಅಧ್ಯಾಯನದಲ್ಲಿ ಶಾಸನಗಳ ಸಾಹಿತ್ಯರೂಪ ಶಾಸನಗಳ ಧಾರ್ಮಿಕ ಸ್ವರೂಪ ಮತ್ತು ಧಾರ್ಮಿಕ ಸ್ಥಿತಿ ದೇವಾಲಯಗಳ ಬಗ್ಗೆ ಈ ಅಧ್ಯಯನದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಅಂತೆಯೇ ಹೈಹಯರು ಅಯಯಾ ಸ್ಥಳಗಳ ಹೆಸರನ್ನು ಬಳಸಿ ಅವರನ್ನು ಮೊರಾಟದ ಹೈಹಯರು ಅಥವಾ ಎಡೆದೊರೆನಾಡಿನ ಹೈಹಯರು ಎಂದು ಕರೆಯಲಾಗಿದೆ. ಈ ಹೈಹಯರು ೧೨ನೇ ಶತಮಾನದಲ್ಲಿ ಮಾಂಡಳಿಕ ಅರಸರಾಗಿ ಎಡೆದೊರೆ ನಾಡಿನಲ್ಲಿ ಆಡಳಿತ ನಡೆಸಿದ ಹೈಹಯರ ಅವರ ಕೊಡುಗೆ ರಾಯಚೂರು ಪ್ರದೇಶಕ್ಕೆ ಬಹಳ ಅಪಾರವಾದುದು.

ಅನುಬಂಧ ಮಹತ್ವದ ನಕಾಶೆ: ರಾಯಚೂರು ಪ್ರದೇಶದಲ್ಲಿ ಹೈಹಯರ ಶಾಸನಗಳು ದೊರಕುವ ಸ್ಥಳಗಳನ್ನು ರಾಯಚೂರು ಪ್ರದೇಶದ ನಕಾಶೆಯಲ್ಲಿ ಗುರುತಿಸಲಾಗಿದೆ.

ಒಟ್ಟಾರೆಯಾಗಿ ಹೇಳಬೇಕೆಂದರೆ ಶಾಸನಗಳು ಇತಿಹಾಸವನ್ನು ಕುರಿತು ಗಟ್ಟಿಯಾದ ಖಚಿತವಾದ ಸ್ಪಷ್ಟವಾದ ಮಾಹಿತಿಯನ್ನು ನೀಡುವ ಆಧಾರ ಸ್ತಂಭಗಳಾಗಿವೆ. ಇವು ಅತ್ಯಂತ ಮಹತ್ವದ ಹಾಗೂ ನಂಬಲರ್ಹವಾದ ಮೂಲಾಧಾರವಾದುದರಿಂದ ಇತರೆ ಆಧಾರಗಳು ತುಂಬಿಕೊಡಲಾರದ ಕೆಲವು ಅಂಶಗಳನ್ನು ಇಲ್ಲಿನ ಶಾಸನ ಸಂಪತ್ತು ಒದಗಿಸಿಕೊಟ್ಟಿದೆ. ಅಯಾ ಕಾಲದ ವಿವಿಧ ಮುಖಗಳ ಪರಿಚಯ ಮಾಡಿಕೊಡುವುದರೊಂದಿಗೆ ಅವರ ರೂಢಿ, ಸಂಪ್ರದಾಯ, ನಂಬಿಕೆ, ಆಚರಣೆ, ಪ್ರಗತಿ, ಸಾಧನೆಗಳ ಸ್ಪಷ್ಟ ಚಿತ್ರಣವನ್ನು ಶಾಸನಗಳು ಒದಗಿಸಿ ಕೊಡುತ್ತವೆ. ರಾಯಚೂರು ಪ್ರದೇಶದ ಹೈಹಯರ ಶಾಸನಗಳ ಸಾಮಾಜಿಕ ಮತ್ತು ಧಾರ್ಮಿಕತೆಯಿಂದ ತಮ್ಮದೇ ಆದ ವೈಶಿಷ್ಟ್ಯತೆಯಿಂದ ರಾಯಚೂರು ಪ್ರದೇಶದಲ್ಲಿ ಪ್ರಮುಖ ಪಾತ್ರ ಪಡೆದುಕೊಂಡಿದೆ. ಇಂತಹ ಸಾಮಂತ ಅರಸರ ಅಧ್ಯಯನ ಮಾಡಿರುವುದು ತೃಪ್ತಿಕರವಾಗಿದೆ. ಈ ಅಧ್ಯಯನ ವ್ಯಾಪ್ತಿ ವಿಶಾಲವಾಗಿದೆ. ಇನ್ನೂ ಅನೇಕ ಕ್ಷೇತ್ರಗಳಾದ ಸಾಂಸ್ಕೃತಿಕ ಮತ್ತು ಸಾಮಾಜಿಕ ನೆಲೆಗಟ್ಟಿನಲ್ಲಿ ಹೈಹಯರ ಶಾಸನಗಳ ಅಧ್ಯಯನ ಮಾಡಬಹುದಾಗಿದೆ ಎಂದು ಈ ನನ್ನ ಅಧ್ಯಯನದಿಂದ ಹೇಳಬಯಸುತ್ತೇನೆ.

ಅನುಬಂಧಗಳು

ರಾಯಚೂರು ಪ್ರದೇಶದ ವೈಷ್ಣವ ಸಾಹಿತ್ಯ ಮತ್ತು ದಾಸಸಾಹಿತ್ಯದ ವಚನಕಾರರು

ಜೋಳದ ಹೆಡಿಗೆ ಬಡೇ ಸಾಹೇಬ

ರಾಯಚೂರು ಪ್ರದೇಶದ ಹಲವಾರು ಹರಿದಾಸರು ಹರಿದಾಡಿದ ಪುಣ್ಯಭೂಮಿ ದಾಸ ಸಾಹಿತ್ಯದ ಎರಡನೆಯ ಘಟ್ಟಕ್ಕೆ ಈ ಭಾಗದ ಹರಿದಾಸರು ಕೊಟ್ಟ ಕಾಣಿಕೆ ಅಪಾರ. ಹರಿದಾಸರ "ತವರು ಮನೆ" "ಹರಿದಾಸರ ತೊಟ್ಟಿಲು" ಎಂದು ಕರೆಯಿಸಿಕೊಳ್ಳುವ ಮಟ್ಟಿಗೆ ರಾಯಚೂರು ಪ್ರದೇಶ ಹರಿದಾಸ ಸಾಹಿತ್ಯ ಬೆಳೆದು ನಿಂತಿದೆ. ವಿಜಯದಾಸರು, ಜಗನ್ನಾಥದಾಸರು, ಗೋಪಾಲದಾಸರು ಪ್ರಾಣೇಶದಾಸರು, ಅಸ್ಕಿಹಾಳ ಗೋವಿಂದದಾಸರು, ಶಾಮಸುಂದರ ದಾಸರು, ವರದೇಶ ವಿಠ್ಠಲರು ಕೊಪ್ಪಳ ನರಹರಿದಾಸರು, ಗೋಪಾಲದಾಸರು, ಹೀಗೆ ನೂರಾರು ಹರಿದಾಸರು ಸಾಹಿತ್ಯಕ್ಕೆ ಕಾಣಿಕೆಯನ್ನು ನೀಡಿದ್ದಾರೆ. ಇಂತಹ ಹರಿದಾಸರಲ್ಲಿ ಇಸ್ಲಾಂ ಧರ್ಮಕ್ಕೆ ಸೇರಿದ ಬಡೇಸಾಹೇಬ ಎಂಬುವರು ಒಬ್ಬರಾಗಿದ್ದಾರೆ.

ಬಡೇಸಾಹೇಬರು ದೇವದುರ್ಗ ತಾಲ್ಲೂಕಿನ ಜೋಳದ ಹೆಡಗಿ ಗ್ರಾಮದಲ್ಲಿ ಕ್ರಿ.ಶ.೧೮೮೫ರಲ್ಲಿ ಜನಿಸಿದರು. ಖಾಜಾಸಾಹೇಬ ಮತ್ತು ಜೀರಮ್ಮ ಇವರ ತಂದೆ ತಾಯಿಯಾಗಿದ್ದರು. ಇವರು ಪಿಂಜಾರ ಪಂಗಡಕ್ಕೆ ಸೇರಿದವರು. ಬಡತನದ ಬದುಕಿನಲ್ಲಿ ಹೆಚ್ಚಿಗೆ ವಿದ್ಯಾಭ್ಯಾಸವಿಲ್ಲದೆ ಕೇವಲ ಕನ್ನಡ ಬರೆದೋದುವ ಮಟ್ಟಿಗೆ ಕಲಿತವರು. ಬಡೇಸಾಹೇಬರು ಹರಿಭಕ್ತರಾಗುವುದಕ್ಕೆ ಕಾರಣ ಪುರಷರು ಶ್ರೀ ರಾಮಾವಧೂತರು, ಶ್ರೀ ರಾಮಾವಧೂತರೊಡನೆ ಬಡೇಸಾಹೇಬ ಆಧ್ಯಾತ್ಮಿಕ ಚರ್ಚೆ, ಧಾನ್ಯ, ಉಪಾಸನಗಳಿಂದ "ಶ್ರೀರಾಮ" ಎಂಬ ಅಂಕಿತದಿಂದ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ.

ಕ್ರಿ.ಶ.೧೯೪೦ರಲ್ಲಿ ದಾಸರು ನಿಧನರಾದರು ಇವರ ಸಮಾಧಿಯು ದೇವದುರ್ಗ ತಾಲ್ಲೂಕಿನ ಲಿಂಗದ ಹಳ್ಳಿಯಲ್ಲಿದೆ. ಇವರು ಸಂಸಾರವನ್ನು ಕುರಿತಂತೆ ಈ ರೀತಿಯಾಗಿ ಹೇಳಿದ್ದಾರೆ.

೧. "ಜನಸಿ ನಾ ಬುವಿಯೊಳು ನಿನಗೆ ದುಡಿಯುವದಾಯ್ತು ಎನಗೇನು ಫಲ ಹೇಳು ಮಾಯವೇ ಎಲೆ ಜೀವವೆ"

೨. "ಏನಾಯ್ತು ಹರಿಪಾದ ನೆನೆವಲ್ಲಿ ಮನವೇ" ಶಾಂತನಾಗು ಮನಸೇ ನೀ ಶಾಂತನಾಗು ಸಿಟ್ಟು ತ್ಯಜಿಸಲೇ ಖೊಟ್ಟಿ ಮನವೆ.

೩. ಎಣಿಕೆಗೆ ಮೀರಿದ ಹಳೆಗುದ್ದೂ ಇದು ಘನ ಘನ ಜನರನ್ನನುಂಗಿದ್ದೂ.

೪. ಏಸುರೂಪಾಯ್ಗೆ ಕೊಂಡು ಕೊಂಡೆವ್ವಾ ಒಸರುವಗಡಿಗೆ

ಏಸು ರೂಪಾಯ್ಗೆ ಕೊಂಡು ಕೊಂಡೆವ್ವಾ
ಎಂಥ ಕುಂಬಾರಿದನು ಮಾಡಿದ ಎಷ್ಟು ಕಾಲದ
ಕುಂತು ಇದಕ್ಕೆ ಶೋಧ ಹುಡಕಿದ ಅವನು ದಾವ
ಸಂತೆಯೊಳಗೆ ಕುಂತು ಮಾರಿದ ಕೊಂಡೇನು ತಿಳಿದ
ತಂತು ತಿಳಿಯದೆ ಹೊತ್ತು ಕೊಂಡು
ನಿಂತು ಇದರ ಖ್ಯಾಲಿನೊಳಗೆ
ಸಂತೆ ತೀರಿ ಹೋಗಲಾಗೇನಂತ ಹೇಳುವಿ
ಕೇಳುವವರಿಗೆ (ಸಿರಿದುರ್ಗ ತಾಲ್ಲೂಕು ಸ್ಮರಣ ಸಂಚಿಕೆ.ಪು.೫೧-೫೨.)

ಶ್ರೀ ಗೋಪಾಲದಾಸರು.

ಶ್ರೀ ಗೋಪಾಲದಾಸರು ದೇವದುರ್ಗ ತಾಲೂಕಿನ ಮೊಸರಕಲ್ಲು ಗ್ರಾಮದಲ್ಲಿ ಕ್ರಿ.ಶ.೧೯೨೨ರಲ್ಲಿ ಜನಿಸಿದರು. ತಂದೆ ಮುರಾರಿರಾಯ ತಾಯಿ ವೆಂಕಮ್ಮ ಗೋಪಾಲದಾಸರ ಮೂಲ ಹೆಸರು ಭಾಗಣ್ಣ. ಶ್ರೀ ವಿಜಯದಾಸರ ಪರಮಾಪ್ತ ಶಿಷ್ಯರೆನಿಸಿದ ಇವರು ಶ್ರೀವಿಜಯದಾಸರಿಂದ ಶ್ರೀ ಗೋಪಾಲವಿಠಲ ಎಂಬ ನಾಮವನ್ನು ಪಡೆದು ಆಗ ಗೋಪಾಲ ದಾಸರಾದರು. ದಾಸ ಸಾಹಿತ್ಯದ ಪ್ರಕಾರಗಳೆನಿಸಿ ಕೀರ್ತನೆ, ಸುಳಾದಿ ಉಗಾಭೋಗಾಗಳನ್ನಾ ರಚಿಸಿದರು. ಮೈಸೂರ ಕನ್ನಡ ಅಧ್ಯಯನ ಸಂಸ್ಥೆಯಿಂದ ಈ ದಾಸರು ೧೭೫ ಕೃತಿಗಳು ಪ್ರಕಟಗೊಂಡಿವೆ. ದಾಸರ ಕೃತಿಗಳಲ್ಲಿ ಮಧ್ವ ಸಿದ್ಧಾಂತಗಳ ನಿರೂಪಣೆಯೊಂದಿಗೆ ಆತ್ಮ ಶೋಧವನ್ನು ಸಮಷ್ಟಿ ಚಿಂತನೆ ಬೋಧನೆಯನ್ನು ಕಾಣುತ್ತೇನೆ.

"ಅನಂತ ಅಪರಾದ ಎನ್ನಲ್ಲಿ ಉಂಟೋ ದೇವಾ ನಿನ್ನ ಚಿತ್ತ ಎನ್ನ ಭಾಗ್ಯ ಇನ್ನೊಂದೆನಗಿಲ್ಲವಯ್ಯಾ ಯಾತರವ ನಾನಯ್ಯ ನಿನ್ನ ದೀನವೆಲ್ಲ". ಎಂಬಂತಹ ಶರಣಾಗತಿಯ ವಾಣಿಯನ್ನು ಕಾಣಬಹುದು. ಕೊನೆಗೆ ಕ್ರಿ.ಶ.೧೯೬೨ ರಲ್ಲಿ ನಿಧನರಾದರು.

ಮುಕ್ತಾಯಕ್ಕ

ಇಂದಿನ ಗದಗ ಜಿಲ್ಲೆಯ ಲಕ್ಕುಂಡಿಯು ಮುಕ್ತಾಯಕ್ಕಳ ತವರೂರು. ಆದರೆ ಇವಳ ಗಂಡನ ಊರು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮೊಸರಕಲ್ಲು. ಈ ಮೊಸರಕಲ್ಲಿನಲ್ಲಿ ಮುಕ್ತಾಯಕ್ಕನ ದೇವಾಲಯವಿದೆ. ಅಲ್ಲದೆ ಊರಿನ ಹೆಣ್ಣು ಮಕ್ಕಳಿಗೆ ಮುಕ್ತಾಯಕ್ಕ ಎಂದು ಹೆಸರನ್ನು ಇಟ್ಟುಕೊಳ್ಳುವ ವಾಡಿಕೆ ಇಲ್ಲಿದೆ. ಗ್ರಾಮಕ್ಕೆ ಹತ್ತಿರದಲ್ಲಿ ಅಲ್ಲಮ ಪ್ರಭು ಸಂಚಾರದಲ್ಲಿ ತಂಗಿದ್ದನೆಂದು ಹೇಳುವ ಸ್ಥಳ (ಗೊಗಲ್ಲು)ವಿದೆ. ಇವು ಮುಕ್ತಾಯಕ್ಕ ದೇವದುರ್ಗ ತಾಲ್ಲೂಕಿನ ಮೊಸರಕಲ್ಲು ಗ್ರಾಮದವಳೆಂಬುದನ್ನು ಸಮರ್ಥಿಸುತ್ತವೆ.

ಇದುವರೆಗೆ ಮುಕ್ತಾಯಕ್ಕನ ೩೨ ವಚನಗಳು ದೊರಕಿವೆ. ಈಕೆಯ ವಚನಗಳ ಅಂಕಿತ "ಅಜಗಣ್ಣ ತಂದೆ" ಎಂಬುದಾಗಿದೆ. ತನ್ನ ಅಣ್ಣನನ್ನು ಗುರುವೆಂದು ಸ್ವೀಕರಿಸಿ ಸಾಧನೆಯಲ್ಲಿ ತೊಡಗಿದವಳು ವಚನ ಕಾರ್ತಿಯರಲ್ಲಿ ಅಕ್ಕ ಮಹಾದೇವಿಯ ನಂತರದ ಸ್ಥಾನ ಮುಕ್ತಾಯಕ್ಕಳದಾಗಿದೆ. ಮುಕ್ತಾಯಕ್ಕ ತನ್ನ ಅಣ್ಣನೂ ಗುರುವು ಆದ ಅಜಗಣ್ಣನ ಮರಣದಿಂದ ದುಃಖಿಸುತ್ತಿರುವಾಗ ಅಲ್ಲಮ ಪ್ರಭುದೇವರು ಆಗಮಿಸಿ "ಅಂಗೈಯಲೊಂದು ಅರಳ ತೆಲೆಯ ಹಿಡಿದುಕೊಂಡು ಕಂಗಳ ಮುತ್ತು ಪೋಣಿಸುವಾಕೆ ನೀನಾರು ಹೇಳಾ" ಎಂಬ ಪ್ರಾರಂಭದ ನುಡಿಯೇ ಮಾಯೆಯನ್ನು ನಿವಾರಿಸುತ್ತದೆ. ಅಲ್ಲಮದೇವರಿಗೆ ಆಕೆ ಕೊಟ್ಟ ಉತ್ತರವೂ ಅಷ್ಟೇ ಮಾರ್ಮಿಕವಾಗಿದೆ,

"ಆರೆಂದು ಹೇಳಲಿ ಕಾಯಕದಲ್ಲಿ ಮಾಯವಿಲ್ಲ.
ಭಾವದಲ್ಲಿ ಭ್ರಮೆಯಲ್ಲಿ ಕರೆದು ಹೇಳುವುದಾದರೆ ಒಂದು
ಕುರುಹಿಲ್ಲ ನಾನು ಅಜಗಣ್ಣ ತಂದೆಯ ಬಳವಳಿಯವಳು"

ಎಂದು ಹೇಳಿ ದುಃಖಿಸಿದಾಗ ಆಗ ಪ್ರಭುದೇವರು ಜ್ಞಾನಿಯಾದ ನೀನು ಸಾಮಾನ್ಯರಂತೆ ಅಳುವುದು ಸರಿಯೇ? ಅವನನ್ನು ಮರೆತುಬಿಡು ಎಂದಾಗ "ಎಂಥ ಮರೆವೆನಯ್ಯ ಅಜಗಣ್ಣ ತಂದೆಯನು" ಎಂದು ಮುಕ್ತಾಯಕ್ಕ ಕೇಳುತ್ತಾಳೆ. ಹೀಗೆ ಅಲ್ಲಮ ಪ್ರಭುದೇವರ ಮತ್ತು ಮುಕ್ತಾಯಕ್ಕನ ಮಧ್ಯೆ ನಡೆದ ಸಂವಾದ ಮುಕ್ತಾಯಕ್ಕನ ದುಃಖವನ್ನು ದೂರಮಾಡುತ್ತದೆ.

"ಗುರು ವಚನದಿಂದಲ್ಲದೆ ಲಿಂಗ ಜಂಗಮ ಪ್ರಸಾದ ತಿಳಿಯದು ಗುರು ವಚನದಿಂದಲ್ಲದೆ ತನ್ನ ತಾನರಿಯಲು ಬಾರದು" ಹೀಗೆ ಮುಂತಾದ ವಚನಗಳನ್ನು ರಚಿಸಿದ್ದಾಳೆ. (ಸಿರಿದುರ್ಗ ತಾಲ್ಲೂಕು ಸ್ಮರಣ ಸಂಚಿಕೆ, ಪುಟ-೪೩)

ದೇವದುರ್ಗದ ಆದಿ ಅಮಾತೆಪ್ಪ

ಆದಿ ಅಮಾತೆಪ್ಪ ಕ್ರಿ.ಶ.೧೮೬೫ರಲ್ಲಿ ದೇವದುರ್ಗದಲ್ಲಿ ಜನಿಸಿದ. ಈತ ಲಿಂಗಾಯತ

ಸಮಾಜಕ್ಕೆ ಸೇರಿದ ಕವಿಯಾಗಿದ್ದ. ನೇಕಾರಿಕೆ ಈತನ ಮನೆತನದ ವೃತ್ತಿಯಾಗಿತ್ತು. ಅಮಾತೆಪ್ಪ ಶ್ರೀಮಂತನಾಗಿದ್ದು ದಾನ ಧರ್ಮಗಳನ್ನು ಮಾಡಿದ್ದಾನೆ. ಅಮಾತೆಪ್ಪ ತತ್ವಪದ ಮತ್ತು ವಚನಗಳನ್ನು ರಚಿಸಿದ್ದಾನೆ. ಈತನು "ದೇಹದುರ್ಗಾದೀಶ" ಎಂಬ ಅಂಕಿತದಿಂದ ಅನೇಕ ಹಾಡುಗಳನ್ನು ರಚಿಸಿದ್ದಾನೆ.

ಮೂಡನಂಬಿಕೆಗಳನ್ನು ಗೊಡ್ಡ ಆಚರಣೆಗಳನ್ನು ಖಂಡಿಸಿರುವ ಅಮಾತೆಪ್ಪ ಸಂಸಾರದಲ್ಲಿದ್ದು ಕೊಂಡೇ ಆಧ್ಯಾತ್ಮ ಸಾಧನೆ ಮಾಡಬೇಕೆಂದು ಹೇಳಿದ್ದಾನೆ. ಈತ ವಚನ ಪರಂಪರೆಗೆ ಹೆಚ್ಚು ನಿಷ್ಠನಾಗಿದ್ದು. ಹೆಣ್ಣನ್ನೂ ಮಾಯೆಯೆಂದು ಅಲ್ಲಗಳೆಯದೇ ಆ ಮಾಯೆಯಿಂದಲೇ ಮೋಕ್ಷವೆಂದು ಸ್ಪಷ್ಟಪಡಿಸಿದ್ದಾನೆ.

"ಮಾಯನ್ನ ಬಿಡಬ್ಯಾಡೋ ಮಾಯಿ ನಿನಗ ಜೋಡೋ,
ಮಾಯಿನ್ನ ಕೊಡ್ಯಾಡು ಮಾಯಿಂದ ಮೋಕ್ಷ ನೋಡು"

ಇನ್ನೊಂದು ವಚನದಲ್ಲಿ ಅಮಾತೆಪ್ಪನು ನರಮಾನವನಿಗೆ ಯಾವುದು ಸ್ಥಿರವಲ್ಲ ಗುರುವಿನ ಅಧಿಕಾರ ಯಾರಿಗೂ ಇಲ್ಲವೆಂದು ಹೇಳುತ್ತಾನೆ.

ನರರಿಗೆ ಯಾವುದು ಸ್ಥಿರವಿಲ್ಲಾ ಗುರುವಿನಕ್ಕಿಂತ ಧಿಕ್ಕಾರಿಲ್ಲ ॥ಪ॥
ಬಂದುಬಳಗ ತಮ್ಮವರೆಂದು ನಂಬಿಕೊಂಡಿರುವರಲ್ಲಾ!
ಯಮದೂತರಳಿವಾಗ ಬಂದು ತಮ್ಮನ ಬಿಡಿಸುವವರ್ಯಾರಿಲ್ಲಾ ॥ಪ॥

ಹೆಂಡತಿ ಮಕ್ಕಳಿಗೆ ಮುಂದೆ ಬೇಕೆಂದು ಸಂಕಟಬಟ್ಟಾ ಗಳಿಸುವರಲ್ಲಾ ಮರಣ ಕಾಲದಿ ತಮ್ಮ ಸಂಗಡ ಯಾವುದು ಒಯ್ಯಾದಿಲ್ಲ ತಮ್ಮ" ಎಂಬ ಪದವನ್ನು ಬಳಸಿ 'ಜೀವನ ನಶ್ವರ' ಎಂಬ ತತ್ವವನ್ನು ಈ ಮುಂದಿನ ಪದ್ಯದಲ್ಲಿ ಹೇಳಲು ಪ್ರಯತ್ನಿಸಿದ್ದಾರೆ.

"ತನವು ತನ್ನದಲ್ಲ ತಮ್ಮ । ತನವು ನಂಬಿಗಿಲ್ಲಿ ತಮ್ಮ
ತನುವಿನೊಳಗಿನ್ನೆಲ್ಲ ತಮ್ಮ । ತಿಳಿಯಬೇಕು ಎಲ್ಲ ತಮ್ಮ ॥ಪ॥

ತನುವಿನ ಗುಣವಲ್ಲತಮ್ಮ । ಬಿಡಿಬೇಕು ಎಲ್ಲ ತಮ್ಮ
ಸಗುಣ ಗುಣ ಅಳಿಯೋ ತಮ್ಮ । ನಿರ್ಗುಣದಿಂದ ನುಡಿಯೋ ತಮ್ಮ ॥೧॥.

ಪ್ರಪಂಚಯೆಂಬುದು ತಮ್ಮ । ನಾಲ್ಕು ದಿವಸ ಸಂತೋಷ ತಮ್ಮ
ನೀರು ಮೇಲಿನ ಗುರುಳಿಯಂತೆ । ಅಡಗಿ ಹೋಗುವುದು ತಮ್ಮ ॥೨॥

ದೇಶಕ್ಕಧಕನೂ ತಮ್ಮ । ದೇಹ ದುರ್ಗೇಶನೂತಮ್ಮ
ಕೂಡಿಕೊಂಡು ಇದ್ದರೆ ತಮ್ಮ । ಅಂತಃಕರಣ ಮಾಡುವನೋ ತಮ್ಮ ॥೩॥

(ಬಸವರಾಜ ಸಬರದ, ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು, ಪು.೭೦.)

ಜಾಲಹಳ್ಳಿಯ ವೀರಭದ್ರಕವಿ

ಕ್ರಿ.ಶ.೧೭೮೫ರಲ್ಲಿ ಜಾಲಹಳ್ಳಿಯಲ್ಲಿ ವೀರಭದ್ರ ಎಂಬ ಹೆಸರಿನ ಕವಿಯು ಜನಿಸಿದನು. ಈತನು ತಂದೆಯಾದ ಬಸವಾಚಾರ್ಯನು ಜಾಲಹಳ್ಳಿಯ ಆಗಿನ ದೊರೆಯಾಗಿದ್ದ ರಂಗಪ್ಪನಾಯಕನ ವಿದ್ಯಾಗುರುವಾಗಿದ್ದನು. ತಂದೆಯಂತೆ ವೀರಭದ್ರಕವಿಯೂ ಸಹ ಜಾಣನೂ ಘನ-ಪಂಡಿತನೂ ಆಗಿದ್ದು ಮನೆತನದ ವೃತ್ತಿಯಾದ ವಿದ್ಯೆಯನ್ನು ಕಲಿಸುವ ಕಾಯಕವನ್ನು ಮುಂದುವರಿಸಿದನು. ಕವಿ ತನ್ನ ಹುಟ್ಟೂರು ಜಾಲಹಳ್ಳಿಯನ್ನೂ ಪ್ರೀತಿಯಿಂದ "ಜಾಲೇಂದ್ರಪುರ" ಎಂದೂ ಕರೆದಿದ್ದಾನೆ. ವೀರಭದ್ರ ಕವಿಯು ಕ್ರಿ.ಶ.೧೮೬೫ರಲ್ಲಿ ಅರವತ್ತಮೂರು ಪುರಾತನದ ಪುರಾಣವನ್ನು ರಚಿಸಿದ್ದಾನೆ. ಕವಿ ತನ್ನನ್ನು ಕಾವ್ಯದಲ್ಲಿ 'ಸಾಧುಕಿಂಕರ', 'ನವವಧ ಕರ್ನಾಟಕ ಕವಿತಾ ಚತುರ', 'ಸುವಿವೇಕಸುಖಿ', ಮುಂತಾದ ವಿಶೇಷಣಗಳಿಂದ ಕರೆದುಕೊಂಡಿದ್ದಾನೆ.

"ನಾಗಭೂಷಣನೆಂಬ ಶಿವಯೋಗಿ ಸಂಚರಿಸು ತಾಳಗಂ ಬಂದು ಎಲೆ ವೀರಭದ್ರಾಖ್ಯ ಕೇಳೀಗಳರುವತ್ತು ಮುವ್ವರುಪುರಾತವರ ಚರಿತ್ರೆಯಂ ವರ್ಣಿಕದೊಳಿಲ್ಲವು ರಾಗದಿಂದೀ ಪ್ರಬಂಧವನ್ನು ಕೇಳ್ವರ್ಗೆ ಸೋಗ ಸಾಗುವಂಕತಿ ಮನೋಹರವಪ್ಪ ತೆರೆದಿ ನೀ ಬೇಗನೇಸಗಲನ್ನ ಸುಕೈತಕೆಣಿಯಿಲ್ಲದ ಮಗನೆ ರಚಯಿಸ್ವಲನಲ್ಕೇ"

(ಬಿ. ಚನ್ನಬಸವ. ದೆ.ತಾ.ಸಾ. ಅಧ್ಯಾಯನ) ಈ ಮೇಲಿನ ಪುರಾಣದಲ್ಲಿ ಅರವತ್ತಮೂರು ಪುರಾತನ ಚರಿತ್ರೆಯು ಇದೆ. ಇದಲ್ಲದೆ ಶಿವಶರಣರ ವಚನಗಳ ನಿಜಗುಣ ಶಿವಯೋಗಿಗಳ ಕೈವಲ್ಲ ಪದ್ಧತಿ ಹಾಗೂ ಅರವತ್ತುಮೂರು ಪುರಾತನರ ತ್ರಿಪದಿಗಳನ್ನು ರಚಿಸಿದ್ದಾನೆ.

ದೇವದುರ್ಗದ ಚೆನ್ನಮಲ್ಲ.

ಚೆನ್ನಮಲ್ಲ, ಕವಿಯು ಕ್ರಿ.ಶ.೧೭೮೦ರಲ್ಲಿ ದೇವದುರ್ಗದಲ್ಲಿ ಜನಿಸಿದರು. ಇವರು ತನ್ನ ವಿದ್ಯಾಭ್ಯಾಸವನ್ನು ದೇವದುರ್ಗದಲ್ಲಿಯೇ ಮುಗಿಸಿ, ನಂತರ ಗೃಹಸ್ಥ ಜೀವನ ಆರಂಭಿಸಿದನು. ಕೆಲವು ವರ್ಷಗಳ ನಂತರ ಹೆಂಡತಿ ಮತ್ತು ಮಗ ನಿಧನರಾದರು. ಅದರ ನಂತರ ವೈರಾಗ್ಯ ತಾಳಿದರು. ಶಾಲಾಶಿಕ್ಷಕರಾಗಿದ್ದ ಇವರು ಮಕ್ಕಳಿಗೆ ಮತ್ತು ಹಿರಿಯರಿಗೂ ಪುರಾಣ ಪ್ರವಚನ ಹೇಳಿ ಜನ ಜಾಗೃತಿಯನ್ನುಂಟು ಮಾಡುವುದರ ಮೂಲಕ ಗುರುವಿನ ಸ್ಥಾನಗಳಿಸಿದ್ದರು. ಇದನ್ನು ಕಂಡು ಸುರಪುರದ ದೊರೆಗಳು ಇವರನ್ನು ಬಹು ಗೌರವದಿಂದ ಕಾಣುತ್ತಿದ್ದರು. ಸುರುಪುರದ ತಾಲೂಕಿನ ಲಿಂಗಪೇಟೆಗೆ ಶಾಲಾ ಶಿಕ್ಷಕರಾಗಿ ಹೋದ ಚೆನ್ನಮಲ್ಲ, ಕೊನೆಗೆ ಕ್ರಿ.ಶ.೧೯೨೦ರಲ್ಲಿ ಅಲ್ಲಿಯೇ ನಿಧನರಾದರು. ಆ ಶಾಲಾ ಮಠದಲ್ಲಿ ಈತನ ಸಮಾಧಿಯನ್ನು ಕಾಣಬಹುದು.

ಸಂಸ್ಕೃತ ಕನ್ನಡ ಎರಡೂ ಭಾಷೆಯಲ್ಲಿ ಪಂಡಿತರಾಗಿದ್ದ ಇವರು ಅನೇಕ ತತ್ವ ಪದಗಳನ್ನು ಹಾಗೂ 'ಕುರುಣೇಶ್ವರ ಪುರಾಣ' ಮತ್ತು 'ಭಿಕ್ಷಾವತಿ' ಶಿವಯೋಗಿಗಳ ಪುರಾಣವನ್ನು ರಚಿಸಿದ್ದಾನೆ.

'ಸುರದುರ್ಗನಾಥ' ಈತನ ಅಂಕಿತನಾಮವಾಗಿದ್ದು ಈ ಅಂಕಿತ ನಾಮದೊಂದಿಗೆ ಅನೇಕ ಪದಗಳನ್ನು ರಚಿಸಿದ್ದಾನೆ. ಈ ತತ್ವ ಪದಗಳಲ್ಲಿ ಮಳೆ-ಬೆಳೆ ಮುಂತಾದ ವಿಷಯಗಳಿಗೆ ಸಂಬಂಧಿಸಿವೆ. ಒಮ್ಮೆ ಮಳೆಯಿಲ್ಲದೆ ಜನರು ಕಂಗೆಟ್ಟಾಗ "ಶ್ರೀ ಗುರು ಶಂಕರ ಶಿವ ಸರ್ವೇಶ್ವರ ಶ್ರೀಕಂಠನ ಶಿವಲೀಲಾ ಈಗಲೇ ಸಂಕಟಪಡುವರು ಬಡವರು ಪಾಲಿಸು ಶಿವಶುಭಾಕರ" ಎಂಬ ಹಾಡನ್ನು ಹಾಡಿ ಮಳೆ ತರಿಸಿದನೆಂದು ಪ್ರತೀತಿಯಿದೆ. ಅತಿವೃಷ್ಟಿಯಾದಾಗ "ಮಳೆ ನಿಲ್ಲಿಸು ಮಹಾದೇವ" ಎಂಬ ಹಾಡನ್ನು ಹಾಡಿ ಮಳೆ ನಿಲ್ಲಿಸಿದನೆಂದು ಹೇಳುತ್ತಾರೆ. "ಲಿಂಗ ಬಾರೋ ಎನ್ನ ಮನೆಕೆ ಲೀಲೆ ತೋರುತ ಶಂಭು ಶೃಂಗಾರದಂಗದಿ ಸೌಖ್ಯಲಿಂಗನ ಮಾಡುವೆ ಲಿಂಗಯ್ಯ" ಎಂಬ ಹಾಡು ಅನುಭವದ ಹಾಡು ಇದಾಗಿದೆ. (ಚನ್ನಬಸವ ಹಿರೇಮಠ ಸಿದ್ದರಾಮಯ್ಯ ಹಿರೇಮಠ, ರಾಯಚೂರು ಜಿಲ್ಲೆಯ ಶರಣರು, ಪು.೬೮)

ಹಿರೇಬೂದೂರಿನ ಹನುಮಂತರಾವ್:

ಕ್ರಿ.ಶ.೧೮೯೨ರಲ್ಲಿ ದೇವದುರ್ಗ ತಾಲ್ಲೂಕಿನ ಹಿರೇಬೂದೂರಿನಲ್ಲಿ ಜನಿಸಿದನು. ಶ್ರೀನಿವಾಸರಾವ್ ಭೀಮಾಬಾಯಿ ಇವರ ತಂದೆ ತಾಯಿಗಳಾಗಿದ್ದರು. ರಾಯಚೂರು ಜಿಲ್ಲೆಯ ನೀರಲಕೇರಿ ಬಸವಲಿಂಗ ಶರಣರು ಹನುಮಂತರಾವ್ ಕವಿಯ ಆರಾಧ್ಯದೇವರಾಗಿದ್ದರು. ಆದರೆ ವೈಷ್ಣವ ಬ್ರಾಹ್ಮಣನಾಗಿ ವೀರಶೈವ ಶರಣನಾಗಿದ್ದ ನೀರಲಕೇರಿ ಬಸವಲಿಂಗ ಶರಣವನ್ನು ಪೂಜಿಸುವುದು ಸರಿಯಿಲ್ಲವೆಂದು ಬ್ರಾಹ್ಮಣರು ಈತನ ತಂದೆಯಾದ ಶ್ರೀನಿವಾಸರಾವನಿಗೆ ಎಚ್ಚರಿಕೆ ನೀಡಿದರು. ಆದರೂ ಈತನ ಭಕ್ತಿ ಕಡಿಮೆಯಾಗಲಿಲ್ಲ. ಈತನ ತಂದೆಯನ್ನು ಊರಿನ ಬ್ರಾಹ್ಮಣರು ಶ್ರೀನಿವಾಸರಾವನನ್ನು ತಮ್ಮ ಧರ್ಮದಿಂದ ಬಹಿಷ್ಕರಿಸಿದರು. ನಂತರ ಶ್ರೀನಿವಾಸರಾವ್ ನಿಧನರಾದರು ತಂದೆ ನಿಧನರಾದ ಕೂಡಲೇ ಹನುಮಂತರಾವ್ ವೀರಶೈವ ಗುರು ಅಡವೀಶಾರಾಧ್ಯರಿಂದ ಲಿಂಗದೀಕ್ಷೆ ಪಡೆದರು.

"ಅಡವೀಶಾರಾಧ್ಯ" ಎಂಬ ಅಂಕಿತ ನಾಮದಲ್ಲಿ ಹನುಮಂತರಾವ್ ಅನೇಕ ತತ್ವ ಪದಗಳನ್ನು ರಚಿಸಿದ್ದಾನೆ. ಹೀಗೆ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿ ವೀರಶೈವನಾಗಿ ಬೆಳೆದು ಹನುಮಂತರಾವ್ ಅನುಭವಿಯಾಗಿ ವೀರಶೈವ ಧರ್ಮದ ಮಹತ್ವವನ್ನು ತನ್ನ ಹಾಡುಗಳಲ್ಲಿ ತಿಳಿಸಿದ್ದಾನೆ." (ಬಸವರಾಜ ಸಬರದ, ರಾ.ಜಿ.ಆ. ಕವಿಗಳು, ಪು.೪೩)

ಗಣೇಕಲ ಸಂಗವಿಭು.

ಹತ್ತೊಂಬತ್ತನೆಯ ಶತಮಾನದ ವೀರಶೈವ ಕವಿ. ಲಕ್ಷ್ಮೀಶನನ್ನು ತಮ್ಮನೆಂದು ಷಡಕ್ಷರಿಯನ್ನು ಅಣ್ಣ ಎಂದು ಈತ ಹೇಳಿಕೊಂಡಿದ್ದನ್ನು ಗಮನಿಸಿದರೆ ಆ ಇಬ್ಬರು ಜನಪ್ರಿಯ ಕವಿಗಳನ್ನು ಈತ ವಿಶೇಷವಾಗಿ ಅಭ್ಯಾಸ ಮಾಡಿದ್ದನೆಂದು ಹೇಳಬಹುದು.

ಕವಿ ಸಂಗವಿಭು ತನ್ನ ಹುಟ್ಟೂರನ್ನಾಗಲೀ ಗಣೇಕಲ್ಲಿನ ವಿಚಾರವನ್ನಾಗಲೀ ತನ್ನ ಕಾವ್ಯಗಳಲ್ಲಿ ಹೇಳಿಕೊಂಡಿಲ್ಲವಾದರೂ ಈತನು ಕುಮಾರ ವಿಜಯದಲ್ಲಿನ ಕೆಲವು ಆಧಾರಗಳ ಮೇಲೆ ಇವನಿಗೆ ಸಂಗಪ್ಪ ಎಂಬ ಹೆಸರು ಇದ್ದಂತೆ ತಿಳಿಯುತ್ತದೆ. ಇದನ್ನು ಆಂಧ್ರಪ್ರದೇಶದ ರಾಜ್ಯದ ಆದವಾನಿ (ಆದೋನಿ) ತಾಲೂಕಿನ ನಂದವಾರ್ ಗ್ರಾಮದ ನಾಡಗೌಡ ಮನೆತನದವನಾಗಿದ್ದಾನೆ. ಈತ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಗಣೇಕಲ್ ಗೌಡನ ಮನೆತನದ ಹೆಣ್ಣನ್ನು ಮಾಡಿಕೊಂಡು ತನ್ನ ಜೀವಿತದ ಬಹುಕಾಲವನ್ನು ತನ್ನ ಮಾವನ ಮನೆಯಲ್ಲಿಯೇ ಕಳೆದ. ಆತನ ಭಾವ ಮೈದುನ ಸಿದ್ದಲಿಂಗಪ್ಪ ಸಂಸ್ಥಾನ(ಹಿಂದೆ ಈ ಗಣೇಕಲ್ ಸಂಸ್ಥಾನವು ೨೦೦ ಹಳ್ಳಿಗಳನ್ನು ಒಳಗೊಂಡಿತ್ತು.)ದ ಕಾರಭಾರವನ್ನು ಈತನಿಗೆ ಒಪ್ಪಿಸಿದ. ಸಂಗವಿಭು ಕ್ರಿ.ಶ.ಸು.೧೮೩೨ರಿಂದ ೧೮೫೮ರ ಅವಧಿಯಲ್ಲಿ ತನ್ನ ಕಾವ್ಯಗಳನ್ನು ರಚಿಸಿದ್ದು. ಇವುಗಳ ಅವನ ಹುಟ್ಟೂರಾದ ನಂದವಾರದಲ್ಲಿ ಸಿಗದೇ ರಾಯಚೂರು ಜಿಲ್ಲೆಯ ಪ್ರದೇಶದಲ್ಲಿ ಸಿಗುತ್ತದೆ. ದೇವದುರ್ಗ ತಾಲೂಕಿನ ಗಣೇಖಲ್ನ ಸುತ್ತಮುತ್ತಲಿನ ಪ್ರದೇಶದಲ್ಲಿ ಈತ ರಚಿಸಿದ ಶತಕಗಳನ್ನು ಓದುವ ಪರಿಪಾಠವಿದೆ. ಇದುವರೆಗೂ ದೊರೆತ ಸಂಗವಿಭುವಿನ ಕಾವ್ಯಗಳು ನಾಲ್ಕಾಗಿದ್ದು ಅವುಗಳು

೧. ಭುವನೈಕನಾಯಕಿ ಶತಕ

೨. ಬಸವ ಶತಕ

೩. ಪಂಪಾಶತಕ

೪. ಕುಮಾರ ವಿಜಯ

ಚಂಪೂ ಕಾವ್ಯಗಳಾಗಿವೆ. ಬಸವ ಶತಕದಲ್ಲಿ ಕವಿ ತನ್ನ ಹೆಸರನ್ನು ಹೇಳಿಕೊಳ್ಳುತ್ತಾನೆ.

"ಮಂಗಳ ಮೂರ್ತಿ ನಿನ್ನ ಪದುಸೇವೆಯೊಳಚ್ಯುತ ಭಕ್ತಿಯಿಂದನಲ್ಲಂಗಿಕುಲಾಢ್ಯ ಸಂಗವಿಭು ವರ್ಣಿತಮೀ ಶತಕ ಪ್ರಬಂಧವೊಂದಿಂಗತವಾಗಿ ತೆತ್ಯೆತ ಸಮರ್ಪಣ ಭಾವನೊಪ್ಪಿ ಸತ್ಕೃಪಾಪಾಂಗದ ಲ್ಲೀಕ್ಷಿಸಯ್ಯಾ ಶರಣ ಶರಣಾಗತ ವಜ್ರಪಂಜರಾ."

ಕುಮಾರ ವಿಜಯ ಚಂಪು ಮಹಾಕಾವ್ಯದಲ್ಲಿ

"ಇಂತು ವಿಶಿಷ್ಟಾಶಿವಾದ್ವೈ
ತಂತಳೆದ ಮಹಾನು ಭಾವರೂಲವಿಂನಂವಿಂ
ಸಂತತ ಮತುಲಂ ತತಪದ
ಮಂತುತಿನ ಕುಮಾರ ಸಂಭವಂ ಕನ್ನಡಿಪೇರಿ ಸಲ್ಕವಿ ಕಾಳಿದಾಸ ತಾಂ
ಪೇಳಿದ ಸತ್ಕತಾ ಸರಣಿ ವೈಖರಿಯಂ ನೆರೆಯಿಂದ ಬಣ್ಣಿಪರಿ".

ಷಡಕ್ಷರಿಯ ಕಾಲಕ್ಕೆ ನಿಂತು ಹೋಗಿದ್ದ ಚಂಪು ಯುಗವನ್ನು ತನ್ನವರೆಗೂ ನಡೆಸಿಕೊಂಡು ಬಂದ ಕೀರ್ತಿ ಸಂಗವಿಭುವಿಗೆ ಸಲ್ಲುತ್ತದೆ. ಸಂಗವಿಭುವಿನ ಶತಕಗಳಲ್ಲಿ ನೀತಿಯ ಬಗ್ಗೆ ರಸವತ್ತಾಗಿ ಹೇಳಿದ್ದಾನೆ.

"ಬಾಣನ ಭಕ್ತಿಯಂ ಮನೆಯ ಬಾಗಿಲು ಬಲ್ಲದು ಪಾರ್ಥ ಭಕ್ತಿಯಂ
ಬಾಣವು ಬಿಲ್ಲು ದೊಂದಡಿಯು ಬಲ್ಲದು ಕಣ್ಣನೊಪ್ಪ ಭಕ್ತಿಯಂ
ಮೋಣದ ನಿಮ್ಮ ಭಕ್ತಿಯನು ಚಿತ್ತವು ಬಲ್ಲದು ಚೆನ್ನಯೋತ್ಮಕ
ಲ್ಯಾಣಪುರ ಪ್ರಸಿದ್ಧ ಶರಣಾ ಶರಣಾಗತ ವಜ್ರ ಪಂಜರಾ"

ಭುವನೈಕ ನಾಯಕೀ ಶತಕದಲ್ಲಿ ಪಾರ್ವತಿಯ ವರ್ಣನೆ ಮಾಡುವದರಲ್ಲಿ ಕವಿಯ ಭಕ್ತಿ ಗೌರವಗಳ ಜೊತೆಗೆ ಅವನ ದೃಷ್ಟಿ ಆಕೆಯ ಅಲೌಕಿಕ ಸೌಂದರ್ಯವನ್ನು ಕಂಡಿದೆ. ಪಂಪಾಶತಕವಂತೂ ತುಂಬಿ ಹರಿಯುವ ಪ್ರವಾಹದಂತೆ ನಿರರ್ಗಳವಾಗಿ ಸಾಗುತ್ತದೆ. ಸಂಸ್ಕೃತ ಭಾಷೆಯಷ್ಟೇ ಸಮರ್ಥವಾಗಿ ಅಚ್ಚಗನ್ನಡ ಮತ್ತು ಪ್ರಾದೇಶಿಕ ಶಬ್ದಗಳನ್ನು ಸಂಗವಿಭು ಸುಂದರವಾಗಿ ಜೋಡಿಸುತ್ತಾನೆ.

"ತೊಗೆಯುಂಟಾದೊಡೆ ತುಪ್ಪಮೆಂಬ ನೆರೆತುಪ್ಪಂ ನೀಡಲೇನೀ ಬೇರೆ
ಯುಗಳೆಂತು ತುಂಬವೆನೆಂದು ಸಾರುತರ ಮೇಳಲ್ತಂದು ನೀಡಲ್ಕೆಮ'
ಜ್ಜಿಗೆ ಬೇಕೆಂಬುವಪ್ಪುಗೊಡಿ ಮನುಜಂಗೇ ನಿರ್ದರೇನಪ್ಪುದೇ
ಮಿಗೆ ತೃಪ್ತತ್ವಕ್ಕೆ ಸಾಲದೆಂಬನ ಭವಾ ಪಂಪಾ ಪುರಾಧೀಶ್ವರಾ"
ಅಶಾಂತಿ ಅವ್ಯವಸ್ಥೆಗಲ ಕಾಲದಲ್ಲಿದ್ದವನಾದರೂ ಕವಿ ಮನಸ್ಸಿನ
ಸ್ಥಿಮಿತವನ್ನು ಬೋಧಿಸುವ ಶತಗಗಳನ್ನು ಚಂಪೂ ಕಾವ್ಯವನ್ನ
ರಚಿಸಬಲ್ಲಂಥ ರಸ ಪ್ರಜ್ಞೆಯನ್ನು ಸೃಜನ ಶೀಲತೆಯನ್ನು
ಕಾಯ್ದುಕೊಂಡಿರುವುದು ಗಮನಾರ್ಹವಾಗಿದೆ.

(ಬಿ.ಚೆನ್ನಬಸವ ದೇ.ತಾ.ಸಾ.ಅ.ಧಾ.ವಿ.ವಿ.)

ಅಪರಾಳ ತಮ್ಮಣ್ಣ.

ಉತ್ತರ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯಗೊಂಡಿರುವ ಬಯಲಾಟ ಶ್ರೀಕೃಷ್ಣ ಪಾರಿಜಾತ. ಈ ಬಯಲಾಟ ಪರಂಪರೆ ಕಥಾವಸ್ತುವಿಗೆ ಶ್ರೀಕೃಷ್ಣ ಪಾರಿಜಾತವೆಂಬ ಕಾವ್ಯವನ್ನು ಆಧಾರವಾಗಿಟ್ಟುಕೊಂಡಿದೆ. ಕಾವ್ಯದ ಕರ್ತೃ ಅಪರಾಳ ತಮ್ಮಣ್ಣ.

ಅಪರಾಳ ತಮ್ಮಣ್ಣ ರಾಯಚೂರು ಪ್ರದೇಶದ ದೇವದುರ್ಗ ತಾಲೂಕಿನ ಅಪರಾಳ ಗ್ರಾಮದಲ್ಲಿ ಕ್ರಿ.ಶ.೧೭೫೨ರಲ್ಲಿ ಜನಿಸಿದನು. ಅಪರಾಳ ತಮ್ಮಣ್ಣ ಅರೆಗೊಳಿಸಿದ್ದ ಪಾರಿಜಾತವನ್ನು

ಸಿರುಗುಪ್ಪ ಸದಾ ಶಿವಯ್ಯನೆಂಬುವವನು ಪೂರ್ಣಗೊಳಿಸಿದನು. ಈ ವಿಷಯವನ್ನು ಮೊಟ್ಟ ಮೊದಲು ಬೆಳಕಿಗೆ ತಂದವರು ಡಾ.ಎಂ.ಎಂ.ಕಲಬುರ್ಗಿಯವರು. ಅಪರಾಳ ತಮ್ಮಣ್ಣನ ಕಾಲಕ್ಕೆ ಆಂಧ್ರ ಪ್ರದೇಶದಲ್ಲಿ ಶ್ರೀಕೃಷ್ಣ ಪಾರಿಜಾತಕ್ಕೆ ಸಂಬಂಧಪಟ್ಟ ಕಾವ್ಯರೂಪ ಮತ್ತು ದೃಶ್ಯ ರೂಪಗಳು ಕ್ರಮವಾಗಿ ನಂದಿ ತಿಮ್ಮಣ್ಣ ಮತ್ತು ಸಿದ್ದೇದ್ರೆಯೋಗಿಯಿಂದ ಬೆಳೆದುನಿಂತಿದ್ದವು. ಇವುಗಳ ದಟ್ಟವಾದ ಪ್ರಭಾವಕ್ಕೆ ಒಳಗಾದ ಅಪರಾಳ ತಮ್ಮಣ್ಣ ಶ್ರೀಕೃಷ್ಣ ಪಾರಿಜಾತವೆಂಬ ಕೀರ್ತನೆ ಕಾವ್ಯವನ್ನು ಬರೆದ.

ಅಪರಾಳ ತಮ್ಮಣ್ಣನ ಜೀವನಕ್ಕೆ ಹೆಚ್ಚಿನ ಮಾಹಿತಿಗಳು ಲಭಿಸದಿದ್ದರೂ ತಮ್ಮಣ್ಣನ ದಿನಾಲು ಕೃಷ್ಣಾ ನದಿಯಲ್ಲಿ ಸ್ನಾನ ಮಾಡಿ ಬಂದು ಒಂದು ಗುಡಿಯಲ್ಲಿ ಕುಳಿತುಕೊಂಡು ಪಾರಿಜಾತ ಕವಿತ್ವ ಮಾಡುತ್ತಿದ್ದ. ಹಿಂದೆ ಈ ಊರಿಗೆ "ಪಾರಿಜಾತ ಅಪರಾಳ" "ಪಾರಿಜಾತ ತಮ್ಮಣ್ಣನ ಪಟ್ಟಣ" ಎಂದು ಕರೆಯುತ್ತಿದ್ದರಂತೆ. ಕ್ರಿ.ಶ.೧೯೦೫ ರಲ್ಲಿ ದೇವನಾಗರ ಲಿಪಿಯಲ್ಲಿ ಪ್ರಕಟಗೊಂಡ ಶ್ರೀಕೃಷ್ಣ ಪಾರಿಜಾತದ ಪ್ರಸ್ತಾವನೆಯಲ್ಲಿ ಅಪರಾಳ ತಮ್ಮಣ್ನನ ಜೀವನಕ್ಕೆ ಸಂಬಂಧಪಟ್ಟ ಘಟನೆಯ ಉಲ್ಲೇಖವಿದೆ. ಇದು ತಾನು ಬರೆಯುತ್ತಿದ್ದ ಶ್ರೀಕೃಷ್ಣ ಪಾರಿಜಾತ ಕಾವ್ಯವನ್ನು ಅರ್ಧಕ್ಕೆ ಏಕೆ ನಿಲ್ಲಿಸಿದ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಯಾವುದೋ ಅಪವಾದ ನಿಮಿತ್ತ ರಾಜನು ತಮ್ಮಣ್ಣನನ್ನು ಸೆರೆಯಲ್ಲಿಟ್ಟಿದ್ದನು. ತಮ್ಮಣ್ಣನು ಸೆರೆಯಲ್ಲಿದ್ದುಕೊಂಡು ಅದರ ಗೋಡೆಯ ಮೇಲೆ ಶ್ರೀಕೃಷ್ಣ ಪಾರಜಾತ ಕಾವ್ಯವನ್ನು ಬರೆಯ ತೊಡಗಿದನು. ಈ ಪುಣ್ಯಕಾರ್ಯಕ್ಕಾಗಿ ಅವನ ಕೈಕಾಲುಗಳಲ್ಲಿದ್ದ ಬೇಡಿಗಳು ತಾವಾಗಿಯೇ ಕಳಚಿಕೊಂಡವು.

ಕಾವಲುಗಾರನು ರಾಜನಿಗೆ ಈ ವಿಷಯವನ್ನು ತಿಳಿಸಲು ಅವನ ಅದಕ್ಕಿಂತಲೂ ಭಾರವಾದ ಬೇಡಿಗಳನ್ನು ಹಾಕಲು ಅವು ಕೂಡ ಮುಂಚಿನ ಬೇಡಿಗಳಂತೇಯೇ ಕಳಚಿದವು. ತಮ್ಮಣ್ಣನಿಗೆ ದೊರೆತ ಈ ದೇವರ ಅನುಗ್ರಹಕ್ಕೆ ಮಾರುಹೋದ ರಾಜನು ತಮ್ಮಣ್ಣನನ್ನು ಬಂಧನದಿಂದ ಮುಕ್ತಗೊಳಿಸಿದನು.

ತಮ್ಮಣ್ಣನು ಮನೆಯಲ್ಲಿದ್ದುಕೊಂಡು ಗ್ರಂಥರಚನೆಯನ್ನು ಮುಂದುವರೆಸಿದನು. ಒಮ್ಮೆ ವಿದ್ವಾಂಸರೊಬ್ಬರು. ಊರಿಗೆ ಬಂದಾಗ ತಮ್ಮಣ್ನನು ತನ್ನ ಗ್ರಂಥವನ್ನೊಯ್ದು ತೋರಿಸಿದನು. ವಿದ್ವಾಂಸರು ಗ್ರಂಥವೇನೋ ಒಳ್ಳೆಯದಾಗಿದೆ. ಆದರೆ 'ಹಿರಿಯವಳಾದರೇನು ಘನವಕ್ಕು ಎಂಬ ಪದದಲ್ಲಿ ಶ್ರೀ ಮಹಾಲಕ್ಷ್ಮಿಯರಿಗೆ ನೀಚ ವಿಶೇಷಣ ಕೊಟ್ಟಿರುವ ನಿಮಿತ್ತ ಇನ್ನು ಮುಂದೆ ಗ್ರಂಥ ಮುಗಿಸುವುದಕ್ಕೆ ನಿನಗೆ ಅಪ್ಪಣೆಯಿಲ್ಲ ಎಂದು ನುಡಿದನು. ಹೀಗೆ ಅರ್ಧಕ್ಕೆ ನಿಂತ ತನ್ನ ಕಾವ್ಯವನ್ನು ಸಂಗಯ್ಯನೆಂಬುವವನಿಗೆ ಹೇಳಿ ಅವನಿಂದ ಪೂರ್ವಗೊಳಿಸಿದನು. ಇದೊಂದು ಮುದ್ರಿತ ಪ್ರತಿಯನ್ನು ಬಿಟ್ಟರೆ ಉಳಿದೆಲ್ಲಾ ಹಸ್ತಪ್ರತಿಗಳಲ್ಲಿ ಎರಡನೆ ಕವಿಯ ಹೆಸರು ಸದಾಶಿವಯ್ಯ

ಎಂದಿದೆ. ಅಪರಾಳ ತಮ್ಮಣ್ಣ ಒಬ್ಬ ಹರಿದಾಸನೆಂದೂ 'ಗೋಪಾಲ' ಎಂಬ ಅಂಕಿತದಡಿಯಲ್ಲಿ ಕೆಲವು ದೇವರನಾಮಗಳನ್ನು ಬರೆದಿರುವನೆಂದು ವಿದ್ವಾಂಸರು ಉಲ್ಲೇಖಿಸುತ್ತಾರೆ. ಇದಕ್ಕೆ ಪುಷ್ಟಿ ಎಂಬಂತೆ ಅಪರಾಳ ತಮ್ಮಣ್ಣನ ಶ್ರೀಕೃಷ್ಣ ಪಾರಿಜಾತ ಕಾವ್ಯದಲ್ಲಿ ಇಪ್ಪತ್ತು ಪದ್ಯಗಳಿಗೆ 'ಗೋಪಾಲ' ಎಂಬ ಮುದ್ರಿಕೆಯಿದೆ. ಇವರು ಅಪರಾಳ ತಮ್ಮಣ್ಣನ ಗುರುವೆಂದು ತಿಳಿದು ಬಂದಿದೆ. ಅಪರಾಳ ತಮ್ಮಣ್ಣನ ಕಾಲದಲ್ಲಿ ರಾಯಚೂರು ಜಿಲ್ಲೆಯನ್ನು ಒಳಗೊಂಡಂತೆ ದೇವದುರ್ಗ ಪ್ರದೇಶದಲ್ಲಿ ಹರಿದಾಸ ಸಾಹಿತ್ಯ ಬಹಳ ಪ್ರಚಾರದಲ್ಲಿತ್ತು. ಕ್ರಿ.ಶ.೧೭೨೨ರಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಮೊಸರಕಲ್‌ನಲ್ಲಿ ಗೋಪಾಲದಾಸರು ಜನಿಸಿದರು. ಇವರು ದಾಸ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಅಮರವಾಗಿದೆ. ಇವರು ಅಪರಾಳ ತಮ್ಮಣ್ಣನ ಗುರುವಾಗಿದ್ದರೆಂದು ಊಹಿಸಲಾಗಿದೆ.

ಅಪರಾಳ ತನ್ನ ಜೀವಿತ ಕಾಲದಲ್ಲೆ ತನ್ನ ಕಾವ್ಯವನ್ನು ರಂಗಭೂಮಿಗೆ ಅಲವಡಿಸಿ ಮಗನೊಂದಿಗೆ ಆಡಿದ ಎಂಬ ಹೇಳಿಕೆಯೊಂದು ಆರ್.ಜಿ.ಕುಲಕರ್ಣಿಯವರಿಂದ ಸಂಪಾದಿಸಲ್ಪಟ್ಟ ಶ್ರೀಕೃಷ್ಣಪಾರಿಜಾತದ ಪ್ರಸ್ತಾವನೆಯಲ್ಲದೆ. ಜನರಲ್ಲಿ ಧರ್ಮ ಭಾವನೆಯನ್ನು ಲೋಕನೀತಿಯನ್ನು ಜಾಗೃತಗೊಳಿಸಬೇಕೆಂಬ ಉದ್ದೇಶದಿಂದ ಅಪರಾಳ ತಮ್ಮಣ್ಣನವರು ತಮ್ಮ ಮಗನೊಂದಿಗೆ ಇದನ್ನು ಅಭಿನಯಿಸುತ್ತಿದ್ದರೆ. ಇದನ್ನು ಕಂಡು ಸಹಿಸದ ಕೆಲವು ಜನ ತಮ್ಮಣ್ಣನು ಮಾಧ್ವತತ್ವಜ್ಞಾನದ ಅಪ ಪ್ರಚಾರ ಮಾಡುತ್ತಿದ್ದಾರೆ. ಎಂದು ವ್ಯಾಸರಾಯ ಮಠದ ಸ್ವಾಮಿಗಳಾದ ಶ್ರೀ ವಿದ್ಯಾ ಪ್ರಸನ್ನ ತೀರ್ಥರಿಗೆ ದೂರು ಕೊಟ್ಟರು. ಈ ದೂರಿನ್ವಯ ಸ್ವಾಮಿಗಳು ತಮ್ಮಣ್ಣನನ್ನು ಬಹಿಷ್ಕರಿಸಿದರಂತೆ. ಆಗ ತಮ್ಮಣ್ಣನವರು ಸ್ವಾಮಿಗಳೆದುರು ನಾಟಕವನ್ನು ಪ್ರದರ್ಶಿಸಿ ಅವರನ್ನು ಮೆಚ್ಚಿಸಿ ಬಹಿಷ್ಕಾರವನ್ನು ಹಿಂತೆಗೆದುಕೊಳ್ಳುವಂತೆ ಮಾಡಿದರೆಂದು ತಿಳಿದುಬರುತ್ತದೆ. (ದೇ.ತ.ಸಾಂ.ಅ.ಬಿ.ಚನ್ನಬಸವ ವಲ್ಕಂದಿನ್ನಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ).

ಕೊಪ್ಪರ ನರಹರಿದಾಸರು

ಕೃಷ್ಣಾನದಿ ತೀರದಲ್ಲಿರುವ ಕೊಪ್ಪರ ಗ್ರಾಮದಲ್ಲಿ ಭೀಮಸೇನಾಚಾರ್ಯ ನರಸಮ್ಮ ಎಂಬ ದಂಪತಿಗಳ ಮಗನಾಗಿ ಜನಿಸಿದರು. ಇವರ ತಂದೆ ತಾಯಿಗಳು ಶ್ರೀಲಕ್ಷ್ಮೀ ನರಸಿಂಹ ದೇವರ ಅರ್ಚಕ ವಂಶಜರಾಗಿದ್ದರು. ನರಹರಿದಾಸರು ವ್ಯಾಕರಣ ವೇದಾಂತ ಸಾಹಿತ್ಯ ಮುಂತಾದ ವಿದ್ಯೆಗಳನ್ನು ಕಲಿತರು. ದಾಸರು "ಕಾರ್ಪರಿ ನರಹರಿ" ಎಂಬ ಅಂಕಿತದಿಂದ ಸುಮಾರು ೧೨೦ ಕೀರ್ತನೆಗಳನ್ನು ರಚಿಸಿದ್ದಾರೆ. ಮಹಿಳೆಯರಿಗಾಗಿ ಅನೇಕ ಸಂಪ್ರದಾಯಕ ಹಾಡುಗಳನ್ನು ರಚಿಸಿದ್ದಾರೆ. ಬಯಲಾಟಗಳಿಗೂ ಪದಗಳನ್ನು ರಚಿಸಿದ್ದಾರೆ. 'ಕಾರ್ಪರ ಮಹಿಮಾ ವರ್ಣನೆ' ಎನ್ನುವ ಸುಧೀರ್ಘ ರಚನೆ ಇವರ ಇನ್ನೊಂದು ಮಹತ್ವದ ಕೊಡುಗೆ. ಇದು ೬೫ ನುಡಿಗಳಲ್ಲಿ ದಾಸ ಸಾಹಿತ್ಯದ ಮೇಲೆ ಬೆಳಕು ಚೆಲ್ಲುವ ವಿಷಯಗಳನ್ನೊಳಗೊಂಡಿದೆ. ಶ್ರೀ ಕಾರ್ಪರ ನರಹರಿ

ದಾಸರನ್ನು ಕರಿತು ಶ್ರೀ ಲಕುಮೀಶಾಂಕಿತರು ಶ್ರೀ ರಂಗನಾಥ ಅಂಕಿತರು. ವೆಂಕಟ ಅಂಕಿತರು ಮುಂತಾದವರು ಸ್ತೋತ್ರ ಪದಗಳನ್ನು ರಚಿಸಿದ್ದಾರೆ.

ಏನು ಕೊಡಲಿ ಗುರುದಕ್ಷಿಣೆ
ಈ ಕ್ಷೇಣಿಯಿತ್ತರು ಸರಿಗಾಣೆನಾ
ಧ್ಯಾನವ ಮಾಡುವೆ ಪ್ರತಿದಿನ ಬಿಂಬ
ಜ್ಞಾನವಿತ್ತು. ರಕ್ಷಿಪರನ್ನೂ
ಎಂದು ಹೇಳುತ್ತಾ ಆತ್ಮಾರ್ಪಣೆಯ । ಗುರುದಕ್ಷಿಣೆ ಎನ್ನುತ್ತಾರೆ.
ಇವರು ಕೊನೆಗೆ ಕ್ರಿ.ಶ.೧೯೭೭ರಲ್ಲಿ ನಿಧನರಾದರು.
(ಚನ್ನಬಸವ ಹಿರೇಮಠ ಮತ್ತು ಸಿದ್ಧರಾಮಯ್ಯ ಹಿರೇಮಠ, ರಾ.ಜಿ.ಪು.೪೮)

ಮಾರ್ತಂಡಪ್ಪ ಗಬ್ಬೂರು

ಮಾರ್ತಂಡಪ್ಪ ಗಬ್ಬೂರಲ್ಲಿ ಕ್ರಿ.ಶ. ೧೮೮೦ರಲ್ಲಿ ಜನಿಸಿದ. ಈತನ ತಂದೆಯ ಹೆಸರು ಲಚುಮಣ್ಣ ಕಬ್ಬೇರ ವಂಶದಲ್ಲಿ ಹುಟ್ಟಿದ ಮಾರ್ತಂಡಪ್ಪನಿಗೆ ಮೂವರು ಪತ್ನಿಯರಿದ್ದರು. ಬಸಮ್ಮ ರಾಚಮ್ಮ, ಅಕ್ಕಮ್ಮ, ಎಂಬ ಹೆಸರಿನ ಮೂವರು ಪತ್ನಿಯರಿಗೆ ಪ್ರಭು ಬಂಡಪ್ಪ, ಹನುವವ್ವ ಎಂಬ ಮೂವರು ಮಕ್ಕಳಿದ್ದರು. ಮಾರ್ತಂಡಪ್ಪನಿಗೆ ಮೂವರು ಸಹೋದರರು ಅವರಲ್ಲಿ ಮಾರ್ತಂಡಪ್ಪನ ತಮ್ಮನ ಹೆಂಡತಿ ಹನುಮವ್ವ ಹಾಗೂ ಆಕೆಯ ಮಗ ನಾಗಪ್ಪ ಈಗ ಗಬ್ಬೂರಿನಲ್ಲಿದ್ದಾರೆ.

ಮಾರ್ತಂಡಪ್ಪನ ಗುರು ಖೇಮಣ್ಣನ ಪ್ರಭಾವಕ್ಕೊಳಗಾಗಿ ಆಧ್ಯಾತ್ಮದ ಹಾದಿ ಹಿಡಿದ. ಖೇಮಣ್ಣನಂತೆ, ಅನುಭಾವದೆತ್ತರವನ್ನೇರಿದ ವೆಂಕಟಾಪುರ, ಯಾದಗಿರಿ, ಖಾನಾಪುರ, ರಾಯಚೂರು, ಗಂಜಳ್ಳಿ, ಜಿನ್ನಾಪುರ, ರಾಗಪೂರ, ಯದ್ಲಾಪುರ, ಶೋಲಾಪುರ, ಕೊರವಳ್ಳಿ, ಕೋರ್ತಕುಂದ, ಮುಂಬಾಯಿ, ಪುನಾ, ಪೂಲಚಂತಿ, ಆದೋನಿ, ಈ ಮುಂತಾದ ಮೂರುಗಳನ್ನು ಅಲೆದಾಡಿ ಅಪಾರ ಅನುಭವ ಹೊಂದಿದ ಮಾರ್ತಂಡಪ್ಪ ಲೌಕಿಕದ ಮೂಲಕ ಅಲೌಕಿಕ ವಿಚಾರಗಳನ್ನು ಹೇಳಿದ್ದಾನೆ.

ಮಾರ್ತಂಡಪ್ಪ ತನ್ನ ಗುರುವಿನ ಹೆಸರಿನಲ್ಲಿ ಅಂಕಿತವನ್ನಿಟ್ಟುಕೊಂಡಿದ್ದಾನೆ. 'ಖೇಮಾರ್ಯ' ಎಂಬ ಅಂಕಿತದಲ್ಲಿ ಮಹತ್ವದ ವಿಷಯಗಳ ಕುರಿತು ತತ್ವಪದ ರಚಿಸಿದ ಮಾರ್ತಂಡಪ್ಪ ಮಾಂಸವನ್ನು ಮಲ್ಲಿಗೆಯ ಹೂವನ್ನಾಗಿ ಮಾಡಿದನೆಂದು ಹೆಂಡವನ್ನು ಹಾಲು ಮಾಡಿದನೆಂದು ಆತನ ಸುತ್ತ ಕೆಲವು ಪವಾಡ ಕಥೆಗಳನ್ನು ಹೆಣೆಯಲಾಗಿದೆ. ರಾಯಚೂರು ಪ್ರದೇಶದ ಮಾರ್ತಂಡಪ್ಪನ ಅನುಯಾಯಿಗಳಿದ್ದಾರೆ. ಮಾರ್ತಂಡಪ್ಪನ ತತ್ವಪದಗಳಲ್ಲಿ ಸತಿ-ಪತಿ ಭಾವ ಪ್ರಧಾನವಾಗಿರುವಂತೆ, ಅನುಭಾವದೆತ್ತರವನ್ನು ಕಾಣಬಹುದಾಗಿದೆ.

"ಗಂಡಗಾಜಿ ಬದುಕು ಮಾಡಮ್ಮ
ಮುತ್ತೈದಿತನ ಕಳಕಬೇಡ ತಿಳಿಕ ತಂಗಮ್ಮ"

ಎಂಬ ಈ ಪದದ ಪಲ್ಲವಿ ಸತಿ–ಪತಿ ಭಾವದ ಮಹತ್ವವನ್ನು ಹೇಳುತ್ತದೆ. ಲೌಕಿಕ ಉದಾಹರಣೆಗಳ ಮೂಲಕ ಈ ಕವಿ ಅನೇಕ ಆಧ್ಯಾತ್ಮಕ ತತ್ವ ವಿಚಾರಗಳನ್ನು ಪ್ರತಿಪಾದಿಸಿದ್ದಾರೆ.

"ಊರು ದಣಿಯರು ಮೂವರಾರಮ್ಮ
ಆರು ಬಾಗಿಲು ಕದವೆ ಮುಚ್ಚಮ್ಮ"

ಇಂತಹ ನುಡಿಗಳಲ್ಲಿ ದಿನ ನಿತ್ಯದ ಆಡು ಮಾತಿನ ಮೂಲಕ ಆಧ್ಯಾತ್ಮವನ್ನು ತಿಳಿದುಕೊಳ್ಳುವ ಮಹತ್ವಾಕಾಂಕ್ಷೆಯಿದೆ. ಅದು ಬಣ್ಣದ ಸೀರೆ, ಮೂರು ಬಣ್ಣದ ಕುಪ್ಪಸ ಈ ಪದಗಳಲ್ಲಿ ಅಡಕವಾಗಿರುವ ಆಧ್ಯಾತ್ಮಕ ಪರಿಭಾವೆಯನ್ನು ಗಮನಿಸಬಹುದಾಗಿದೆ. ಮಲತ್ರಯಗಳ ಷಡ್ವೈರಿಗಳು ಈತನ ತತ್ವಪದಗಳಲ್ಲಿ ಪ್ರಸ್ತಾಪವಾಗಿವೆ.

"ಓಡಿ ಹೋಗಣು ಬಾ ಸುಂದರಿ ॥ ಕಡೆ ನೋಟಗಣ್ಣಿನ ವೈಯ್ಯಾರಿ ।
ತಡ ಮಾಡದೆಲೆ ನಡೆಗಡೆ ದಾರಿ ಉಡಲಿಕ್ಕೆ ಕೊಡುವನು ಸಿರೆ ಜರ್ತಾರಿ !

ಎಂಬ ತತ್ವಪದಗಳಲ್ಲಿ ಸತಿ–ಪತಿ ಭಾವದ ಭಕ್ತಿಯ ಮೂಲಕ ಅನುಬಾವದ ವಿಚಾರಗಳನ್ನು ಹೇಳಲಾಗಿದೆ.

"ಊರು ಒಳಗೆ ಆರು ಮಂದಿ' ಪಾರು ತಿರುಗುತ್ತಾರೆ ಸಂದಿ!" ಎಂಬ ನುಡಿಯಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರದಂತಹ ಅರಿಷಡ್‌ವರ್ಗಗಳ ಪ್ರಸ್ತಾಪದ ಮೂಲಕ ಉಚ್ಚರಿಕೆಯನ್ನುಂಟು ಮಾಡಲಾಗಿದೆ. ಈತನ ತತ್ವಪದಗಳಲ್ಲಿ ಪ್ರಾಸಬದ್ಧ ಲಯವನ್ನು ಕಾಣಬಹುದಾಗಿದೆ. ಪ್ರದೇಶದ ಭಜನೆ ಮೇಳಗಳಲ್ಲಿ ಮಾರ್ತಂಡಪ್ಪನ ಪದಗಳನ್ನು ಸೊಗಸಾಗಿ ಹಾಡುತ್ತಾರೆ. ಈತನು ಕ್ರಿ.ಶ.೧೯೬೦ರಲ್ಲಿ ನಿಧನ ಹೊಂದಿದ್ದಾನೆ. ರಾಯಚೂರು ಪ್ರದೇಶದ ಕೋರ್ವಿಹಾಳಗ್ರಾಮದಲ್ಲಿ ಈತನ ಸಮಾಧಿಯಿದೆ. ಗಬ್ಬೂರಿನ ಉತ್ತರ ದಿಕ್ಕಿನಲ್ಲಿ ಮಾರ್ತಂಡಪ್ಪನ ಗುಡಿ ಹಾಗೂ ಅದರಲ್ಲಿ ಆತನ ಮೂರ್ತಿಯಿದೆ. (ಚನ್ನಬಸವ ಹಿರೇಮಠ ಮತ್ತು ಸಿದ್ಧರಾಮಯ್ಯ ಹಿರೇಮಠ, ರಾ.ಜಿ.ಶ.ಪು.೮೩–೮೯)

ಗ್ರಂಥಋಣ

೦೧. ಅಮರೇಶ ಯತಗಲ್, ಇತಿಹಾಸ ಇಂಚರ, ಅದಿತಿ ಪ್ರಕಾಶನ ಲಿಂಗಸುಗೂರು, ೨೦೦೭

೦೨. ದೇವರಕೊಂಡರೆಡ್ಡಿ, ಕಲವೀರ್ ಮನ್ವಾಚಾರ್, ಕೆ.ಜಿ.ಭಟ್‌ಸೂರಿ, ಪರಮಶಿವಮೂರ್ತಿ ಡಿ.ವಿ., ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೭ ರಾಯಚೂರು ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೩.

೦೩. ಚನ್ನಬಸವ ಹಿರೇಮಠ, ಎಡದೊರೆನಾಡು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೦೪. ಚನ್ನಬಸವ ಹಿರೇಮಠ, ರಾಯಚೂರು ಕೊಪ್ಪಳ ಜಿಲ್ಲೆಯ ಶಾಸನಗಳ ಚೇತನ ಪ್ರಕಾಶನ, ಮಸ್ಕಿ ೧೧೯೯

೦೫. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೦೨.

೦೬. Channabasappa S. Patil, Temples of Raichur and Bellary, Directorate of Archaeology and Museums, Mysore, 1992

೦೭. ನಾಗಭೂಷಣ ಸಿ., ಶಾಸನಗಳು ಮತ್ತು ಕನ್ನಡ ಸಾಹಿತ್ಯ, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ, ೨೦೦೫

೦೮. ನಾಗಭೂಷಣ ಸಿ., ಸಾಹಿತ್ಯ ಸಂಸ್ಕೃತಿ ಹುಡುಕಾಟ, ಅಮೃತ ವರ್ಷಣಿ, ಪ್ರಕಾಶನ ಯರಗೇರಾ, ರಾಯಚೂರು, ೨೦೦೨.

೦೯. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ ಪ್ರಕಾಶನ ಮೈಸೂರು ೧೯೯೭

೧೦. ದೇಸಾಯಿ ಪಾಂಡುರಂಗರಾಯರು, ಕರ್ನಾಟಕದ ಕಲಚೂರಿಗಳು, ಪ್ರಕಾಶನ ಧಾರವಾಡ ವಿಶ್ವವಿದ್ಯಾಲಯ, ೧೯೮೩

೧೧. ಮೃತ್ಯುಂಜಯ ಹೊರಕೇರಿ, ಬಸವಲಿಂಗ ಸೊಪಿಮಠ, ರಾಯಚೂರು ಜಿಲ್ಲಾ ದರ್ಶನ, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗ, ೨೦೦೫

೧೨. ಚನ್ನಬಸವ ಹಿರೇಮಠ ಮತ್ತು ಸಿದ್ದರಾಮಯ್ಯ ಹಿರೇಮಠ, ರಾಯಚೂರು ಜಿಲ್ಲೆಯ ಶರಣರು, ಅಖಿಲ ಭಾರತ, ಶರಣ ಸಾಹಿತ್ಯ ಪತಿಷತ್ತು, ರಾಯಚೂರು ೨೦೦೦

೧೩. ರವೀಂದ್ರನಾಥ ಕೆ., ಕನ್ನಡ ದಾಖಲು ಸಾಹಿತ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೧೪. ಬಸವರಾಜ ಸಬರದ, ರಾಯಚೂರು ಜಿಲ್ಲೆಯ ಅನುಭವ ಕವಿಗಳು, ಕನ್ನಡ ಸಾಹಿತ್ಯ ಪರಿಷತ್ತು ರಾಯಚೂರು, ೧೯೯೬.

೧೫. ನಾಗಯ್ಯ ಜೆ.ಎಂ., ಆರನೇ ವಿಕ್ರಮಾದಿತ್ಯನ ಕಾಲದ ಶಾಸನಗಳು ಒಂದು ಅಧ್ಯಯನ, ವೀರಶೈವ ಅಧ್ಯಯನ ಆಕಾಡೆಮಿ, ಬೆಂಗಳೂರು ೧೯೯೨

೧೬. ಚನ್ನಬಸವ ಬಿ., ದೇವದುರ್ಗ ತಾಲ್ಲೂಕಿನ ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೧೭. ಲಕ್ಷ್ಮಣ್ ತೆಲಗಾವಿ, ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೧೮. ಶಿವಾನಂದ ವಿ., ಹೈದರಾಬಾದ್ ಕರ್ನಾಟಕದ ಭಾಗದ ಕನ್ನಡ ಶಿಲಾ ಶಾಸನಗಳು, ಕನ್ನಡ ಪೀಠ ಬನಾರಸ, ಹಿಂದೂ ವಿಶ್ವವಿದ್ಯಾಲಯ, ವಾರಣಾಸಿ ೧೯೯೨.

೧೯. ಬಸವಲಿಂಗ ಸೊಪ್ಪಿಮಠ, ಗಬ್ಬೂರು ಶ್ರೀ ಬಿಬ್ಬಬಾಚರಸರು, ಕಿಸಾನ್ ಪ್ರೆಸ್ ೧೯೯೭

೨೦. ರಾಯಸಿರಿ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು ೨೦೦೩

೨೧. ಚಂದ್ರಶೇಖರ, ಸಿರಿದುರ್ಗ ತಾಲ್ಲೂಕು, ಕನ್ನಡ ಸಾಹಿತ್ಯ ಪರಿಷತ್ತು, ದೇವದುರ್ಗ

೨೨. ಮನಸಿರಿ ಮಾನ್ವಿ, ತಾಲ್ಲೂಕು ನಾಲ್ಕು ಕನ್ನಡ ಸಾಹಿತ್ಯ ಸಮ್ಮೇಳನದ ವಿಶೇಷ ನೆನಪಿನ ಸಂಚಿಕೆ, ೨೦೦೪

೨೩. ರಾಮಲಿಂಗಪ್ಪ, ಚಂದನ ಕೇರಿ ಆಕ್ರಮಣ, ಪಾಕ್ಷಿಕ ಪತ್ರಿಕೆ

೨೪. ರಾಮಚಂದ್ರ (ಸಂ), ವನಸಿರಿ ಅಲೂಕು, ಕನ್ನಡ ಸಾಹಿತ್ಯ ಪರಿಷತ್ತು, ಮಾನ್ವಿ ೨೦೦೪

೨೫. ಶಾಶ್ವತಸ್ವಾಮಿ ಮುಕ್ಕಂದಿ ಮಠ, ಕೃಷ್ಣ ತುಂಗೆ ನೆಲದ ಸಿರಿ ಸಮುಖ ಪ್ರಕಾಶನ, ಬೆಂಗಳೂರು ೨೦೦೮

೨೬. ಬಸವಲಿಂಗ ಸೊಪ್ಪಿಮಠ ಇತಿಹಾಸ ದರ್ಶನ ಗಬ್ಬೂರ ಬಿಬ್ಬಿ ಬಾಚಯ್ಯನ ಕೆಲವು ಹೊಸ ವಿಚಾರಗಳು, ಸಂಪುಟ–೮ ಕರ್ನಾಟಕ ಇತಿಹಾಸ ಆಕಾಡೆಮಿ ಬೆಂಗಳೂರು, ೧೯೯೩

೨೭. ಕರ್ನಾಟಕ ಚರಿತ್ರೆ ಸಂಪುಟಗಳು ೧–೩ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ

೨೮. ಇತಿಹಾಸ ದರ್ಶನ ಸಂಪುಟಗಳು ೧–೨೩ ಕರ್ನಾಟಕ ಇತಿಹಾಸ ಆಕಾಡೆಮಿ ಬೆಂಗಳೂರು.



ರಾಯಚೂರು ಕೋಟೆ



ಮಲಿಯಾಬಾದಿನಲ್ಲಿರುವ ಕಲ್ಲಾನೆಗಳು ಚಿತ್ರ



ಮಾನ್ವಿ ತಾಲೂಕಿನಲ್ಲಿರುವ ಜೋಡನ ಬಾವಿ



ಮಾನ್ವಿ ತಾಲೂಕಿನ ಪ್ರಾವೇಶ ದ್ವಾರದಕೋಟೆ



ಮಾನ್ವಿ ತಾಲೂಕಿನ ಪೂರ್ವ ಭಾಗದ ಕೋಟೆ



ಮಲ್ಲಟ ಗ್ರಾಮದ ಮಲ್ಲಿಕಾರ್ಜುನ ದೇವಾಲಯ




ಕುರುಡಿ ಗ್ರಾಮದ ಈಶ್ವರ ದೇವಾಲಯ




ಮಲ್ಲಟದ ಮಲ್ಲಿಕಾರ್ಜುನ ದೇವಾಲಯ
ಮುಂದೆ ಇರುವ ಮೂರ್ತಿರಹಿತ ಹೈಹಯರ ಕಾಲದ ದೇವಾಲಯ



ಬಾಗಲವಾಡದ ರಾಮಲಿಂಗೇಶ್ವರ ದೇವಾಲಯ



ಕಲ್ಲೂರಿನ ಮಾರುಟೇಶ್ವರ ದೇವಾಲಯ ಹಿಂಭಾಗ



ಜೋಡು ಬಸವಣ್ಣ ದೇವಾಲಯ ನಿಲವಂಜಿ



ನರಹರಿ ದೇವಾಲಯ ಬಲ್ಲಟಗಿ



ಆಂಜನೇಯ ದೇವಾಲಯ ಚಂದನಕೇರಿ